# ವಸಾಹತು ಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾಪ್ರಬಂಧ


ಸಂಶೋಧಕ

**ಮದನ್ ಓ.**

ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರು

**ಡಾ. ಎಸ್. ಚಿನ್ನಸ್ವಾಮಿ ಸೋಸಲೆ**

ಪ್ರಾಧ್ಯಾಪಕರು





**ಚರಿತ್ರೆ ವಿಭಾಗ**

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬


**೨೦೧೬-೧೭**

# ವಸಾಹತು ಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ

(ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ.) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ)


**ಸಂಶೋಧಕ**

**ಮದನ್ ಪಿ.**

ಸಂಶೋಧನಾ ವಿದ್ಯಾರ್ಥಿ

**ಮಾರ್ಗದರ್ಶಕರು**

**ಡಾ. ಎನ್. ಚಿನ್ನಸ್ವಾಮಿ ಸೋಸಲೆ**

ಪ್ರಾಧ್ಯಾಪಕರು





**ಚರಿತ್ರೆ ವಿಭಾಗ**

**ಸಮಾಜ ವಿಜ್ಞಾನಗಳ ನಿಕಾಯ**

**ಕನ್ನಡ ವಿಶ್ವವಿದ್ಯಾಲಯ, ಹಂಪಿ**

**ವಿದ್ಯಾರಣ್ಯ – ೫೮೩೨೭೬**




೨೦೧೬–೧೭

# ಸಂಶೋಧಕರ ಪ್ರಮಾಣ ಪತ್ರ

**ವಸಾಹತು ಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು **ಡಾ. ಎನ್. ಚಿನ್ನಸ್ವಾಮಿ ಸೋಸಲೆ,** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

**ಮದನ್ ಪಿ.**
ಸಂಶೋಧಕ
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : 23/11/16

# ಮಾರ್ಗದರ್ಶಕರ ದೃಢೀಕರಣ ಪತ್ರ

**ವಸಾಹತು ಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ **ಮದನ್** ಪಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

23.11.16

ಡಾ. ಎನ್. ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಡಾ.ಎನ್.ಚಿನ್ನಸ್ವಾಮಿ ಸೋಸಲೆ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – 583 276

ಸ್ಥಳ : ವಿದ್ಯಾರಣ್ಯ
ದಿನಾಂಕ : 23/11/16

# ಪರಿವಿಡಿ

# ಅಧ್ಯಾಯ – ೦೧

# ಪ್ರಸ್ತಾವನೆ

---

೧.೧. ಅಧ್ಯಯನದ ಉದ್ದೇಶ ಮತ್ತು ಮಹತ್ವ

೧.೨. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

೧.೩. ಅಧ್ಯಯನದ ವಿಧಾನ ಮತ್ತು ಆಕರಗಳು

೧.೪. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

---

# ಅಧ್ಯಾಯ – ೧

## ಪ್ರಸ್ತಾವನೆ

ಕಾರ್ಲ್ ಮಾರ್ಕ್ಸ್‌ನ ತಾತ್ವಿಕ ವಿಚಾರಗಳು ಸೈದ್ಧಾಂತಿಕ ಹಿನ್ನೆಲೆಯಲ್ಲಿ ೧೯೬೦ರ ದಶಕದಿಂದ ಇಡೀ ವಿಶ್ವದ ಚರಿತ್ರೆಯ ದೃಷ್ಟಿಕೋನವನ್ನಲ್ಲದೆ ಒಟ್ಟಾರೆ ಸಮಾಜ ವಿಜ್ಞಾನಗಳ ದೃಷ್ಟಿಕೋನವನ್ನೇ ಬದಲಾಯಿಸಿತು ಅಂದರೆ ತಪ್ಪಾಗಲಾರದು. ಭಾರತದ ಚರಿತ್ರೆಯ ಸಂದರ್ಭವನ್ನು ನೋಡುವುದಾದರೆ ಮಾರ್ಕ್ಸ್ ವಾದವನ್ನು ಬಿಟ್ಟು ಬೇರೆ ಸೈದ್ಧಾಂತಿಕ ಹಿನ್ನೆಲೆಯಿಂದ ಚರಿತ್ರೆಯನ್ನು ವಿಶ್ಲೇಷಿಸಿದ್ದೇ ಆದಲ್ಲಿ ಅದನ್ನು ಘೋರ ಅಪರಾಧವೆಂಬಂತೆ ಗುಮಾನಿಯಿಂದ ನೋಡುವಂತಹ ವಾತಾವರಣ ಆ ಸಂದರ್ಭದಲ್ಲಿ ನಿರ್ಮಾಣವಾಗಿತ್ತು. ಮಾರ್ಕ್ಸ್ ಸಿದ್ಧಾಂತವು ಏಕೆ ಇಷ್ಟು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ ಎಂಬ ಪ್ರಶ್ನೆ ಸಂಶೋಧಕರ ಮುಂದೆ ನಿಲ್ಲುತ್ತದೆ. ಇದರ ವಿಸ್ತಾರ, ಪ್ರಭಾವ ಹಾಗೂ ಜಗಜ್ಜಾಹಿರತೆಯನ್ನು ನೋಡಿದರೆ ಈ ತತ್ವಕ್ಕೆ ಪ್ರಾಪಂಚಿಕ ಅನ್ವಯಿಕತೆ (ಯೂನಿವರ್ಸಲ್ ಅಪ್ಲಿಕೇಶನ್) ಇದೆ ಎಂಬುದು ಸಾಬೀತಾಗಿದೆ. ಇದನ್ನು ಗ್ರಹಿಸುವುದು ಸುಲಭ, ಏಕೆಂದರೆ ಉಳ್ಳವರು–ಇಲ್ಲದವರು, ಬಡವ–ಶ್ರೀಮಂತ, ಕಾರ್ಮಿಕ–ಮಾಲೀಕ, ಉತ್ಪಾದಕವರ್ಗ–ಬಂಡವಾಳಶಾಹಿ ಇವೆಲ್ಲವೂ ಎಲ್ಲಾ ದೇಶಗಳಲ್ಲೂ ಅಸ್ತಿತ್ವದಲ್ಲಿದೆ. ಹೀಗಾಗಿ ಮಾರ್ಕ್ಸ್‌ನ ಸಿದ್ಧಾಂತ ಇವುಗಳೆಲ್ಲವನ್ನು ಆವರಿಸಿಕೊಂಡಿರುವುದರಿಂದ ಈ ತತ್ವಕ್ಕೆ ಪ್ರಾಪಂಚಿಕ ಅನ್ವಯಿಕತೆ ಇದೆ ಎಂದು ಪ್ರತಿಪಾದಿಸಬಹುದು. ಆದರೆ ಇದು ಸರ್ವಕಾಲಿಕವೇ? ಎಂಬ ಪ್ರಶ್ನೆ ಹಾಕಿಕೊಂಡರೆ ಹೌದು ಎಂದು ಉತ್ತರಿಸಬಹುದು. ಏಕೆಂದರೆ ಶೋಷಣೆ ಹಾಗೂ ಅಸಮಾನತೆ ಎಲ್ಲಾ ಸಮಾಜದಲ್ಲೂ, ಎಲ್ಲಾ ಕಾಲಕ್ಕೂ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಒಂದಲ್ಲ ಒಂದು ರೀತಿಯಲ್ಲಿ ಗೋಚರಿಸುತ್ತಲೇ ಇರುತ್ತದೆ. ಆದರೆ ಸ್ವತಃ ಮಾರ್ಕ್ಸ್‌ನೇ ಹೇಳುವಂತೆ ಯಾವುದೂ ಸರ್ವಕಾಲಿಕವಲ್ಲ, ಬದಲಾವಣೆ ಶತಸಿದ್ಧ, ಇದನ್ನೇ ಅಂಬೇಡ್ಕರ್ ವಾದಿಸಿದ್ದಾರೆ.

ಆಧುನಿಕ ಭಾರತದ ಚರಿತ್ರೆಯನ್ನು ಅಧ್ಯಯನ ಮಾಡುವ ಚರಿತ್ರೆಕಾರರಿಗೆ ಯುರೋಪಿಯನ್ನರು (ಬ್ರಿಟಿಷರು), ವಸಾಹತುಶಾಹಿ ಹಾಗೂ ಸಾಮ್ರಾಜ್ಯಶಾಹಿ ಈ ಮೂರು ಅಂಶಗಳು ಅಧ್ಯಯನ ವಿಷಯಗಳಾಗಿ ಕಂಡುಬರುತ್ತಿವೆ. ಇವುಗಳ ಹಿನ್ನೆಲೆಯಿಂದಲೇ ಆ ಸಂದರ್ಭದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಯನ್ನು ಗ್ರಹಿಸುವ ಹಾಗೂ ವಿಶ್ಲೇಷಿಸುವ ಪ್ರಯತ್ನ

ನಡೆಯುತ್ತಾ ಬಂದಿದೆ[೧]. ಹೀಗಾಗಿ ಚರಿತ್ರೆಯ ಸಂಶೋಧನೆಯಲ್ಲಿ ಪ್ರಧಾನವಾಗಿ ಮೂರು ಹಂತಗಳನ್ನು ಗುರುತಿಸುತ್ತೇವೆ. ಮೊದಲನೆಯದಾಗಿ, ಗೊತ್ತಿಲ್ಲದೇ ಇರುವ ಸಂಗತಿಗಳ ಅನ್ವೇಷಣೆ ಅಥವಾ ಶೋಧನೆ ಅಥವಾ ಹುಡುಕಾಟ. ಎರಡನೆಯದಾಗಿ, ವಿಶ್ಲೇಷಣೆ ಹಾಗೂ ಕೊನೆಯದಾಗಿ ಹೊಸ ಸಿದ್ಧಾಂತಗಳು, ಹೊಸ ತಾತ್ವಿಕತೆ, ಹೊಸ ಪಂಥಗಳನ್ನು ಹುಟ್ಟು ಹಾಕುವುದು. ಕೊನೆಯದು ಸಂಶೋಧನೆಯಲ್ಲಿಯೇ ಶ್ರೇಷ್ಠವಾದುದು ಹಾಗೂ ಅಷ್ಟೇ ತೀರಾ ಕಠಿಣವಾದುದು. ಮೊದಲನೆಯದು ತೀರಾ ಪ್ರಾಥಮಿಕ ಹಂತದ್ದು. ಇನ್ನು 'ವಿಶ್ಲೇಷಣೆ' ಹಂತದ ಬಗ್ಗೆ ಹೇಳುವುದಾದರೆ ಇದು ಸಂಶೋಧನೆಯಲ್ಲಿ 'ಮಧ್ಯಮ', ಅಲ್ಲದೆ ಇಂದಿನ ಬಹುತೇಕ ಸಂಶೋಧಕರು ಅಳವಡಿಸಿಕೊಳ್ಳುತ್ತಿರುವ ಹಂತ. ಸಂಶೋಧನೆಯಲ್ಲಿ ಇದಕ್ಕೆ ಹೆಚ್ಚಿನ ಮಾನ್ಯತೆಯು ದೊರಕಿದೆ. ಏಕೆಂದರೆ ಹೊಸ ಸಿದ್ಧಾಂತವನ್ನು ಹುಟ್ಟು ಹಾಕುವುದು ಅಷ್ಟು ಸುಲಭದ ಕಾರ್ಯವಲ್ಲ. ಹಾಗೆಯೇ ಸಂಶೋಧಕನು ನಾನು ಹೊಸ ಸಿದ್ಧಾಂತವನ್ನು ಸೃಷ್ಟಿಸುತ್ತೇನೆ ಎಂಬ ಭ್ರಮೆಯಲ್ಲಿರುವುದು ತರವಲ್ಲ. ಹೀಗೆ ಸಿಕ್ಕಂತಹ ಪ್ರಾಥಮಿಕ ಆಕರಗಳ ಮೂಲಕ ಅದರ ಮೇಲೆ ಹತ್ತಿಪ್ಪತ್ತು ಪಿಎಚ್.ಡಿ.ಗಳು ಆಗಿದ್ದರೂ ನಮ್ಮದು ಮೇಲಿನವೆಲ್ಲವನ್ನು ಮೀರಿಸುವ 'ವಿಶ್ಲೇಷಣೆ' ಎನ್ನುವ ಮಟ್ಟಿಗೆ ಬಂದರೆ ಸ್ವಾಗತಾರ್ಹ.

ಹೀಗಾಗಿ ಇಂದಿನ ಸಂಶೋಧನೆ ಬಯಸುತ್ತಿರುವುದು ಗ್ರಹಿಕೆ ಮತ್ತು ವಿಶ್ಲೇಷಣೆಯನ್ನು[೨]. ಈ ಹಿನ್ನೆಲೆಯಲ್ಲಿ ಈಗಾಗಲೇ ಚರಿತ್ರೆಯನ್ನು ಅಧ್ಯಯನ ಮಾಡಲು ಹಲವಾರು ಸಿದ್ಧಾಂತಗಳು ಅಥವಾ ಪಂಥಗಳಾದ ವಸಾಹತುವಾದ, ರಾಷ್ಟ್ರೀಯವಾದ, ಮಾರ್ಕ್ಸ್‌ವಾದ, ಸಬಾಲ್ಟರ್ನ್, ನವಚಾರಿತ್ರಿಕವಾದ, ಆನಲ್ಸ್ ಪಂಥ ಇತ್ಯಾದಿ ಪಂಥಗಳು ತಮ್ಮ ಕೆಲಸ ಹಾಗೂ ಕೈ ಚಳಕವನ್ನು ತೋರಿಸುತ್ತಾ ಬಂದಿವೆ. ಮೊದಲೇ ಸ್ಪಷ್ಟಪಡಿಸಿದಂತೆ ಈಗಿರುವ ಅಥವಾ ಹೊಸದಾಗಿ ಹುಟ್ಟಿಕೊಳ್ಳುತ್ತಿರುವ ಯಾವುದೇ ಸಿದ್ಧಾಂತಗಳಾಗಲಿ ತಮ್ಮ ವಾದಗಳನ್ನು ಮಂಡಿಸುತ್ತಿರುವುದರ ಹಿಂದೆ ಅಡಗಿರುವ ವಿಚಾರ 'ಗ್ರಹಿಕೆ' ಹಾಗೂ 'ವಿಶ್ಲೇಷಣೆ'.

ಒಟ್ಟಿನಲ್ಲಿ ಚರಿತ್ರೆಯ ಹೆಗಲ ಮೇಲೆ ಹೆಚ್ಚಿನ ಭಾರ ಬಿದ್ದಿರುವುದಂತೂ ಖಂಡಿತ. ಯಾವುದೇ ಒಂದು ಅಧ್ಯಯನ ಶಿಸ್ತು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವಾಗ ಈ ತರನಾದ ಭಾರವನ್ನು ಹೊತ್ತು ಮುನ್ನಡೆಯಬೇಕಾಗಿರುವುದು ತೀರಾ ಅತ್ಯಗತ್ಯ. ಹೀಗಾಗಿ ಚರಿತ್ರೆಯು ಇದರಿಂದ ಹೊರತೇನಲ್ಲ. ಆದರೆ ಈ ಭಾರ ಹೊರಲಾರದ ಹೊರೆಯಾಗಬಾರದಷ್ಟೆ. ಸ್ವತಂತ್ರಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ವಸಾಹತುಶಾಹಿ ವ್ಯವಸ್ಥೆಯನ್ನು ಅಧ್ಯಯನ ಮಾಡುವ ಪ್ರಯತ್ನದಲ್ಲಿ ಚರಿತ್ರೆ

ಹೆಚ್ಚಿನ ಭಾರವನ್ನು ಹೊತ್ತಿದೆ ಹಾಗೂ ಅದೆಷ್ಟೋ ಭಾರತೀಯ ಮನಸ್ಸುಗಳಿಗೆ ಇಂದಿನ ಇಂಗ್ಲೆಂಡ್‌ನ ಬಗೆಗೂ ವೈಶಮ್ಯ ತರುವಲ್ಲಿ ಯಶಸ್ವಿಯೂ ಆಗಿದೆ. ಹೀಗಾಗಿ ಇತ್ತೀಚೆಗೆ ೨೦೧೩ರಲ್ಲಿ ಇಂಗ್ಲೆಂಡಿನ ಪ್ರಧಾನಿ 'ಡೇವಿಡ್ ವಿಲಿಯಂ ಡೊನಾಲ್ಡ್ ಕ್ಯಾಮೆರನ್' ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಜಲಿಯನ್ ವಾಲಾಭಾಗ್ ಹತ್ಯಾಕಾಂಡದ ಬಗ್ಗೆ ಮರುಕವನ್ನು ವ್ಯಕ್ತಪಡಿಸಿದ್ದು ಹಾಗೂ ಆ ಸಂದರ್ಭದಲ್ಲಿ 'ಜನರಲ್ ಡಯರ್' ಒಳಗೊಂಡಂತೆ ಬ್ರಿಟಿಷರು ತೆಗೆದುಕೊಂಡ ಕ್ರಮವನ್ನು ಕುರಿತು ಖಂಡಿಸುವ ನಡೆಯನ್ನು ವ್ಯಕ್ತಪಡಿಸಿದ್ದನ್ನು ಕಾಣಬಹುದು. ಅಲ್ಲದೆ ಕ್ಯಾಮೆರನ್ ಅವರು ಈ ಸಂದರ್ಭದಲ್ಲಿದ್ದುಕೊಂಡು ಆ ಸಂದರ್ಭದ ವಿಷಯವಾಗಿ ಭಾರತೀಯರಲ್ಲಿ ಕ್ಷಮೆಯಾಚಿಸುವ ಪ್ರವೃತ್ತಿಯು ಒಂದು ದೃಷ್ಟಿಯಲ್ಲಿ ವೈಶಮ್ಯವನ್ನು ಕಡಿಮೆ ಮಾಡುವ ಪ್ರಯತ್ನವೆಂದು ಹೇಳಬಹುದು. ಅಥವಾ ಇದೊಂದು ರಾಜಕೀಯ ಕಾರ್ಯತಂತ್ರ, ಕುಟಿಲತೆ ಅಥವಾ ಯುಕ್ತಿ (ಪೊಲಿಟಿಕಲ್ ಸ್ಟ್ರಾಟಜಿ) ಹೀಗೆ ಯಾವ ರೀತಿಯಲ್ಲಿ ಬೇಕಾದರೂ ವಿಶ್ಲೇಷಿಸಬಹುದು. ಇದರ ಹಿಂದಿರುವ ಉದ್ದೇಶ ಒಳ್ಳೆಯದೇ ಆದಲ್ಲಿ ಇದು ಚರಿತ್ರೆಯ ಮೇಲಿರುವ ಹೊರಲಾರದ ಹೊರೆಯನ್ನು ಇಳಿಸುವ ನಿಟ್ಟಿನಲ್ಲಿ ಒಂದು ಪ್ರಯತ್ನ ಅಂತಲೂ ಪರಿಗಣಿಸಬಹುದು. ಈ ವಿಚಾರವನ್ನು ಇಲ್ಲಿ ಪ್ರಸ್ತಾಪಿಸುತ್ತಿರುವಾಗ ಒಂದಂಶವನ್ನು ಸ್ಮರಿಸಿಕೊಳ್ಳಲೇ ಬೇಕಾಗುತ್ತದೆ. ಅದು ಇ.ಎಚ್. ಕಾರ್ ಅವರು ಚರಿತ್ರೆಗೆ ನೀಡಿರುವ ವ್ಯಾಖ್ಯಾನ, "ಗತ ಹಾಗೂ ಚರಿತ್ರೆಕಾರನ ನಡುವಿನ ನಿರಂತರ ಸಂವಾದವೇ ಚರಿತ್ರೆ"[3]. ಇದನ್ನು ಅಳವಡಿಸಿ ಅಥವಾ ಅನ್ವಯಿಸಿ ನೋಡುವ ಜರೂರು ಈ ಸಂಶೋಧನೆಯ ಮುಂದಿದೆ.

ಬಿಪನ್ ಚಂದ್ರ ಅವರು ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಚರ್ಚಿಸುವಾಗ ಪ್ರಾರಂಭದಲ್ಲಿ ಒಂದು ಕಡೆ ಬಹಳ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ರಾಜರಾಮ ಮೋಹನ್ ರಾಯ್‌ರ ಕಾಲದಿಂದಲೂ ಭಾರತದ ರಾಷ್ಟ್ರ ನಾಯಕರು ಒಂದು ತತ್ವವನ್ನು ಅಳವಡಿಸಿಕೊಂಡಿದ್ದಾರೆ. ಅದು, ಮೋಹನ್‌ರಾಯ್‌ರೇ ಸ್ಪಷ್ಟಪಡಿಸಿದಂತೆ ಭಾರತೀಯರು ದ್ವೇಷಿಸುತ್ತಿರುವುದು ಬ್ರಟಿಷರ ಸಾಮ್ರಾಜ್ಯಶಾಹಿ ಧೋರಣೆಯನ್ನೇ ಹೊರತು ಬ್ರಿಟಿಷ್ ಜನತೆಯನ್ನಲ್ಲ ಎಂದು. ಇಂತಹ ಕೂಗು ಎಲ್ಲೆಡೆ ವ್ಯಕ್ತವಾಗುತ್ತಿದ್ದಂತೆ ಆ ಸಂದರ್ಭದಲ್ಲಿಯೇ (ಮೋಹನ್ ರಾಯ್‌ರ ಕಾಲದಲ್ಲಿ) ಅಸಂಖ್ಯಾತ ಇಂಗ್ಲಿಷ್ ಮಹಿಳೆಯರು, ಪುರುಷರು ಹಾಗೂ ರಾಜಕೀಯ ಸಂಘಟನೆಗಳು ಇಂಗ್ಲೆಂಡಿನಾದ್ಯಂತ ಈ ಅಭಿಪ್ರಾಯಕ್ಕೆ ಬೆಂಬಲ ವ್ಯಕ್ತಪಡಿಸಿದ್ದನ್ನು ಕಾಣುತ್ತೇವೆ. ಪ್ರಪಂಚದ ಮೂಲೆ ಮೂಲೆಯಿಂದ ಎಷ್ಟೋ ಮಂದಿ ಪ್ರಗತಿಪರ ಚಿಂತಕರು, ಬಂಡವಾಳಶಾಹಿ ವಿರೋಧಿ ಹಾಗೂ ವಸಾಹತುಶಾಹಿ ವಿರೋಧಿ

ಶಕ್ತಿಗಳು ಸಹ ಈ ಅಭಿಪ್ರಾಯಕ್ಕೆ ಕೈ ಜೋಡಿಸಿದ್ದು, ಧ್ವನಿಯಾಗಿದ್ದು ಉಂಟು. ಈ ರೀತಿಯಾದ ಗ್ರಹಿಕೆಯು ಸಹ ಚರಿತ್ರೆಯ ಮೇಲಿನ ಅತಿಯಾದ ಹೊರೆಯನ್ನು ಕಡಿಮೆ ಮಾಡುವ, ಒಂದು ರಾಷ್ಟ್ರದ ಸಮುದಾಯದ ಮೇಲಿನ ದ್ವೇಷ ವೈಷಮ್ಯವನ್ನು ಹೋಗಲಾಡಿಸವ ಪ್ರಯತ್ನ ಎಂದರೆ ತಪ್ಪಾಗಲಾರದೇನೊ.

ಇತ್ತೀಚಿನ ಇನ್ನೊಂದು ಚಾರಿತ್ರಿಕ ಅಂಶವನ್ನು ಈ ನಿಟ್ಟಿನಲ್ಲಿ ಪರಿಗಣಿಸಬಹುದು. ಡಿಸೆಂಬರ್ ೪, ೨೦೧೩ರಂದು ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫ್ ಭಾರತದ ವಿರುದ್ಧ ಹೇಳಿಕೆಯನ್ನು ನೀಡಿದ್ದಾರೆ ಎಂದು ಆರೋಪಿಸಲಾದ 'ಪಾಕಿಸ್ತಾನವು ಭಾರತದೊಂದಿಗೆ ನಾಲ್ಕನೇ ಯುದ್ಧಕ್ಕೂ ಸಿದ್ಧ' ಎಂಬ ಹೇಳಿಕೆ. ಈ ಹೇಳಿಕೆಗೆ ಭಾರತದ ಪ್ರಧಾನಿ ಮನಮೋಹನ್ ಸಿಂಗ್ 'ಭಾರತ ವಿರುದ್ಧದ ಯಾವುದೇ ಯುದ್ಧವನ್ನು ಪಾಕಿಸ್ತಾನವು ಗೆಲ್ಲುವುದಿಲ್ಲ' ಎಂದು ಪ್ರತಿಕ್ರಿಯಿಸಿದ್ದು, ಆದರೆ ಸ್ವತಃ ಶರೀಫ್ ಈ ರೀತಿಯ ಹೇಳಿಕೆ ನೀಡಿಯೇ ಇಲ್ಲ ಎಂದು ಸ್ಪಷ್ಟನೆ ನೀಡಿದರು. ಅಲ್ಲದೆ ನನ್ನ ಹೇಳಿಕೆಯನ್ನು ತಿರುಚಲಾಗಿದೆ ಎಂದು ವಾರ್ತಾ ಇಲಾಖೆಯ ಮೂವರು ಅಧಿಕಾರಿಗಳಿಗೆ ಕಳಪೆ ಕೆಲಸದ ಕಾರಣವೊಡ್ಡಿ ಅಮಾನತ್ತುಗೊಳಿಸಿದರು. ಈ ರೀತಿಯ ಸಂದರ್ಭಗಳು ಸಹ ಚರಿತ್ರೆಯ ಭಾರವನ್ನು ಹೆಚ್ಚಿಸುತ್ತವೆ. ಅಲ್ಲದೆ ಆ ಸಮಯದಲ್ಲಿ ನೀಡುವ ಹೇಳಿಕೆಗಳು, ಪ್ರತಿಕ್ರಿಯೆಗಳು ಹಾಗೂ ಸ್ಪಷ್ಟನೆಗಳು ದ್ವೇಷ ವೈಶಮ್ಯವನ್ನು ಶಮನ ಮಾಡುವ ಅಥವಾ ಹೆಚ್ಚಿಸುವ ನಿಟ್ಟಿನಲ್ಲಿ ಬಹು ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತವೆ.

ಇದು ಆಧುನಿಕ ಭಾರತದ ಚರಿತ್ರೆಯನ್ನು ಗ್ರಹಿಸುವಾಗ ಒಂದು ಬಗೆಯದಾದ ವಿಶ್ಲೇಷಣೆಯಾದರೆ, ಯುರೋಪ್ ಕೇಂದ್ರಿತ ಸಾಮ್ರಾಜ್ಯಶಾಹಿ ಧೋರಣೆಯುಳ್ಳ ಪಾಶ್ಚಿಮಾತ್ಯ ಚರಿತ್ರೆಕಾರರು (ಎಲ್ಲರೂ ಅಲ್ಲ) ಮತ್ತೊಂದು ಬಗೆಯ ಗ್ರಹಿಕೆ ಹಾಗೂ ವಿಶ್ಲೇಷಣೆಯನ್ನು ಹೊಂದಿದ್ದಾರೆ. ಮೊದಲನೆಯದಾಗಿ ಇವರು ತಮ್ಮ ಹೆಜೆಮನಿ ಅಥವಾ ಮುಂದಾಳ್ತನವನ್ನು ಸ್ಥಾಪಿಸುವ ನಿಟ್ಟಿನಲ್ಲಿ 'ಆಧುನಿಕತೆ'ಯನ್ನು ಒಂದು ಐಡಿಯಾಲಜಿಯ ಹಿನ್ನಲೆಯಲ್ಲಿ ಪ್ರತಿಪಾದಿಸುತ್ತಿರುವುದು. ಹಾಗೆ ನೋಡಿದ್ದೇ ಆದಲ್ಲಿ ಇದು ತಪ್ಪು ಎಂದು ವಾದಿಸುವ ಮೊಂಡುತನವು ಇಲ್ಲಿನ (ಏಷ್ಯಾ ಹಾಗೂ ಆಫ್ರಿಕಾ) ಸಂಶೋಧಕರದ್ದಲ್ಲ. ಅಲ್ಲದೆ ಈ ರೀತಿಯ ದೃಷ್ಟಿಕೋನವನ್ನು ಇಲ್ಲಿನ ಚರಿತ್ರೆಯು ಸ್ವಾಗತಿಸದೆ ಮೂಗು ಮುರಿಯುವ ಪ್ರವೃತ್ತಿಯನ್ನಾಗಲಿ ಅಥವಾ ತಿರಸ್ಕರಿಸುವ ಯಾವುದೇ ಪೂರ್ವಾಗ್ರಹವನ್ನು ಹೊಂದಿಲ್ಲ. ಆದರೆ ಇಲ್ಲಿ ಕಾಡುತ್ತಿರುವ ವಿಷಯ, ಇವರು

'ಆಧುನಿಕತೆ'ಯನ್ನು ಪ್ರತಿಪಾದಿಸಲು ಹೊರಟಿರುವಾಗ ಅನುಸರಿಸುತ್ತಿರುವ ಕ್ರಮ ಹಾಗೂ ಹೇರಿಕೆಯನ್ನು ನೋಡಿದರೆ ಏಷ್ಯಾ ಹಾಗೂ ಆಫ್ರಿಕಾದ ಚರಿತ್ರೆಕಾರರಿಗೆ, ಸಂಶೋಧಕರಿಗೆ ಹಾಗೂ ಗ್ರಹಿಸುವ ಪ್ರಜ್ಞೆಯುಳ್ಳ ಜನತೆಗೆ ಕೆಲವೊಮ್ಮೆ ತಮ್ಮ ಬೆನ್ನನ್ನು ತಾವೇ ನೋಡಿಕೊಳ್ಳುತ್ತಿದ್ದೇವೇನೋ ಎಂಬಂತೆ ಭಾಸವಗುತ್ತಿರಬಹುದು. ಆದರೆ ಇದನ್ನು ನಮ್ಮ ಕೊರತೆ ಎಂಬಂತೆ ಭಾವಿಸುವ ಅಗತ್ಯವಿಲ್ಲ.

ಇದನ್ನು ಒಂದು ಚರ್ಚೆಯ ಮೂಲಕ ಗ್ರಹಿಸಿಕೊಂಡರೆ ಉತ್ತಮ. ಅದು 'ದ ಫೌಂಡೇಶನ್ ಆಫ್ ದ ಮಾಡರ್ನ್ ವೆಸ್ಟ್ ಅಥವಾ ಆಧುನಿಕ ಪಶ್ಚಿಮಕ್ಕೆ ಅಡಿಪಾಯ' ಎಂಬ ಪರಿಕಲ್ಪನೆ. ಇದು ಈಗ ತೆಗೆದುಕೊಳ್ಳುತ್ತಿರುವ ಚರ್ಚೆಗೆ ಪುಷ್ಠಿ ನೀಡುವ ವಸ್ತುವಿಷಯವೆಂದರೆ ತಪ್ಪಾಗಲಾರದು. ಈ ವಿಷಯದ ಬಗ್ಗೆ ಯುರೋಪಿಯನ್ ಚರಿತ್ರೆಕಾರರ ದೃಷ್ಟಿಕೋನವನ್ನು ಗ್ರಹಿಸಿದರೆ 'ಆಧುನಿಕತೆ'ಯ ಬಗ್ಗೆ ಅವರ ಹೆಜೆಮನಿ ಹಾಗೂ ಐಡಿಯಾಲಜಿಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಕ್ರಿ.ಶ. ೧೪೫೩ರಲ್ಲಿ ಆಟೋಮನ್ ಟರ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡಿದ್ದರ ಪರಿಣಾಮವಾಗಿ ಯುರೋಪಿಯನ್ನರಿಗೆ ಇದ್ದಂತಹ ಏಕೈಕ ಭೂ ಮಾರ್ಗ ಮುಚ್ಚಲ್ಪಟ್ಟಿತು. ಆದುದರಿಂದ ಪರ್ಯಾಯವಾಗಿ ಜಲಮಾರ್ಗವನ್ನು ಶೋಧನೆ ಮಾಡಬೇಕಾಗಿ ಬಂದಿತು. ಹೀಗಾಗಿ ವಿಜ್ಞಾನದಲ್ಲಿ ತೀವ್ರಗತಿಯ ಪ್ರಗತಿಯನ್ನು ಸಾಧಿಸಲಾಯಿತು ಹಾಗೂ ಯುರೋಪಿನ ಪ್ರಭುತ್ವ ಮತ್ತು ಬಂಡವಾಳಶಾಹಿಗಳು ಇದಕ್ಕೆ ಬೆಂಬಲವಾಗಿ ನಿಂತಿದ್ದರಿಂದ ವ್ಯಾಪಾರ ಹಾಗೂ ವಾಣಿಜ್ಯದಲ್ಲಿಯೂ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಯಿತು. ಇದು 'ಆಧುನಿಕತೆ'ಯ ಆರಂಭದ ಹಂತ ಎಂದು ಬಲವಾಗಿ ವಾದಿಸುತ್ತಾರೆ. ಸರಿ, ಪಾಶ್ಚಿಮಾತ್ಯ ಚರಿತ್ರೆಕಾರರು 'ಆಧುನಿಕತೆ' ಕುರಿತು ಪ್ರಬಲವಾಗಿ ಪ್ರತಿಪಾದಿಸುವ ಈ ವಿಶ್ಲೇಷಣೆಯನ್ನು ಒಪ್ಪಿಕೊಳ್ಳೋಣ ಎನ್ನುವಷ್ಟರಲ್ಲಿ ಏಷ್ಯಾ ಅಥವಾ ಭಾರತ ಕುರಿತಾದ ಇದೇ ಸಂದರ್ಭದ (೧೪೫೩) ಇವರ ವಿಶ್ಲೇಷಣೆ ಅಥವಾ ಗ್ರಹಿಕೆಯೇ ವಿಭಿನ್ನ ರೂಪದ್ದಾಗಿದೆ. ಭಾರತದ ಸಂದರ್ಭದಲ್ಲಿ ಈ ಕಾಲ ಇನ್ನು 'ಮಧ್ಯಯುಗ'ದ್ದು ಎಂದು ಅಷ್ಟೇ ಬಲವಾಗಿ ವಾದಿಸುವ ಪಾಶ್ಚಿಮಾತ್ಯ ಚರಿತ್ರೆಕಾರರಿಗಂತೂ ಬರವಿಲ್ಲ. ಆದರೆ ಇಲ್ಲಿ ಗ್ರಹಿಸಬೇಕಾಗಿರುವುದು ಇನ್ನೊಂದಿದೆ. ಅದು ಪಾಶ್ಚಿಮಾತ್ಯರ ಧಾರ್ಮಿಕ ಪ್ರಾಬಲ್ಯ. ಅಂದರೆ ಯುರೋಪಿಯನ್ನರಿಗೆ ಹಾಗೂ ಅವರ ಅಭಿವೃದ್ಧಿ ದಾಹಕ್ಕೆ, ಅತಿಯಾಸೆಗೆ ತೊಡಕಾಗಿದ್ದು ಅಥವಾ ದೊಡ್ಡ ಮಟ್ಟದಲ್ಲಿ ಡಿಸ್ಟರ್ಬ್ ಮಾಡಿದ್ದು ಟರ್ಕರು ; ಅಂದರೆ ಮುಸಲ್ಮಾನರು. ಹೀಗಾಗಿ ಜಲಮಾರ್ಗದ ಮೂಲಕ ಭಾರತಕ್ಕೆ ಬಂದ ಯುರೋಪಿಯನ್ನರಿಗೆ ಇಲ್ಲೂ ಸಹ ವ್ಯಾಪಾರಕ್ಕೆ ಹಾಗೂ

ವಸಾಹತುಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ಅಥವಾ ಫರ್ಮಾನು ನೀಡಬೇಕಾಗಿದ್ದುದು ಮೊಘಲರು. ಯುರೋಪಿಯನ್ನರಿಗೆ ವೈರಿಗಳಾಗಿ ಬಾಸವಾಗುತ್ತಿದ್ದ ಮುಸಲ್ಮಾನರು, ಮತ್ತವರ ಪ್ರಾಬಲ್ಯ ಹಾಗೂ ಅವರ ಸಾಮ್ರಾಜ್ಯದ ಬಗೆಗೆ ವ್ಯತಿರಿಕ್ತ ಧೋರಣೆ ವ್ಯಕ್ತಪಡಿಸಿ, ಮುಸಲ್ಮಾನರು ಆಳುವ ಸಾಮ್ರಾಜ್ಯ ಅಥವಾ ಪ್ರದೇಶ ಇನ್ನೂ 'ಮಧ್ಯಯುಗ'ದ್ದು ಅಥವಾ 'ಅಂಧಕಾರ'ದ್ದು ಎನ್ನುವ ಪಾಶ್ಚಿಮಾತ್ಯ ಇತಿಹಾಸಕಾರರ ಸಂಖ್ಯೆಯೂ ದೊಡ್ಡ ಮಟ್ಟದಲ್ಲಿಯೇ ಇದೆ ಎಂದರೆ ತಪ್ಪಾಗಲಾರದು. ಇದು 'ಆಧುನಿಕತೆ'ಯ ಬಗ್ಗೆ ಪಾಶ್ಚಿಮಾತ್ಯ ಚರಿತ್ರೆಕಾರರು ವ್ಯಕ್ತಪಡಿಸುವ ಒಂದು ರೀತಿಯ ದೃಷ್ಟಿಕೋನ. ಅದು ತಪ್ಪು ಅಥವಾ ಇದು ಸರಿ ಎನ್ನುವುದು ಇಲ್ಲಿರುವ ಚರ್ಚೆಯಲ್ಲ. ಆದರೆ ವಿಶ್ಲೇಷಣ ಮಾದರಿಯನ್ನು ಗ್ರಹಿಸಬೇಕಾಗಿರುವುದು ಸಂಶೋಧಕರ ಜವಾಬ್ದಾರಿ.

ಇಂದು ಚರಿತ್ರೆಯು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಪ್ರಯತ್ನದಲ್ಲಿ ಹಲವು ಬಗೆಯ ದೃಷ್ಟಿಕೋನಗಳಿಗೆ ಒಳಗಾಗುತ್ತಿದೆ. ಪ್ರಾರಂಭದಿಂದಲೂ ಉಚ್ಚರಿಸುತ್ತಿರುವ 'ವಿಶ್ಲೇಷಣೆ' ಎಂಬ ಪರಿಕಲ್ಪನೆಯು 'ದೃಷ್ಟಿಕೋನ'ಗಳಿಗೆ ಈಡಾಗುತ್ತಿದೆ. ಚರಿತ್ರೆ ಲೇಖನಶಾಸ್ತ್ರದಲ್ಲಿ ಆಯಾ ಸಂದರ್ಭಕ್ಕೆ ಆಯಾ ದೃಷ್ಟಿಕೋನಗಳು (ಅದು ವಸಾಹತುವಾದದಿಂದ ಇಂದಿನ ಪುನರ್ ರಚನೆಯವರೆಗೂ) ಬರವಣಿಗೆಯ ಮೇಲೆ ತನ್ನ ಛಾಪನ್ನು ಬೀರುತ್ತಲೇ ಬಂದಿವೆ. ಆದರೆ ಯಾವುದೇ ಒಂದು ದೃಷ್ಟಿಕೋನವೂ ಸಹ ಚಿರಸ್ಥಾಯಿಯಾದ ಪಾರಮ್ಯವನ್ನು ಮೆರೆದಿದ್ದು ಇಲ್ಲ. ಅಲ್ಲದೆ ಚರಿತ್ರೆಯ ಜೀವಂತಿಕೆಗೆ ಈ ತರನಾದ ಬದಲಾದ ದೃಷ್ಟಿಕೋನ ಅತ್ಯಗತ್ಯ. ಸಂಶೋಧಕರು ಯಾವುದೋ ಒಂದು ದೃಷ್ಟಿಕೋನಕ್ಕೆ ಒಳಗಾಗಿ ಪೂರ್ವಾಗ್ರಹದಿಂದ ಸಂಶೋಧನೆಗೆ ತೊಡಗಿಕೊಂಡಾಗ ತನ್ನ ವಿಷಯದ ಬಗ್ಗೆ ಏಕಮುಖವಾದ ನಿಲುವನ್ನು ತಳೆಯಬೇಕಾಗುತ್ತದೆ. ಹೀಗಾಗಿ ಎಲ್ಲ ದೃಷ್ಟಿಕೋನಗಳ ಗ್ರಹಿಕೆ ಸ್ವಲ್ಪಮಟ್ಟಿಗಾದರೂ ಇರಬೇಕಾಗುತ್ತದೆ. ಆಗ ಮಾತ್ರ ಜೋತು ಬೀಳುವ ಅಪಾಯದಿಂದ ಹೊರಬರಲು ಸಾಧ್ಯ

ವಸಾಹತು ಕಾಲದ ಭಾರತದ ಹತ್ತಿ ಗಿರಣಿಗಳನ್ನು ಅಧ್ಯಯನಕ್ಕೆ ಒಳಪಡಿಸುವ ಸಂದರ್ಭ ಅಂದರೆ ೧೯ನೇ ಶತಮಾನದ ಉತ್ತರಾರ್ಧ ಹಾಗೂ ೨೦ನೇ ಶತಮಾನದ ಪೂರ್ವಾರ್ಧವನ್ನು ಅಭ್ಯಸಿಸುವುದಕ್ಕೂ ಮೊದಲು ಯುರೋಪಿನ ೧೭ನೇ ಹಾಗೂ ೧೮ನೇ ಶತಮಾನದ ಆರ್ಥಿಕ ಬದಲಾವಣೆಯನ್ನು ಅಥವಾ ಸ್ಥಿತ್ಯಂತರವನ್ನು ಗಮನಿಸುವುದು ಸೂಕ್ತ. ೧೭ನೇ ಶತಮಾನದ ಪ್ರಾರಂಭದಲ್ಲಿ ಆರ್ಥಿಕ ಸಿದ್ಧಾಂತ (ಎಕನಾಮಿಕ್ ಥಿಯರೀಸ್)ಗಳು ಹುಟ್ಟಿಕೊಂಡವು.

'ಮರ್ಕಂಟಲಿಸಮ್'[೪] ಅಂದರೆ ವಾಣಿಜ್ಯ ವ್ಯಾಪಾರ ಸಿದ್ಧಾಂತವು ಬ್ರಿಟನ್ನಿನಾದ್ಯಂತ ತನ್ನ ಪ್ರಭಾವವನ್ನು ಬೀರಿತು. ಅಂದರೆ ಸರ್ಕಾರವನ್ನು ಆದಷ್ಟು ಮಟ್ಟಿಗೆ ರಕ್ಷಣೆ ಮಾಡುವುದು ಹಾಗೂ ಖಾಸಗಿ ಮಾಲೀಕತ್ವಕ್ಕೆ ಅಥವಾ ಆರ್ಥಿಕ ಸಹಭಾಗಿತ್ವ (ಎಕನಾಮಿಕ್ ಎಂಟರ್‌ಪ್ರೈಸ್)ಕ್ಕೆ ಬೆಂಬಲವನ್ನು ನೀಡುವ ಪ್ರತಿಪಾದನೆಯನ್ನು ಒಳಗೊಂಡಿದ್ದ ಸಿದ್ಧಾಂತವಾಗಿತ್ತು.

ಮರ್ಕಂಟಲಿಸಮ್ ಅನ್ನು ಯುರೋಪಿನ ವಿವಿಧ ರಾಷ್ಟ್ರಗಳಲ್ಲಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು. ಫ್ರಾನ್ಸ್‌ನಲ್ಲಿ 'ಕೊಲ್ಬರ್ಟಿಸಮ್' ಎಂದು ಕರೆದರೆ, ಜರ್ಮನಿಯಲ್ಲಿ 'ಕ್ಯಾಮರಾಲಿಸಮ್'[೫] ಎಂದು ಕರೆಯಲಾಗುತ್ತಿತ್ತು. ಆದರೆ ಇದರ ಮೂಲ ಲಕ್ಷಣಗಳೆಲ್ಲವೂ ಮರ್ಕಂಟಲಿಸಮ್‌ನದ್ದಾಗಿತ್ತು. ಇದೇ ವೇಳೆಗೆ ಭಾರತದಲ್ಲಿ ಬ್ರಿಟನ್ ಹಾಗೂ ಫ್ರಾನ್ಸ್ ನಡುವೆ ತನ್ನ ವಸಾಹತು ನೆಲೆಗಳನ್ನು ಸ್ಥಾಪಿಸುವ ಹಿನ್ನೆಲೆಯಲ್ಲಿ ತೀವ್ರತರವಾದ ಸ್ಪರ್ಧೆ ಏರ್ಪಟ್ಟು ನಂತರ ಹಲವು ಯುದ್ಧಗಳಿಗೆ ಕಾರಣವಾಗಿ, ಒಪ್ಪಂದಗಳಲ್ಲಿ ಕೊನೆಯಾಗುತ್ತಿದ್ದುದನ್ನು ಕಾಣಬಹುದು. ಯುರೋಪಿನಲ್ಲಿ ಹುಟ್ಟಿಕೊಂಡ ಮರ್ಕಂಟಲಿಸಮ್ ಹೇಗೆ ವಸಾಹತು ರಾಷ್ಟ್ರಗಳಲ್ಲಿ ಆರ್ಥಿಕ ಸ್ಪರ್ಧೆಯ ವಾತಾವರಣವನ್ನು ನಿರ್ಮಾಣ ಮಾಡಿತು ಎಂಬುದನ್ನು ಗ್ರಹಿಸಬೇಕಾಗುತ್ತದೆ.

ನಂತರ ೧೮ನೇ ಶತಮಾನದಲ್ಲಿ ಯುರೋಪಿನಲ್ಲಿ ಸಂಚಲನ ಉಂಟು ಮಾಡಿದ ಮತ್ತೊಂದು ಆರ್ಥಿಕ ಸಿದ್ಧಾಂತವೆಂದರೆ 'ಫಿಸಿಯೋಕ್ರಾಟ್ಸ್'. ಫ್ರಾನ್ಸ್‌ನ 'ಕ್ವೆಸ್ನೆ'ಯಿಂದ ಪ್ರತಿಪಾದಿಸಲ್ಪಟ್ಟ ಈ ಆರ್ಥಿಕ ಚಿಂತನಾ ಶಾಲೆಯು, ಫ್ರಾನ್ಸ್ ಅನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಪಾರ ಹಾಗೂ ಕೈಗಾರಿಕೆಗೆ ವಿರುದ್ಧವಾದ ಕೃಷಿ ಆರ್ಥಿಕತೆಯ ಪರವಾಗಿ ತನ್ನ ಸೈದ್ಧಾಂತಿಕ ನಿಲುವನ್ನು ಪ್ರತಿಪಾದಿಸಿತ್ತು. ಆದರೆ ಅದೇ ಸಂದರ್ಭದಲ್ಲಿ ಈ ಸಿದ್ಧಾಂತದ ಪ್ರಭಾವಕ್ಕೆ ಒಳಗಾದ ಬ್ರಿಟನ್, ಇದನ್ನು ನೇರವಾಗಿ ಅನ್ವಯಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಏಕೆಂದರೆ ಇದು ಕೈಗಾರಿಕೆ ಹಾಗೂ ವ್ಯಾಪಾರ ಕೇಂದ್ರಿತ ದ್ವೀಪವಾಗಿತ್ತು. ಹೀಗಾಗಿ ತನ್ನ ನಾಡಿನ ಆರ್ಥಿಕ ವಿಚಾರಗಳಿಗೆ ಅನುಗುಣವಾಗಿ ಈ ಚಿಂತನಾ ಶಾಲೆಯನ್ನು ಮಾರ್ಪಡಿಸಿಕೊಂಡಿತು. ಇಂಗ್ಲೆಂಡಿನಲ್ಲಿ ಇದರ ಪ್ರಧಾನ ಪ್ರತಿಪಾದಕ 'ಆ್ಯಡಂ ಸ್ಮಿತ್'. ಈ ದೇಶದಲ್ಲಿ ಫಿಸಿಯೋಕ್ರಾಟ್ಸ್ ಶಾಲೆಯ ಪ್ರಧಾನವಾದ ಘೋಷಣೆ 'ಲೈಸೆಸ್ ಫೇರ್'[೬] ಅಥವಾ ಮುಕ್ತ ವ್ಯಾಪಾರ ಎಂಬುದಾಗಿತ್ತು. ಅವರು ಇಚ್ಛೆಪಟ್ಟಂತೆ ಮಾಡಲು ಬಿಡು (ಲೆಟ್ ದೆಮ್ ಡು ಆ್ಯಸ್ ದೆ ವಿಲ್) ಎಂಬುದು ಇದರ ಅರ್ಥ. ಆ್ಯಡಂ ಸ್ಮಿತ್ ಪ್ರಕಾರ ಸರ್ಕಾರವು ವ್ಯಾಪಾರದ ಮೇಲಿನ ಎಲ್ಲಾ ರೀತಿಯ ಏಕಸ್ವಾಮ್ಯವನ್ನು ಹಾಗೂ ನಿರ್ಬಂಧಗಳನ್ನು ರದ್ದುಪಡಿಸಬೇಕು, ಅಲ್ಲದೆ ಕೈಗಾರಿಕೆಯ

ಮೇಲಿನ ಎಲ್ಲಾ ನಿಯಂತ್ರಣಗಳನ್ನು ನಿರ್ಮೂಲನೆಗೊಳಿಸಬೇಕು. ಇವನ ನಂತರ ಲೈಸೆಸ್ ಫೇರ್ ಪರವಾದ ಆರ್ಥಿಕ ವಿಚಾರಗಳನ್ನು ಮಂಡಿಸಿದ ಇತರೆ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರೆಂದರೆ (ಬೂರ್ಜ್ವಾ ಎಕನಾಮಿಸ್ಟ್) ರಾಬರ್ಟ್ ಮಾಲ್ತುಸ್, ಜೇಮ್ಸ್ ಮಿಲ್, ಡೇವಿಡ್ ರಿಕಾರ್ಡೊ, ನ್ಯಾಸ್ಸು ಸೀನಿಯರ್ ಮುಂತಾದವರು. ಈ ಸಿದ್ಧಾಂತದ ನಂತರ ೧೮ ಹಾಗೂ ೧೯ನೇ ಶತಮಾನದ ಪೂರ್ವಾರ್ಧದ ವೇಳೆಗೆ ಇಂಗ್ಲೆಂಡಿನಲ್ಲಿ ಹುಟ್ಟಿಕೊಂಡ ಹೊಸ ಹೊಸ ಆರ್ಥಿಕ ಸಿದ್ಧಾಂತಗಳು ತನ್ನ ವಸಾಹತು ರಾಷ್ಟ್ರಗಳಲ್ಲಿ ವ್ಯಾಪಾರ ಹಾಗೂ ಕೈಗಾರಿಕೆಗಳನ್ನು ನಿರ್ಮಾಣ ಮಾಡಿಕೊಳ್ಳಲು ಹಾಗೂ ವಿಸ್ತರಿಸಿಕೊಳ್ಳಲು ಅನುಕೂಲಕರವಾದ ವಾತಾವರಣವನ್ನು ಸೃಷ್ಟಿ ಮಾಡಿಕೊಟ್ಟಿದ್ದವು. ೧೮೮೦ರ ನಂತರ ಮೈಸೂರು ಪ್ರಾಂತ್ಯದಲ್ಲಿ ನಿರ್ಮಾಣವಾದ ಹತ್ತಿಬಟ್ಟೆ ಗಿರಣಿಗಳ ಹಿಂದೆ ಮೇಲೆ ವಿಶ್ಲೇಷಿಸಿದ ಆರ್ಥಿಕ ಸಿದ್ಧಾಂತಗಳ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಏಕೆಂದರೆ ಮೈಸೂರು ಪ್ರಾಂತ್ಯವನ್ನು ಒಳಗೊಂಡಂತೆ ಒಟ್ಟಾರೆ ಭಾರತ ಉಪಖಂಡ ವಸಾಹತು ಅನುಭವಕ್ಕೆ ಒಳಪಟ್ಟಿತ್ತು.

ಇದೇ ಧಾಟಿಯಲ್ಲಿ ವಿಶ್ಲೇಷಣೆಯನ್ನು ಮುಂದುವರಿಸುವಾಗ ಎದುರಾಗುವ ಮತ್ತೊಂದು ಗ್ರಹಿಕೆಯೆಂದರೆ ೧೯ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಪೂರ್ವಾಪೇಕ್ಷಿತವಾಗಿ ಪ್ರಾರಂಭವಾದ 'ಕೈಗಾರಿಕ ಕ್ರಾಂತಿ'. ಭಾರತದಲ್ಲಿ ಸ್ಥಾಪನೆಯಾದ ಹತ್ತಿ ಗಿರಣಿಗಳಿಗೂ ಇಂಗ್ಲೆಂಡಿನಲ್ಲಿ ಆರಂಭವಾದ ಕೈಗಾರಿಕಾ ಕ್ರಾಂತಿಗೂ ನೇರವಾದ ಸಂಬಂಧವನ್ನು ಗುರುತಿಸಬಹುದು. ಏಕೆಂದರೆ ಆ ಕಾಲಮಾನವು ವಸಾಹತು ಶಾಖದಿಂದ ಭಾರತದ ಆರ್ಥಿಕತೆ ಬೆಚ್ಚಗಾಗುತ್ತಿದ್ದ ಸಂದರ್ಭವಾಗಿದೆ. ಕ್ರಾಂತಿಯಿಂದ ಇಂಗ್ಲಿಷ್ ವ್ಯಾಪಾರಿಗಳು ತಮ್ಮ ಮಾರುಕಟ್ಟೆ ಹಾಗೂ ವ್ಯಾಪಾರವನ್ನು ಮತ್ತಷ್ಟು ವಿಸ್ತರಿಸಿಕೊಂಡರು. ಯುರೋಪ್, ಉತ್ತರ ಅಮೆರಿಕಾ, ಆಫ್ರಿಕಾ ಹಾಗೂ ಏಷ್ಯಾ ಖಂಡಗಳೊಂದಿಗೆ ಹೆಚ್ಚಿನ ಮಟ್ಟದ ವಾಣಿಜ್ಯ ವ್ಯಾಪಾರ ಮುಂದುವರೆಯಿತು. ೧೮೩೦ರ ನಂತರ ಬ್ರಿಟನ್‌ನಿಂದ ಅಗಾಧ ಪ್ರಮಾಣದಲ್ಲಿ ಅಗ್ಗದ ಹತ್ತಿ ಬಟ್ಟೆಯನ್ನು ಭಾರತ ಕೊಂಡುಕೊಳ್ಳಲು ಪ್ರಾರಂಭಿಸಿತು[೭]. ಇದಕ್ಕಾಗಿ ಬ್ರಿಟಿಷರು ಆಮದು ಸುಂಕವನ್ನು ಸಂಪೂರ್ಣವಾಗಿ ಸಡಿಲಗೊಳಿಸಿದ್ದರು. ಅಲ್ಲದೆ ಕ್ರಾಂತಿಯ ಪರಿಣಾಮವಾಗಿ ಇಂಗ್ಲೆಂಡ್ ವಸಾಹತು ರಾಷ್ಟ್ರಗಳಲ್ಲಿ ತನ್ನ ಮಾರುಕಟ್ಟೆಯನ್ನು ಹೆಚ್ಚು ಹೆಚ್ಚು ವಿಸ್ತರಿಸಿಕೊಳ್ಳಲು ಸಾಧ್ಯವಾಯಿತು. ನೂಲು ಹಾಗೂ ನೇಯ್ಗೆ ಯಂತ್ರಗಳಲ್ಲಿ ಆದ ಸುಧಾರಣೆಯಿಂದ ಹತ್ತಿಯ ನವಿರಾದ ಎಳೆಯನ್ನು ನೂಲುವುದಕ್ಕೆ ಸಾಧ್ಯವಾಯಿತು.

ಉತ್ಪಾದನೆಯ ಕಾರ್ಖಾನೆ ವ್ಯವಸ್ಥೆ (ದ ಫ್ಯಾಕ್ಟರಿ ಸಿಸ್ಟಮ್ ಆಫ್ ಪ್ರೊಡಕ್ಷನ್)ಯಿಂದ ಹೆಚ್ಚಿನ ಮಟ್ಟದಲ್ಲಿ ಶ್ರಮ ವಿಭಜನೆ ಸಾಧ್ಯವಾಯಿತು. ಅಲ್ಲದೆ ಹದಿನಾರು ವರ್ಷ ಹಾಗೂ ಅದಕ್ಕಿಂತ ಮೇಲ್ಪಟ್ಟ ಮಹಿಳೆಯರು ಹತ್ತಿಗಿರಣಿಗಳಲ್ಲಿ ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ೧೮೩೦ರ ವೇಳೆಗೆ ಮ್ಯಾಂಚೆಸ್ಟರ್‌ನ ಪ್ರಸಿದ್ಧ ಹತ್ತಿ ಕಾರ್ಖಾನೆಗಳಾದ ಬೆಲ್ಫರ್ ಹಾಗೂ ಮಿಲ್‌ಫರ್ಡ್‌ಗಳಲ್ಲಿ ಶ್ರಮ ವಿಭಜನೆ ತತ್ವದ ಅಡಿಯಲ್ಲಿ[೮] ಪ್ರತಿಯೊಬ್ಬರಿಗೂ ತರಬೇತಿಯನ್ನು ನೀಡಿ ನಂತರ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದುದಾಗಿ 'ಆ್ಯಂತೊನಿ ಸ್ಟ್ರಟ್' ಅವರು ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿದೆ. ಇಂಗ್ಲೆಂಡಿನಲ್ಲಿ ಕಾರ್ಮಿಕರು, ಬಂಡವಾಳಶಾಹಿಗಳು ಹಾಗೂ ಹತ್ತಿಬಟ್ಟೆ ಕಾರ್ಖಾನೆಗಳು ಇವುಗಳೆಲ್ಲವೂ ತಮ್ಮ ತಮ್ಮ ಗಾತ್ರವನ್ನು ಹಾಗೂ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗಿದ್ದು ಈ ಕ್ರಾಂತಿಯಿಂದ. ಇದರ ಪರಿಣಾಮವಾಗಿ ಕೊನೆಗೆ ಶೋಷಣೆಗೆ ಒಳಗಾಗಿದ್ದು ಪ್ರೊಲೆಟೇರಿಯನ್ ಅಂದರೆ ಕಾರ್ಮಿಕ ವರ್ಗ, ಶೋಷಣೆ ಮಾಡಲ್ಪಟ್ಟ ವರ್ಗ ಬೂರ್ಜ್ವಾ ಅಂದರೆ ಬಂಡವಾಳಶಾಹಿ ವರ್ಗ. ಈ ಸಂದರ್ಭದ ಗಮನಾರ್ಹವಾದ ಬದಲಾವಣೆ ಎಂಬಂತೆ ಕೈಗಾರಿಕಾ ಕ್ರಾಂತಿಯ ವ್ಯತಿರಿಕ್ತ ಪರಿಣಾಮವೇ ಕಾರ್ಲ್ ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದದ ಉಗಮಕ್ಕೆ ಕಾರಣವಾಯಿತು. ಅದೇನೇ ಇದ್ದರೂ ಕ್ರಾಂತಿಯ ಫಲದಿಂದ ಇಂಗ್ಲೆಂಡ್ ತನ್ನ ವಸಾಹತು ರಾಷ್ಟ್ರಗಳಲ್ಲಿ ಹತ್ತಿ ಗಿರಣಿಗಳನ್ನು ಸ್ಥಾಪನೆ ಮಾಡಲು ಪ್ರಾರಂಭಿಸಿತು.

ಮೇಲೆ ಚರ್ಚಿಸಿದ ಅಷ್ಟು ವಿಚಾರಗಳು ಪಶ್ಚಿಮ ದೃಷ್ಟಿಕೋನದ ವಿಶ್ಲೇಷಣೆಯಾದರೆ, ಪೌರಾತ್ಯ ದೃಷ್ಟಿಕೋನವು ಮತ್ತೊಂದು ಬಗೆಯ ಪ್ರಮುಖ ವಿಶ್ಲೇಷಣೆಯನ್ನು ಹೊಂದಿದೆ. ಸುಮಿತ್ ಸರ್ಕಾರ್ ಅವರು ಎ.ಆರ್. ದೇಸಾಯಿ ಅವರ 'ಸೋಶಿಯಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಶನಲಿಸಂ' ಎಂಬ ಗ್ರಂಥದ ಆರನೆಯ ಆವೃತಿಗೆ ಮುನ್ನಡಿಯನ್ನು ಬರೆಯುತ್ತಾ ಈ ರೀತಿಯಾಗಿ ಪ್ರಸ್ತಾಪಿಸಿದ್ದಾರೆ. ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿಯು ಎರಡು ರೀತಿಯ ಪಾತ್ರವನ್ನು ನಿರ್ವಹಿಸಿತು. ಒಂದು ವಿನಾಶ (ಡಿಸ್ಟ್ರಕ್ಷನ್), ಎರಡನೆಯದು ಪುನರುಜ್ಜೀವನಶೀಲ ಅಥವಾ ಮರು ಹುಟ್ಟು (ರಿಜನರೇಟಿವ್)[೯]. ಅಂದರೆ ಹಿಂದಿನ ವ್ಯವಸ್ಥೆಯ ನಾಶ, ಆ ವ್ಯವಸ್ಥೆಗೆ ಬದಲಿ ವ್ಯವಸ್ಥೆಯ ಏರ್ಪಾಟು. ದೇಸಾಯಿಯವರು ಭಾರತದ ವಸಾಹತು ಆರ್ಥಿಕತೆಯ ಬಗ್ಗೆ ತಿಳಿಸುತ್ತಾ, ಬ್ರಿಟಿಷ್ ಪೂರ್ವ ಭಾರತದ ಊಳಿಗಮಾನ್ಯ ಆರ್ಥಿಕತೆಯಿಂದ ಬಂಡವಾಳಶಾಹಿ ಆರ್ಥಿಕತೆಯ ಕಡೆಗೆ ಬದಲಾವಣೆ[೧೦] ಎಂದು ವಿಶ್ಲೇಷಿಸಿದ್ದಾರೆ. ಕಡಿಮೆ ದರದಲ್ಲಿ ವಿದೇಶಿ ಕಾರ್ಖಾನೆಗಳಿಂದ

ಅಥವಾ ಭಾರತದ ಗಿರಣಿಗಳಿಂದ ತಯಾರಾದ ಸಿದ್ಧ ವಸ್ತುಗಳು ಮಾರುಕಟ್ಟೆಯನ್ನು ಪ್ರವೇಶಿಸಿ ಹಳ್ಳಿಗಳಿಗೂ ತಲುಪಿದ್ದರಿಂದ ಭಾರತದ ಸ್ಥಳೀಯ ಕೈಮಗ್ಗದ ಕಾರ್ಮಿಕರು ತೀವ್ರ ತೊಂದರೆಯನ್ನು ಅನುಭವಿಸಬೇಕಾಗಿ ಬಂದಿತು. ಅಲ್ಲದೆ ಭಾರತದಲ್ಲಿ ೧೮೮೫ ಹಾಗೂ ೧೯೦೫ರ ನಡುವೆ ಹತ್ತಿ ಬಟ್ಟೆ ಕೈಗಾರಿಕೆಗಳು ಕಷ್ಟದ ಪರಿಸ್ಥಿತಿಯನ್ನು ಎದುರಿಸಲು ಕಾರಣ, ಸ್ವದೇಶಿ ಚಳವಳಿಯ ಸಂದರ್ಭ, ಪ್ರಥಮ ಮಹಾಯುದ್ಧದ ಸಂದರ್ಭ ಇತ್ಯಾದಿ ಆಯಾಮಗಳನ್ನು ಇಟ್ಟುಕೊಂಡು ಭಾರತದ ಹತ್ತಿ ಬಟ್ಟೆ ಕೈಗಾರಿಕೆಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಮಾಡಿದ್ದಾರೆ.

ಇದನ್ನು ಹೊರತುಪಡಿಸಿ ಗ್ರಹಿಸಬೇಕಾಗಿರುವ ಮತ್ತೊಂದು ವಿಚಾರವೆಂದರೆ ಮೈಸೂರು ಪ್ರಾಂತ್ಯದ ಬೆಂಗಳೂರಿನಲ್ಲಿ ತಲೆಯೆತ್ತಿದ್ದ ಆ ಸಂದರ್ಭಕ್ಕೆ ಆಧುನಿಕ ಎನಿಸಿಕೊಂಡ ಹತ್ತಿ ಗಿರಣಿಗಳು ಯಾವ ಬಗೆಯದಾದ ಧೋರಣೆಯನ್ನು ಹೊಂದಿದವು ಎಂಬುದು. ಏಕೆಂದರೆ ಬೆಂಗಳೂರಿನಲ್ಲಿ ಕಾರ್ಯಾಚರಣೆಯಲ್ಲಿದ್ದ ಹತ್ತಿಗಿರಣಿಗಳೆಲ್ಲವೂ ಎರಡು ರೀತಿಯ ಪ್ರಭುತ್ವಕ್ಕೆ ಅಥವಾ ಅನುಭವಕ್ಕೆ ಒಳಗಾಗಿದ್ದವು. ಒಂದು ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವ, ಮತ್ತೊಂದು ದೇಶೀಯ ರಾಜಪ್ರಭುತ್ವ, ಹೀಗಾಗಿ ಗಿರಣಿಗಳ ಆಡಳಿತ, ಉತ್ಪಾದನೆ, ವ್ಯಾಪಾರ ಇತ್ಯಾದಿಗಳೆಲ್ಲವೂ ಎರಡನ್ನು ತೃಪ್ತಿಪಡಿಸುವ ಪ್ರಯತ್ನದಲ್ಲಿ ತೊಡಗಿರಬೇಕಾಗಿತ್ತು. ಅಲ್ಲದೆ ಈ ಗಿರಣಿಗಳಿಗೆ ಎದುರಾಗುತ್ತಿದ್ದ ದೊಡ್ಡ ಸವಾಲೆಂದರೆ ಪೈಪೋಟಿ. ಎಲ್ಲವುದಕ್ಕಿಂತ ಮುಖ್ಯವಾದ ವಿಚಾರವೆಂದರೆ ಕಾರ್ಮಿಕರು, ಅವರ ಸಮಸ್ಯೆಗಳು ಹಾಗೂ ಮುಷ್ಕರ–ಹೋರಾಟಗಳು. ಇದು ಅಧ್ಯಯನದ ಪ್ರಮುಖ ಚರ್ಚೆಯಾಗಿದೆ.

## ೧.೧. ಅಧ್ಯಯನದ ಉದ್ದೇಶ

ಕರ್ನಾಟಕದ ಚರಿತ್ರೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ವಿಜಯನಗರ ಸಾಮ್ರಾಜ್ಯದ ಪತನದೊಂದಿಗೆ ಅನೇಕ ಸಾಂಸ್ಕೃತಿಕ ಪಲ್ಲಟಗಳಾದ ಬಗ್ಗೆ ಗ್ರಹಿಸಬಹುದು. ಕೊನೆಗೆ ೧೬೧೦ರಲ್ಲಿ ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಪ್ರಾರಂಭವಾಗುವುದರೊಂದಿಗೆ ಎಲ್ಲಾ ಸಾಂಸ್ಕೃತಿಕ ಅಂಶಗಳು ಇಲ್ಲಿ ಕೇಂದ್ರೀಕೃತವಾದವು. ನಂತರ ಒಡೆಯರನ್ನು ಮೂಲೆಗುಂಪು ಮಾಡಿ ೧೭೬೧ರಲ್ಲಿ ಹೈದರಾಲಿ ಅಧಿಕಾರಕ್ಕೆ ಬರುವುದರ ಮೂಲಕ ಮತ್ತೊಂದು ದೊಡ್ಡ ರಾಜಕೀಯ ಪಲ್ಲಟವು ಮೈಸೂರಿನಲ್ಲಾಯಿತು. ಇದು ಟಿಪ್ಪುವಿನ ಪತನದವರೆಗೂ (೧೭೯೯) ಮುಂದುವರೆದುಕೊಂಡು ಬಂದಿತು. ಟಿಪ್ಪು ಮೈಸೂರನ್ನು ತನ್ನ ಅಧೀನಕ್ಕೆ ತೆಗೆದುಕೊಳ್ಳುತ್ತಿದ್ದಂತೆ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ

ಪಲ್ಲಟಗಳು ಇಲ್ಲಿ ಏಕಕಾಲದಲ್ಲಾದವು. ಟಿಪ್ಪುವಿನ ಪಥನದ ನಂತರ ೧೭೯೯ರಿಂದ ೧೮೮೧ರವರೆಗೆ ಬ್ರಿಟಿಷರು ಪರೋಕ್ಷವಾಗಿ ಹಾಗೂ ನೇರವಾಗಿ ಮೈಸೂರಿನ ಮೇಲೆ ಪ್ರಾಬಲ್ಯ ಸಾಧಿಸುತ್ತಿದ್ದಂತೆ ವಸಾಹತುಶಾಹಿಯ ಆಳ್ವಿಕೆಯ ಪ್ರಭಾವದಿಂದ ರಾಜಕೀಯ ಹಾಗೂ ಆರ್ಥಿಕ ಪಲ್ಲಟಗಳು ಕಾಣಿಸಿಕೊಂಡವು. ಒಟ್ಟಾರೆ ೧೬೧೦ರಿಂದ ೧೯೪೭ರವರೆಗೆ ಮೈಸೂರು ಸಂಸ್ಥಾನ ಆರ್ಥಿಕವಾಗಿ ಎಲ್ಲಾ ಪ್ರಯೋಗಗಳಿಗೆ ತನ್ನನ್ನು ತಾನು ಒಡ್ಡಿಕೊಂಡಿತು. ಈ ಅವಧಿಗಳಲ್ಲಿ ಇಲ್ಲಿ ದೇಶೀಯ ಕೈಗಾರಿಕೆಗಳು ಆರಂಭಗೊಂಡು ಉತ್ಪಾದನೆಯಲ್ಲಿ ತೊಡಗಿ ನಂತರ ವಸಾಹತುಶಾಹಿ ಆಳ್ವಿಕೆ ಪ್ರಾರಂಭಗೊಳ್ಳುತ್ತಿದ್ದಂತೆ ಇವುಗಳ ಸ್ಥಳದಲ್ಲಿ ಯೂರೋಪಿನ ಬಂಡವಾಳ ಹಾಗೂ ತಂತ್ರಜ್ಞಾನದೊಂದಿಗೆ ಕೈಗಾರಿಕೆಗಳು ತಲೆಯೆತ್ತಿದವು. ಇವುಗಳು ಉತ್ಪಾದನೆಯ ಜೊತೆಜೊತೆಗೆ ಹಲವಾರು ಸಮಸ್ಯೆ ಹಾಗೂ ಸವಾಲುಗಳನ್ನು ಸ್ಥಳೀಯರಿಗೆ ಒಡ್ಡಿದವು.

ಯುರೋಪಿಯನ್ನರು ಆರ್ಥಿಕವಾಗಿ ಪೂರ್ಣ ಭಾರತವನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದ್ದು ಹಾಗೂ ವಸಾಹತು ಆಳ್ವಿಕೆಯನ್ನು ಇಲ್ಲಿನ ಸ್ಥಳೀಯರ ಮೇಲೆ ಹೇರಲು ಸಾಧ್ಯವಾಗಿದ್ದು ಕೇವಲ ಎರಡು ವಾಣಿಜ್ಯ ಬೆಳೆಗಳ ಮೂಲಕ. ಅವುಗಳಲ್ಲಿ ಮೊದಲನೆಯದು ಮೆಣಸು ಹಾಗೂ ಎರಡನೆಯದು ಹತ್ತಿ. ಪೋರ್ಚುಗೀಸರು ಮೆಣಸಿನ ಮೂಲಕ ಭಾರತೀಯರ ಮೇಲೆ ಸವಾರಿ ಮಾಡಿದರೆ, ಬ್ರಿಟಿಷರು ಹತ್ತಿಯ ಮೂಲಕ ಇಲ್ಲಿನ ಸ್ಥಳೀಯರನ್ನು ಶೋಷಣೆ ಮಾಡಿದರು. ಕ್ರಮೇಣ ಈ ಬೆಳೆಗಳ ಮೂಲಕ ರಾಜಕೀಯ ನಿಯಂತ್ರಣ ಸಾಧಿಸಿದ್ದು ಚರಿತ್ರೆ.

ಭಾರತದ ಆರ್ಥಿಕ ಚರಿತ್ರೆಯಲ್ಲಿ ಗಣ್ಯ ಪಾತ್ರವನ್ನು ನಿರ್ವಹಿಸುತ್ತಿರುವ ಹತ್ತಿ ಬೆಳೆ, ವ್ಯಾಪಾರ ಹಾಗೂ ಕೈಗಾರಿಕೆಯ (ಕಾರ್ಖಾನೆ, ಗಿರಣಿ) ಬಗ್ಗೆ ದೇಶ-ವಿದೇಶದ ವಿಶ್ವವಿದ್ಯಾಲಯಗಳಲ್ಲಿ ಅನೇಕ ಅಧ್ಯಯನಗಳು ನಡೆದಿದೆ, ನಡೆಯುತ್ತಲೇ ಬಂದಿದೆ. ಆದರೂ ಸಂಶೋಧಕರಿಗೆ ಇದರಿಂದ ತೃಪ್ತಿ ಆದಂತಿಲ್ಲ. ಏಕೆಂದರೆ ಅದನ್ನು ಹಲವು ಮಗ್ಗಲುಗಳಲ್ಲಿ ನೋಡುವ ಉದ್ದೇಶದಿಂದ ಯಾವ ಸಿದ್ಧಾಂತಗಳು, ವಿಧಾನಗಳು ಅನ್ವಯವಾಗಲು ಸಾಧ್ಯವೋ ಅಂತಹ ವಿಧಾನಗಳು ಹಾಗೂ ಸಿದ್ಧಾಂತಗಳಿಂದ ಅಧ್ಯಯನ ಮಾಡುವುದರ ಕಡೆಗೆ ಸಂಶೋಧಕರ ಹಾಗೂ ಚರಿತ್ರೆಕಾರರ ಪತ ಸಾಗಿದೆ. ಒಂದು ರೀತಿಯಲ್ಲಿ ಇದನ್ನು ನೀಗದ ದಾಹ ಅಂತಲೇ ಹೇಳಬಹುದು.

"ವಸಾಹತುಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ" ಎಂಬ ಪ್ರಬಂಧವು ಮೂರು ಬಗೆಯ ಚರ್ಚೆಯನ್ನು ಒಳಗೊಂಡಿರುವ ವಸ್ತು

ವಿಷಯವಾಗಿದೆ. 'ವಸಾಹತು ಕಾಲ' ಎಂಬುದು ಒಂದು ಸಮಗ್ರ ಚರಿತ್ರೆಯನ್ನು ಕುರಿತು ಚರ್ಚಿಸಿದರೆ, 'ಬೆಂಗಳೂರು' ಎಂಬುದು ಸ್ಥಳೀಯ ಚರಿತ್ರೆಯನ್ನು ಪ್ರತಿನಿಧಿಸುವ ವಿಷಯವಾಗಿದೆ ಹಾಗೂ 'ಹತ್ತಿ ಗಿರಣಿಗಳು' ಎಂಬುದು ಆರ್ಥಿಕ ಚರಿತ್ರೆಯನ್ನು ಕುರಿತು ಚರ್ಚಿಸುವ ವಿಷಯವಾಗಿದೆ. ಹೀಗಾಗಿ ಏಕ ಕಾಲದಲ್ಲಿ ಈ ಮೂರು ವಿಷಯವನ್ನು ಬಿಡಿಬಿಡಿಯಾಗಿ ಚರ್ಚಿಸಿ ನಂತರ ಒಟ್ಟುಗೂಡಿಸಿ ನೋಡುವ, ಚರ್ಚಿಸುವ, ವಿಶ್ಲೇಷಿಸುವ ಉದೇಶವನ್ನು ಒಳಗೊಂಡಿದೆ.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ವಸಾಹತುಶಾಹಿಯನ್ನು ಭಿನ್ನ ಭಿನ್ನ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ. ವಸಾಹತುಶಾಹಿ ಎಂದರೆ, ಯಾವ ವಸಾಹತುಶಾಹಿ? ಈ ವ್ಯವಸ್ಥೆಯೊಳಗೆ ಬಂಧಿಯಾಗಿದ್ದವರು ಯಾರು? ಇತ್ಯಾದಿ ಚರ್ಚೆಗಳು ಪ್ರಾರಂಭವಾಗುತ್ತವೆ. ಭಾರತವನ್ನೂ ಒಳಗೊಂಡಂತೆ ಒಟ್ಟಾರೆ ಏಷ್ಯಾ, ಆಫ್ರಿಕಾ, ಅಮೆರಿಕಾ, ಆಸ್ಟ್ರೇಲಿಯಾದ ದೇಶಗಳು ಯುರೋಪಿನ ವಸಾಹತುಶಾಹಿ ಆಡಳಿತಕ್ಕೆ ಒಳಗಾಗಿದ್ದವು. ಆಯಾ ಖಂಡಗಳಲ್ಲಿನ ದೇಶಗಳು ಯುರೋಪಿನ ಯಾವ ರಾಷ್ಟ್ರಗಳಿಂದ ಮೇಲೆ ಚರ್ಚಿಸಿದ ಶೋಷಣೆ ಅಥವಾ ಅನುಭವಕ್ಕೆ ಒಳಗಾಗಿದ್ದವು ಎಂಬುದು ಒಂದು ಬಗೆಯ ಚರ್ಚೆಯಾಗಿದೆ. ಪೋರ್ಚುಗಲ್, ಸ್ಪೇನ್, ಹಾಲೆಂಡ್, ಜರ್ಮನಿ, ಫ್ರಾನ್ಸ್, ಬ್ರಿಟನ್ ಇತ್ಯಾದಿ ರಾಷ್ಟ್ರಗಳು ತಮಗೆ ಅನುಕೂಲಕರವಾದ ದೇಶಗಳಲ್ಲಿ ವಸಾಹತುಗಳನ್ನು ಹೊಂದಿ ನಂತರ ಅದನ್ನು ಆಡಳಿತಕ್ಕೆ ಮಾರ್ಪಡಿಸಿಕೊಂಡರು. ಯುರೋಪಿನ ರಾಷ್ಟ್ರಗಳಲ್ಲಿಯೇ ಅತ್ಯಧಿಕ ವಸಾಹತು ಪ್ರದೇಶಗಳನ್ನು ಹೊಂದಿ, ಅದನ್ನು ಆಡಳಿತಾತ್ಮಕವಾಗಿ ಯಶಸ್ವಿಯಾಗಿ ಮಾರ್ಪಡಿಸಿಕೊಂಡ ರಾಷ್ಟ್ರವೆಂದರೆ ಬ್ರಿಟನ್. ಇದಕ್ಕಾಗಿಯೇ ಈ ರಾಷ್ಟ್ರವನ್ನು ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಕರೆದಿರುವುದು. ಹೀಗಿದ್ದರೂ ಸೋಜಿಗದ ವಿಚಾರವೆಂದರೆ ; ಐರ್ಲ್ಯಾಂಡ್ ಜನರು ತಮ್ಮ ನಾಣ್ನುಡಿಯಲ್ಲಿ ಹೀಗೆ ಕರೆದಿದ್ದಾರೆ, "ಹೌದು ಬ್ರಿಟನ್ ಎಂದಿಗೂ ಸೂರ್ಯ ಮುಳುಗದ ಸಾಮ್ರಾಜ್ಯ, ಏಕೆಂದರೆ ಆ ಬಾಸ್ಟರ್ಡ್‌ಗಳನ್ನು ಕತ್ತಲಲ್ಲೂ ದೇವರು ನಂಬುವಂತಿಲ್ಲ" ಎಂದು. ಅಂದರೆ ಇವರು ಎಷ್ಟರ ಮಟ್ಟಿಗೆ ಅಲ್ಲಿನ ಸ್ಥಳೀಯರ ವಿಶ್ವಾಸವನ್ನು ಗಳಿಸಿದ್ದರು ಎಂಬುದು ಇದರ ತಾತ್ಪರ್ಯ.

ಭಾರತದ ಉಪಖಂಡವನ್ನು ವಸಾಹತುವನ್ನಾಗಿ ಮಾಡಿಕೊಂಡ ಬ್ರಿಟಿಷರು ಕ್ರಮೇಣ ತನ್ನ ಸಾಮ್ರಾಜ್ಯಕ್ಕೆ ಒಳಪಡಿಸಿಕೊಂಡು ವಸಾಹತುಶಾಹಿ ನೀತಿಯನ್ನನುಸರಿಸಿ ಆಳ್ವಿಕೆಯನ್ನು ನಡೆಸಿದರು. ಇವರ ಆಳ್ವಿಕೆಯ ವಿಧಾನ ಯಾವ ರೀತಿಯದ್ದು, ಬೆನವಲೆಂಟ್ ಡೆಸ್‌ಪಾಟಿಸಂ ರೀತಿಯದ್ದು ಎಂಬುದಾಗಿ ಹಲವಾರು ಚರಿತ್ರೆಕಾರರು ವಿಶ್ಲೇಷಿಸಿದ್ದಾರೆ. ಮುಂದುವರಿದು ಹೇಳುವುದಾದರೆ

ಅಖಂಡ ಭಾರತಕ್ಕೆ ಆರೋಪಿಸಿ ಚರ್ಚೆ ಮಾಡುವ ಅಥವಾ ಅಧ್ಯಯನ ಮಾಡುವ ಕ್ರಮವು ಸ್ವಾತಂತ್ರ್ಯೋತ್ತರದ ದಿನಗಳಿಂದಲೂ ನಡೆದುಬಂದಿದೆ. ಅಲ್ಲದೆ ಇಂದು ವಸಾಹತುಶಾಹಿಯನ್ನು ಒಂದು ಅಧ್ಯಯನವಾಗಿ ತೆಗೆದುಕೊಂಡರಂತೂ ಅದು ಯಾವ ಹಿನ್ನೆಲೆಯ ವಸಾಹತುಶಾಹಿ, ರಾಜಕೀಯ ವಸಾಹತುಶಾಹಿಯೆ? ಸಾಮಾಜಿಕ ವಸಾಹತುಶಾಹಿಯೆ? ಆರ್ಥಿಕ ವಸಾಹತುಶಾಹಿಯೆ? ಅಥವಾ ಧಾರ್ಮಿಕ ವಸಾಹತುಶಾಹಿಯೆ? (ಭಾರತದಲ್ಲಿ ಹಿಂದೂ, ಮುಸ್ಲಿಂ ಕೋಮುವಾದವನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಯಶಸ್ವಿಯಾಗಿ ಆಳ್ವಿಕೆ ನಡೆಸಿದರು), ಹೀಗೆ ವಸಾಹತುಶಾಹಿ ಆಳ್ವಿಕೆಯನ್ನು ವಿವಿಧ ದೃಷ್ಟಿಕೋನಗಳಿಂದ ಚರ್ಚೆ, ವಿಶ್ಲೇಷಣೆ ಮಾಡುವ, ಅಧ್ಯಯನ ಮಾಡುವ ಕ್ರಮಗಳು ಇಂದು ಹೆಚ್ಚಾಗಿದೆ. ಮೊದಲೇ ಚರ್ಚೆಯನ್ನು ಆರಂಭಿಸಿದಂತೆ ವಸಾಹತು ಆಳ್ವಿಕೆಯನ್ನು ಹೆಚ್ಚಾಗಿ ಸಮಗ್ರ ಭಾರತಕ್ಕೆ ಆರೋಪಿಸಿ ಅಥವಾ ಅನ್ವಯಿಸಿ ನೋಡುವ ಕ್ರಮದಿಂದ ಪ್ರಾದೇಶಿಕ ಚರಿತ್ರೆಗೆ ನ್ಯಾಯ ಒದಗಿಸಲು ಖಂಡಿತ ಸಾಧ್ಯವಿಲ್ಲ. ಕರ್ನಾಟಕದಲ್ಲಿ ಈ ಹಿನ್ನೆಲೆಯಿಂದ ಅಧ್ಯಯನ ಮಾಡಿದ ಚರಿತ್ರೆಕಾರರಾದ ಎಸ್. ಚಂದ್ರಶೇಖರ್ ಅವರ 'ವಸಾಹತುಕಾಲೀನ ಕರ್ನಾಟಕ' ಎಂಬ ಕೃತಿ ಗಮನಾರ್ಹವಾದುದು. ಇದು ವಸಾಹತುಕಾಲದ ಕರ್ನಾಟಕ ಚರಿತ್ರೆಯನ್ನು ವಿವಿಧ ಮಗ್ಗಲುಗಳಿಂದ ವಿಶ್ಲೇಷಿಸುವ ಬಿಡಿಬಿಡಿಯಾದ ಲೇಖನಗಳ ಸಂಕಲನವಾಗಿದೆ. ಆದರೆ ಈ ಪಿಎಚ್.ಡಿ. ಪ್ರಬಂಧದ ಉದ್ದೇಶ 'ತೀರಾ ಸ್ಥಳೀಯತೆ'ಯನ್ನು ವಿಶ್ಲೇಷಣೆ ಮಾಡುವುದಾಗಿದೆ. ಅಂದರೆ ಕರ್ನಾಟಕದ ಒಂದು ನಗರವನ್ನು (ಬೆಂಗಳೂರು) ವಸಾಹತುಶಾಹಿ ಆಳ್ವಿಕೆಯೊಳಗೆ ತಂದು ಅದಕ್ಕೆ ಆರ್ಥಿಕತೆಯ ಸ್ಪರ್ಶವನ್ನು ನೀಡಿ ವಿಶ್ಲೇಷಣೆ ಮಾಡುವ ಉದ್ದೇಶವನ್ನು ಪ್ರಸ್ತುತ ಅಧ್ಯಯನವು ಒಳಗೊಂಡಿದೆ. ಆದರೆ ಒಂದಂತೂ ಸತ್ಯ, ಈ ರೀತಿಯ ಪ್ರಯತ್ನ ಇದೇ ಮೊದಲೇನಲ್ಲ. ಜಾನಕಿ ನಾಯರ್ ಅವರು ಇದೇ ಮಾರ್ಗದಲ್ಲಿ ಅಧ್ಯಯನ ಮಾಡಿ 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್' ಎಂಬ ಉತ್ತಮ ಕೃತಿಯನ್ನೂ ನೀಡಿದ್ದಾರೆ.

ಇದನ್ನು ಪಿಎಚ್.ಡಿ. ಸಂಶೋಧನೆಗೆಂದು ಆಯ್ಕೆ ಮಾಡಿಕೊಂಡಾಗಿನಿಂದ ಕಾಡುತ್ತಿರುವ ಪ್ರಶ್ನೆ ಎಂದರೆ ಮೈಸೂರು ಪ್ರಾಂತ್ಯದಲ್ಲಿ ಬೆಂಗಳೂರು ನಗರವೇಕೆ ಹತ್ತಿ ಗಿರಣಿಗಳ ಸ್ಥಾಪನೆಗೆ ತಕ್ಕದಾದ ಸ್ಥಳವಾಗಿತ್ತು? ಈ ನಗರವನ್ನು ಹೊರತುಪಡಿಸಿ ದಾವಣಗೆರೆ, ಮೈಸೂರು, ಮಂಡ್ಯ, ಚಿತ್ರದುರ್ಗ, ಹಾಸನ, ಕೋಲಾರ ಇತ್ಯಾದಿ ನಗರಗಳಿದ್ದು; ಕೆಲವು ಜಿಲ್ಲೆಗಳಂತೂ ಹತ್ತಿಯನ್ನು ಯತೇಚ್ಛವಾಗಿ ಬೆಳೆಯುತ್ತಿದ್ದರೂ ಅದಕ್ಕೆ ಹೊಂದಿಕೊಂಡ ನಗರಗಳಲ್ಲಿ ಗಿರಣಿಗಳು

ಸ್ಥಾಪನೆಯಾಗಲಿಲ್ಲ. ಅಲ್ಲದೆ ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳಲ್ಲಿ ಹೇಳಿಕೊಳ್ಳುವ ಮಟ್ಟಿಗಂತೂ ಹತ್ತಿಯನ್ನು ಬೆಳೆಯುತ್ತಿರಲಿಲ್ಲ ಅಥವಾ ಹೊರ ರಾಷ್ಟ್ರಗಳಿಗೆ ವ್ಯಾಪಾರ ಕೈಗೊಳ್ಳಲು ಬೆಂಗಳೂರು ಬಂದರು ನಗರವಲ್ಲ ಅಥವಾ ಹೆಚ್ಚಿನ ಕಾರ್ಮಿಕರು ಹಾಗೂ ಬಂಡವಾಳ ಹರಿದು ಬರಲು ಸಾಧ್ಯವಾಯಿತು ಅಥವಾ ಅನುಕೂಲಕರ ವಾತಾವರಣ ಕಾರಣ ಎಂಬಿತ್ಯಾದಿ ಸ್ಪಷ್ಟನೆಗಳನ್ನು ನೀಡಿದರೂ ಅದರಿಂದ ತೃಪ್ತಿಯನ್ನು ಹೊಂದಲಾಗದ ಕಾರಣ ಇದನ್ನು ಚಾರಿತ್ರಿಕ ಸಂಶೋಧನೆಯ ಮೂಲಕ ಬಯಲು ಮಾಡುವ ದೃಷ್ಟಿಕೋನವನ್ನು ಈ ಅಧ್ಯಯನ ಇಟ್ಟುಕೊಂಡಿದೆ.

ಇಲ್ಲಿ ಗಿರಣಿಗಳು ಸ್ಥಾಪನೆಯಾಗಲು ಬ್ರಿಟಿಷರ ವಸಾಹತು ಆಳ್ವಿಕೆ ನೀತಿ ಕಾರಣವಾಗಿದ್ದಿತೇ? ಅಥವಾ ಹತ್ತಿ ಬಟ್ಟೆಗಳ ಉತ್ಪಾದನೆ ಇಂಗ್ಲೆಂಡಿನಲ್ಲಿಯೇ ಅಧಿಕವಾಗಿದ್ದಿತ್ತೇ? ಅಥವಾ ಇಲ್ಲಿನ ಸ್ಥಳೀಯರ ಬೇಡಿಕೆಗಳಿಗೆ ಬ್ರಿಟಿಷರು ಮಣಿದಿದ್ದರೇ? ಎಂಬಿತ್ಯಾದಿ ಸಮಸ್ಯೆಗಳು ಅಧ್ಯಯನದಲ್ಲಿ ಕಾಡುತ್ತಿವೆ. ಹತ್ತಿ ಗಿರಣಿಗಳು ಪ್ರಾರಂಭವಾದಾಗಿನಿಂದ ತನ್ನ ಅಂತ್ಯವನ್ನು ಕಾಣುವವರೆಗೆ ಹಲವು ಮುಖಗಳ ಚರಿತ್ರೆಯನ್ನು ತನ್ನಲ್ಲಿರಿಸಿಕೊಂಡಿದೆ. ಬೆಂಗಳೂರಿನ ಹತ್ತಿ ಗಿರಣಿಗಳು ಯಶಸ್ವಿಯಾಗಿ ತನ್ನ ಉತ್ಪಾದನೆಯಲ್ಲಿ ತೊಡಗಿದ್ದಾಗ ಅದನ್ನು ನಿರ್ವಹಿಸುತ್ತಿದ್ದವರು ಯಾರು? ವಸಾಹತು ಆರ್ಥಿಕತೆ ಯಾವ ರೂಪದಲ್ಲಿ ತನ್ನ ಪಾತ್ರ ಅಥವಾ ಪ್ರಭಾವವನ್ನು ಬೀರಿತ್ತು? ಇಲ್ಲಿನ ಗಿರಣಿಗಳು ಸ್ಥಳೀಯ, ದೇಶೀಯ ಹಾಗೂ ವಿದೇಶಗಳೊಂದಿಗಿನ ಪೈಪೋಟಿಯನ್ನು ಹೇಗೆ ಎದುರಿಸುತ್ತಿದ್ದವು? ಮೈಸೂರು ಸಂಸ್ಥಾನವು ಈ ಗಿರಣಿಗಳಿಂದ ಆರ್ಥಿಕವಾಗಿ ಸದೃಢತೆಯನ್ನು ಸಾಧಿಸಿದ್ದಿತೇ? ಸಂಸ್ಥಾನದ ಅರಸರು ಯಾವ ರೀತಿಯ ಪ್ರೋತ್ಸಾಹ ಹಾಗೂ ನೆರವನ್ನು ನೀಡಿದ್ದರು? ಎಂಬಿತ್ಯಾದಿ ತಾತ್ವಿಕ ಅಂಶಗಳನ್ನು ವಿಶ್ಲೇಷಣೆ ಮಾಡುವ ಉದ್ದೇಶ ಈ ಸಂಶೋಧನೆಯದ್ದಾಗಿದೆ. ಬೆಂಗಳೂರು ನಗರಾಭಿವೃದ್ಧಿಗೆ ಗಿರಣಿಗಳು ಯಾವ ರೀತಿಯ ಕೊಡುಗೆಯನ್ನು ನೀಡಿದ್ದವು? ಹತ್ತಿ ಗಿರಣಿಗಳ ಸ್ಥಾಪನೆಯಿಂದ ಬೆಂಗಳೂರು ಹೇಗೆ ಸಾಂಸ್ಕೃತಿಕವಾಗಿ ಪ್ರಗತಿಯನ್ನು ಸಾಧಿಸಿತು? ದೇಶ ವಿದೇಶಗಳೊಂದಿಗೆ ಯಾವ ರೀತಿಯ ವ್ಯಾಪಾರ ವಹಿವಾಟು ನಡೆಸುತ್ತಿತ್ತು? ಇದು ತನ್ನ ಮಾರುಕಟ್ಟೆಯನ್ನು ಸೀಮಿತಗೊಳಿಸಿಕೊಂಡಿತ್ತೇ ಅಥವಾ ವಿಶಾಲಮಾಡಿಕೊಂಡಿತ್ತೇ? ಅದಾಗಿದ್ದರೆ ಅಥವಾ ಅದಾಗದೇ ಹೋಗಿದ್ದರೆ ಯಾರಿಂದ? ಯಾರಿಗಾಗಿ? ಅಲ್ಲದೆ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಸ್ಥಿತಿಗತಿ ಹೇಗಿತ್ತು? ಅವರ ಸಮಸ್ಯೆಗಳು, ಸಮಸ್ಯೆಗಳನ್ನು ಎದುರಿಸುವಲ್ಲಿ ಅವರು ಒಟ್ಟುಗೂಡುತ್ತಿದ್ದ ರೀತಿ, ಸಂಘಟನೆಗಳು, ಚಳವಳಿ, ಮುಷ್ಕರಗಳು, ಮಹಿಳಾ ಕಾರ್ಮಿಕರು ಹಾಗೂ

ಅವರ ಸಮಸ್ಯೆಗಳು, ಅಸಂಘಟಿತ ಕಾರ್ಮಿಕರು ಹಾಗೆಯೇ ರಾಷ್ಟ್ರೀಯ ಚಳವಳಿಗೆ ಕಾರ್ಮಿಕರು, ಅವರ ಸಂಘಗಳ ಪಾತ್ರ ಎಂಬಿತ್ಯಾದಿ ವಿಷಯಗಳ ಕುರಿತು ಚರ್ಚಿಸುವ ಹಾಗೂ ವಿಶ್ಲೇಷಿಸುವ ಉದ್ದೇಶವನ್ನು ಈ ಪ್ರಬಂಧ ಇಟ್ಟುಕೊಂಡಿದೆ.

ಭಾರತವನ್ನು ವಸಾಹತುವನ್ನಾಗಿ ಮಾರ್ಪಡಿಸಿದ ಬ್ರಿಟಿಷರು, ಕೃಷಿಯನ್ನು ಅಭಿವೃದ್ಧಿಪಡಿಸುವ, ಕೈಗಾರಿಕೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸುವ ಅಥವಾ ಭಾರತವನ್ನು ಆರ್ಥಿಕವಾಗಿ ಸದೃಢ ರಾಷ್ಟ್ರವನ್ನಾಗಿ ಮಾರ್ಪಡಿಸುವ ಯಾವುದೇ ಉದ್ದೇಶವನ್ನು ಹೊಂದಿರಲಿಲ್ಲ. ಇವರು ಕೇವಲ ವಾಣಿಜ್ಯ ಬೆಳೆಗಳಿಗೆ ಪ್ರೋತ್ಸಾಹ ನೀಡಿ, ಕಚ್ಚಾ ಪದಾರ್ಥಗಳನ್ನು ಇಂಗ್ಲೆಂಡಿಗೆ ರಫ್ತು ಮಾಡುವ ಸ್ವಾರ್ಥ ಉದ್ದೇಶವನ್ನು ಹೊಂದಿದ್ದರು. ಇಂತಹ ವಾಣಿಜ್ಯ ಬೆಳೆಗಳಲ್ಲಿ ಹತ್ತಿಯು ಪ್ರಮುಖವಾದುದು. ಅಮೆರಿಕಾ ಸಂಯುಕ್ತ ಸಂಸ್ಥಾನ ಸ್ವಾತಂತ್ರ್ಯ ಹೊಂದುವುದಕ್ಕೂ ಪೂರ್ವದಲ್ಲಿ ಇಂಗ್ಲೆಂಡಿನ ಹತ್ತಿ ಉತ್ಪಾದನಾಂಗಗಳ ಮೇಲೆ ಅವಲಂಬನೆಯಾಗಿದ್ದರೂ, ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಇಂಗ್ಲೆಂಡಿನ ಮಾರುಕಟ್ಟೆಯು ಬಹಳ ವಿಸ್ತಾರಗೊಳ್ಳತೊಡಗಿತು. ಇದರಿಂದ ಆಕರ್ಷಿತಗೊಂಡ ಅಮೆರಿಕಾ ಸ್ವಾತಂತ್ರ್ಯಗೊಂಡ ನಂತರ (೧೭೭೬) ವಸಾಹತು ರಾಷ್ಟ್ರವಾಗಿದ್ದಾಗ ಕೊಂಡುಕೊಳ್ಳುತ್ತಿದ್ದ ಹತ್ತಿಯ ವಸ್ತುಗಳಿಗಿಂತ ಹೆಚ್ಚಿನ ಬ್ರಿಟಿಷ್ ಸಿದ್ಧ ವಸ್ತು (ಹತ್ತಿ ಬಟ್ಟೆಯನ್ನು ಒಳಗೊಂಡಂತೆ)ಗಳನ್ನು ಕೊಂಡುಕೊಳ್ಳಲು ಆರಂಭಿಸಿದರು[೧೧]. ಹೀಗಿದ್ದ ಸಂದರ್ಭದಲ್ಲಿ ಒಂದು ವೇಳೆ ಅಮೆರಿಕಾದಿಂದ ಕಚ್ಚಾ ಹತ್ತಿಯ ಆಮದು ವ್ಯಾಪಾರದ ಪ್ರಮಾಣ ಕಡಿಮೆಯಾದರೆ ಭಾರತದಲ್ಲಿ ಈ ಬೆಳೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿತ್ತು. ಹಾಗೆಯೇ ಅಮೆರಿಕಾದೊಂದಿಗಿನ ಆಮದು ವ್ಯಾಪಾರದ ಯಥಾಸ್ಥಿತಿಯನ್ನು ಬ್ರಿಟಿಷರು ಕಾಯ್ದುಕೊಂಡರೆ ಇಲ್ಲಿನ ಹತ್ತಿ ಬೆಳೆಗೆ ಪ್ರೋತ್ಸಾಹ ಕಡಿಮೆಯಾಗುತ್ತಿತ್ತು. ಭಾರತದಲ್ಲಿ ಇದು ಒಂದು ರೀತಿಯ ಅನಿಶ್ಚಿತತೆಯಿಂದ ಕೂಡಿರುವ ಮಾನ್ಸೂನ್ ಮಳೆ ಇದ್ದಂತೆ ಭಾಸವಾಗುತ್ತಿತ್ತು. ಕೆನರಾದ ವಿಭಜನೆಯು ಸಹ ಈ ನಿಟ್ಟಿನ ಆಯಾಮದಿಂದಲೆ ತನ್ನ ಸ್ವರೂಪವನ್ನು ಪಡೆದುಕೊಂಡಿತು[೧೨]. ಇಂತಹ ಧೋರಣೆಯನ್ನು ಮೈಗೂಡಿಸಿಕೊಂಡಿದ್ದ ಬ್ರಿಟಿಷರು ಭಾರತದಲ್ಲಿ ಹತ್ತು ಕೈಗಾರಿಕೆಗಳ ಸ್ಥಾಪನೆ, ಅಭಿವೃದ್ಧಿಗೆ ನೆರವು ಹಾಗೂ ಪ್ರೋತ್ಸಾಹ ನೀಡಿದ್ದುದು ಅಷ್ಟಕ್ಕೆ ಅಷ್ಟರಲ್ಲಿಯೆ ಅಥವಾ ನೀಡಿರುವುದು ಸತ್ಯವೇ ಆದಲ್ಲಿ ಅದು ಎಂತಹ ವಸಾಹತು ರಾಜಕಾರಣವಾಗಿತ್ತು ಎಂಬ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡುವ ಉದ್ದೇಶ ಈ ಅಧ್ಯಯನದ್ದಾಗಿದೆ.

ಗಿರಣಿಗಳು ಹೇಗೆ ಅವಸಾನವನ್ನು ಹೊಂದಿದವು? ಇದಕ್ಕೆ ಕಾರಣವಾದ ಅಂಶಗಳೇನು? ೧೯೯೦ರ ನಂತರ ಭಾರತದಲ್ಲಿ ಜಾಗತೀಕರಣ ಪ್ರವೇಶವಾಯಿತು ಹಾಗೂ ಅದರ ಪ್ರಭಾವದಿಂದ ಸ್ಥಳೀಯ, ದೇಶೀಯ ಕೈಗಾರಿಕೆಗಳು, ಕೃಷಿ, ರೈತರು ಅಪಾರ ತೊಂದರೆಯನ್ನು ಅನುಭವಿಸುವಂತಾಯಿತು ಎಂದು ವಾದಿಸುತ್ತಿರುವಾಗಲೆ ಬೆಂಗಳೂರಿನ ಹತ್ತಿ ಗಿರಣಿಗಳಲ್ಲಿ ಪ್ರಮುಖವಾದ ಬಿನ್ನಿಮಿಲ್ ಸಹ ಮುಚ್ಚಲ್ಪಟ್ಟಿದ್ದು ೧೯೯೮ರಲ್ಲಿ. ಜಾಗತೀಕರಣದ ಬಿಸಿ ದೇಶೀಯ ಗಿರಣಿಗಳಿಗೂ ತಟ್ಟಿದ್ದು ಸತ್ಯವೇ? ಇಂತಹ ಅನೇಕ ವಿಚಾರಗಳ ಬಗ್ಗೆ ಚರ್ಚಿಸುವುದನ್ನು ಈ ಅಧ್ಯಯನವು ತನ್ನ ಉದ್ದೇಶದಲ್ಲಿ ಅಳವಡಿಸಿಕೊಂಡಿದೆ.

## ಅಧ್ಯಯನದ ಮಹತ್ವ

ಸ್ವಾತಂತ್ರ್ಯೋತ್ತರ ಭಾರತದ ಚರಿತ್ರೆಯ ಬರವಣಿಗೆಯಲ್ಲಿ ಹಲವು ಬದಲಾವಣೆ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಹಲವಾರು ವಿದ್ವಾಂಸರು, ಚರಿತ್ರೆಕಾರರು ವಿಭಿನ್ನ ದೃಷ್ಟಿಕೋನಗಳ ಮೂಲಕ ಭಾರತದ ಚರಿತ್ರೆಯ ಬಗ್ಗೆ ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿರುವುದನ್ನು ಕಾಣಬಹುದು. ಇಲ್ಲಿರುವ ಮುಖ್ಯ ವಿಚಾರವೆಂದರೆ 'ಸಮಗ್ರ ಭಾರತದ ಇತಿಹಾಸ' ಎಂಬ ಶಿರೋನಾಮೆಯ ಅಡಿಯಲ್ಲಿ ಚರಿತ್ರೆಯನ್ನು ಅಭ್ಯಸಿಸುವುದು ಎಷ್ಟರ ಮಟ್ಟಿಗೆ ಸಮಂಜಸ. ಏಕೆಂದರೆ ಭಾರತವು ಯುರೋಪಿನ ರಾಷ್ಟ್ರಗಳಂತೆ ಏಕ ಸಂಸ್ಕೃತಿ, ಏಕ ಧರ್ಮ, ಏಕ ಭಾಷೆಯಿಂದ ಕೂಡಿರುವ ಭೌಗೋಳಿಕ ಪ್ರದೇಶವಲ್ಲ. ಬಹು ಸಂಸ್ಕೃತಿ, ಹಲವು ಧರ್ಮ, ಬಹು ಭಾಷೆಯಿಂದ ಕೂಡಿರುವ ರಾಷ್ಟ್ರ. ಹೀಗಾಗಿ 'ಇದೇ', 'ಇಷ್ಟೆ', 'ಹೀಗೆ' ಭಾರತದ ಚರಿತ್ರೆ ಎಂದು ಹೇಳಲು ಖಂಡಿತ ಸಾಧ್ಯವಿಲ್ಲ. ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲಿ ಒಗ್ಗಟ್ಟು, ಐಕ್ಯತೆಯನ್ನು ಸಾರುವ ದೃಷ್ಟಿಯಿಂದ ಸಮಗ್ರ ಭಾರತದ ಚರಿತ್ರೆ, ಭಾರತದ ಸಾಂಸ್ಕೃತಿಕ ಚರಿತ್ರೆ ಎಂಬಿತ್ಯಾದಿ ರೀತಿಯ ಬರವಣಿಗೆಗಳು ಬಂದವು. ಆ ದೃಷ್ಟಿಕೋನದ ಬರವಣಿಗೆಯು ಅಂದಿನ ಸಂದರ್ಭಕ್ಕೆ ಅತ್ಯಗತ್ಯ ಎಂಬಂತೆ ಮೇಲ್ನೋಟಕ್ಕೆ ಕಾಣುತ್ತಿದೆ. ಆದರೆ ಈಗಲೂ ರಾಷ್ಟ್ರ ಮಟ್ಟದಲ್ಲಿ ಗುರುತಿಸಿಕೊಂಡಿರುವ ಚರಿತ್ರೆಕಾರರು, ಹಲವು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಚರ್ಚೆ ಮಾಡಲು ನಿಸ್ಸೀಮರಾಗಿರುವ ವಿದ್ವಾಂಸರು, ಹೊಸ ಹೊಸ ದೃಷ್ಟಿಕೋನದ ಹಿನ್ನಲೆಯಲ್ಲಿ ವಿಶ್ಲೇಷಣಾ ಮಾದರಿಯನ್ನು ಬಳಸಲು ಪ್ರಾವೀಣ್ಯತೆಯನ್ನು ಪಡೆದುಕೊಂಡಿರುವ ಇತಿಹಾಸಕಾರರ ಹಲವು ಬರವಣಿಗೆಗಳು ಇದೇ ಧಾಟಿಯಲ್ಲಿ ಮುಂದುವರೆದುಕೊಂಡು ಬರುತ್ತಿವೆ. ಅದು ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ

ಕಾಲಘಟ್ಟದಲ್ಲಿ ಅಧ್ಯಯನ ಮಾಡುವಾಗಲೂ ಇದೇ ಧೋರಣೆಯ ಬರವಣಿಗೆಯನ್ನು ಕಾಣುತ್ತೇವೆ. ಈ ರೀತಿಯ ಬರವಣಿಗೆಯನ್ನು 'ಪ್ರಧಾನ' ಹಾಗೂ 'ಅಧೀನ' ಅಂಶಗಳ ಹಿನ್ನೆಲೆಯಿಂದಲೂ ವಿಶ್ಲೇಷಿಸಬಹುದು. ಇಲ್ಲಿ ಪ್ರಧಾನ ಎಂದರೆ ಭಾರತ, ಅಧೀನ ಎಂದರೆ ಭಾರತದೊಳಗಿನ ರಾಜ್ಯ ಹಾಗೂ ರಾಜ್ಯದೊಳಗಿನ ಪ್ರದೇಶಗಳು. ಪ್ರಧಾನದ ಪ್ರವೇಶ ಆಗುತ್ತಿದ್ದಂತೆ ಅಧೀನವು ಪಕ್ಕಕ್ಕೆ ಸರಿಯುವುದು ಅಥವಾ ನಗಣ್ಯವಾಗುವುದು ಸರ್ವೆಸಾಮಾನ್ಯ.

ಮೇಲಿನ ಚರ್ಚೆಯನ್ನು ಎತ್ತಿಕೊಂಡಿರುವ ಉದ್ದೇಶ ಆ ಬಗೆಯದಾದ ಧೋರಣೆ ಅಥವಾ ದೃಷ್ಟಿಕೋನದ ಬರವಣಿಗೆಯನ್ನು ಟೀಕಿಸುವುದಲ್ಲ. ಬದಲಾಗಿ ಅದನ್ನು ಪ್ರಶ್ನಿಸುತ್ತಾ, ಆ ದೃಷ್ಟಿಕೋನಕ್ಕೆ ಮುಖಾಮುಖಿಯಾಗುವ ಅಧ್ಯಯನ ಕ್ರಮವನ್ನು ಅಳವಡಿಸಿಕೊಳ್ಳುವುದು. ಅಂದರೆ 'ಅಧೀನ' ಅಂಶಗಳನ್ನು 'ಪ್ರಧಾನ' ಅಂಶಗಳೊಂದಿಗೆ ಮುಖಾಮುಖಿ ಮಾಡಿ ಸವಾಲೆಸೆಯುವ ರೀತಿಯಲ್ಲಿ ಅಧ್ಯಯನ ಮಾಡುವುದು. ಅಲ್ಲದೆ ಈ ತರದ ಬರವಣಿಗೆಯ ಪ್ರಸ್ತುತತೆ ಅಥವಾ ಮಹತ್ವ ಸ್ಥಳೀಯ ಚರಿತ್ರೆಗೆ ಅವಶ್ಯಕ ಎಂಬುದಾಗಿ ತಿಳಿಸುವುದಾಗಿದೆ. ಇದರಿಂದ ಸ್ಥಳೀಯ ಚರಿತ್ರೆಯ ವ್ಯಾಪ್ತಿ ವಿಸ್ತರಿಸುವುದಲ್ಲದೆ ಅದರ ಚಾರಿತ್ರಿಕ ಪರಿಪೇಕ್ಷೆಯು ವಿಶಾಲಗೊಳ್ಳುವುದು.

ಹತ್ತಿ ಗಿರಣಿಗಳ ಮೂಲಕ ಆರ್ಥಿಕ ಚರಿತ್ರೆಯನ್ನು ವಿಶ್ಲೇಷಣೆ ಮಾಡುವುದರಿಂದ ವಸಾಹತು ಕಾಲೀನ ಬೆಂಗಳೂರನ್ನು ಅರ್ಥಮಾಡಿಕೊಳ್ಳಲು (ಆರ್ಥಿಕವಾಗಿ) ಸಾಧ್ಯವಾಗುತ್ತದೆ. ರಾಷ್ಟ್ರೀಯ ಚಳವಳಿ, ಏಕೀಕರಣ ಚಳವಳಿಗಳಲ್ಲಿ ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕರು ಹಾಗೂ ಸಂಘಗಳು ಹೇಗೆ ಸ್ಪಂದಿಸಿದವು ಎಂಬಿತ್ಯಾದಿ ಅಂಶಗಳನ್ನು ಈ ಅಧ್ಯಯನದಿಂದ ತಿಳಿಯಬಹುದಾಗಿದೆ. ೧೮೪೮ರಲ್ಲಿ ಕಾರ್ಲ್ ಮಾರ್ಕ್ಸ್ ತನ್ನ ಪ್ರಣಾಳಿಕೆಯಾದ "ದ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ"ಅನ್ನು ಹೊರಡಿಸಿದ್ದರೂ ಸಹ ಅದು ಎಲ್ಲೆಡೆ ಹಬ್ಬಿ ಕಾರ್ಮಿಕರಲ್ಲಿ ಪ್ರಜ್ಞೆ-ಅರಿವು ಬರಲು ಸಾಧ್ಯವಾಗಿದ್ದು ಮಾರ್ಕ್ಸ್‌ನ ಮರಣದ ನಂತರ ಅಂದರೆ ೧೮೮೦ರ ತರುವಾಯ ಇದು ಜಗತ್ತಿನ ಮೂಲೆ ಮೂಲೆಗೂ ಹಬ್ಬಿತು. ಇದರ ಪ್ರಭಾವ ಬೆಂಗಳೂರಿನ ಕಾರ್ಮಿಕ ಮುಖಂಡರ ಮೇಲೂ (ತಗಡೂರು ರಾಮಚಂದ್ರರಾವ್, ಕೆ.ಟಿ. ಭಾಷ್ಯಂ ಇತ್ಯಾದಿ) ಬೀರಿ ಸಂಘಟಿತಗೊಳ್ಳುವಲ್ಲಿ ಯಶಸ್ವಿಯೂ ಆಯಿತೆನ್ನಬಹುದು. ಇಂದಿನ ಕಾರ್ಮಿಕ ಸಂಘಟನೆಗಳು ಭದ್ರವಾಗಿ ನೆಲೆ ನಿಲ್ಲಲು ಅಂದಿನ ಸಂಘಟನೆ-ಸಂಘಟಕರ ಬೆವರು ಕಾರಣ. ಅಂದಿನ ಸಂಘಟಕರಿಗೆ ಮೂಲ ಕಾರ್ಲ್ ಮಾರ್ಕ್ಸ್‌ನ ಸೈದ್ಧಾಂತಿಕ ವಿಚಾರಗಳು, ಎಡಪಂತೀಯ ಧೋರಣೆ, ದೃಷ್ಟಿಕೋನಗಳು

ಕಾರಣವಾಯಿತೆನ್ನಬಹುದು. ಹೀಗಾಗಿ ಇವುಗಳೆಲ್ಲವನ್ನೂ ಗ್ರಹಿಸಲು ಹಾಗೂ ಓರೆಗೆ ಅಚ್ಚಲು ಸಂಶೋಧನೆಯಿಂದ ಸಾಧ್ಯವಾಗುತ್ತದೆ.

ಬೂರ್ಜ್ವಾ ಹಾಗೂ ಪ್ರೊಲಿಟೇರಿಯನ್ ಎಂಬ ಎರಡು ವರ್ಗಗಳನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಕಾರ್ಖಾನೆಗಳಿಗೆ ; ಶೋಷಣೆ, ಪ್ರಜ್ಞೆ, ಹೋರಾಟ, ಕಲಹ, ಮುಷ್ಕರ, ಚಳವಳಿ, ಇತ್ಯಾದಿಗಳನ್ನು ಹುಟ್ಟುಹಾಕುವ, ಹುಟ್ಟುಹಾಕಿಸುವ ಪ್ರಸಂಗಗಳು ಸರ್ವಸಾಮಾನ್ಯವಾಗಿರುತ್ತವೆ. ರಾಷ್ಟ್ರದಿಂದ ರಾಷ್ಟ್ರಕ್ಕೆ ಅದರ ಸ್ವರೂಪಗಳಲ್ಲಿ ವ್ಯತ್ಯಾಸವಿರುತ್ತದೆ. ಯುರೋಪ್‌ನಲ್ಲಿ ಕ್ರಾಂತಿಯ ಸ್ವರೂಪವನ್ನು ಪಡೆದುಕೊಂಡರೆ ಏಷ್ಯಾ ಹಾಗೂ ಆಫ್ರಿಕಾಗಳಲ್ಲಿ ರಾಷ್ಟ್ರೀಯ ಚಳವಳಿ, ಸ್ವತಂತ್ರ ಚಳವಳಿಯಲ್ಲಿ ತನ್ನ ಪಾಲ್ಗೊಳ್ಳುವಿಕೆಯ ಅಗತ್ಯತೆಯನ್ನು ಸಾರಿ ಹೇಳಿದವು. ಇಲ್ಲೂ ಏಕೆ ಕ್ರಾಂತಿ ಆಗಲಿಲ್ಲ? ಎಂಬ ಪ್ರಶ್ನೆ ಹಾಕಿಕೊಂಡರೆ ಉತ್ತರಿಸುವುದು ಸ್ವಲ್ಪ ಕಷ್ಟವೇ, ಆದರೆ ಒಂದಂತೂ ಹೇಳಬಹುದು, ಅದು ಈ ಎರಡೂ ಖಂಡಗಳು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಸಾರಿ ಹೇಳುತ್ತಿದ್ದ ಯುರೋಪಿನ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಆಳ್ವಿಕೆಯಲ್ಲಿ ನರಳುತ್ತಿದ್ದು ಕ್ರಾಂತಿಯ ಬದಲಾಗಿ ಚಳವಳಿಯ ಸ್ವರೂಪಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಂತೂ ಸತ್ಯ. ಬೆಂಗಳೂರಿನ ಹತ್ತಿ ಗಿರಣಿಗಳು, ಅದರ ಕಾರ್ಮಿಕರು ಹಾಗೂ ಸಂಘಟನೆಗಳು ಇದರಿಂದ ಹೊರತಾಗಿರಲಿಲ್ಲ. ಇದೆಲ್ಲವನ್ನು ಗ್ರಹಿಸುವ ಹಾಗೂ ವಿಶ್ಲೇಷಣೆ ಮಾಡುವ ಅಗತ್ಯತೆ ಈ ಸಂಶೋಧನೆಗೆ ಒದಗಿ ಬಂದಿದೆ. ಹೀಗಾಗಿ ಈ ಅಧ್ಯಯನದ ಮಹತ್ವವನ್ನು ಇದರ ಮೂಲಕ ಪ್ರಕಟಗೊಳಿಸುವುದಾಗಿದೆ.

## ೧.೨. ಅಧ್ಯಯನದ ಸ್ವರೂಪ

"ವಸಾಹತು ಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ" ಎಂಬ ಸಂಶೋಧನ ವಿಷಯಕ್ಕೆ ಎಂಟು ಅಧ್ಯಾಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವ, ವಿಧಾನ ಮತ್ತು ವಿವಿಧ ಆಕರಗಳನ್ನು ಪರಿಚಯಿಸಲಾಗಿದೆ. ಬೆಂಗಳೂರಿನ ಹತ್ತಿ ಗಿರಣಿಗಳು ಕುರಿತಂತೆ (ಅಂದರೆ ರಾಷ್ಟ್ರೀಯ-ಅಂತರಾಷ್ಟ್ರೀಯ ಆರ್ಥಿಕ ಚರಿತ್ರೆಯ ಬಗೆಗಿನ ಸಮೀಕ್ಷೆ ಹಾಗೂ ಕಾರ್ಖಾನೆ ಹಾಗೂ ಕಾರ್ಮಿಕರುಗಳನ್ನು ಒಳಗೊಂಡಂತೆ) ಇಲ್ಲಿಯವರೆಗೆ ಕೈಗೊಂಡಿರುವ ಅಧ್ಯಯನಗಳ ಸಮೀಕ್ಷೆಯನ್ನು ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವಲೋಕನ ಮಾಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಹತ್ತಿ ಗಿರಣಿಗಳ ಮೂಲಕ ಬೆಂಗಳೂರಿನ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ವಿಶ್ಲೇಷಿಸಲಾಗಿದೆ. ಬೆಂಗಳೂರಿನಲ್ಲಿ ಹತ್ತಿ ಗಿರಣಿಗಳು ಬೆಳೆದು ಬಂದ ಬಗೆ, ಮೈಸೂರು ಅರಸರು ಮತ್ತು ಬಟ್ಟೆ ಕಾರ್ಖಾನೆಗಳ ಹಿನ್ನೆಲೆ, ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಸಂದರ್ಭವನ್ನು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಹತ್ತಿ ಗಿರಣಿಗಳ ಅಸ್ಮಿತೆಯ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ಲೇಷಣೆ ಮಾಡಲಾಗಿದೆ. ಗಿರಣಿಗಳ ಸ್ಥಾಪನೆಯ ಹಿನ್ನೆಲೆ, ಇವುಗಳ ಸ್ಥಾಪನೆಯಿಂದ ಉಂಟಾದ ಸಾಂಸ್ಕೃತಿಕ ಪ್ರಗತಿ ಹಾಗೂ ಉಚ್ಛ್ರಾಯ ಕಾಲ ಎಂಬ ವಿಷಯಗಳ ಬಗ್ಗೆ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ವ್ಯಾಪಾರ ಮತ್ತು ವಾಣಿಜ್ಯವನ್ನು ಕುರಿತದ್ದಾಗಿದೆ. ಗಿರಣಿಗಳಲ್ಲಿ ಉತ್ಪಾದನೆಯಾದ ಹತ್ತಿ ಉತ್ಪನ್ನವನ್ನು ಯಾವ ರಾಜ್ಯಗಳಿಗೆ ಹಾಗೂ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು, ಕಚ್ಚಾ ಹತ್ತಿಯನ್ನು ಯಾವ ಪ್ರದೇಶಗಳಿಂದ ಪೂರೈಸಲಾಗುತ್ತಿತ್ತು ಹಾಗೂ ಬಂಡವಾಳದ ಬಗೆಗಿನ ಅಂಶಗಳನ್ನೂ ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವು ಕಾರ್ಮಿಕ ಸಂಘದ ಚರಿತ್ರೆಗೆ ಸಂಬಂಧಿಸಿದಂತೆ ವಿಶ್ಲೇಷಿಸಲಾಗಿದೆ. ವಿವಿಧ ನೆಲೆಗಳಲ್ಲಿ ಸಂಘಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ವಸಾಹತುಪೂರ್ವ, ವಸಾಹತು ಕಾಲಘಟ್ಟ, ಸ್ವತಂತ್ರ ನಂತರ ಹಾಗೂ ಸಮಕಾಲೀನ ಸಂದರ್ಭದಲ್ಲಿ ಕಾರ್ಮಿಕ ಸಂಘಗಳು ಹೇಗೆ ಸ್ಥಿತ್ಯಂತರಕ್ಕೆ ಒಳಗಾದವು ಎಂಬುದನ್ನು ಚರ್ಚಿಸಲಾಗಿದೆ. ಕಾರ್ಮಿಕ ಚಳವಳಿಗಳು ಹಾಗೂ ಮುಷ್ಕರಗಳ ಕುರಿತಂತೆ ಅಧ್ಯಯನ ಮಾಡಲಾಗಿದ್ದು, ಅವುಗಳ ಸಫಲತೆ, ವಿಫಲತೆಯ ಬಗ್ಗೆ ಚರ್ಚಿಸಲಾಗಿದೆ. ಚಳವಳಿ ಮತ್ತು ಮುಷ್ಕರಗಳನ್ನು ಮುನ್ನಡೆಸಿದವರ ಬಗ್ಗೆಯೂ ವಿಶ್ಲೇಷಣೆ ಮಾಡಲಾಗಿದೆ. ಮಹಿಳಾ ಕಾರ್ಮಿಕರು ಹಾಗೂ ಸಮಸ್ಯೆಗಳ ಕುರಿತು ಪ್ರಸ್ತಾಪ ಮಾಡಲಾಗಿದೆ. ಸಮಕಾಲೀನ ಸಂದರ್ಭದಲ್ಲಿ ಕಾರ್ಮಿಕ ಸಂಘಗಳು ಹಾಗೂ ಅಸಂಘಟಿತ ಕಾರ್ಮಿಕರ ಕುರಿತು ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ರಾಷ್ಟ್ರೀಯ ಚಳವಳಿಯಲ್ಲಿ ಬೆಂಗಳೂರು ಹತ್ತಿ ಗಿರಣಿಗಳ ಕಾರ್ಮಿಕರ ಪಾತ್ರ, ಅಂಬೇಡ್ಕರ್ ಪ್ರಭಾವ ಹಾಗೂ ಕಾರ್ಮಿಕ ಚಳವಳಿಯ ಅಸ್ಮಿತೆ, ಸ್ವಾತಂತ್ರ್ಯ ಚಳವಳಿಯಲ್ಲಿ ಕಾರ್ಮಿಕರ ಪಾಲ್ಗೊಳ್ಳುವಿಕೆ, ಪಾಲ್ಗೊಳ್ಳುವಿಕೆಯಿಂದ ಚಳವಳಿ ಪಡೆದುಕೊಂಡ ಯಶಸ್ಸು ಇತ್ಯಾದಿ

ವಿಚಾರಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಮೈಸೂರು ಚಲೋ ಚಳವಳಿ, ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಕಾರ್ಮಿಕರು ಹಾಗೂ ಸಂಘದ ಪಾತ್ರ ಕುರಿತಂತೆ ಚರ್ಚಿಸಲಾಗಿದೆ.

ಏಳನೇ ಅಧ್ಯಾಯವು ಗಿರಣಿಗಳ ಅವಸಾನದ ಹಂತಗಳನ್ನು ಕುರಿತಂತೆ ಗಂಭೀರ ಸ್ವರೂಪದ ಚರ್ಚೆ ಮಾಡಲಾಗಿದೆ. ಗಿರಣಿಗಳು ಅವನತಿಯನ್ನು ಹೊಂದಬೇಕಾದರೆ ಕೇವಲ ಆ ಸಂದರ್ಭದ ಅಂಶಗಳು ಕಾರಣವಾಗಿರುವುದಿಲ್ಲ. ಅದಕ್ಕೆ ತನ್ನದೇ ಆದ ಚಾರಿತ್ರಿಕ ಕಾರಣಗಳು ಇರುತ್ತವೆ. ಅಂತಹ ವಿಷಯಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ. ಭಾರತದ ದೇಶೀಯ ಕಾರ್ಖಾನೆಗಳಂತೆ ಬೆಂಗಳೂರಿನ ಹತ್ತಿ ಬಟ್ಟೆ ಕಾರ್ಖಾನೆಗಳು ಜಾಗತೀಕರಣದ ಪರಿಣಾಮವನ್ನು ಎದುರಿಸಿರುವುದಂತೂ ಖಂಡಿತ. ಹೀಗಾಗಿ ಇದರ ಭೇಗೆ ಯಾವ ಮಟ್ಟದ್ದು ಎಂಬುದನ್ನು ಅಧ್ಯಯನ ಮಾಡಲಾಗಿದೆ. ಆಧುನಿಕ ಯಂತ್ರೋಪಕರಣಗಳಿಂದ ಯಾವ ರೀತಿಯ ಬದಲಾವಣೆಯಾಯಿತು, ಗಿರಣಿಗಳು ಈ ಬದಲಾವಣೆಯನ್ನು ಸ್ವೀಕರಿಸಲಿಲ್ಲವೆ? ಅಥವಾ ಹೊಂದಿಕೊಳ್ಳಲಿಲ್ಲವೆ? ಎಂಬಿತ್ಯಾದಿ ವಿಷಯಗಳ ಬಗ್ಗೆ ಚರ್ಚೆ ಮಾಡಲಾಗಿದೆ. ವಿದೇಶಿ ವಿನಿಮಯ ಹಾಗೂ ಭಾರತದ ಆರ್ಥಿಕತೆ ಹಾಗೂ ಹತ್ತಿ ಗಿರಣಿಗಳು ಈ ಮೂರು ಅಂಶಗಳನ್ನು ಇಟ್ಟು ತುಲನಾತ್ಮಕ ಅಧ್ಯಯನ ಕೈಗೊಳ್ಳಲಾಗಿದ್ದು, ಚರ್ಚೆಯ ಮೂಲಕ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಕೃಷಿಯಿಂದ ಯಾವ ರೀತಿಯ ಬದಲಾವಣೆಯಾಯಿತು, ಇದರಿಂದ ಹತ್ತಿ ಬೆಳೆ ಎದುರಿಸಿದ ಪ್ರತಿಕೂಲ ಪರಿಣಾಮ ಯಾವ ಮಟ್ಟದ್ದು, ಗಿರಣಿಗಳಿಗೆ ಕಚ್ಚಾ ಹತ್ತಿ ಒದಗಿಸುವಲ್ಲಿ ಆದಂತಹ ಎಡರು-ತೊಡರುಗಳ ಬಗ್ಗೆ ವಿಶ್ಲೇಷಣೆ ಮಾಡಲಾಗಿದೆ.

ಎಂಟನೇ ಅಧ್ಯಾಯ ಸಮಾರೋಪ. ಗಿರಣಿಗಳ ಇಂದಿನ ಸ್ಥಿತಿಯ ಬಗ್ಗೆ ಅವಲೋಕನ ಮಾಡಲಾಗಿದೆ. ಸಂಶೋಧನೆಯಲ್ಲಿ ಕಂಡುಕೊಂಡ ಫಲಿತಗಳ ಕುರಿತು ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಸಂಶೋಧನೆಯ ಅನಿಸಿಕೆಗಳನ್ನು ವಿಶ್ಲೇಷಣೆ ಮಾಡಲಾಗಿದೆ.

## ಅಧ್ಯಯನದ ವ್ಯಾಪ್ತಿ

ಅಧ್ಯಯನವು ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತಿಗತಿ, ಕಾರ್ಮಿಕರು ಹಾಗೂ ಸಂಘಕ್ಕೆ ಸಂಬಂಧಿಸಿದ್ದಾಗಿದೆ. ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟಂತೆ, ವಸಾಹತು ಕಾಲಘಟ್ಟವನ್ನು ಪ್ರಧಾನವಾಗಿಟ್ಟುಕೊಂಡು ಬೆಂಗಳೂರಿನ ಹತ್ತಿ ಗಿರಣಿಗಳನ್ನು ವಿಶ್ಲೇಷಣೆ ಮಾಡುವುದಾಗಿದೆ. ಸ್ವಾತಂತ್ರ್ಯ ನಂತರದ ಅವಧಿಯನ್ನೂ ಅಧ್ಯಯನ ಒಳಗೊಂಡಿದೆ. ಅಧ್ಯಯನಕ್ಕೆ ಬೆಂಗಳೂರು ಪ್ರಮುಖ

ಕೇಂದ್ರವಾಗಿದ್ದರೂ ನೆರೆಯ ಜಿಲ್ಲೆಗಳಾದ ಮೈಸೂರು, ತುಮಕೂರು, ಕೋಲಾರ, ಚಿತ್ರದುರ್ಗ, ದಾವಣಗೆರೆಯ ಕೈಗಾರಿಕಾ ಪ್ರದೇಶಗಳ ಜೊತೆಗೆ ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರ ಪ್ರದೇಶ ಹಾಗೂ ಮಹಾರಾಷ್ಟ್ರದ ಹತ್ತಿ ಗಿರಣಿಗಳನ್ನಿಟ್ಟುಕೊಂಡು ತೌಲನಿಕ ಅಧ್ಯಯನ ಮಾಡಲಾಗಿದೆ.

## ೧.೩. ಅಧ್ಯಯನದ ವಿಧಾನ

ಕಾರ್ಲ್ ಮಾರ್ಕ್ಸ್ ತನ್ನ ಸಮಾಜವಾದವನ್ನು ವೈಜ್ಞಾನಿಕ ವಿಶ್ಲೇಷಣೆಯ ತಳಹದಿಯ ಮೇಲೆ ಪ್ರತಿಪಾದಿಸಿದ್ದು, ಸಮಾಜದಲ್ಲಿ ವಾಸಿಸುತ್ತಿದ್ದ ಸಾಮಾನ್ಯ ಜನರ ಬದುಕಿಗೆ ಬಹಳ ಹತ್ತಿರವಾದ ವಿಚಾರಗಳನ್ನು ವ್ಯಕ್ತಪಡಿಸಿದನು. ಇವನಿಗೆ 'ಸಮಾಜ' ಹಾಗೂ 'ಜನ' ಇವುಗಳೇ ಪ್ರಯೋಗಾಲಯಗಳಾಗಿದ್ದವು. ಹೀಗಾಗಿ ಇವನು ಪ್ರತಿಪಾದಿಸಿದ ಸಿದ್ಧಾಂತ 'ವೈಜ್ಞಾನಿಕ ಸಮಾಜವಾದ' ಎಂಬುದಾಗಿ ಹೆಸರಾಯಿತು. ಇಲ್ಲಿ ಈ ವಿಚಾರವನ್ನು ಹೇಳುತ್ತಿರುವ ಉದ್ದೇಶ ಕಾರ್ಲ್ ಮಾರ್ಕ್ಸ್ ತನ್ನ ಅಧ್ಯಯನಕ್ಕೆ, ಪ್ರತಿಪಾದನೆಗೆ ಆಯ್ಕೆ ಮಾಡಿಕೊಂಡ ವಸ್ತು ವಿಷಯ ಬಂಡವಾಳಶಾಹಿಗಳು, ಕಾರ್ಮಿಕರು ಮತ್ತು ಕೈಗಾರಿಕೆ. ಅದೇ ರೀತಿ ಈ ಪಿಎಚ್.ಡಿ. ಸಂಶೋಧನೆಯು ಸಹ ಆಯ್ಕೆ ಮಾಡಿಕೊಂಡಿರುವುದು ಹತ್ತಿ ಗಿರಣಿಗಳು, ಕಾರ್ಮಿಕರು ಹಾಗೂ ಸಂಘ-ಸಂಸ್ಥೆಗಳ ಕುರಿತಾಗಿ. ಹೀಗಾಗಿ ಇದರ ನಡುವೆ ಸಾಮ್ಯತೆಯನ್ನು ಕಾಣಬಹುದು. ಹಾಗಂತ ಈ ಅಧ್ಯಯನವು ಮಾರ್ಕ್ಸ್ ಸಿದ್ಧಾಂತಕ್ಕೆ ಸಮನಾದುದು ಎಂದಾಗಲಿ ಅಥವಾ ಆ ತತ್ವಕ್ಕೆ ಕಟ್ಟು ಬಿದ್ದಿದೆ ಎಂದಾಗಲಿ ಹೇಳುತ್ತಿಲ್ಲ. ಇಲ್ಲಿ ಪ್ರಮುಖ ವಿಚಾರವೊಂದನ್ನು ಸ್ಪಷ್ಟಪಡಿಸುವುದೇನೆಂದರೆ ಪ್ರಸ್ತುತ ಅಧ್ಯಯನವು 'ಆರ್ಥಿಕ ಚರಿತ್ರೆ'ಗೆ ಸಂಬಂಧಪಟ್ಟಿದೆ. ಗಿರಣಿಗಳು, ಕಾರ್ಮಿಕರು ಹಾಗೂ ಸಂಘಟನೆಗಳ ಮೂಲಕ ಬೆಂಗಳೂರಿನ ಆರ್ಥಿಕ ಚರಿತ್ರೆಯನ್ನು ಅಧ್ಯಯನ ಮಾಡುವುದಾಗಿದೆ. ಇದನ್ನು ವಿಶ್ಲೇಷಣೆ ಮಾಡುವಾಗ ಸೈದ್ಧಾಂತಿಕ ಹಿನ್ನಲೆಯನ್ನು ಬಳಸಿಕೊಳ್ಳಲಾಗಿದೆ. ಯಾವುದೇ ಒಂದು ಸಿದ್ಧಾಂತಕ್ಕೆ ಈ ಅಧ್ಯಯನ ಒಳಪಟ್ಟಿಲ್ಲ. ಸ್ವಲ್ಪ ಮಟ್ಟಿಗೆ ಎಲ್ಲವನ್ನೂ ಗ್ರಹಿಸುವ, ಪೂರಕವಾಗಿದ್ದಲ್ಲಿ ಅದರಿಂದ ಪ್ರಭಾವಿಸುವ, ವಿಶ್ಲೇಷಣೆಗೊಳಪಡಿಸುವ ವಿಧಾನವನ್ನು ಹೊಂದಿದೆ.

ಪ್ರಧಾನವಾಗಿ ವಸಾಹತು ಕಾಲಘಟ್ಟವನ್ನು ಅಧ್ಯಯನದ ವ್ಯಾಪ್ತಿಯನ್ನಾಗಿ ಮಾಡಿಕೊಂಡು ಬೆಂಗಳೂರಿನ ಹತ್ತಿ ಗಿರಣಿಗಳ ಚರಿತ್ರೆ ಹಾಗೂ ಕಾರ್ಮಿಕರ ಸ್ಥಿತಿಗತಿ ತಿಳಿಯುವ,

ಚರ್ಚಿಸುವ, ವಿಶ್ಲೇಷಿಸುವ ಉದ್ದೇಶ ಇಟ್ಟುಕೊಂಡಿದೆ. ಅಧ್ಯಯನಕ್ಕೆ ಚರಿತ್ರೆಯ ವೈಧಾನಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಮಾಹಿತಿ ಸಂಗ್ರಹಣೆ, ಆಂತರಿಕ ವಿಮರ್ಶೆ, ಬಾಹ್ಯ ವಿಮರ್ಶೆ, ವಿಶ್ಲೇಷಣೆಯ ಕಾರ್ಯ ಸೂತ್ರಗಳನ್ನು ಸಂಶೋಧನೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ಕಾರ್ಖಾನೆ, ಕಾರ್ಮಿಕರು ಹಾಗೂ ಅದಕ್ಕೆ ಸಂಬಂಧಿಸಿದ ಅಧ್ಯಯನವು ಆರ್ಥಿಕ ಚರಿತ್ರೆಯ ಒಂದು ಭಾಗವಾಗಿದ್ದು, ಹಲವು ಸಮಾಜ ವಿಜ್ಞಾನಗಳಲ್ಲಿ ಸಂಬಂಧ ಹೊಂದಿದೆ. ವಾಣಿಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಕಾನೂನು, ಭೂಗೋಳ ಮುಂತಾದ ಶಿಸ್ತುಗಳ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಅಂದರೆ ಅಂತರ್ ಶಿಸ್ತೀಯ ಹಾಗೂ ಬಹುಶಿಸ್ತೀಯ ಅಧ್ಯಯನ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಅಧ್ಯಯನದ ಪರಿಧಿಯಲ್ಲಿ ಅಗತ್ಯವಿರುವ ಮಾಹಿತಿಗಳನ್ನು ಪ್ರಾಥಮಿಕ ಮೂಲಗಳಿಂದ ಪಡೆದುಕೊಳ್ಳಲಾಗಿದೆ. ಅಲ್ಲಲ್ಲಿ ಅಗತ್ಯವಿದ್ದಲ್ಲಿ, ವಿಶ್ಲೇಷಣೆಯನ್ನು ಬೆಳೆಸಲು ಅವಶ್ಯಕತೆಯಿದ್ದಲ್ಲಿ ಆನುಷಂಗಿಕ ಆಕರಗಳನ್ನು ಬಳಸಿಕೊಳ್ಳಲಾಗಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ಚರಿತ್ರೆ ಬರವಣಿಗೆಯಲ್ಲಿ ಹೊಸ ಸಿದ್ಧಾಂತಗಳು ತನ್ನ ಪ್ರಭಾವವನ್ನು ಬೀರುತ್ತಿದ್ದಂತೆ ಆರ್ಥಿಕ ಹಾಗೂ ಸಾಮಾಜಿಕ ಚರಿತ್ರೆಗೆ ಆದ್ಯತೆ ನೀಡುತ್ತಾ ರಾಜಕೀಯ ಚರಿತ್ರೆಯ ಬಗ್ಗೆ ಸ್ವಲ್ಪ ಉದಾಸೀನತೆಯನ್ನು ತೋರಲಾಗುತ್ತಿದೆ. ಚರಿತ್ರೆಯ ರಚನೆಯಲ್ಲಿ ವಿಭಿನ್ನ ತಾತ್ವಿಕ ನೆಲೆಗಟ್ಟುಗಳಲ್ಲಿ ಕಂಡುಕೊಂಡಿರುವ ಹಿನ್ನೆಲೆಗಳನ್ನು ಗಮನಿಸುತ್ತಾ ಪ್ರಸ್ತುತ ಅಧ್ಯಯನಕ್ಕೆ ಪರಿಕಲ್ಪನೆಗಳನ್ನು ಹಾಕಿಕೊಳ್ಳಲಾಗಿದೆ. ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕರ ಸ್ಥಿತಿಗತಿ, ಹೋರಾಟ, ಸ್ಥಿತ್ಯಂತರಗಳನ್ನು ಚಾರಿತ್ರಿಕ ಪರಿಪೇಕ್ಷೆ (ಇಸ್ಟಾರಿಕಲ್ ಪರ್ಸ್ಪೆಕ್ಟೀವ್)ಯ ಒಳಗಡೆ ಅಧ್ಯಯನ ಮಾಡಲಾಗಿದೆ.

**ಆಕರಗಳು**

ಬರ್ಕ್‌ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಚರಿತ್ರೆಕಾರ ಯೂಗಿನ್ ಎಫ್. ಇರ್ಶಿಕ್ ತನ್ನ "ಡೈಯಲಾಗ್ ಅಂಡ್ ಹಿಸ್ಟರಿ : ಕನ್‌ಸ್ಟ್ರಕ್ಟಿಂಗ್ ಸೌತ್ ಇಂಡಿಯಾ, ೧೭೯೫–೧೮೯೫" ಎಂಬ ಕೃತಿಯ ಪೀಠಿಕೆಯಲ್ಲಿ ಎತ್ತಿಕೊಂಡಿರುವ ಚರ್ಚೆ ಈ ರೀತಿ ಇದೆ. ಚರಿತ್ರೆಕಾರನಿಗೆ ವೈದಾನಿಕತೆಯ ಅಳವಡಿಕೆ ಎಂಬುದೇ ಒಂದು ಜಟಿಲ ಅಥವಾ ಅತೀ ಗೊಂದಲಮಯವಾದ ಪ್ರಕ್ರಿಯೆ ಎಂಬುದಾಗಿ ತಿಳಿಸಿದ್ದಾರೆ. ಹೀಗಾಗಿ ಚರಿತ್ರೆಕಾರರಿಗೆ ಸಾಂಪ್ರದಾಯಿಕ ದಾಖಲೆಯ ಸಾಕ್ಷ್ಯಗಳು

ಪ್ರಮುಖ ಪ್ರಾಥಮಿಕ ಆಕರಗಳಾಗಿ ಕಂಡುಬಂದರೂ ಅವುಗಳು ತಾಂತ್ರಿಕವಾಗಿ ಮಾತ್ರ, ಆದರೆ ಬೌದ್ಧಿಕವಾಗಿಯಲ್ಲ. ಏಕೆಂದರೆ ಇವುಗಳು ಏಕ ವ್ಯಕ್ತಿಯಿಂದ, ಅಧಿಕಾರದಿಂದ ಅಥವಾ ವ್ಯವಸ್ಥೆಯಿಂದ ರಚಿತವಾಗಿರುತ್ತವೆ. ಹೀಗಾಗಿ ಇರ್ಶಿಕ್ ಅವರು ನಡವಳಿಕೆಯ ಸಾಕ್ಷ್ಯಗಳು (ಬಿಹೇವಿಯರಲ್ ಎವಿಡೆನ್ಸ್) ಸಹ ಪ್ರಾಥಮಿಕ ಆಕರಗಳು ಎಂಬುದಾಗಿ ಪರಿಗಣಿಸಲಾಗಿದೆ ಎಂದು ವ್ಯಾಖ್ಯಾನಿಸುವುದರ ಮೂಲಕ ಚರಿತ್ರೆಯ ಸಂಶೋಧನಾ ವೈಧಾನಿಕತೆ, ತಾತ್ವಿಕತೆ ಹಾಗೂ ವಿಮರ್ಶೆ-ವಿಶ್ಲೇಷಣಾ ವಿಧಾನಕ್ಕೆ ಸಡ್ಡು ಹೊಡೆದಿದ್ದಾರೆ. ಅಲ್ಲದೆ ಆಧುನಿಕ ಚರಿತ್ರೆಯನ್ನು ರಚಿಸುವಾಗ ಅಂದರೆ ಚರಿತ್ರೆಕಾರ ಅಥವಾ ಸಂಶೋಧಕ ಸಂಶೋಧನೆಯನ್ನು ಕೈಗೊಂಡ ಸಂದರ್ಭದಲ್ಲಿ ತನ್ನ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಸಂಶೋಧನಾ ವ್ಯಾಪ್ತಿಯ ಸಮಕಾಲೀನ ಸಂದರ್ಭದಲ್ಲಿ ರಚನೆಯಾದ ಗ್ರಂಥಗಳನ್ನು ಅಭ್ಯಸಿಸಿರುವ ಬಗೆಯು ಈ ಕೃತಿಯಲ್ಲಿ ವಿದ್ಯುಕ್ತವಾಗಿ ಮೂಡಿಬಂದಿದೆ.

ಬಿಪನ್ ಚಂದ್ರ ಹಾಗೂ ಅವರ ತಂಡ "ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್" ಎಂಬ ಗ್ರಂಥದಲ್ಲಿ ಬಿಪನ್ ಅವರು ಮುನ್ನುಡಿಯನ್ನು ಬರೆಯುತ್ತಾ ಆಧುನಿಕ ಭಾರತದ ಚರಿತ್ರೆಗೆ ಲಭ್ಯವಿರುವ ಪತ್ರಾಗಾರ ಇಲಾಖೆಯ ಆಕರಗಳನ್ನು ಪ್ರಮುಖ ಆಕರಗಳಾಗಿದ್ದರೂ ಸಾಂಪ್ರದಾಯಿಕ ಆಕರಗಳು ಎಂಬುದಾಗಿ ಕರೆದಿದ್ದಾರೆ[೧೩]. ಇಲ್ಲಿ ಇರ್ಶಿಕ್ ಹಾಗೂ ಬಿಪನ್ ಅವರ ನಡುವೆ ಸಾಮ್ಯತೆಯನ್ನು ಕಾಣಬಹುದು. ಹಾಗೆಯೇ ಬೆಂಗಳೂರಿನ ಹತ್ತಿ ಗಿರಣಿಗಳ ಕುರಿತಾಗಿ ಸಂಶೋಧನೆ ಕೈಗೆತ್ತಿಕೊಂಡಾಗಲೂ ಇದೇ ತರನಾದ ಸಾಂಪ್ರದಾಯಿಕ ಆಕರಗಳಾದ ಪಾತ್ರಾಗಾರ ಇಲಾಖೆಗಳ ದಾಖಲೆಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಇದರ ಮೂಲಕ ವಿಶ್ಲೇಷಣೆಯನ್ನು ಮಾಡಲು ಪ್ರಯತ್ನಿಸಲಾಗಿದೆ. ಅವು ಬೆಂಗಳೂರು, ಮೈಸೂರು, ಚೆನ್ನೈ ಹಾಗೂ ಮುಂಬೈ ಪತ್ರಾಗಾರ ಇಲಾಖೆಗಳಾಗಿವೆ. ಇದಲ್ಲದೆ ಬೆಂಗಳೂರಿನ ಹತ್ತಿ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಹಾಗೂ ಅವರ ಸಂಬಂಧಿಕರನ್ನು ಸಂದರ್ಶಿಸಿ, ಅವರಿಂದ ಮಾಹಿತಿಯನ್ನು ಪಡೆದು ವಿಶ್ಲೇಷಣೆಯನ್ನು ಬೆಳೆಸಲಾಗಿದೆ. ಗ್ರಂಥಾಲಯಗಳಾದ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ (ಐ.ಸಿ.ಎಚ್.ಆರ್.), ಮಿಥಿಕ್ ಸೊಸೈಟಿ ಹಾಗೂ ನಗರ ಕೇಂದ್ರ ಗ್ರಂಥಾಲಯ (ಬೆಂಗಳೂರು)ಗಳಿಂದ ಪ್ರಕಟಿತ ಗ್ರಂಥಗಳು ಹಾಗೂ ಸಂಚಿಕೆಗಳನ್ನು ಆನುಷಂಗಿಕ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಇದಲ್ಲದೆ ದಿನಪತ್ರಿಕೆಗಳು, ವಾರ ಪತ್ರಿಕೆಗಳು, ಮಾಸ ಪತ್ರಿಕೆಗಳು, ವೃತ್ತ ಪತ್ರಿಕೆಗಳು ಇತ್ಯಾದಿಗಳನ್ನು ದ್ವಿತೀಯ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಹೆಚ್ಚಾಗಿ ಆ ಸಂದರ್ಭದ

ಸರ್ಕಾರದಿಂದ ಪ್ರಕಟಿತವಾದ ದಾಖಲೆಗಳನ್ನು ಪ್ರಾಥಮಿಕ ಆಕರಗಳನ್ನಾಗಿ ಬಳಸಿಕೊಂಡರೂ ಸಹ ಯಾವುದೇ ಪಕ್ಷಪಾತವಿಲ್ಲದೆ ಸೂಕ್ಷ್ಮ ಸಂವೇದನೆಯಿಂದ ವಿಶ್ಲೇಷಣೆ ಮಾಡುತ್ತಾ ವಾಸ್ತವಾಂಶವನ್ನು ಬಯಲು ಮಾಡುವ ಪ್ರಯತ್ನವಾಗಿದೆ.

## ೧.೪. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಯನದ ವಿಧಾನದಲ್ಲಿ ತಿಳಿಸಿದಂತೆ ಈ ಅಧ್ಯಯನ ಕ್ರಮವು ಆರ್ಥಿಕ ಚರಿತ್ರೆಯ ಪರಿಧಿಯಲ್ಲಿ ವಿಶ್ಲೇಷಣೆಗೊಳ್ಳುವುದಾಗಿದೆ. ಹೀಗಾಗಿ ರಾಷ್ಟ್ರ-ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಆರ್ಥಿಕ ದೃಷ್ಟಿಕೋನದ ಮೂಲಕ ಚರಿತ್ರೆಯನ್ನು ಪರಿಭಾವಿಸುವ ಅಧ್ಯಯನವು ಇದರ ಸಮೀಕ್ಷೆಯಲ್ಲಿ ಬರುವಂತದ್ದಾಗಿದೆ. ಆದರೆ ಅಧ್ಯಯನದ ಮಿತಿಯಲ್ಲಿ ಸಂಶೋಧಕನ ವಿಶ್ಲೇಷಣೆಯ ಮಟ್ಟವನ್ನು ಹೆಚ್ಚಿಸುವ ಹಾಗೂ ಪ್ರಾಥಮಿಕ ಆಕರಗಳನ್ನು ಹೇಗೆ ಗ್ರಹಿಸಬೇಕು ಎಂಬುದನ್ನು ಪರೋಕ್ಷವಾಗಿ ತಿಳಿಸುವ ಗ್ರಂಥಗಳನ್ನು ಸಮೀಕ್ಷೆ ಮಾಡಲಾಗಿದೆ. ಅಲ್ಲದೆ ಅಧ್ಯಯನಕ್ಕೆ ಸಂಬಂಧಪಟ್ಟ ವಿದೇಶದ ಹತ್ತಿ ಗಿರಣಿಗಳು, ಕಾರ್ಮಿಕರು ಹಾಗೂ ಸಂಘಟನೆಗಳನ್ನು ಕುರಿತಂತೆ ಆದ ಅಧ್ಯಯನಗಳನ್ನು ಸಮೀಕ್ಷೆ ಮಾಡಲಾಗಿದೆ.

ಗಿರಣಿಗಳು ಅಥವಾ ಕಾರ್ಖಾನೆಗಳು, ಕಾರ್ಮಿಕರು ಹಾಗೂ ಅವರ ಚಳವಳಿಗಳು, ಸಂಘವನ್ನು ಕುರಿತಂತೆ ಅಂತರಾಷ್ಟ್ರೀಯ, ರಾಷ್ಟ್ರ, ರಾಜ್ಯ ಮಟ್ಟದಲ್ಲಿ ಸಂಶೋಧನೆ, ಅಧ್ಯಯನ, ಪರಿಚಯದ ನೆಲೆಯಲ್ಲಿ ಹಲವು ಕೃತಿಗಳು ಹೊರಬಂದಿವೆ. ರಾಜ್ಯಮಟ್ಟದ ಕಾರ್ಖಾನೆ ಹಾಗೂ ಕಾರ್ಮಿಕ ಚರಿತ್ರೆಯ ಅಧ್ಯಯನದಲ್ಲಿ ಬೆಂಗಳೂರು ನಗರದ ಹತ್ತಿ ಗಿರಣಿಗಳ ಬಗ್ಗೆ ಗೆಝೆಟಿಯರ್‌ಗಳಲ್ಲಿ ಅಥವಾ ಇನ್ನಿತರೆ ಕೆಲವು ಗ್ರಂಥಗಳಲ್ಲಿ ಕೆಲವೇ ಸಾಲುಗಳಲ್ಲಿ ವಿವರಿಸಿರುವುದು ವಿಪರ್ಯಾಸ. ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಅಗತ್ಯವಿರುವ ಹಲವು ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಕಾರ್ಖಾನೆಗಳು ಹಾಗೂ ಕಾರ್ಮಿಕ ಹೋರಾಟಗಳು ಹಲವು ಸಮಾಜ ವಿಜ್ಞಾನಗಳಲ್ಲಿ ಸಂಬಂಧ ಹೊಂದಿರುವುದರಿಂದ ಅಂತರ್‌ಶಿಸ್ತುಗಳಲ್ಲಿನ ಲಭ್ಯವಿರುವ ಕೃತಿಗಳನ್ನು ಸಮೀಕ್ಷೆ ಮಾಡಲಾಗಿದೆ. ಗಿರಣಿಗಳ ಹಾಗೂ ಕಾರ್ಮಿಕರ ಚಳವಳಿಯ ಚರಿತ್ರೆ ಅರಿಯಲು ಪೂರಕವಾಗಿರುವ, ಕೈಗಾರಿಕೆಗಳನ್ನು ಹಾಗೂ ಕಾರ್ಮಿಕರನ್ನು ಕುರಿತು ಚರ್ಚಿಸಲು ಲಭ್ಯವಿರುವ ಪ್ರಕಟಿತ ಕೃತಿಗಳು, ಪಿಎಚ್.ಡಿ. ಪ್ರಬಂಧಗಳು, ಎಂ.ಫಿಲ್. ನಿಬಂಧಗಳು, ಲೇಖನಗಳನ್ನು ಇಲ್ಲಿ ಸಮೀಕ್ಷೆ ಮಾಡಲು ಪ್ರಯತ್ನಿಸಲಾಗಿದೆ.

ಚಿನ್ನಸ್ವಾಮಿ ಸೋಸಲೆ ಅವರ 'ನಮ್ಮ ಗ್ರಾಮಗಳು ಅಂದು-ಇಂದು' ಎಂಬ ಗ್ರಂಥವು ಮೈಸೂರು ಸಂಸ್ಥಾನದ ಗ್ರಾಮಗಳ ಸ್ಥೂಲ ಪರಿಚಯವನ್ನು ನೀಡುತ್ತದೆ. ಅದರಲ್ಲಿ ಗ್ರಾಮಗಳ ಆರ್ಥಿಕ ವ್ಯವಸ್ಥೆಯನ್ನು ಹಿಡಿಯಾಗಿ ಚರ್ಚಿಸಲಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನದ ವಿಶ್ಲೇಷಣೆಗೆ ಇದು ನೆರವಾಗಿದೆ.

ಚಿನ್ನಸ್ವಾಮಿ ಸೋಸಲೆ ಅವರ ಸಂಪಾದಕತ್ವದಲ್ಲಿ ಹೊರಬಂದ 'ಚರಿತ್ರೆ ಸಂಪುಟ' ೬ರಲ್ಲಿ ಹಲವು ಲೇಖನಗಳನ್ನು ಸಂಗ್ರಹಿಸಿದ್ದು ಅದರಲ್ಲಿ ಕರ್ನಾಟಕದ ಆರ್ಥಿಕ ಚರಿತ್ರೆಗೆ ಸಂಬಂಧಪಟ್ಟ ಉಪಯುಕ್ತ ಲೇಖನಗಳಿವೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಕೆಲವು ಲೇಖನಗಳು ಇದ್ದು ಅವುಗಳು ನೇರವಾದ ಮಾಹಿತಿಯನ್ನು ಒದಗಿಸುವಲ್ಲಿ ಸಹಾಯಕವಾಗಿವೆ.

ಅವರದೇ ಸಂಪಾದಕತ್ವದಲ್ಲಿ ಹೊರಬಂದ ಮತ್ತೊಂದು ಗ್ರಂಥ 'ದಿವಾನ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ'ದಲ್ಲಿ ಮೈಸೂರು ರಾಜ್ಯದ ಗುಡಿ ಕೈಗಾರಿಕೆಗಳು, ಗೃಹ ಕೈಗಾರಿಕೆಗಳು, ಸಣ್ಣ ಪ್ರಮಾಣದ ಕೈಗಾರಿಕೆಗಳು ಹಾಗೂ ಬೃಹತ್ ಪ್ರಮಾಣದ ಕೈಗಾರಿಕೆಗಳನ್ನು ಕುರಿತಂತೆ ಚರ್ಚೆ ಮಾಡಲಾಗಿದೆ.

ಚಿನ್ನಸ್ವಾಮಿ ಸೋಸಲೆ ಅವರದೇ ಸಂಪಾದಕತ್ವದಲ್ಲಿ ಹೊರಬಂದ ಮತ್ತೊಂದು ಗ್ರಂಥ 'ಜಯಚಾಮರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ'ದಲ್ಲಿ ಜಯಚಾಮರಾಜೇಂದ್ರರ ಆಳ್ವಿಕೆಯ ಕಾಲದಲ್ಲಿ ಮೈಸೂರು ಸಂಸ್ಥಾನವು ಆರ್ಥಿಕವಾಗಿ ಯಾವ ರೀತಿಯ ಏಳು-ಬೀಳುಗಳನ್ನು ಕಂಡಿತು ಎಂಬ ಚರ್ಚೆಯನ್ನು ಸಮಗ್ರವಾಗಿ ಮಾಡಲಾಗಿದೆ. ಹೀಗಾಗಿ ಪ್ರಸ್ತುತ ಅಧ್ಯಯನವನ್ನು ಬೆಳೆಸಲು ಈ ಕೃತಿಯೂ ಸಹ ಉಪಯುಕ್ತ ಮಾಹಿತಿಯನ್ನು ನೀಡುವಲ್ಲಿ ಯಶಸ್ವಿಯಾಗಿದೆ.

ಎಸ್. ಆರ್. ಭಟ್ ಅವರ 'ಕರ್ನಾಟಕದಲ್ಲಿ ಕಾರ್ಮಿಕ ಚಳವಳಿ ನಡೆದು ಬಂದ ದಾರಿ' ಎಂಬ ಗ್ರಂಥವು ೧೯೭೭ರಲ್ಲಿ ನವ ಕರ್ನಾಟಕ ಪ್ರಕಾಶನದಿಂದ ಪ್ರಕಟಗೊಂಡಿತು. ಈ ಗ್ರಂಥದಲ್ಲಿ ಕರ್ನಾಟಕದ ಎಲ್ಲಾ ವಿಧವಾದ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ಯಾವ ರೀತಿಯಾದ ಚಳವಳಿ ಹಾಗೂ ಮುಷ್ಕರಗಳಲ್ಲಿ ಪಾಲ್ಗೊಂಡಿದ್ದರು ಎಂಬ ಕುರಿತು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಈ ಕೃತಿಯು ಪ್ರಮುಖವಾಗಿ ಮಾರ್ಕ್ಸ್‌ವಾದದ ಪ್ರಭಾವದಿಂದ ಕಾರ್ಮಿಕರ ಹೋರಾಟದ ಕುರಿತಾಗಿ ಹಲವಾರು ಸೈದ್ಧಾಂತಿಕ ಚರ್ಚೆಗಳನ್ನು ಎತ್ತಿದ್ದಾರೆ.

ಎಚ್.ಎಸ್. ಗೋಪಾಲರಾವ್‌ರವರ 'ಕರ್ನಾಟಕದ ಏಕೀಕರಣದ ಇತಿಹಾಸ' ಎಂಬ ಕೃತಿಯು ಕರ್ನಾಟಕವು ಏಕೀಕರಣಗೊಂಡ ಬಗೆಯನ್ನು ವಿವಿಧ ಮಜಲುಗಳಲ್ಲಿ ಹಿಡಿದಿಟ್ಟಿದ್ದಾರೆ. ಬೆಂಗಳೂರಿನ ಕಾರ್ಮಿಕರು ಏಕೀಕರಣದಲ್ಲಿ ನಿರ್ವಹಿಸಿದ ಪಾತ್ರವನ್ನು ಚರ್ಚಿಸಿದ್ದಾರೆ. ಹೀಗಾಗಿ ಈ ಕೃತಿಯು ಪ್ರಸ್ತುತ ಸಂಶೋಧನೆಯನ್ನು ಬೆಳೆಸಲು ನೆರವಾಗಿದೆ.

ಬಿ. ಷೇಕ್ ಅಲಿ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಕರ್ನಾಟಕ ಚರಿತ್ರೆ'ಯ ಏಳು ಸಂಪುಟಗಳಲ್ಲಿ (೧೯೯೭) ಎಸ್. ಚಂದ್ರಶೇಖರ್ ಅವರು ಸಂಪುಟ ಸಂಪಾದಕರಾಗಿರುವ ಏಳನೇ ಸಂಪುಟವನ್ನು ಅಧ್ಯಯನದ ಸಮೀಕ್ಷೆಗಾಗಿ ಬಳಸಿಕೊಳ್ಳಲಾಗಿದೆ. ಇದರ ಏಳನೇ ಲೇಖನವು ನಗರ ಕಾರ್ಮಿಕ ವರ್ಗದ ಪಾತ್ರ (ಕರ್ನಾಟಕ) ಕುರಿತ ವಿವರಣೆ ನೀಡುತ್ತದೆ.

ತಂಬಂಡ ವಿಜಯ್ ಪೂಣಚ್ಚ ಅವರ ಸಂಪಾದಕತ್ವದಲ್ಲಿ ಬಂದ 'ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ಚರಿತ್ರೆ' (೨೦೦೧), ಇದರಲ್ಲಿ ಕರ್ನಾಟಕದ ಭಿನ್ನ ಕ್ಷೇತ್ರಗಳಲ್ಲಿನ ಚಳವಳಿಗಳನ್ನು ಕುರಿತು ದೀರ್ಘವಾದ ಮಾಹಿತಿ ಇದೆ. ಚಳವಳಿಗಳ ಸಾಲಿನಲ್ಲಿ ಕಾರ್ಮಿಕ ಚಳವಳಿ ಕುರಿತ ಎರಡು ಲೇಖನಗಳಿದ್ದು, ಮೊದಲ ಲೇಖನವನ್ನು ಜಾನಕಿ ನಾಯರ್ ಅವರು ರಚಿಸಿದ್ದು, ಆರ್.ಎಲ್. ಅನಂತರಾಮಯ್ಯ ಅವರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಸೂರ್ಯನಾಥ ಕಾಮತ್ ಮತ್ತು ಎಂ. ಎಚ್. ಕೃಷ್ಣಯ್ಯ ಅವರ ಸಂಪಾದಕತ್ವದಲ್ಲಿ ಬಂದ 'ಬೆಂಗಳೂರು ದರ್ಶನ' (೧೯೭೫) ಗ್ರಂಥವು ಬೆಂಗಳೂರಿನ ಹತ್ತಿಗಿರಣಿಗಳ ಬಗ್ಗೆ ಮಾಹಿತಿ ನೀಡುತ್ತದೆ. ಬ.ನ. ಸುಂದರರಾವ್ ಅವರ 'ಬೆಂಗಳೂರಿನ ಇತಿಹಾಸ' (೧೯೮೫) ಗ್ರಂಥವು, ಕೆ. ಚಂದ್ರಮೌಳಿ ಅವರ 'ಬೆಂಗಳೂರಿನ ನೋಟಗಳು' (೨೦೦೨) ಇವು ಸ್ಥಳೀಯ ಗ್ರಂಥಗಳಾಗಿದ್ದು ಯಾವುದೇ ಚರ್ಚೆ ಹಾಗೂ ಅರ್ಥವಿವರಣೆಯನ್ನು ಕೈಗೆತ್ತಿಕೊಳ್ಳದೆ ಹೋದರೂ ತುಸು ಮಾಹಿತಿ ನೀಡಲು ಸಹಕಾರಿಯಾಗಿವೆ.

ಜಾನಕಿ ನಾಯರ್ ಅವರು 'ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್' ಎಂಬ ಕೃತಿಯನ್ನು ರಚಿಸಿದ್ದು ಕೋಲಾರದ ಚಿನ್ನದ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಹಾಗೂ ಬೆಂಗಳೂರಿನ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಬಗ್ಗೆ ಅಧ್ಯಯನ ಮಾಡಿದ್ದಾರೆ. ಇದು ಚಾರಿತ್ರಿಕ ಚರ್ಚೆ, ವಿಶ್ಲೇಷಣೆಯನ್ನೊಳಗೊಂಡ ಉತ್ತಮ ಕೃತಿಯಾಗಿದ್ದು, ಕಾರ್ಮಿಕರು, ಅವರ ಹೋರಾಟ, ಮುಷ್ಕರ, ಚಳವಳಿಯನ್ನು ವಿವಿಧ ಆಯಾಮಗಳಲ್ಲಿ ಹಿಡಿದಿಟ್ಟಿದ್ದಾರೆ.

ಎಂ.ವಿ.ಆರ್. ರಾವ್ ಅವರು ತಮ್ಮ 'ಕಾರ್ಮಿಕ ಕಾನೂನು' ಎಂಬ ಕೃತಿಯಲ್ಲಿ ಸ್ವತಂತ್ರಪೂರ್ವ ಹಾಗೂ ನಂತರದ ದೇಶದಲ್ಲಿ ಜಾರಿಯಾದ ಕಾರ್ಖಾನೆ ಕಾಯಿದೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಲು ಪ್ರಯತ್ನಿಸಿದ್ದಾರೆ. ೧೯೪೮ರ ಕಾರ್ಖಾನೆಗಳ ಕಾಯಿದೆ, ೧೯೨೩ರ ಕೆಲಸಗಾರರ ಪರಿಹಾರ ಕಾಯಿದೆ, ೧೯೩೬ರ ವೇತನ ಪಾವತಿ ಕಾಯಿದೆ, ೧೯೬೧ರ ಪ್ರಸೂತಿ ಅನುಕೂಲ ಕಾಯಿದೆ ಈ ಎಲ್ಲಾ ಕಾಯಿದೆಗಳ ಉದ್ದೇಶಗಳ ಬಗ್ಗೆ ವಿವರಣೆಯನ್ನು ನೀಡಿದ್ದಾರೆ.

ಪಿ. ಸಾಯಿನಾಥ್ ಅವರ 'ಅಸಮಾನತೆಯ ಜಾಗತೀಕರಣ' ಎಂಬ ಗ್ರಂಥವನ್ನು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ೧೯೯೦ರ ನಂತರ ಜಾಗತೀಕರಣದ ಪ್ರಭಾವದಿಂದ ಹತ್ತಿ ಬೆಳೆಗಾರರು ಹೇಗೆ ನಾಶ ಹೊಂದಿದರು ಎಂಬುದರ ಬಗ್ಗೆ ಚರ್ಚಿಸುತ್ತಾ ಭಾರತದಲ್ಲಷ್ಟೇ ಅಲ್ಲದೇ ಅಮೆರಿಕಾ ಮತ್ತು ಯೂರೋಪಿಯನ್ ಯೂನಿಯನ್ ಹತ್ತಿ ಬೆಳೆಗೆ ನೀಡಲಾಗುತ್ತಿರುವ ಸಬ್ಸಿಡಿಯಿಂದಾಗಿ 'ಮಾಲಿ' ದ್ವೀಪ ಸಮೂಹದ ಬರ್ಕೀನಾ-ಪಾಸಾದ ಹತ್ತಿ ಬೆಳೆಗಾರ ರೈತರು ನಿರ್ನಾಮವಾಗುತ್ತಿದ್ದಾರೆ. ಹೀಗೆ ಬಹುರಾಷ್ಟ್ರೀಯ ಕಂಪನಿಗಳ ಲಾಭಕ್ಕಾಗಿ ಜಗತ್ತಿನಾದ್ಯಂತ ಸಣ್ಣ ರೈತರ ವಿನಾಶ ನಡೆಯುತ್ತಿದೆ ಎಂಬುದಾಗಿ ಚರ್ಚಿಸಿದ್ದಾರೆ. ಈ ಕೃತಿಯಲ್ಲಿ ಪಿ. ಸಾಯಿನಾಥ್ ಅವರ ವಿಶ್ಲೇಷಣೆ ಹಲವು ಆಯಾಮವುಳ್ಳದ್ದು ಹಾಗೂ ಯಾವುದೋ ಒಂದು ಪ್ರದೇಶಕ್ಕೋ ಅಥವಾ ರಾಷ್ಟ್ರಕ್ಕೋ ಅನ್ವಯವಾಗದೇ ಅದರ (ಜಾಗತೀಕರಣ) ಪ್ರಭಾವವನ್ನು ಜಾಗತಿಕವಾಗಿಸಿದ್ದಾರೆ.

ಮೋಹನ್ ಕೃಷ್ಣ ರೈ ಅವರ 'ಕೆನರಾದ ವಿಭಜನೆ:ಹತ್ತಿ ಬಗೆಗಿನ ರಾಜಕೀಯ ವಿಶ್ಲೇಷಣೆ' ಎಂಬ ಕೃತಿಯು ಪ್ರಸ್ತುತ ಪ್ರಬಂಧದ ಸಂಶೋಧನಾ ವಿಶ್ಲೇಷಣೆಗೆ ಸಾಕಷ್ಟು ನೆರವನ್ನು ನೀಡುತ್ತದೆ. ಇದರಲ್ಲಿ ಹಲವು ವಿಚಾರಗಳನ್ನು ಆರ್ಥಿಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮೊದಲಿಗೆ ಬ್ರಿಟಿಷ್ ಸರ್ಕಾರ ಹತ್ತಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಹತ್ತಿ ರಾಜಕೀಯ ನಡೆಸಿದರೆ, ಪೋರ್ಚುಗೀಸರು ಕಾಳುಮೆಣಸಿನ ರಾಜಕೀಯ ನಡೆಸಿದರು ಎಂಬ ಹೇಳಿಕೆಯು ಯೂರೋಪಿನ ವಸಾಹತು ಮನಸ್ಥಿತಿಯನ್ನು ತಿಳಿಸುತ್ತದೆ. ಭಾರತದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸುವುದು ಬ್ರಿಟಿಷ್ ಸರ್ಕಾರದ ಉದ್ದೇಶವಾಗಿರಲಿಲ್ಲ. ಆದರೆ ಭಾರತ ಕೃಷಿ ದೇಶವಾಗಿಯೇ ಉಳಿಯಬೇಕೆನ್ನುವುದು ಇವರ ಧೋರಣೆಯಾಗಿತ್ತು. ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾದ ದೇಶಗಳಲ್ಲಿ ಬ್ರಿಟಿಷ್ ಸರ್ಕಾರ ಇದೇ ಬಗೆಯ ಧೋರಣೆಯನ್ನು ಹೊಂದಿತ್ತು. ಬ್ರಿಟನ್ನಿನ ಮಿಲ್ಲುಗಳಿಗೆ ಒಂದಲ್ಲ ಒಂದು ದೇಶದಿಂದ ನಿರಂತರವಾಗಿ ಕಚ್ಚಾವಸ್ತುಗಳು ಪೂರೈಕೆಯಾಗುತ್ತಿರಬೇಕು ಎನ್ನುವ ಸ್ವಾರ್ಥ ಈ ಧೋರಣೆಯಲ್ಲಿ

ಅಡಕವಾಗಿತ್ತು. ಹಾಗಾಗಿ ಈ ಯಾವ ದೇಶಗಳಲ್ಲೂ ಕೈಗಾರಿಕಾಭಿವೃದ್ಧಿಗೆ ಇಲ್ಲವೇ ನಗರಾಭಿವೃದ್ಧಿಗೆ ಬ್ರಿಟಿಷ್ ಸರ್ಕಾರ ಮುಂದಾಗಲಿಲ್ಲ. ಕೃಷಿಯನ್ನು ಕೈಗಾರಿಕೆಯ ಅಧೀನವನ್ನಾಗಿಸುವ ಹಾಗೂ ತಮ್ಮ ಅಭಿವೃದ್ಧಿಗೆ ಕೃಷಿಯನ್ನೇ ಅವಲಂಬಿಸುವ ಬ್ರಿಟಿಷ್ ಸರ್ಕಾರದ ಧೋರಣೆ ಸಂಕೀರ್ಣವಾದ ಹಾಗೂ ವಿರೋಧಾಬಾಸಗಳಿಂದ ಕೂಡಿದ್ದಾಗಿ ಕಂಡುಬರುತ್ತದೆ ಎಂಬುದಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಿದ್ದಾರೆ. ಮುಂದುವರೆದು ಯಾವುದೇ ಒಂದು ವ್ಯವಸ್ಥೆ ಹೇರಿಕೆಯ ರೂಪದಲ್ಲಿ ಬಂದಾಗ ಅದನ್ನು ಪ್ರತಿಭಟಿಸುವ ಸಾಮರ್ಥ್ಯವಾಗಲಿ ಅಥವಾ ಒಪ್ಪಿಕೊಳ್ಳುವ ಮನಸ್ಸಾಗಲೀ ಇಲ್ಲದೇ ಇದ್ದಾಗ ಅನಿವಾರ್ಯವಾಗಿ ತಮ್ಮದೇ ನೆಲದಲ್ಲಿ ಪರಕೀಯರಾಗುವ ಸ್ಥಿತಿ ಉಂಟಾಗುವುದು ಸಹಜ ಎಂದು ವಸಾಹತು ಧೋರಣೆಯನ್ನು ವಿಮರ್ಶೆಗೊಡ್ಡುವ ಪ್ರಯತ್ನ ಮಾಡಿದ್ದಾರೆ. ಈ ಗ್ರಂಥದಲ್ಲಿ ಹಿಡಿದಿಟ್ಟಿರುವ ಮತ್ತೊಂದು ಪ್ರಮುಖ ಚರ್ಚೆಯೆಂದರೆ ೧೮೬೨ರಲ್ಲಿ ಕೆನರಾವನ್ನು ಬ್ರಿಟಿಷರು ಉತ್ತರ ಕೆನರಾ ಮತ್ತುಯ ದಕ್ಷಿಣ ಕೆನರಾ ಎಂದು ವಿಭಜಿಸಿ, ಉತ್ತರ ಕೆನರಾ ಬಾಂಬೆ ಪ್ರೆಸಿಡೆನ್ಸಿಗೂ, ದಕ್ಷಿಣ ಕೆನರಾವನ್ನು ಮದ್ರಾಸು ಪ್ರೆಸಿಡೆನ್ಸಿಗೂ ಹರಿದು ಹಂಚಲು ಅದರ ಹಿಂದಿರುವ ಕಾರಣಗಳೇನು? ಅಮೆರಿಕಾದಲ್ಲಿ ಆಂತರಿಕ ಕಲಹ ಏರ್ಪಟ್ಟಾಗ; ಸಂಬಂಧವೇ ಇಲ್ಲದೇ ಹೋದರೂ ಭಾರತಕ್ಕೆ ಹೇಗೆ ಸಂಬಂಧ ಕಲ್ಪಿಸಿದರು ಹಾಗೂ ಇದರಿಂದ ಬ್ರಿಟಿಷರಿಗೆ ಆದ ಅನುಕೂಲಗಳೇನು? ಎಂಬುದನ್ನು ಹಿಡಿಯಾಗಿ ಚರ್ಚಿಸಿದೆ.

ಆ್ಯಡಂ ಸ್ಮಿತ್ (೧೭೨೩-೧೭೯೦)ನ 'ದ ವೆಲ್ತ್ ಆಫ್ ನೇಷನ್ಸ್'[೧೪] ಎಂಬ ಗ್ರಂಥದಲ್ಲಿ ಮಾರುಕಟ್ಟೆ, ಕಾರ್ಮಿಕರು, ದುಡಿಮೆ ಮತ್ತು ಬೆಲೆಗಳ ನಡುವಿನ ಸಂಬಂಧ, ಪೂರೈಕೆ ಮತ್ತು ಬೇಡಿಕೆ, ಹಣ ಹಾಗೂ ಮುಕ್ತ ವ್ಯಾಪಾರ ಕುರಿತಂತೆ ವಿಸ್ತೃತವಾಗಿ ಚರ್ಚಿಸಿದ್ದಾರೆ. ಈ ಗ್ರಂಥವು ಏಳು ಅಧ್ಯಾಯಗಳನ್ನು ಹೊಂದಿದ್ದು, ಮೊದಲನೆ ಅಧ್ಯಾಯ ಶ್ರಮ ವಿಭಜನೆ ಕುರಿತಂತೆ ಚರ್ಚಿಸಿದ್ದು, ಕಾರ್ಮಿಕರ ಶಕ್ತಿ, ನೈಪುಣ್ಯತೆ, ನಿರ್ಣಯ, ನಿರ್ದೇಶನ, ಅನ್ವಯಿಕತೆ ಕುರಿತ ಮಾಹಿತಿಯನ್ನು ಒಳಗೊಂಡಿದೆ. ಅಧ್ಯಾಯ ಮೂರರಲ್ಲಿ ಶ್ರಮ ವಿಭಜನೆಯು ಮಾರುಕಟ್ಟೆಯ ವಿಸ್ತರಣೆಯಿಂದ ಹೇಗೆ ಮಿತಿಗೊಳಪಡುತ್ತದೆ ಎಂಬುದನ್ನು ಚರ್ಚಿಸಿದ್ದಾರೆ. ಅಲ್ಲದೆ ಅಧ್ಯಾಯ ಐದರಲ್ಲಿ ವಸ್ತುಗಳ ನೈಜ ಬೆಲೆಯ ಬಗ್ಗೆ ಕುರಿತದ್ದಾಗಿದ್ದು, ಅಧ್ಯಾಯ ಏಳು ವಸ್ತುಗಳ ಸ್ವಾಭಾವಿಕ ಹಾಗೂ ಮಾರುಕಟ್ಟೆ ಬೆಲೆಯನ್ನು ಕುರಿತಂತೆ ಚರ್ಚಿಸುತ್ತದೆ.

ಮತ್ತೊಂದು ಗ್ರಂಥವು ಆ್ಯಂಡ್ರಿ ಯೂರ್ ಅವರ 'ದ ಫ್ಯಾಕ್ಟರಿ ಸಿಸ್ಟಮ್ ಆಫ್ ಪ್ರೊಡಕ್ಷನ್' ಎಂಬುದಾಗಿದ್ದು, ಇದು ಉತ್ಪಾದನೆಯ ತಾತ್ವಿಕತೆ ಕುರಿತಂತೆ ಚರ್ಚಿಸುವ ಗ್ರಂಥವಾಗಿದೆ. ಆ್ಯಂಡ್ರಿ ಯೂರ್ ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಆ ಸಮಾಜಕ್ಕೆ ಮುಖಾಮುಖಿ ಆಗಿರುವುದರಿಂದ ಈ ಗ್ರಂಥವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ಕ್ರಾಂತಿಯ ಪ್ರಭಾವ, ಪರಿಣಾಮ, ಕುರಿತಂತೆ ೧೮೩೫ರಲ್ಲಿಯೇ ರಚಿಸಿರುವುದರಿಂದ ಈ ಗ್ರಂಥ ಮಹತ್ವವೆನಿಸಿದೆ. ಇದು ಹತ್ತಿ ಗಿರಣಿಗಳು, ರೇಷ್ಮೆ ಗಿರಣಿಗಳು, ಉಣ್ಣೆ ಗಿರಣಿಗಳು ಹಾಗೂ ಇಂಜಿನಿಯರಿಂಗ್ ಕಾರ್ಖಾನೆಗಳ ಸಂಘಟನೆಗೆ ಸಂಬಂಧಪಟ್ಟಂತೆ, ಉತ್ಪಾದನೆಯ ಪದ್ಧತಿಗೆ ಸಂಬಂಧಿಸಿದಂತೆ ಅಧ್ಯಯನ ಮಾಡುತ್ತದೆ. ಆ್ಯಂಡ್ರಿ ಅವರು ಅನೇಕ ತಿಂಗಳುಗಳವರೆಗೆ ಇಂಗ್ಲೆಂಡಿನಾದ್ಯಂತ ಪ್ರವಾಸ ಕೈಗೊಂಡು ಕಾರ್ಮಿಕರನ್ನು ಸಂದರ್ಶಿಸಿ, ಅವರ ಮುಷ್ಕರಗಳ ವಿಚಾರವಾಗಿ, ಬೇಡಿಕೆಗಳ ವಿಷಯವಾಗಿ ಮಾಹಿತಿ ಸಂಗ್ರಹಿಸಿ ತಾತ್ವಿಕ ತಳಹದಿಯ ಮೇಲೆ ಈ ಗ್ರಂಥವನ್ನು ಕಟ್ಟಲು ಪ್ರಯತ್ನಿಸಿದ್ದಾರೆ. ಇವರು ಆ್ಯಡಂ ಸ್ಮಿತ್ ಅವರ ಅರ್ಥಶಾಸ್ತ್ರದ ಮೂಲ ತತ್ವಗಳನ್ನು ಪ್ರಶ್ನಿಸಿದ್ದಾರೆ.

ಜಾನ್ ಗಾಲಾಂಘರ್ ಮತ್ತು ರೊನಾಲ್ಡ್ ರಾಬಿನ್‌ಸನ್ ಅವರ 'ದ ಇಂಪೀರಿಯಲಿಸಮ್ ಆಫ್ ಫ್ರೀ ಟ್ರೇಡ್' ಎಂಬ ಗ್ರಂಥದ ಬಗ್ಗೆ ಒಂದು ಸಂಕ್ಷಿಪ್ತವಾದ ಸಮೀಕ್ಷೆ ಮಾಡಲಾಗಿದೆ. ಇವರು ಈ ಗ್ರಂಥದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಿರುವ ರೀತಿ ಉಬ್ಬೇರಿಸುವಂತದ್ದು. ಕೇವಲ 'ಅನೌಪಚಾರಿಕ ಸಾಮ್ರಾಜ್ಯ' ಸಾಧನದಿಂದ ೧೯ನೇ ಶತಮಾನದವರೆಗೆ ಬ್ರಿಟನ್ ಸಮುದ್ರದಾಚೆ ಅದರ ಅಧಿಕಾರ ಹಾಗೂ ಭೂ ಪ್ರದೇಶವನ್ನು ವಿಸ್ತರಿಸಿತು. ಇವರ ಪ್ರಕಾರ, ಇಂದು ನಾವು ಆರ್ಥಿಕ ವಿಚಾರವನ್ನು ಇಟ್ಟುಕೊಂಡು ಏನು ಟೀಕೆ ವಿಶ್ಲೇಷಣೆ ಮಾಡುತ್ತಿದ್ದೇವೆ ಹಾಗೂ ಸಾಮ್ರಾಜ್ಯಶಾಹಿ-ವಸಾಹತುಶಾಹಿ ಚರಿತ್ರೆಯ ಮೂಲಕ ಏನು ವ್ಯಾಖ್ಯಾನಿಸಲು ಹೊರಟಿದ್ದೇವೆಯೋ ಅವುಗಳೆಲ್ಲವೂ ಅಪ್ಪಟ ಸುಳ್ಳು. ೧೯ನೇ ಶತಮಾನದ ಬ್ರಿಟಿಷ್ ಚರಿತ್ರೆಯ ಬಹಳ ಮುಖ್ಯವಾದ ತಿರುವು ಏನೆಂದರೆ 'ಚರಿತ್ರೆಯೇ ಸಮಾಜವನ್ನು ವಿಸ್ತರಿಸಲು ಹೊರಟಿದ್ದು'. ಹೀಗಾಗಿ ಬಂಡವಾಳ ಹಾಗೂ ಉತ್ಪಾದನಾ ಸರಕುಗಳ ಆಮದು, ನಾಗರಿಕರ ವಲಸೆ, ಇಂಗ್ಲಿಷ್ ಭಾಷೆಯ ವಿಸ್ತರಣೆ, ಸಿದ್ಧಾಂತಗಳು ಹಾಗೂ ಸಾಂವಿಧಾನಿಕ ರಚನೆಗಳು ಇವೆಲ್ಲವುದರುಗಳಲ್ಲಿ ಬ್ರಿಟಿಷ್ ಪ್ರಜೆಗಳು ಪಾರಮ್ಯ ಸಾಧಿಸಿದ್ದರಿಂದ ಸಮುದ್ರದಾಚೆಗಿನ ಸಮಾಜವು ಕೂಡ ಇವರನ್ನು ಆಹ್ವಾನಿಸುತ್ತಿತ್ತು. ಹೀಗಾಗಿ ೧೮೧೨ ಹಾಗೂ ೧೯೧೪ರ ನಡುವೆ ಇಪ್ಪತ್ತು ಮಿಲಿಯನ್‌ಗೂ ಅಧಿಕ ಜನರು ಬ್ರಿಟಿಷ್

ದ್ವೀಪಗಳಿಂದ ವಲಸೆ ಹೋದರು. ಹೀಗೆ ಚರಿತ್ರೆಕಾರರು ತಮ್ಮ ಸಮರ್ಥನೆಯನ್ನು ಮುಂದುವರೆಸುತ್ತಾರೆ. ಇಲ್ಲಿ ಭಾರತದ ಪ್ರಸ್ತಾಪ ನೇರವಾಗಿ ತರದೇ ಹೋದರು. ಆ ಸಮರ್ಥನೆಯನ್ನು ಭಾರತ ಉಪಖಂಡ, ಏಷ್ಯಾ, ಆಫ್ರಿಕಾ ರಾಷ್ಟ್ರಗಳಿಗೂ ಅನ್ವಯಿಸಿ ನೋಡಲು ಸಾಧ್ಯವಿದೆ.

ಈ ಸಂದರ್ಭದಲ್ಲಿ ಸಮೀಕ್ಷೆ ಮಾಡಬೇಕಾದ ಮತ್ತೊಂದು ಗ್ರಂಥ ಕಾರ್ಲ್ ಮಾರ್ಕ್ಸ್ ಹಾಗೂ ಫ್ರೆಡರಿಕ್ ಏಂಗಲ್ಸ್ ಅವರ 'ಮ್ಯಾನಿಫೆಸ್ಟೋ ಆಫ್ ದ ಕಮ್ಯುನಿಸ್ಟ್ ಪಾರ್ಟಿ'. ಇದು ೧೮೪೮ರಲ್ಲಿ ಪ್ರಕಟಗೊಂಡು ನಂತರದ ದಿನಗಳಲ್ಲಿ ಪ್ರಪಂಚದ ಕಾರ್ಮಿಕರಿಗೆ ಒಂದು ಕ್ರಾಂತಿಕಾರಕ ಘೋಷಣೆಯಾಗಿ, ತಾತ್ವಿಕ ಹಾಗೂ ಸೈದ್ಧಾಂತಿಕ ಶಕ್ತಿಯಾಗಿ ಮಾರ್ಪಟ್ಟಿತು. ಮ್ಯಾನಿಫೆಸ್ಟೋ ವಿವಿಧ ಶೈಲಿಯಲ್ಲಿ ಪ್ರಾರಂಭದಲ್ಲಿ ಅಮೆರಿಕಾ ಹಾಗೂ ಫ್ರಾನ್ಸ್ ಕ್ರಾಂತಿಯ ಘೋಷಣೆಯಾಗಿ ಮೊಳಗಿ ನಂತರ ಇಡೀ ವಿಶ್ವವನ್ನೇ ವ್ಯಾಪಿಸಿತು. ಬೂರ್ಜ್ವಾ ಹಾಗೂ ಪ್ರೊಲಿಟೇರಿಯನ್ಸ್ (ಬಂಡವಾಳಶಾಹಿ ಹಾಗೂ ಕಾರ್ಮಿಕರು) ಎಂಬ ಪರಿಕಲ್ಪನೆಗಳನ್ನು ಕಾರ್ಲ್ ಮಾರ್ಕ್ಸ್ ಈ ಗ್ರಂಥದಲ್ಲಿ ಮೊದಲ ಬಾರಿಗೆ ಬಳಸಿದನು. ಫ್ರೆಂಚ್ ಭಾಷೆಯಲ್ಲಿ ಬೂರ್ಜ್ವಾ ಎಂದರೆ ನಗರವಾಸಿಯೆಂತಲೂ, ಪ್ರೊಲಿಟೇರಿಯನ್ ಎಂದರೆ ಒಬ್ಬನ ಸಂಪತ್ತು ವಂಶಪಾರಂಪರ್ಯವಾಗಿ ಕಾಪಾಡಿಕೊಂಡು ಬರುವುದು. ಏಂಗಲ್ಸ್ ಈ ಗ್ರಂಥದಲ್ಲಿ ಬೂರ್ಜ್ವಾವನ್ನು ಆಧುನಿಕ ಬಂಡವಾಳಶಾಹಿ ವರ್ಗ ಎಂಬುದಾಗಿ, ಸಾಮಾಜಿಕ ಉತ್ಪಾದನಾಂಗಗಳ ಮೂಲಕ ಹಾಗೂ ಕೂಲಿ ಕಾರ್ಮಿಕರ ಉದ್ಯೋಗದಾತ ಎಂಬುದಾಗಿ ತಿಳಿಸಿದ್ದಾನೆ. ಪ್ರೊಲಿಟೇರಿಯಟ್ ಅನ್ನು ಆಧುನಿಕ ಕೂಲಿ–ಕಾರ್ಮಿಕ ವರ್ಗ ಎಂದು; ತನ್ನದೇ ಆದ ಉತ್ಪಾದನಾಂಗ ಸಾಧನಗಳನ್ನು ಹೊಂದಿಲ್ಲದ, ಬೇಕೆಂದಾಗ ಇವರ ಸಂಖ್ಯೆಯನ್ನು ಕಡಿಮೆ ಮಾಡುವ ಅಥವಾ ಮಾರಾಟ ಮಾಡುವ (ಕಾರ್ಮಿಕರನ್ನು) ಅಧಿಕಾರವು ಬೂರ್ಜ್ವಾ ವರ್ಗಕ್ಕೆ ಇರುತ್ತದೆ ಎಂಬುದಾಗಿ ಈ ಗ್ರಂಥದಲ್ಲಿ ವ್ಯಾಖ್ಯಾನಿಸಿದ್ದಾನೆ. ಮುಂದುವರೆದು ಅಮೆರಿಕಾದ ಶೋಧನೆ, ಕೇಪ್ ಆಫ್‌ನ ಸುತ್ತಾಟದಿಂದ ಬೂರ್ಜ್ವಾಗಳ ಸಂಖ್ಯೆಯಲ್ಲಿ ಗಣನೀಯ ಪ್ರಮಾಣದ ಏರಿಕೆಯಾಗಿ ಅವರಿಗೆ ಮುಕ್ತವಾದ ಭೂಮಿಕೆಯನ್ನು ಒದಗಿಸಿಕೊಟ್ಟಿತು. ಈಸ್ಟ್–ಇಂಡಿಯನ್ ಹಾಗೂ ಚೈನಾದ ಮಾರುಕಟ್ಟೆಗಳು ಅಮೆರಿಕಾವನ್ನು ವಸಾಹತುಕರಣಕ್ಕೆ ಒಳಪಡಿಸಿದವು. ಇದರಿಂದ ಸಮುದ್ರಯಾನ, ವಸ್ತುಗಳ ಉತ್ಪಾದನೆಯಲ್ಲಿ ಹೆಚ್ಚಳ, ವಸಾಹತುಗಳೊಂದಿಗಿನ ವ್ಯಾಪಾರ, ವಿನಿಮಯ ಸಾಧನಗಳ

ಏರಿಕೆ, ವಾಣಿಜ್ಯ ಕೈಗಾರಿಕೆಗಳ ಬೆಳವಣಿಗೆಗೆ ಇಂಬನ್ನು ಕೊಟ್ಟಿತು. ಹೀಗೆ ಈ ಗ್ರಂಥದಲ್ಲಿ ಬಂಡವಾಳಶಾಹಿಗಳು ಹಾಗೂ ಕಾರ್ಮಿಕರನ್ನು ಕೇಂದ್ರವಾಗಿರಿಸಿಕೊಂಡು ಯೂರೋಪ್ ಸಮಾಜವನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಮಾರ್ಕ್ಸ್‌ನ ಪರಿಕಲ್ಪನೆಗಳಾದ ಬೂರ್ಜ್ವಾ, ಪ್ರೊಲಿಟೇರಿಯಟ್ ಹಾಗೂ ಶೊಷಣೆಗಳೆಲ್ಲವೂ ವಸಾಹತು ಕಾಲದ ಬೆಂಗಳೂರಿನ ಹತ್ತಿಗಿರಣಿಗಳ ಕಾರ್ಮಿಕರು ಹಾಗೂ ಮಾಲೀಕರಿಗೆ ಅನ್ವಯಿಸಿ ನೋಡುವುದಕ್ಕೆ ಸಾಧ್ಯತೆಗಳಿವೆ.

ಸಮೀಕ್ಷೆಗಾಗಿ ತೆಗೆದುಕೊಂಡ ಮತ್ತೊಂದು ಗ್ರಂಥ ಜವಾಹರಲಾಲ್ ನೆಹರೂ ಅವರ 'ದ ಡಿಸ್ಕವರಿ ಆಫ್ ಇಂಡಿಯಾ'. ಈ ಕೃತಿಯ ಪ್ರಾರಂಭದಲ್ಲಿ ಹೇಳಲೊರಟಿರುವ ವಿಚಾರವೆಂದರೆ, ಬ್ರಿಟಿಷರು ಭಾರತಕ್ಕೆ ಬಂದು ನೆಲೆ ನಿಲ್ಲಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿಯೇ ಸ್ಥಳೀಯರಿಂದ ಸೋಲನ್ನು ಒಪ್ಪಿಕೊಳ್ಳಬೇಕಾಗಿ ಬಂದಿತು. ಅದು ಹೈದರ್–ಟಿಪ್ಪು, ಮರಾಠರು, ಸಿಖ್ಖರು ಹಾಗೂ ಗೂರ್ಖರು ಹೀಗೆ ಎಲ್ಲರಿಂದಲೂ ಪರಾಭವಗೊಂಡಿದ್ದರು. ಅಲ್ಲದೇ ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮುಖ್ಯ ವ್ಯವಹಾರ, ಇಲ್ಲಿ ತಯಾರಾದ ಜವಳಿ ಬಟ್ಟೆಗಳು, ಸಾಂಬಾರು ಪದಾರ್ಥಗಳನ್ನು ಯೂರೋಪಿಗೆ ರಫ್ತು ಮಾಡುವುದಾಗಿತ್ತು. ಕ್ರಮೇಣ ಇದು ಯಾವ ಸ್ಥಿತಿಗೆ ಬಂದು ತಲುಪಿತ್ತೆಂದರೆ ಭಾರತದ ಜವಳಿ ಕೈಗಾರಿಕೆಗಳು, ಇಲ್ಲಿನ ಕರಕುಶಲ ಕರ್ಮಿಗಳು, ನೇಯ್ಗೆ ಮಾಡುವವರು ಎಲ್ಲರೂ ಅವನತಿಯ ಹಂತಕ್ಕೆ ಬಂದು ತಲುಪಿದರು. ಬ್ರಿಟಿಷರ ಆಳ್ವಿಕೆ ಕ್ರಮೇಣ ವಿಸ್ತರಣೆಯಾಗುತ್ತಿದ್ದಂತೆ, ರೈಲ್ವೆ ನಿರ್ಮಾಣಕ್ಕೆ ಕೈ ಹಾಕಿದರು. ೧೯ನೇ ಶತಮಾನದಲ್ಲಿ ಈ ಸಾಹಸವನ್ನು ಹಡಗು, ಹಡಗು ಕಟ್ಟೆಗಳ ನಿರ್ಮಾಣ, ಲೋಹದ ಕಾರ್ಖಾನೆಗಳು, ಗ್ಲಾಸ್, ಪೇಪರು ಹಾಗೂ ಇತರೆ ಕುಶಲತೆಗಳ ಕಡೆಗೆ ವಿಸ್ತರಿಸಿದ್ದರು. ಯಾವುದೇ ದೊಡ್ಡ ಕೈಗಾರಿಕೆಗಳು ಭಾರತದಲ್ಲಿ ಸ್ಥಾಪನೆಯಾಗಲಿಲ್ಲ. ಭಾರತದಲ್ಲಿ ಈ ತೆರನಾದ ವ್ಯಾಕ್ಯೂಂ ನಿರ್ಮಾಣ ಮಾಡಿದ ಬ್ರಿಟಿಷರು ಕೇವಲ ಸಿದ್ಧ ವಸ್ತುಗಳನ್ನು ಆಮದು ಮಾಡುವುದರ ಮೂಲಕ ಆ ಶೂನ್ಯ ಸ್ಥಳ (ವ್ಯಾಕ್ಯೂಂ)ವನ್ನು ಭರ್ತಿ ಮಾಡಿದರು. ಭಾರತವು ಬ್ರಿಟನ್ನಿನ ಕೈಗಾರಿಕೆಗಳಿಗೆ ವಸಾಹತು ಕೃಷಿ ಪ್ರಧಾನ ರಾಷ್ಟ್ರವಾಗಿ ನಿರ್ಮಾಣವಾಯಿತು. ಹೀಗೆ ನೆಹರೂ ತಮ್ಮ ಚರ್ಚೆಯನ್ನು ಮುಂದುವರೆಸಿದ್ದಾರೆ. ಬ್ರಿಟಿಷರ ದೋರಣೆ, ನೀತಿಗಳೆಲ್ಲವೂ ಅಖಂಡ ಭಾರತಕ್ಕೆ ಅನ್ವಯಿಸಿ ನೋಡುವಂತದ್ದು ಹೀಗಾಗಿ ಮೈಸೂರು ಸಂಸ್ಥಾನವು ಇದರಿಂದ ಹೊರತಾಗಿರಲಿಲ್ಲ.

ಅಧ್ಯಯನಗಳ ಸಮೀಕ್ಷೆಯ ಚೌಕಟ್ಟಿಗೆ ಹಾಗೂ ವಿಶ್ಲೇಷಣಾ ಮಾದರಿಗೆ ಬಹಳ ಹತ್ತಿರವಾದ ಕೃತಿ ಬಾರ್ನ್ ಹೆಟ್ನೆ ಅವರ 'ದ ಪೊಲಿಟಿಕಲ್ ಎಕಾನಮಿ ಆಫ್ ಇಂಡೈರೆಕ್ಟ್ ರೂಲ್ : ಮೈಸೂರು ೧೮೮೧-೧೯೪೭'. ಇದು ೧೯೭೮ರಲ್ಲಿ ಪ್ರಕಟಗೊಂಡ ಕೃತಿ. ಗೋಥೆನ್ ಬರ್ಗ್ ವಿಶ್ವವಿದ್ಯಾಲಯದ ಆರ್ಥಿಕ ಚರಿತ್ರಕಾರರಾದ ಹೆಟ್ನೆ ಅವರು ಈ ಗ್ರಂಥದಲ್ಲಿ ಅವರ ವಿಚಾರಗಳನ್ನು ಎರಡು ಪರಿಕಲ್ಪನೆಗಳ (ಸೈಬರ್‌ನೆಟಿಕ್ ಕಾನ್ಸೆಪ್ಟ್) ಮೂಲಕ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಸೈಬರ್‌ನೆಟಿಕ್ ಎಂದರೆ ಸಂಪರ್ಕ ಹಾಗೂ ನಿಯಂತ್ರಣ ಪ್ರಕ್ರಿಯೆ ಎಂಬ ಅರ್ಥವನ್ನು ನೀಡುತ್ತದೆ. ಮೊದಲನೆಯದು 'ಸ್ವಾಯತ್ತತೆ', (ಅಟಾನಮಿ) ಅದು ಕೇಂದ್ರ ವಸಾಹತು ಸರ್ಕಾರಕ್ಕೆ ಸಂಬಂಧಪಟ್ಟಿದ್ದುದಾಗಿದೆ. ಎರಡನೆಯದು 'ಪ್ರತಿಕ್ರಿಯಾತ್ಮಕತೆ' (ರೆಸ್ಪಾನ್ಸಿವ್‌ನೆಸ್), ಇದು ಸ್ಥಳೀಯ ಅಧಿಕಾರ ಸ್ಥಳೀಯ ಗುಂಪುಗಳಿಗೆ, ಎನ್ನುವ ಪರಿಕಲ್ಪನೆಯನ್ನೂ ಹೊಂದಿದೆ. ಮಹಾರಾಜರು ಹಾಗೂ ಕೇಂದ್ರ ವಸಾಹತು ಅಧಿಕಾರದ ನಡುವೆ ರಾಜಕೀಯ ಸ್ವಾಯತ್ತತೆಗಾಗಿ ನಡೆಯುವ ಜಾಣತನದ ಹೋರಾಟ ಎಂಬುದಾಗಿ ವಿಶ್ಲೇಷಿಸಿದ್ದಾರೆ. ಇವರು ೧೯೩೦ರ ನಂತರ ಬೆಂಗಳೂರಿನ ಕಾರ್ಮಿಕ ಚಳವಳಿಯು ರಾಷ್ಟ್ರೀಯ ಚಳವಳಿ ಹಾಗೂ ಕಾಂಗ್ರೆಸ್‌ನೊಂದಿಗೆ ಸಂಪೂರ್ಣ ಒಡನಾಟವನ್ನು ಹೊಂದಿತ್ತು ಎಂಬುದಾಗಿ ವಿಶ್ಲೇಷಿಸಿದ್ದಾರೆ.

ಧರ್ಮಕುಮಾರ್ ಅವರ ಸಂಪಾದಕತ್ವದಲ್ಲಿ ಬಂದ 'ದ ಕೇಂಬ್ರಿಡ್ಜ್ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ : ೧೭೫೦-೨೦೦೩' ಸಂ. ೨, ಎಂಬ ಗ್ರಂಥವು ಭಾರತದ ಭೂಮಿ ಮತ್ತು ಜನರು, ರೈತಾಪಿವರ್ಗ, ನೀರಾವರಿ ವ್ಯವಸ್ಥೆ, ಬೃಹತ್ ಕೈಗಾರಿಕೆಗಳು, ಹಣ ಮತ್ತು ಸಾಲ ವ್ಯವಸ್ಥೆ ಕುರಿತು ಭಿನ್ನ ನೆಲೆಗಳಲ್ಲಿ ಅಧ್ಯಯನ ಮಾಡಿರುವ ಲೇಖನಗಳಿವೆ. ಇದಲ್ಲದೇ ಆರ್. ಪಾಮೆ ದತ್ ಅವರ ಇಂಡಿಯಾ ಟುಡೇ (೧೯೪೯) ಎಂಬ ಕೃತಿಯು ಭಾರತದಲ್ಲಿ ಬ್ರಿಟಿಷರ ಆಳ್ವಿಕೆ, ಭಾರತದ ಮೇಲೆ ಮಾರ್ಕ್ಸ್ ತತ್ವಗಳ ಪ್ರಭಾವ, ಬ್ರಿಟಿಷರು ಭಾರತದ ಸಂಪತ್ತನ್ನು ದೋಚಿದ್ದು, ಕಾರ್ಮಿಕರ ಉದಯ ಹಾಗೂ ಸಮಾಜವಾದ, ಕಾರ್ಮಿಕ ಚಳವಳಿಯ ಏಳಿಗೆ ಮುಂತಾದ ಮಾಹಿತಿಯನ್ನು ನೀಡುತ್ತದೆ.

ತೀರ್ಥಂಕರರಾಯ್ ಅವರು ವಸಾಹತು ಭಾರತದ ಆರ್ಥಿಕತೆಯನ್ನು ಕುರಿತಂತೆ ಸಂಶೋಧನೆ ಮಾಡಿರುವ ಭಾರತದ ಪ್ರಮುಖ ಆರ್ಥಿಕ ಚರಿತ್ರೆಕಾರ. ಪ್ರಸ್ತುತ ಇವರು ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಅಂಡ್ ಪೊಲಿಟಿಕಲ್ ಸೈನ್ಸ್‌ನಲ್ಲಿ ಆರ್ಥಿಕ ಚರಿತ್ರೆಯನ್ನು ಬೋಧಿಸುತ್ತಿರುವ ಪ್ರಾಧ್ಯಾಪಕ. ಟ್ರೆಡಿಷನ್ ಇಂಡಸ್ಟ್ರಿ ಇನ್ ದ ಎಕನಾಮಿ ಆಫ್

ಕಲೋನಿಯಲ್ ಇಂಡಿಯಾ (೧೯೯೯), ರೀಥಿಂಕಿಂಗ್ ಎಕನಾಮಿಕ್ ಛೇಂಜ್ ಇನ್ ಇಂಡಿಯಾ, ೨೦೦೫, ದ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ೧೮೫೭–೧೯೪೭ (೨೦೦೦), ಇತ್ಯಾದಿ ಉಪಯುಕ್ತ ಗ್ರಂಥಗಳನ್ನು ರಚಿಸಿದ್ದು ಅವುಗಳೆಲ್ಲವೂ ವಸಾಹತು ಕಾಲದ ಅರ್ಥ ವ್ಯವಸ್ಥೆಯನ್ನು ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸುವ ಕೃತಿಗಳಾಗಿವೆ.

ಇಲ್ಲಿ ಇವರ ಗ್ರಂಥವಾದ 'ದ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ೧೮೫೭–೧೯೪೭' ಎಂಬುದನ್ನು ಸಮೀಕ್ಷೆಗಾಗಿ ಕೈಗೆತ್ತಿಕೊಳ್ಳಲಾಗಿದೆ. ಈ ಗ್ರಂಥದಲ್ಲಿ ವಸಾಹತು ಭಾರತದಲ್ಲಿ ಆರ್ಥಿಕ ಬದಲಾವಣೆಯು ಕೇವಲ ವಸಾಹತುವಾದದ ಮೇಲೆ ಅವಲಂಬನೆಯಾಗದೆ ಇನ್ನಿತರ ಅಂಶಗಳಾದ ಭಾರತದ ಭೌಗೋಳಿಕತೆ, ಪರಿಸರ, ಖಾಸಗಿ ಲೆಕ್ಕಾಚಾರಗಳು, ಸಂಸ್ಕೃತಿ ಹಾಗೂ ವಿಶ್ವ ಮಾರುಕಟ್ಟೆಯೂ ಸಹ ಈ ಬದಲಾವಣೆಗೆ ಪಾಲುದಾರರು ಎಂಬುದಾಗಿ ವಿಶ್ಲೇಷಿಸಿದ್ದಾರೆ. ೧೭೫೭–೧೮೫೭ರ ಒಂದು ಶತಮಾನದ ಅವಧಿಯಲ್ಲಿ ವಸಾಹತುಶಾಹಿಯ ಸ್ಥಿತ್ಯಂತರ, ೧೮೫೭–೧೯೪೭ರ ಬೆಳವಣಿಗೆ ಹಾಗೂ ರಚನಾತ್ಮಕ ಬದಲಾವಣೆ, ಜಾಗತೀಕರಣ ಹಾಗೂ ವ್ಯಾಪಾರದ ವಿಧಾನಗಳು, ಉಳಿತಾಯ ಹಾಗೂ ಹೂಡಿಕೆ, ಸಣ್ಣ ಹಾಗೂ ದೊಡ್ಡ ಪ್ರಮಾಣದ ಕೈಗಾರಿಕೆಗಳು (ಹತ್ತಿಗಿರಣಿಗಳನ್ನೂ ಒಳಗೊಂಡಂತೆ), ಜನಸಂಖ್ಯೆ ಹಾಗೂ ಕಾರ್ಮಿಕರು ಹೀಗೆ ವಿವಿಧ ಆಯಾಮಗಳಿಂದ ವಸಾಹತು ಭಾರತದ ಆರ್ಥಿಕತೆಯನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ.

ಇತ್ತೀಚಿನ (೨೦೦೮) ಮತ್ತೊಂದು ಕೃತಿ ಶ್ರೀಧರ ನಾರಾಯಣ್ ಪಾಂಡೆ ಅವರ 'ಎಕನಾಮಿಕ್ ಹಿಸ್ಟರಿ ಆಫ್ ಮಾಡರ್ನ್ ಇಂಡಿಯಾ ೧೭೫೭–೧೯೪೭' ಇದರಲ್ಲಿ ವಸಾಹತು ಆಳ್ವಿಕೆಯಲ್ಲಿ ಭಾರತದ ಭೂಪ್ರದೇಶ, ಕೃಷಿ, ಕೈಗಾರಿಕೆ, ಸಂಪರ್ಕ ಹಾಗೂ ವ್ಯಾಪಾರವು ಗಮನಾರ್ಹವಾದ ಬದಲಾವಣೆಗೆ ಒಳಗಾಯಿತು ಎಂಬುದಾಗಿ ವಿಶ್ಲೇಷಿಸಿದ್ದಾರೆ. ಭಾರತದಿಂದ ಇಂಗ್ಲೆಂಡಿಗೆ ಸಂಪತ್ತು ಹಾಗೂ ಸಂಪನ್ಮೂಲ (ಡ್ರೈನ್) ಹರಿದ ಬಗೆಯನ್ನು ಒಂದು ಆರ್ಥಿಕ ಪ್ರಕ್ರಿಯೆಯೊಳಗೆ ಚಿತ್ರಿಸಿದ್ದಾರೆ. ರಾಷ್ಟ್ರೀಯವಾದಿ ಚಿಂತಕರಾದ ಆರ್.ಸಿ. ದತ್‌ರ ದ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ಅಂಡರ್ ಅರ್ಲಿ ಬ್ರಿಟಿಷ್ ರೂಲ್ ಮತ್ತು ದ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ಇನ್ ದ ವಿಕ್ಟೋರಿಯನ್ ಏಜ್ (೧೯೦೧), ದಾದಾಬಾಯಿ ನವರೋಜಿ ಅವರ ಪಾವರ್ಟಿ ಅಂಡ್ ಅನ್–ಬ್ರಿಟಿಷ್ ರೂಲ್, ಪಾಶ್ಚಿಮಾತ್ಯ ಚಿಂತಕ ವಿಲಿಯಂ ದಿಗ್ಬಿ ಅವರ ಪ್ರಾಸ್ಪರಸ್ ಬ್ರಿಟಿಷ್ ಇಂಡಿಯಾ, ಆರ್.ಪಿ. ದತ್ ಅವರ ಇಂಡಿಯಾ ಟುಡೇ (೧೯೪೬) ಇತ್ಯಾದಿ ಗ್ರಂಥಗಳನ್ನು ಮುಖಾಮುಖಿಯಾಗಿಸಿದ್ದಾರೆ.

ಇತ್ತೀಚೆಗೆ ಮುದ್ರಣಗೊಂಡ ಮತ್ತೊಂದು ಕೃತಿ 'ಎಕನಾಮಿಕ್ ಇಂಪ್ಯಾಕ್ಟ್ ಆಫ್ ಕಲೋನಿಯಲ್ ರೂಲ್ ಇನ್ ಇಂಡಿಯಾ' (೨೦೧೧) ಇದನ್ನು ಮಹೇಶ್ ವಿಕ್ರಂಸಿಂಗ್ ಹಾಗೂ ಬ್ರಿಜ್ ಭೂಷಣ್ ಶ್ರೀವಾಸ್ತವ ಅವರು ರಚಿಸಿದ್ದಾರೆ. ಈ ಗ್ರಂಥದ ಮುನ್ನುಡಿಯನ್ನು ಬಿಪನ್ ಚಂದ್ರ ಅವರು ಬರೆದಿದ್ದು ಪ್ರಾಚೀನ ಕಾಲದ ಚರಿತ್ರೆಯನ್ನು ಸಂಶೋಧನೆ ಮಾಡುವ ಸಂದರ್ಭದಲ್ಲಿ ೭೦ ವರ್ಷಗಳ ಹಿಂದೆ ಅಮೆರಿಕಾದ ವಿಜ್ಞಾನಿಗಳಿಂದ ಬಳಕೆಯಾದ (ಪ್ರಥಮ ಬಾರಿಗೆ) ಕಾರ್ಬನ್ ೧೪ ಅಥವಾ ರೆಡಿಯೋ ಕಾರ್ಬನ್ ಡೇಟಿಂಗ್ ವಿಧಾನ ಉಂಟುಮಾಡಿದ ಕ್ರಾಂತಿ, ವಿವಿಧ ದೇಶಗಳಲ್ಲಿ ಅದರ ಬಳಕೆ, ಭಾರತಕ್ಕೆ ಸಂಬಂಧಪಟ್ಟಂತೆ ಸಿಂದೂ ಬಯಲಿನ ನಾಗರಿಕತೆಯ ಅನ್ವೇಷಣೆಗೆ ಅದರಿಂದಾದ ಉಪಯೋಗದ ಬಗ್ಗೆ ಚರ್ಚಿಸಿದ್ದಾರೆ.

ಈ ಗ್ರಂಥದ ಎರಡನೆಯ ಅಧ್ಯಾಯದಲ್ಲಿ ಸಂಪತ್ತಿನ ಸೋರಿಕೆಯ ಸಿದ್ಧಾಂತ ಕುರಿತಂತೆ ಚರ್ಚಿಸಿದ್ದಾರೆ. ದಾದಾಬಾಯಿ ನವರೋಜಿ, ಎಂ.ಜಿ. ರಾನಡೆ, ಆರ್.ಸಿ. ದತ್ ಮತ್ತು ವಿಲಿಯಂ ದಿಗ್ಬಿ ಅವರ ವಿಚಾರಗಳು ಹಾಗೂ ಜಿ.ವಿ. ಜೋಶಿ, ಜಿ. ಸುಬ್ರಮಣಿಯ ಅಯ್ಯರ್, ಜಿ.ಕೆ. ಗೋಕಲೆ, ಪೃಥ್ವೀಶ್ ಚಂದ್ರ ರೇ ಅವರ ಆರ್ಥಿಕ ವಿಚಾರಗಳನ್ನು ವಿಶ್ಲೇಷಣೆಗೊಳಪಡಿಸಿದ್ದಾರೆ. ಸಂಪತ್ತಿನ ಸೋರಿಕೆಯ ಬಗ್ಗೆ, ಮಾರ್ಕ್ಸ್‌ವಾದಿ ಚಿಂತಕರ ಟೀಕೆಗಳ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಮುಂದುವರೆದು ಇವರು ೧೮ ಹಾಗೂ ೧೯ನೇ ಶತಮಾನಗಳಲ್ಲಿ ಭಾರತದ ಕೈಗಾರಿಕೆಗಳ ಅವನತಿಯ ಬಗ್ಗೆ ಚರ್ಚಿಸಿದ್ದಾರೆ. ಅಲ್ಲದೆ ವಸಾಹತು ಲೆಗಸಿ ಕುರಿತಂತೆ ಇರುವ ಮಿಥ್ಯೆ ಹಾಗೂ ಜನಪ್ರಿಯ ನಂಬುಗೆಗಳ (ಪಾಪ್ಯುಲರ್ ಬಿಲೀಫ್ಸ್) ಬಗ್ಗೆಯೂ ಚರ್ಚಿಸಿದ್ದಾರೆ.

ಇವುಗಳಲ್ಲದೆ ಕರ್ನಾಟಕದಲ್ಲಿ ಹತ್ತಿ ಗಿರಣಿ ಕುರಿತಂತೆ ಕೆಲವು ಸಂಶೋಧನೆಗಳಾಗಿವೆ. ಮೊದಲಿಗೆ ದಾವಣಗೆರೆಯ ಹತ್ತಿ ಗಿರಣಿಗಳ ಕಾರ್ಮಿಕ ಚಳವಳಿ ಕುರಿತಂತೆ ಬಿ.ಪಿ. ಕುಮಾರ್ ಅವರು ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಕೈಗೊಂಡು ೨೦೦೬ರಲ್ಲಿ ಪಿಹೆಚ್.ಡಿ. ಪ್ರಬಂಧವನ್ನು ಸಲ್ಲಿಸಿರುವರು. ಗುಲಬರ್ಗಾದ ಎಂ.ಎಸ್.ಕೆ. ಮಿಲ್ ಕುರಿತಂತೆ ಮಹೇಶ್‌ಕುಮಾರ ಎಸ್. ಸಂಕನೂರು ಅವರು ಇದೇ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ನಿಬಂಧವನ್ನು ೨೦೦೬ರಲ್ಲಿ ಸಲ್ಲಿಸಿದ್ದಾರೆ. ಇವೆರಡು ಆಯಾ ಪ್ರದೇಶದ ಹತ್ತಿ ಗಿರಣಿಗಳು ಹಾಗೂ ಕಾರ್ಮಿಕರ ಕುರಿತು ಮಾಹಿತಿಯನ್ನು ಒದಗಿಸುತ್ತವೆ.

ಇಷ್ಟಲ್ಲದೇ ಇನ್ನೂ ಹಲವು ಗ್ರಂಥಗಳನ್ನು ಗಂಭೀರವಾಗಿ ಅಲ್ಲದಿದ್ದರೂ, ಪಕ್ಷಿನೋಟದ ಮೂಲಕ ಸಮೀಕ್ಷೆ ಮಾಡಲಾಗಿದೆ. ಓ. ತಂಕಪ್ಪನ್ ಅವರ ಲೇಬರ್ ರಿಲೇಷನ್ಸ್ ಇನ್ ಎ ಸೌಥ್ ಇಂಡಿಯನ್ ಟೆಕ್ಸ್‌ಟೈಲ್ಸ್ ಮಿಲ್, ಬಿ.ಎನ್. ಪೊನೊಮಾರೆವ್ ಅವರ ಸಂಪಾದಕತ್ವದ ದ ಇಂಟರ್ ನ್ಯಾಷನಲ್ ವರ್ಕಿಂಗ್ ಕ್ಲಾಸ್ ಮೂವ್‌ಮೆಂಟ್ ಸಂ. ೩, ಬಿಪನ್ ಚಂದ್ರ ಅವರ ದ ರೈಸ್ ಅಂಡ್ ಗ್ರೊಥ್ ಆಫ್ ಎಕನಾಮಿಕ್ ನ್ಯಾಷನಾಲಿಸಮ್ ಇನ್ ಇಂಡಿಯಾ, ಕೆ.ಎಸ್. ಚೌದರಿ ಅವರ ದ ಎಕನಾಮಿಕ್ ಡೆವೆಲಪ್‌ಮೆಂಟ್ ಆಫ್ ಇಂಡಿಯಾ ಅಂಡರ್ ದ ಈಸ್ಟ್ ಇಂಡಿಯಾ ಕಂಪನಿ, ಆರ್.ಡಿ. ಚಾಕ್ಸಿ ಅವರ ಎಕನಾಮಿಕ್ ಹಿಸ್ಟರಿ ಆಫ್ ಡೆಕ್ಕನ್ ಅಂಡ್ ಕರ್ನಾಟಕ, ಡಿ.ಆರ್. ಗಾಡ್‌ಗಿಲ್ ಅವರ ದ ಇಂಡಸ್ಟ್ರಿಯಲ್ ಎವಲ್ಯೂಷನ್ ಆಫ್ ಇಂಡಿಯಾ ಇನ್ ರೀಸೆಂಟ್ ಟೈಮ್ಸ್, ಎಂ.ಡಿ. ಮೋರಿಸ್ ಅವರ ಟುವರ್ಡ್ಸ್ ಎ ರೀ-ಇಂಟರ್‌ಪ್ರಿಟೇಷನ್ ಆಫ್ ದ ನೈಂಟೀತ್ ಸೆಂಚುರಿ ಇಂಡಿಯನ್ ಎಕನಾಮಿಕ್ ಹಿಸ್ಟರಿ, ದಾದಾಬಾಯಿ ನವರೋಜಿ ಅವರ ಪಾವರ್ಟಿ ಅಂಡ್ ಅನ್ ಬ್ರಿಟಿಷ್ ರೂಲ್ ಇನ್ ಇಂಡಿಯಾ, ಎಂ.ಜಿ. ರಾನಡೆ ಅವರ ಎಸ್ಸೇಸ್ ಆನ್ ಇಂಡಿಯನ್ ಎಕನಾಮಿಕ್ಸ್, ಪೃಥ್ವೀಶ್‌ಚಂದ್ರ ರೇ ಅವರ ಇಂಡಿಯಾಸ್ ಫಾರಿನ್ ಟ್ರೇಡ್ ಸಿನ್ಸ್ ೧೮೭೦, ಎಸ್.ಎಂ. ರತ್ನಾಗುರ್ ಅವರ ಬಾಂಬೆ ಇಂಡಸ್ಟ್ರೀಸ್: ದ ಕಾಟನ್ ಮಿಲ್ಸ್, ವಿ. ಆನ್‌ಸ್ಟೀವ್ ಅವರ ದ ಎಕನಾಮಿಕ್ ಡೆವೆಲಪ್‌ಮೆಂಟ್ ಇನ್ ಇಂಡಿಯಾ, ಎರಿಕ್ ಜೆ. ಹಾಬ್ಸ್‌ಬಾಮ್ ಅವರ ದ ಏಜ್ ಆಫ್ ಕ್ಯಾಪಿಟಲ್:೧೮೪೮-೧೮೭೫, ಫ್ರಾನ್ಸೈನ್ ಆರ್. ಫ್ರಾಂಕೆಲ್ ಅವರ ಇಂಡಿಯಾಸ್ ಪೊಲಿಟಿಕಲ್ ಎಕಾನಮಿ ೧೯೪೭-೨೦೦೪: ದ ಗ್ರ್ಯಾಜುಯಲ್ ರೆವೆಲ್ಯೂಷನ್, ರವೀಂದ್ರ ಚಂದ್ರರಾಯ್ ಅವರ ಕಲೋನಿಯಲ್ ಎಕಾನಮಿ : ನ್ಯಾಷನಲಿಸ್ಟ್ ರೆಸ್ಪಾನ್ಸ್ – ಎ ಸ್ಟಡಿ ಇನ್ ದ ಹಿಸ್ಟಾರಿಕಲ್ ರೂಟ್ಸ್ ಆಫ್ ಎಕನಾಮಿಕ್ ಪ್ಲಾನಿಂಗ್ ಇನ್ ಇಂಡಿಯಾ, ಸಿಬ ಪ್ರಸಂದ್ ನಂದಾ ಅವರ ಎಕನಾಮಿಕ್ ಅಂಡ್ ಸೋಷಿಯಲ್ ಹಿಸ್ಟರಿ ಆಫ್ ಮಾಡರ್ನ್ ಇಂಡಿಯಾ ೧೭೫೭-೧೯೪೭, ಮೈಕಲ್ ಬುರ್ಜ್ ಮ್ಯಾಕ್‌ಆಲ್ಪಿನ್ ಅವರ ದ ಇಂಪ್ಯಾಕ್ಟ್ ಆಫ್ ರೈಲ್‌ರೋಡ್ ಆನ್ ಅಗ್ರಿಕಲ್ಚರ್ ಇನ್ ಇಂಡಿಯಾ ೧೮೬೦-೧೯೦೦: ಎ ಕೇಸ್ ಸ್ಟಡಿ ಆಫ್ ಕಾಟನ್ ಕಲ್ಟಿವೇಷನ್, ಸಂಜಯ್ ಸುಬ್ರಮಣಿಯಮ್ ಅವರ ದ ಪೊಲಿಟಿಕಲ್ ಎಕಾನಮಿ ಆಫ್ ಕಾಮರ್ಸ್: ಸೌಥ್ ಇಂಡಿಯಾ ೧೫೦೦-೧೬೫೦, ಎ. ಸತ್ಯನಾರಾಯಣ ಅವರ ಎಕನಾಮಿಕ್ ಹಿಸ್ಟರಿ ಆಫ್ ಕರ್ನಾಟಕ ಡ್ಯೂರಿಂಗ್ ದ ಪ್ರಿ-ಕಲೋನಿಯಲ್ ಟೈಮ್ಸ್ ವಿಥ್ ಸ್ಪೆಷಲ್ ರೆಫರೆನ್ಸ್ ಟು ದ ಅರ್ಲಿ ಒಡೆಯರ್ಸ್

ಆಫ್ ಮೈಸೂರ್, ಎಂ. ಎಚ್. ಗೋಪಾಲ್ ಅವರ ಬ್ರಿಟಿಷ್ ಸೋರ್ಸಸ್ ಆಫ್ ದ ಮೈಸೂರ್ ಸ್ಟೇಟ್ ೧೮೯೯-೧೮೮೧, ಟಿ. ಬಿ. ದೇಸಾಯಿ ಅವರ ಎಕನಾಮಿಕ್ ಹಿಸ್ಟರಿ ಆಫ್ ಇಂಡಿಯಾ ಅಂಡರ್ ದ ಬ್ರಿಟಿಷ್ ೧೭೫೭-೧೯೪೭, ದೀಪೇಶ್ ಚಕ್ರವರ್ತಿ ಅವರ ರೀ-ಥಿಂಕಿಂಗ್ ವರ್ಕಿಂಗ್ ಕ್ಲಾಸ್ ಹಿಸ್ಟರಿ : ಬೆಂಗಾಲ್ ೧೮೯೦-೧೯೪೦, ಬಿ.ಆರ್. ಟಾಮ್ಲಿನ್‌ಸನ್ ಅವರ ದ ಎಕಾನಮಿ ಆಫ್ ಮಾಡರ್ನ್ ಇಂಡಿಯಾ ೧೮೬೦-೧೯೭೦, ಬಿಶ್ನು ಪ್ರಿಯ ಗುಪ್ತ ಅವರ ಡಿಸ್ಕ್ರಿಮಿನೇಷನ್ ಆರ್ ಸೋಷಿಯಲ್ ನೆಟ್‌ವರ್ಕ್, ಇಂಡಸ್ಟ್ರಿಯಲ್ ಇನ್ವೆಸ್ಟ್‌ಮೆಂಟ್ ಇನ್ ಕಲೋನಿಯಲ್ ಇಂಡಿಯಾ, ಅವರದೇ ವೇಜಸ್ ಯೂನಿಯನ್ಸ್ ಅಂಡ್ ಲೇಬರ್ ಪ್ರೊಡಕ್ಟಿವಿಟಿ : ಎವಿಡೆನ್ಸ್ ಫ್ರಮ್ ಇಂಡಿಯನ್ ಕಾಟನ್ ಮಿಲ್ಸ್, ಡೇವಿಡ್ ಕ್ಲಿಂಗಿಂಗ್ ಸ್ಮಿತ್ ಮತ್ತು ವಿಲಿಯಂ ಜಿ. ಜೆಫ್ರಿ ಅವರ ಇಂಡಿಯಾಸ್ ಡಿ-ಇಂಡಸ್ಟ್ರಿಯಲೈಜೇಷನ್ ಇನ್ ದ ಎಯ್ಟೀಂತ್ ಅಂಡ್ ನೈಂಟೀಂತ್ ಸೆಂಚುರೀಸ್ ಹೀಗೆ ಕೆಲವು ಗ್ರಂಥಗಳ ಸಂಕ್ಷಿಪ್ತ ಸಮೀಕ್ಷೆಯಿಂದ ಈ ಪಿಎಚ್.ಡಿ. ಪ್ರಬಂಧಕ್ಕೆ ಒಂದು ಸ್ವರೂಪವನ್ನು ಕೊಡಲು ಪ್ರಯತ್ನಿಸಲಾಗಿದೆ.

## ಕೊನೆ ಟಿಪ್ಪಣಿ

೧. ಮೋಹನ್‌ಕೃಷ್ಣ ರೈ ಅವರು ತಮ್ಮ ಲೇಖನವಾದ *'ಚರಿತ್ರೆ ಬರವಣಿಗೆಯಲ್ಲಿ ಮಾನವ ಹಾಗೂ ಚರಿತ್ರೆಕಾರನ ಮನಸ್ಸು ಕೇಂದ್ರಿತ ನಿರೂಪಣೆಗಳು'* ಎಂಬುದರಲ್ಲಿ ವಿಮರ್ಶೆ, ತಾತ್ವಿಕತೆ, ಗ್ರಹಿಕೆ, ದೃಷ್ಟಿಕೋನ, ಸೈದ್ಧಾಂತಿಕತೆ ಮುಂತಾದ ಪದಗಳು ಇಂದು ಚರಿತ್ರೆ ಅಧ್ಯಯನದಲ್ಲಿ ಸಾಕಷ್ಟು ಬಳಕೆಯಾಗುತ್ತಿವೆ. ಚರಿತ್ರೆಯನ್ನು ಮರು ರಚಿಸುವ ಪ್ರಯತ್ನಗಳು ನಡೆಯುವಾಗ ಈ ಎಲ್ಲಾ ಪದಗಳು ವಿಶೇಷವಾದ ಅರ್ಥವನ್ನು ಪಡೆದುಕೊಳ್ಳುತ್ತವೆ ಎಂಬುದಾಗಿ ಉಲ್ಲೇಖಿಸಿದ್ದಾರೆ.

೨. ಮೋಹನ್‌ಕೃಷ್ಣ ರೈ ಅವರು ತಮ್ಮ ಗ್ರಂಥವಾದ *'ತುಳುನಾಡು ಕನ್ನಡ ನುಡಿ'*ಯುಲ್ಲಿ ಚರಿತ್ರೆಯನ್ನು ಗತದ ವ್ಯಾಖ್ಯಾನದಿಂದ ಹೊರತೆಗೆದು ಚರಿತ್ರೆಯಲ್ಲಿ ಜೀವಂತಿಕೆಯನ್ನು ಹಾಗೂ ನಿರಂತರತೆಯನ್ನು ಕಾಣುವುದೇ ವರ್ತಮಾನದ ಕಥನದ ಉದ್ದೇಶವಾಗಿದೆ. ಈ ಬಗೆಯ ಸ್ಪಷ್ಟ ದೃಷ್ಟಿಕೋನ ಇಲ್ಲದೇ ಇದ್ದಾಗ ಚರಿತ್ರೆಯನ್ನು ಸೀಮಿತ ನೆಲೆಗೆ ಕೊಂಡೊಯ್ಯುವ ಹಾಗೂ ಚರಿತ್ರೆಯನ್ನು ಕೇವಲ ವರ್ತಮಾನದ ಉದ್ದೇಶ ಈಡೇರಿಕೆಗೆ ಸಾಧನವಾಗಿ ಬಳಸುವ ಪ್ರಯತ್ನಗಳಷ್ಟೇ ನಡೆಯಲು ಸಾಧ್ಯ. ಚರಿತ್ರೆ ವ್ಯಾಖ್ಯಾನಗೊಳ್ಳಬೇಕಾಗಿರುವುದು ಹಾಗೂ ಪುನಾರಚನೆಗೊಳ್ಳಬೇಕಾಗಿರುವುದು ವರ್ತಮಾನದಲ್ಲಿಯೇ. ಈ ಧಾಟಿಯಲ್ಲಿ ಚರಿತ್ರೆಯ ಇಂದಿನ ಓದುವ ಕ್ರಮವನ್ನು ವಿಶ್ಲೇಷಿಸಿದ್ದಾರೆ.

೩. ಮರ್ಕಂಟಿಲಿಸಮ್ ಅಂದರೆ ವ್ಯಾಪಾರ ಮತ್ತು ಕೈಗಾರಿಕೆಯನ್ನು ಒಳಗೊಂಡಂತೆ ಆರ್ಥಿಕ ವ್ಯವಹಾರಗಳು, ಚಟುವಟಿಕೆಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಡುವುದು.

೪. ಸ್ಟೈನ್ ಜೆ., *ಎ ಹಿಸ್ಟರಿ ಆಫ್ ವರ್ಲ್ಡ್ ಸಿವಿಲೈಜೇಷನ್*, ಪು.ಸಂ. ೪೦೬.

೫. ಅದೇ, ಪುಟ ಸಂಖ್ಯೆ ೪೦೮.

೬. ಹೇಯ್ಸ್ ಜೆ.ಹೆಚ್., *ಕಾಂಟೆಂಪರರಿ ಯೂರೋಪ್ ಸಿನ್ಸ್ ೧೮೭೦*, ಪು. ಸಂ. ೦೭.

೭. ಆ್ಯಂಡ್ರಿ ಯೂರ್, *ಫ್ಯಾಕ್ಟರಿ ಸಿಸ್ಟಮ್ ಆಫ್ ಪ್ರೊಡಕ್ಷನ್*, ಪೂರ್ಣ ಗ್ರಂಥವನ್ನು ಪರಾಮರ್ಶಿಸಿ ಅದರ ವಸ್ತು ವಿಷಯವನ್ನು ಪ್ರಸ್ತಾಪಿಸಲಾಗಿದೆ.

೮. ದೇಸಾಯಿ ಎ.ಆರ್., *ಸೋಶಿಯಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಾಲಿಸಮ್* ಗ್ರಂಥದ ಮುನ್ನುಡಿಯನ್ನು ನೋಡಿ.

೯. ದೇಸಾಯಿ ಎ.ಆರ್., ಅವರ *ಸೋಶಿಯಲ್ ಬ್ಯಾಕ್‌ಗ್ರೌಂಡ್ ಆಫ್ ಇಂಡಿಯನ್ ನ್ಯಾಷನಾಲಿಸಮ್* ಗ್ರಂಥವನ್ನು ಪರಾಮರ್ಶಿಸಿ ಅದರ ತಿರುಳನ್ನು ಪ್ರಸ್ತಾಪಿಸಲಾಗಿದೆ.

೧೦. ಈ ಕುರಿತು ಹೆಚ್ಚಿನ ವಿಶ್ಲೇಷಣಾ ಮಾಹಿತಿಗಾಗಿ ಮೋಹನ್‌ಕೃಷ್ಣ ರೈ ಅವರ *'ಕೆನರಾದ ವಿಭಜನೆ–ಹತ್ತಿ ಬಗೆಗಿನ ರಾಜಕೀಯ ವಿಶ್ಲೇಷಣೆ'* ಗ್ರಂಥವನ್ನು ಅಧ್ಯಯನ ಮಾಡಬಹುದು. ಹತ್ತಿ ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಕೆನರಾವು ಉದ್ದೇಶಪೂರ್ವಕವಾಗಿ ಬ್ರಿಟಿಷರ ಸ್ವಾರ್ಥ ಧೋರಣೆಯಿಂದ ಹೇಗೆ ಉತ್ತರ ಹಾಗೂ ದಕ್ಷಿಣ ಕೆನರಾ ಎಂಬುದಾಗಿ ವಿಭಜನೆ ಹೊಂದಿ ಸದಾಶಿವಘಡ ಬಂದರು ಈಗ ಒಂದು ಕುಗ್ರಾಮವಾಗಿ ಅವನತಿ ಹೊಂದಿದ ಬಗೆಯನ್ನು ಎಳೆಎಳೆಯಾಗಿ ಚರ್ಚಿಸಿದ್ದಾರೆ.

೧೧. ಕಾರ್ಲ್‌ಟನ್ ಹೇಯ್ಸ್ ಜೆ.ಹೆಚ್., *ಕಾಂಟೆಂಪರರಿ ಯೂರೋಪ್ ಸಿನ್ಸ್ ೧೮೭೦*, ಪು. ಸಂ. ೦೭.

೧೨. ಮೋಹನ್‌ಕೃಷ್ಣ ರೈ ಅವರ *ಕೆನರಾದ ವಿಭಜನೆ : ಹತ್ತಿ ಬಗೆಗಿನ ರಾಜಕೀಯ ವಿಶ್ಲೇಷಣೆ* ಎಂಬ ಗ್ರಂಥದ ಪರಾಮರ್ಶೆ.

೧೩. ಬಿಪನ್ ಚಂದ್ರ ಅವರು ಸಾಂಪ್ರದಾಯಿಕ ಆಕರ (ಪತ್ರಾಗಾರ)ಗಳನ್ನು ಹೆಚ್ಚಾಗಿ ಬಳಸಿಕೊಂಡು ತಮ್ಮ ಹಿಂದಿನ ಉತ್ತಮ ಕೃತಿಗಳನ್ನು ಹೊರ ತಂದಿದ್ದಾರೆ. ಆದರೆ ಈ ಗ್ರಂಥವನ್ನು ಬರೆಯುವ ಸಂದರ್ಭದಲ್ಲಿ ಸಬಾಲ್ಟರ್ನ್ ಚರಿತ್ರೆಕಾರರಿಂದ ಹಲವು ಟೀಕೆಗಳನ್ನು ಎದುರಿಸಬೇಕಾಗಿ ಬಂದಿತು. ಹೀಗಾಗಿ ಕೃತಿಯ ರಚನೆ (ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್) ವೇಳೆಗೆ ಸ್ವಾತಂತ್ರ್ಯ ಹೊರಾಟದ ಸಂದರ್ಭದಲ್ಲಿ ಬದುಕಿದ್ದ ಹಾಗೂ ಚಳವಳಿಯಲ್ಲಿ ಪಾಲ್ಗೊಂಡಿದ್ದ ರೈತರನ್ನು, ಕಾರ್ಮಿಕರನ್ನು ಸಂದರ್ಶಿಸುವುದರ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯನ್ನು ಕಟ್ಟಿದ್ದಾರೆ. ಪ್ರೊ. ಎಸ್. ಚಂದ್ರಶೇಖರ್ ಅವರೊಂದಿಗೆ ಚರ್ಚೆಯ ಮೂಲಕ ಹಾಗೂ ಬಿಪನ್ ಅವರ ಆ ಗ್ರಂಥವನ್ನು ಓದುವುದರ ಮೂಲಕ ಈ ಅಂಶವನ್ನು ಪ್ರಸ್ತಾಪಿಸಲಾಗಿದೆ.

೧೪. ಆ್ಯಡಂ ಸ್ಮಿತ್ ಅವರ ದ ವೆಲ್ತ್ ಆಫ್ ನೇಷನ್ಸ್ (ರಾಷ್ಟ್ರಗಳ ಸಂಪತ್ತು) ಎಂಬ ಗ್ರಂಥವು ಅರ್ಥಶಾಸ್ತ್ರ ಅಧ್ಯಯನದ ಶಿಸ್ತಿಗೆ ಸೈದ್ಧಾಂತಿಕ ಬುನಾದಿಯನ್ನು ಹಾಕಿದ ಗ್ರಂಥವಾಗಿದ್ದು, ಇವರನ್ನು ಈ ಶಾಸ್ತ್ರದ ಪಿತಾಮಹ ಎಂಬುದಾಗಿ ಒಪ್ಪಿಕೊಳ್ಳಲಾಗಿದೆ. ಫ್ರಾನ್ಸ್‌ನ ಕ್ವೆಸ್ನೆಯಿಂದ ಪ್ರತಿಪಾದಿಸಲ್ಪಟ್ಟ ಫಿಸಿಯೋಕ್ರಾಟ್ಸ್ ಆರ್ಥಿಕ ಸಿದ್ಧಾಂತವನ್ನು ಸ್ಮಿತ್ ತನ್ನ ದೇಶದ (ಇಂಗ್ಲೆಂಡ್) ಆರ್ಥಿಕತೆಗೆ ಅನುಗುಣವಾಗಿ ಮಾರ್ಪಡಿಸಿಕೊಂಡು ಈ ಸಿದ್ಧಾಂತವನ್ನು ಬೆಳೆಸಿದರು. ಅಲ್ಲದೇ ಕೈಗಾರಿಕಾ ಪ್ರಧಾನವಾದ, ವಸಾಹತು ಆರ್ಥಿಕತೆಯನ್ನು ಹೆಚ್ಚಾಗಿ ಅವಲಂಬಿಸಿದ್ದ ಬ್ರಿಟನ್ ಆ್ಯಡಂನ ವಿಚಾರಧಾರೆಗಳನ್ನು ಒಪ್ಪಿಕೊಂಡಿತು. ಆದರೆ ಇಂದು ಸ್ಮಿತ್ ಅವರ ವಿಚಾರಗಳನ್ನು ಯೂರೋಪ್ ಹಾಗೂ ಪ್ರಪಂಚದ ವಿದ್ವಾಂಸರು ಹಾಗೂ ಜನತೆ ಎಷ್ಟರಮಟ್ಟಿಗೆ ಸ್ವೀಕರಿಸಿದ್ದಾರೆ? ಅಥವಾ ತಿರಸ್ಕರಿಸಿದ್ದಾರೆ? ಎಂಬುದು ಚರ್ಚಾರ್ಹ.

# ಅಧ್ಯಾಯ – ೨

# ಹತ್ತಿಗಿರಣಿಗಳ ಹಿನ್ನೆಲೆಯಲ್ಲಿ ಬೆಂಗಳೂರಿನ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೋಟ

---

೨.೧. ಬೆಂಗಳೂರಿನಲ್ಲಿ ಹತ್ತಿ ಗಿರಣಿಗಳು ಬೆಳೆದು ಬಂದ ಬಗೆ

೨.೨. ಮೈಸೂರು ಅರಸರು ಮತ್ತು ಬಟ್ಟೆ ಕಾರ್ಖಾನೆಗಳ ಹಿನ್ನೆಲೆ

೨.೩. ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಸಂದರ್ಭ

---

# ಅಧ್ಯಾಯ - ೨

# ಹತ್ತಿ ಗಿರಣಿಗಳ ಹಿನ್ನೆಲೆಯಲ್ಲಿ ಬೆಂಗಳೂರಿನ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೋಟ

ಭಾರತದ ಮಹಾನಗರಗಳ ಪೈಕಿ ಕೆಲವು ನಗರಗಳಿಗೆ ವಿಶಿಷ್ಟ ಭೌಗೋಳಿಕ ಲಕ್ಷಣಗಳಿರುತ್ತವೆ. ಮುಂಬೈ, ಕೋಲ್ಕತ್ತಾ, ಚೆನ್ನೈ ನಗರಗಳು ಸಮುದ್ರ ತೀರದಲ್ಲಿರುವುದರಿಂದ ಅವುಗಳ ಹವಾಮಾನವೂ ಇತರೆ ನಗರಗಳಿಗಿಂತ ಭಿನ್ನ. ಬೆಂಗಳೂರು ಬಟಾಬಯಲಿನ ನಗರ. ನೈಸರ್ಗಿಕವಾದ ಯಾವ ಭೌಗೋಳಿಕ ಮೇಲ್ಮೈ ಲಕ್ಷಣಗಳೂ ನಗರದ ಬೆಳವಣಿಗೆಗೆ ಅಡ್ಡಿ ಬಂದಿಲ್ಲ. ದೊಡ್ಡ ದೊಡ್ಡ ಪರ್ವತಗಳಾಗಲೀ, ಗಿರಿಕಂದರಗಳಾಗಲೀ ಇಲ್ಲಿಲ್ಲ. ಇದು ಬಯಲು ನಗರವಷ್ಟೇ ಅಲ್ಲ, ಇದು ನೆಲೆಯಾಗಿರುವುದು ಪ್ರಸ್ಥಭೂಮಿಯಲ್ಲಿ. ಬೆಂಗಳೂರಿನ ನೆಲೆ ದಕ್ಷಿಣ ಕರ್ನಾಟಕದ ಪ್ರಸ್ಥಭೂಮಿಯ ಪೂರ್ವಭಾಗಕ್ಕೆ ಇದ್ದು ವಿನ್‌ಸ್ಟನ್ ಚರ್ಚಿಲ್ ೧೮೯೫-೯೮ರ ಅವಧಿಯಲ್ಲಿ ಮೂರು ಬಾರಿ ಬೆಂಗಳೂರಿಗೆ ಬಂದು ನೆಲೆಸಿದ್ದರು. ಅವರ ಗ್ರಂಥವಾದ "ಮೈ ಅರ್ಲಿ ಲೈಫ್"ನಲ್ಲಿ ಬೆಂಗಳೂರಿನ ವಾತಾವರಣ ಅತ್ಯುತ್ತಮವಾದುದು, ಇದು ಸಮುದ್ರ ಮಟ್ಟಕ್ಕಿಂತ ೨೦೦೦ ಅಡಿಗಳಿಗಿಂತಲೂ ಹೆಚ್ಚು ಎತ್ತರದಲ್ಲಿದೆ ಎಂದು ತಿಳಿಸಿದ್ದಾರೆ[೧].

ಮೈಸೂರು ಪ್ರಾಂತ್ಯದಲ್ಲಿ ಬೆಳೆಯುತ್ತಿದ್ದ ವಾಣಿಜ್ಯ ಬೆಳೆಗಳಲ್ಲಿಯೇ ಬಹಳ ಪ್ರಮುಖವಾದವುಗಳೆಂದರೆ ಕಾಫಿ, ತಂಬಾಕು, ಕಬ್ಬು, ಹತ್ತಿ, ರೇಷ್ಮೆ, ತೆಂಗು, ಏಲಕ್ಕಿ, ಅಡಿಕೆ ಮತ್ತು ವೀಳ್ಯದೆಲೆ. ಇವುಗಳಲ್ಲಿನ ವಿಶೇಷವೆಂದರೆ ಬೆಳೆಯನ್ನು ಬೆಳೆಯುವವರಾಗಲಿ ಅಥವಾ ಅಲ್ಲಿನ ಸ್ಥಳೀಯರಾಗಲಿ ಇವುಗಳನ್ನು ಗಣನೀಯ ಪ್ರಮಾಣದಲ್ಲಿ ಅನುಭೋಗಿಸುತ್ತಿರಲಿಲ್ಲ[೨]. ಅವರು ಇವನ್ನು ಉತ್ಪಾದಿಸುತ್ತಿದ್ದುದು ಕೇವಲ ಬಾಹ್ಯ ಬೇಡಿಕೆಗಾಗಿ ಹೊರತು ಆಂತರಿಕ ಬೇಡಿಕೆಗಾಗಿ ಅಲ್ಲ. ಕೈಗಾರಿಕೆಗಳ ಬೆಳವಣಿಗೆಯೊಂದಿಗೆ ಹತ್ತಿ, ಕಾಫಿ ಮತ್ತು ರೇಷ್ಮೆ ಪ್ರಾಥಮಿಕ ಕಚ್ಚಾ ಸರಕುಗಳಾದವು. ರಾಜ್ಯದಲ್ಲಿ ಬಂಡವಾಳಶಾಹಿಗಳ ಬೆಳವಣಿಗೆಯಿಂದ ಕೃಷಿಯ ಉತ್ಪಾದನೆಯ ರಚನೆಯನ್ನು ನಿರ್ಧರಿಸಲು ಪ್ರಾರಂಭವಾಯಿತು[೩]. ಕ್ರಮೇಣ ಕೈಗಾರಿಕೆಗಳ ಮತ್ತು ರಫ್ತು ಬೆಳೆಗಳ ಪ್ರಮಾಣ ಹೆಚ್ಚುತ್ತಾ ಹೋಯಿತು. ತೋಟಗಾರಿಕೆಯ ಬೆಳೆಗಳು ಮೀಸಲು ಪ್ರದೇಶಗಳಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿದವು. ಉದಾಹರಣೆಗೆ ಕಾಫಿಯು ಅಷ್ಟಗ್ರಾಮ ಮತ್ತು ನಗರ ಭಾಗಗಳಲ್ಲಿ ಬೆಳವಣಿಗೆಗೆ ಬಂದರೆ, ರೇಷ್ಮೆ ಬೆಂಗಳೂರು ಮತ್ತು ಮೈಸೂರಿನಲ್ಲಿ. ಅಡಿಕೆಯು ನಗರ ಹಾಗೂ ತುಮಕೂರಿನಲ್ಲಿ ವಿಶೇಷ ಬೆಳೆಗಳಾಗಿದ್ದವು.

೧೮೩೮ರ ಘೋಷಣೆಯಲ್ಲಿ ಮ್ಯಾಂಚೆಸ್ಟರ್ ವಾಣಿಜ್ಯ ಮಂಡಳಿಯು ರಸ್ತೆಯ ನಿರ್ಮಾಣಕ್ಕಾಗಿ ಹಾಗೂ ಭೂ ತೆರಿಗೆಯ ಪರಿಷ್ಕರಣೆಗಾಗಿ ಶಿಫಾರಸ್ಸು ಮಾಡಿತು[೪]. ಇದರಿಂದ ಹತ್ತಿಯ ಪೂರೈಕೆಯಲ್ಲಿ ಏರಿಕೆಯನ್ನು ಕಂಡಿತು. ೧೮೪೬ರಲ್ಲಿ ಹತ್ತಿ ಆಯೋಗವು (ಕಾಟನ್ ಕಮಿಷನ್) ರೈಲ್ವೆ ಹಳಿಯ ನಿರ್ಮಾಣಕ್ಕಾಗಿ ದಕ್ಷಿಣ ಪ್ರದೇಶವನ್ನು ಸಿದ್ಧಪಡಿಸಿತು. ೧೯೫೩ರ ರೈಲ್ವೆ ವರದಿಯಲ್ಲಿಯೂ ಸಹ ಡಾಲ್‌ಹೌಸಿಯು ಹತ್ತಿ ಬೆಳೆಗಾಗಿ ಹಲವು ಬದಲಾವಣೆಗಳನ್ನು ತಂದನು. ಮೈಸೂರು ತಾಲ್ಲೂಕಿನಲ್ಲಿ ಪ್ರಧಾನವಾಗಿ ಹತ್ತಿ ಬೆಳೆಯುವ ಪ್ರದೇಶವು ನಗರ ಭಾಗಗಳಲ್ಲಿತ್ತು[೫]. ಆದರೆ ಈ ಭಾಗಗಳಲ್ಲಿ ಹತ್ತಿಯ ಮಾರಾಟ ಮಳಿಗೆಗಳಿರಲಿಲ್ಲ. ಹೆಚ್ಚಿನದಾಗಿ ಬೆಳೆದ ಹತ್ತಿಯನ್ನು ಕೊಯಮತ್ತೂರು ಜಿಲ್ಲೆಯ ಕೊಳ್ಳೆಗಾಲ ಪಟ್ಟಣಕ್ಕೆ ತೆಗೆದುಕೊಂಡು ಹೋಗಬೇಕಾಗಿತ್ತು. ಇದು ಮೈಸೂರು ಸಂಸ್ಥಾನದಲ್ಲಿಯೇ ಪ್ರಧಾನವಾದ ಮಾರಾಟ ಮಳಿಗೆಯಾಗಿತ್ತು. ಹೀಗಾಗಿ ತೂಕದಲ್ಲಿ ಮತ್ತು ಬೆಲೆಯಲ್ಲಿ ಏರುಪೇರು ಕಂಡುಬರುತ್ತಿತ್ತು.

೯-೮-೧೮೬೧ರಲ್ಲಿ ಗವರ್ನರ್ ಜನರಲ್ ಒಂದು ಠರಾವನ್ನು ಪಾಸು ಮಾಡಿದನು. ಇದರ ಪ್ರಕಾರವಾಗಿ ಭಾರತ ಸರ್ಕಾರವು, ಎರಡು ವರ್ಷಗಳ ಅವಧಿಯಲ್ಲಿ ಯಾರು ಉತ್ತಮ ಹತ್ತಿಯನ್ನು ಬೆಳೆಯುತ್ತಾರೋ ಅವರಿಗೆ ಬಹುಮಾನವನ್ನು ಘೋಷಿಸಿತು. ಈ ಬಹುಮಾನದ ಮೊತ್ತ ಬಾಂಬೆ ಮತ್ತು ಮದ್ರಾಸು ಪ್ರೆಸಿಡೆನ್ಸಿಯಲ್ಲಿ ತಲಾ ೧೦,೦೦೦ ರೂ.ಗಳಾಗಿದ್ದಿತು. ಮೈಸೂರಿನಲ್ಲಿ ಈ ಬಹುಮಾನ ೫,೦೦೦ ರೂ.ಗಳಾಗಿದ್ದಿತು. ೧೮೬೧ರಲ್ಲಿ ಮೈಸೂರಿಗೆ ಹತ್ತಿ ಬೆಳೆಯ ಮೇಲ್ವಿಚಾರಕನನ್ನಾಗಿ ಡೇವಿಸ್‌ನನ್ನು ನೇಮಿಸಲಾಯಿತು[೬]. ಇವನು ವಿದೇಶಿ ಬಿತ್ತನೆ ಬೀಜವನ್ನು ಪರಿಚಯಿಸಲು ಆಸಕ್ತಿ ತೋರಿದನು. ೪೬೫೨ ಮೌಂಡ್ಸ್ (ಮಣ) ತೂಕದ ಬಿತ್ತನೆ ಬೀಜವನ್ನು ಇವನ ಮೇಲ್ವಿಚಾರಣೆಯಲ್ಲಿ ಹಂಚಲಾಯಿತು.

ಅಮೆರಿಕಾದಲ್ಲಿ ನಡೆದ ನಾಗರಿಕ ಯುದ್ಧದ ಪರಿಣಾಮವಾಗಿ ಹತ್ತಿ ವ್ಯಾಪಾರದಲ್ಲಿ ದುತ್ತನೆ ಏರಿಕೆಯನ್ನು ಕಂಡಿತು. ಅಂತೆಯೇ ಮೈಸೂರಿನಲ್ಲಿ ಹತ್ತಿಯ ಬೆಳೆಗೆ ಹೆಚ್ಚಿನ ಉತ್ತೇಜನವನ್ನು ನೀಡಲಾಯಿತು. ೧೮೬೬ರಲ್ಲಿ ಯುದ್ಧ ಕೊನೆಗೊಂಡ ನಂತರ ಹತ್ತಿಯ ಬೆಲೆಯು ಗಣನೀಯ ಪ್ರಮಾಣದಲ್ಲಿ ಕುಸಿಯಿತು. ಇದರ ಪೆಟ್ಟು ಮೈಸೂರಿನ ಅನೇಕ ಪ್ರದೇಶಗಳ ಮೇಲೆ ಬಿದ್ದಿತು[೭]. ಪರಿಣಾಮವಾಗಿ ಹತ್ತಿ ಬೆಳೆಯುವ ಪ್ರದೇಶಗಳನ್ನು ಕಡಿಮೆಗೊಳಿಸಲಾಯಿತು. ಇದನ್ನೇ ನಂಬಿಕೊಂಡಿದ್ದ ಹಲವು ಪ್ರದೇಶಗಳು ತೊಂದರೆಯನ್ನು ಅನುಭವಿಸಿದವು. ಪ್ರಾಕೃತಿಕವಾಗಿ ಯಾವ

ಪ್ರದೇಶಗಳು (ಕಪ್ಪು ಮಣ್ಣು ಇರುವ ಪ್ರದೇಶಗಳು) ಹತ್ತಿ ಬೆಳೆಗೆ ಯೋಗ್ಯವೋ ಆ ಪ್ರದೇಶಗಳಲ್ಲಿ ಮಾತ್ರ ಈ ಬೆಳೆಗೆ ಉತ್ತೇಜನ ನೀಡಲಾಯಿತು. ಇದರ ಪರಿಣಾಮವಾಗಿ ಕೆಲವೇ ವರ್ಷಗಳಲ್ಲಿ ಇದರ ಉತ್ಪಾದನೆಯಲ್ಲಿ ಪ್ರಗತಿಯನ್ನು ಸಾಧಿಸಲಾಯಿತು. ಪ್ರತಿಫಲವಾಗಿ ಭಾರತದ ಹತ್ತಿಗೆ ಜಪಾನ್‌ನಲ್ಲಿ ಹೊಸ ಮಾರುಕಟ್ಟೆ ಸೃಷ್ಟಿಯಾಯಿತು. ಇದು ಹೊಸ ಆಲೋಚನೆಗೆ ಎಡೆಮಾಡಿಕೊಟ್ಟಿತು[೮]. ಅಂದರೆ ದೇಶದೊಳಗಡೆ ಹತ್ತಿ ಗಿರಣಿಗಳನ್ನು ಸ್ಥಾಪಿಸಿದರೆ ಒಳಿತು ಎಂದು ಭಾರತವು ಚಿಂತಿಸಿತು. ಪರಿಣಾಮವಾಗಿ ಭಾರತದಾದ್ಯಂತ ಹತ್ತಿಯ ಕಾರ್ಖಾನೆಗಳು ಸ್ಥಾಪನೆಯಾದವರು. ಮೈಸೂರು ಸಂಸ್ಥಾನವೂ ಇದಕ್ಕೆ ಹೊರತಾಗಿರಲಿಲ್ಲ. ಬೆಂಗಳೂರಿನಲ್ಲಿ ಸ್ಥಾಪನೆಯಾದ ಉಣ್ಣೆ, ಹತ್ತಿ ಮತ್ತು ರೇಷ್ಮೆ ಅಥವಾ ಬಿನ್ನಿಮಿಲ್ ಮೈಸೂರು ಪ್ರಾಂತ್ಯದಲ್ಲಿ ಸ್ಥಾಪನೆಯಾದ ಪ್ರಥಮ ಆಧುನಿಕ ಗಿರಣಿ. ನಂತರ ಅನೇಕ ಗಿರಣಿಗಳು ಸ್ಥಾಪನೆಯಾದವು.

ಮೇಲಿನ ಕೆಲವು ಪ್ಯಾರಗಳು ಬೆಂಗಳೂರಿನ ಹತ್ತಿ ಗಿರಣಿಗಳಿಗೆ ಸಂಬಂಧಿಸಿದಂತೆ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಯ ಕೆಲವು ವಿವರಣೆಗಳನ್ನು ಒದಗಿಸಿದರೆ; ಬೇರೆ ರೀತಿಯ ಕೆಲವು ಚರ್ಚೆಗಳನ್ನು ಎತ್ತಬಹುದು. ಮೈಸೂರು ಸಂಸ್ಥಾನ ಒಂದು ಕೈಗಾರಿಕಾ ಉತ್ಪಾದನಾ ಪ್ರದೇಶ ಎನ್ನುವುದಕ್ಕಿಂತ ಕೃಷಿಯಾಧಾರಿತ ರಾಜ್ಯ ಅಥವಾ ಸಂಸ್ಥಾನ ಎನ್ನಬಹುದು. ಹೀಗಿರುವಾಗ ಯಾವ ರೀತಿಯ ಉತ್ಪಾದನೆ ಕೈಗೊಳ್ಳಲು ಸಾಧ್ಯ. ಅಲ್ಲದೆ ಬಹುತೇಕ ಪ್ರದೇಶಗಳು ಗ್ರಾಮೀಣ ಜನಸಂಖ್ಯೆಯಿಂದ ಕೂಡಿದ್ದಿತು[೯]. ಮೈಸೂರು ರಾಜ್ಯದ ಪ್ರಮುಖ ನಗರವಾದ ಬೆಂಗಳೂರು ಪ್ರಾಕೃತಿಕವಾಗಿ ಉತ್ತಮವಾದ ಭೌಗೋಳಿಕ ವಾತಾವರಣವನ್ನು ಹೊಂದಿದೆ. ವಸಾಹತು ಹಾಗೂ ಅದಕ್ಕೂ ಪೂರ್ವದಿಂದಲೂ ಬೆಂಗಳೂರಿನ ಹವಾಗುಣದ ಬಗ್ಗೆ ಯಾರೂ ಸಹ ನಕಾರಾತ್ಮಕವಾದ ಪ್ರಶ್ನೆ ಎತ್ತಿದಂತಿಲ್ಲ. ಆರ್. ಬಾಲಕೃಷ್ಣ ಅವರ ಮಾತಿನ ಧಾಟಿಯಲ್ಲಿ ಹೇಳುವುದಾದರೆ "Most of the cotton mills are situated in Bangalore on account of its cool and equable climate throughout the year. Besides Bangalore is one of the most important distributing centres for the textile trade in Southern India"[೧೦]. ಆದರೆ ಈ ಪ್ರಬಂಧದಲ್ಲಿ ಸಂಶೋಧಕ ಕೆಲವು ಸಕಾರಾತ್ಮಕವಾದ ಪ್ರಶ್ನೆಗಳನ್ನು ಎತ್ತುವ ಪ್ರಯತ್ನ ಮಾಡಿದ್ದಾನೆ. ಅದೇಂದರೆ ಬೆಂಗಳೂರು ಉತ್ತಮವಾದ ಹವಾಗುಣವನ್ನು ಹೊಂದಿದ್ದರೂ ಅದು ತನ್ನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹತ್ತಿ ಬೆಳೆಗೆ ಯೋಗ್ಯವಾಗುವ ಕೇವಲ ಒಂದು ಎಕರೆ ಭೂಮಿಯನ್ನು ಹೊಂದಲು ಸಮರ್ಥತೆಯನ್ನು ಪಡೆದಿರಲಿಲ್ಲ.

೧೮೮೪ರಲ್ಲಿ ಬೆಂಗಳೂರು ಪ್ರಪ್ರಥಮವಾಗಿ (ಮೈಸೂರು ರಾಜ್ಯದಲ್ಲಿಯೇ) ಹತ್ತಿ ಗಿರಣಿಯ ಮಾಲೀಕತ್ವವನ್ನು ಪಡೆದುಕೊಂಡಿತು. ಇಲ್ಲಿರುವ ಪ್ರಶ್ನೆ ಏನೆಂದರೆ ಈ ಅವಧಿ ಅಥವಾ ನಂತರ ಅಥವಾ ಇದಕ್ಕಿಂತ ಹಿಂದಿನ ಹಲವು ವರ್ಷಗಳನ್ನೇ ಗಮನಿಸಿದರೂ ಬೆಂಗಳೂರು ಹಾಗೂ ನೆರೆಯ ಕೋಲಾರ ಜಿಲ್ಲೆಗಳಲ್ಲಿ ಹತ್ತಿ ಬೆಳೆಯ ಉತ್ಪಾದನೆ 'ಶೂನ್ಯ'[೧೧]. ಅಂದರೆ ನಮಗೆ ಮನದಟ್ಟಾಗುವ ಸಂಗತಿ ಬೆಂಗಳೂರು ಕೇವಲ ಕಾರ್ಖಾನೆಗಳ ಸ್ಥಾಪನೆಗೆ ಹಾಗೂ ಜನವಸತಿಗೆ ಉತ್ತಮ ಹವಾಗುಣವನ್ನು ಹೊಂದಿತ್ತೇ ವಿನಃ ಹತ್ತಿ ಬೆಳೆಗಲ್ಲ. ಹಾಗಿದ್ದೂ ಮೈಸೂರು ರಾಜ್ಯದಲ್ಲಿಯೇ ಹತ್ತಿಗಿರಣಿಗಳ ಸಂಖ್ಯೆಯಲ್ಲಿ ಹಾಗೂ ಬಟ್ಟೆಯ ಉತ್ಪಾದನೆಯಲ್ಲಿ ಬೆಂಗಳೂರು ಅನಭಿಶಕ್ತ. ಈ ಪ್ರಖ್ಯಾತಿಗೂ ಕಾರಣವುಂಟು. ಅದು ಕಮಿಷನರ್‌ಗಳ ಆಳ್ವಿಕೆ (೧೮೩೧–೮೧) ಹಾಗೂ ಮೊದಲ ಇಬ್ಬರು ದಿವಾನರುಗಳ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನ ಸುವ್ಯವಸ್ಥಿತ ಕಾನೂನು ಹಾಗೂ ಪೊಲೀಸ್ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ಜಾರಿಗೆ ತರುವುದರ ಮೂಲಕ ಆಡಳಿತವನ್ನು ತನ್ನ ನಿಯಂತ್ರಣಕ್ಕೆ ಪಡೆದುಕೊಂಡಿತು. ಏಕೆಂದರೆ ಪ್ರಜೆಗಳಿಗೆ ಪ್ರಶ್ನಿಸುವ ಹಕ್ಕನ್ನು ನೀಡಿದರೆ ಅದು ಪ್ರಭುತ್ವಕ್ಕೆ ತೊಡಕನ್ನುಂಟುಮಾಡುತ್ತಿತ್ತು. ಹೀಗಾಗಿ ಕೇವಲ ದಮನಕಾರಿ ಪ್ರವೃತ್ತಿಯ ಮೂಲಕ ಪ್ರಜೆಗಳಿಂದ ತೆರಿಗೆ, ಕಂದಾಯವನ್ನು ವಸೂಲಿ ಮಾಡುವ ಸಲುವಾಗಿ ಕಾನೂನು ಹಾಗೂ ಪೊಲೀಸ್ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ಜಾರಿಮಾಡಿರಬೇಕು. ಇದು ಈ ದೇಶಕ್ಕೆ ವಸಾಹತುಶಾಹಿಯ ಬಹುದೊಡ್ಡ ಕೊಡುಗೆ. ಅಲ್ಲದೆ ಸ್ಥಳೀಯ ಸಂಸ್ಥಾನಗಳ ರಾಜಪ್ರಭುತ್ವವು ಇದರೊಂದಿಗೆ ಕೈ ಜೋಡಿಸಿತ್ತು. ಕಮಿಷನರ್ ಮಾರ್ಕ್ ಕಬ್ಬನ್‌ನ ಆಡಳಿತಾವಧಿಯಲ್ಲಿ (೧೮೩೪–೬೧) ಮೈಸೂರು ಪ್ರಾಂತ್ಯದಲ್ಲಿಯೇ ಬೆಂಗಳೂರು ಒಂದು ಆಧುನಿಕ ಕೇಂದ್ರವಾಗಿ ಬೆಳೆಯುವ ಲಕ್ಷಣ ಹೊಂದಿತ್ತು. ಅಲ್ಲದೆ ಇದನ್ನು ಈ ರೀತಿ ಬೆಳೆಸುವ ಉದ್ದೇಶ ವಸಾಹತು ಪ್ರಭುತ್ವದ್ದಾಗಿತ್ತು. ಕಬ್ಬನ್ ಮೈಸೂರು ಪ್ರಾಂತ್ಯದ ರಾಜಧಾನಿಯನ್ನು ಬೆಂಗಳೂರಿಗೆ ವರ್ಗಾಯಿಸುವುದರ ಮೂಲಕ ಪ್ರಾಂತ್ಯದ ಎಲ್ಲಾ ನಗರಗಳ ರಸ್ತೆಗಳು ಬೆಂಗಳೂರಿನೊಂದಿಗೆ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಜಾರಿಗೊಳಿಸಿದ್ದ[೧೨]. ಇದರಿಂದ ಬೆಂಗಳೂರು ಮೈಸೂರು ಸಂಸ್ಥಾನದಲ್ಲಿಯೇ ಹೆಚ್ಚು ಜನಸಂದಣಿಯನ್ನು ಹೊಂದಿದ ನಗರವಾಗಿ ಮಾರ್ಪಟ್ಟಿತು. ಒಂದು ಕಡೆ ಪ್ರಾಕೃತಿಕವಾಗಿ ಹಾಗೂ ಭೌಗೋಳಿಕವಾಗಿ ಒದಗಿಬಂದಿರುವ ಉತ್ತಮ ಹವಾಗುಣ ಇನ್ನೊಂದು ಕಡೆ ಪ್ರಭುತ್ವ ತೋರಿದ ಆಸಕ್ತಿ. ಹೀಗಾಗಿ ಬೆಂಗಳೂರಿನಲ್ಲಿ ಕಾರ್ಖಾನೆಗಳು ಹಾಗೂ ಗಿರಣಿಗಳು ಸ್ಥಾಪನೆಯಾಗುವುದಕ್ಕೆ ಉತ್ತಮ ವೇದಿಕೆಯನ್ನು ಒದಗಿಸಿಕೊಟ್ಟಿತು.

ಹಾಗಾದರೆ ಬೆಂಗಳೂರಿನಲ್ಲಿ ಗಿರಣಿಗಳು ಅಥವಾ ಕೈಗಾರಿಕೆಗಳು ಸ್ಥಾಪನೆಯಾಗುವುದಕ್ಕೆ ವಸಾಹತುಶಾಹಿ ಆಡಳಿತ ವ್ಯವಸ್ಥೆಯು ಪ್ರಮುಖ ಕಾರಣವೇ? ಎಂಬ ಪ್ರಶ್ನೆ ನಮ್ಮ ಮುಂದೆ ಎದುರಾಗುತ್ತದೆ. ಕೆಳಗಿನ ಚರ್ಚೆಯನ್ನು ಗಮನಿಸಿದರೆ ಮತ್ತೊಂದು ರೀತಿಯ ವಿಶ್ಲೇಷಣೆ ನಮಗರಿವಾಗುವುದು. ಬ್ರಿಟಿಷರ ಆಳ್ವಿಕೆಗೂ ಪೂರ್ವದಲ್ಲಿಯೇ ೧೮ನೇ ಶತಮಾನದ ಕೊನೆಯ ವೇಳೆಗಾಗಲೇ ಬೆಂಗಳೂರು ಜವಳಿ ಉತ್ಪಾದನೆಯಲ್ಲಿ ಉನ್ನತಿಯನ್ನು ತಲುಪಿತ್ತು. ಒಳನಾಡಿನ ವ್ಯಾಪಾರದಲ್ಲಿ ಉಚ್ಛ್ರಾಯ ಕಾಲಮಾನ ಅಂತಲೆ ಹೇಳಬಹುದು. ೧೮೦೪ರಲ್ಲಿ ನಗರದ ಜನಸಂಖ್ಯೆ ೬೦,೦೦೦ ಇದ್ದಿದ್ದು ೧೮೫೧-೫೨ರ ವೇಳೆಗೆ ಗಣನೀಯ ಪ್ರಮಾಣದಲ್ಲಿ ಇಳಿಕೆಯನ್ನು ಕಂಡಿತು. ಅದು ೪೧೨೯ಕ್ಕೆ ಕುಸಿಯಿತು[೧೩]. ಬ್ರಿಟಿಷರ ಆಳ್ವಿಕೆ ನೀತಿಯಿಂದ ಅನೇಕ ಸ್ಥಳೀಯ ಕೈಗಾರಿಕೆಗಳು ನಾಶ ಹೊಂದಿದವು ಎಂಬ ವಿಮರ್ಶೆಯನ್ನು ಜಾನಕಿ ನಾಯರ್ ಅವರು ಮಾಡುತ್ತಾರೆ. ಅಲ್ಲದೆ ೧೯ನೇ ಶತಮಾನದಾದ್ಯಂತ ಬೆಂಗಳೂರು ಸೈನಿಕ ಶಸ್ತ್ರಾಸ್ತ್ರಗಳನ್ನು ಪೂರೈಸುವ ಡಿಪೊ (Depot)ಗೆ ಸೀಮಿತವಾಗಿತ್ತು[೧೪]. ೧೯ನೇ ಶತಮಾನದ ಕೊನೆಯ ವೇಳೆಗೆ ಮಾತ್ರ ಬಿನ್ನಿಮಿಲ್ಲು ಹಾಗೂ ಮಹಾರಾಜ ಮಿಲ್ಲು ಹೋರಾಟದ ಮೂಲಕ ತಮ್ಮ ಅಸ್ತಿತ್ವವನ್ನು ಕಂಡುಕೊಂಡವು ಎಂಬುದಾಗಿಯೂ ವ್ಯಾಖ್ಯಾನಿಸುತ್ತಾರೆ[೧೫]. ೧೯೩೦ ಹಾಗೂ ೧೯೪೧ರ ದಶಕದಲ್ಲಿ ಬೆಂಗಳೂರಿನ ಜನಸಂಖ್ಯೆ ಕ್ರಮವಾಗಿ ಶೇಕಡ ೪೦ ಹಾಗೂ ೧೦೦ರಷ್ಟು ಏರಿಕೆಯನ್ನು ಕಂಡಿತು. ಹೀಗಾಗಿ ಬೆಂಗಳೂರು ಎಷ್ಟೇ ಉತ್ತಮ ಹವಾಗುಣ ಹಾಗೂ ಭಾಗೋಳಿಕ ವಾತಾವರಣವನ್ನು ಹೊಂದಿದ್ದರೂ ಪ್ರತಿರೋಧದ ಮುಖೇನ ಕೈಗಾರಿಕೆಗಳು ಹಾಗೂ ಗಿರಣಿಗಳು ಸ್ಥಾಪನೆಯಾದವು ಎಂಬ ಚರ್ಚೆಯನ್ನು ಸೇರಿಸಿದರೂ ತಪ್ಪಾಗಲಾರದು.

### ೨.೧. ಬೆಂಗಳೂರಿನಲ್ಲಿ ಹತ್ತಿಗಿರಣಿಗಳು ಬೆಳೆದುಬಂದ ಬಗೆ

ದಾವಣಗೆರೆಯಲ್ಲಿ ಸರ್ಕಾರದ ನೆರವಿನಿಂದ ಹತ್ತಿಗಿರಣಿಯನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಯಾವುದೇ ಒಂದು ಹತ್ತಿ ಗಿರಣಿಯನ್ನು ಸ್ಥಾಪನೆ ಮಾಡಲು ಇರಬೇಕಾದ ಮೂಲ ಸೌಕರ್ಯಗಳ ಕುರಿತು ವರದಿ ಮಾಡಲಾಗಿದೆ.

ಅ. ಗಿರಣಿ, ಕಾರ್ಮಿಕರು ಹಾಗೂ ಬಣ್ಣ (ರಂಗು) ಹಚ್ಚುವ ಕಾರ್ಯಕ್ಕೆ ಸಾಕಷ್ಟು ನೀರಿನ ಪೂರೈಕೆ.

ಆ. ಕಾರ್ಮಿಕರ ಪೂರೈಕೆ.

ಇ. ಸೂಕ್ತವಾದ ಯಂತ್ರಗಳ ಪೂರೈಕೆ.

ಈ. ಇಂಧನ ಹಾಗೂ ಕಚ್ಚಾವಸ್ತುಗಳ ಪೂರೈಕೆ[೧೬].

ಮೇಲಿನ ವರದಿಯ ಪ್ರಕಾರ ಚರ್ಚಿಸುವುದಾದರೆ ಈ ನಾಲ್ಕು ಮೂಲ ಸೌಲಭ್ಯಗಳು ಒಂದು ಪ್ರದೇಶದಲ್ಲಿ ಸುಲಭವಾಗಿ ಲಭ್ಯವಾಗಿದ್ದಲ್ಲಿ ಅಲ್ಲಿ ನಿರಾತಂಕವಾಗಿ ಗಿರಣಿಯನ್ನು ಪ್ರಾರಂಭಿಸಬಹುದು. ಹಾಗಿದ್ದಲ್ಲಿ ನಾವು ಮೊದಲು ಚರ್ಚೆಗೆತ್ತಿಕೊಂಡ ವಿಷಯವಾದ 'ಬೆಂಗಳೂರಿನ ಸುತ್ತಮುತ್ತಲ ಪ್ರದೇಶ ಹತ್ತಿ ಬೆಳೆಯಲು ಯೋಗ್ಯವಾಗಿರಲಿಲ್ಲ' ಎಂಬ ಅಂಶ ಇಲ್ಲಿ ಪ್ರಸ್ತುತವಾಗುತ್ತದೆ. ಏಕೆಂದರೆ ಮೇಲಿನ ನಾಲ್ಕು ಮೂಲ ಸೌಕರ್ಯಗಳ ಪೈಕಿ ಮೊದಲ ಮೂರು ಅಂಶಗಳಲ್ಲಿ ಬೆಂಗಳೂರನ್ನು ಯಾರೊಬ್ಬರೂ ಪ್ರಶ್ನಿಸುವಂತಿರಲಿಲ್ಲ. ಮೂರು ರೀತಿಯ ಪೂರೈಕೆಯು ಸುಲಭ ಸಾಧ್ಯವಾಗಿತ್ತು. ಆದರೆ ಯಾವುದೇ ಕೃಷಿಯಾಧಾರಿತ ಕೈಗಾರಿಕೆಗಳ ಸ್ಥಾಪನೆಗೆ ಅದರ ಕಚ್ಚಾ ವಸ್ತುವಿನ ಪೂರೈಕೆಯು ಬಹಳ ಮುಖ್ಯವಾದುದಾಗಿದೆ. ಕಚ್ಚಾ ಹತ್ತಿಯನ್ನು ನೆರೆಯ ಜಿಲ್ಲೆಗಳಾದ ತುಮಕೂರು, ಮೈಸೂರು, ಶಿವಮೊಗ್ಗ ಹಾಗೂ ಕಡೂರುಗಳಲ್ಲಿ ಬೆಳೆಯುತ್ತಿದ್ದುದು ಅತ್ಯಲ್ಪ. ಆದರೆ ಚಿತ್ರದುರ್ಗ ಇದಕ್ಕೆ ಹೊರತಾಗಿದ್ದು, ಬೆಂಗಳೂರಿನ ಎಲ್ಲಾ ಗಿರಣಿಗಳು ಭಾಗಶಃ ಚಿತ್ರದುರ್ಗ ಜಿಲ್ಲೆಯ ಕಚ್ಚಾ ಹತ್ತಿಯನ್ನೇ ಅವಲಂಬಿಸಿತ್ತು. ೧೮೮೬-೮೭ರ ಅಂಕಿಅಂಶದ ಪ್ರಕಾರ ಚಿತ್ರದುರ್ಗದಲ್ಲಿ ೨೯೪೬೦ ಎಕರೆ ಭೂ ಪ್ರದೇಶದಲ್ಲಿ ಹತ್ತಿಯನ್ನು ಬೆಳೆಯಲಾಗುತ್ತಿತ್ತು[೧೭]. ಕಚ್ಚಾ ಹತ್ತಿಯನ್ನು ಚಿತ್ರದುರ್ಗದಿಂದ ಬೆಂಗಳೂರಿಗೆ ಸಾಗಿಸಬೇಕಾಗಿತ್ತು. ಹೀಗಾಗಿ ಸಾರಿಗೆ ದುಬಾರಿಯಾಗಿ ಬೆಂಗಳೂರಿನ ಗಿರಣಿಗಳನ್ನು ಕಾಡಿರಬೇಕು. ಅಲ್ಲದೆ ನಾವು ಪ್ರಾಥಮಿಕ ಆಕರಗಳನ್ನೇ ಪ್ರಶ್ನಿಸುವ ಮೂಲಕ ವಿಶ್ಲೇಷಣೆಯನ್ನು ಬೆಳೆಸಬೇಕಾಗಿದೆ.

೧೮೭೭ರ ನಂತರ ಭಾರತದ ಹಲವು ಪ್ರದೇಶಗಳಲ್ಲಿ ಅನೇಕ ಆಧುನಿಕ ಹತ್ತಿ ಗಿರಣಿಗಳು ಪ್ರಾರಂಭವಾದವು ಅವುಗಳು ಕ್ರಮವಾಗಿ ನಾಗಪುರ, ಅಹಮದಾಬಾದ್, ಸೊಲ್ಲಾಪುರ, ಕಾನ್ಪುರ, ಕಲ್ಕತ್ತಾ ಹಾಗೂ ಮದ್ರಾಸ್ ಮುಂತಾದ ಕಡೆಗಳಲ್ಲಿ ಆಕ್ರಮಿಸಿದ್ದವು[೧೮]. ಬೆಂಗಳೂರಿನ ಹತ್ತಿ ಗಿರಣಿಗಳಾದ ಮೈಸೂರು ಮಿಲ್ಲು ಮತ್ತು ಬಿನ್ನಿ ಮಿಲ್ಲುಗಳೂ ಸಹ ೧೯೮೦ರ ದಶಕದಲ್ಲಿ ಪ್ರಾರಂಭವಾಯಿತು. ಇದರರ್ಥ ನಮ್ಮ ಗಿರಣಿಗಳು ಏಕಕಾಲದಲ್ಲಿ ಇವುಗಳೊಂದಿಗೆ ಪೈಪೋಟಿಗೆ ದುಮುಕಿದ್ದು ಸತ್ಯ. ಅದರಲ್ಲೂ ಮಹಾರಾಷ್ಟ್ರದ ಸೊಲ್ಲಾಪುರವಂತೂ ೨೦ನೇ ಶತಮಾನದ ೨ನೇ ದಶಕದ ವೇಳೆಗೆ "ಹತ್ತಿ ವಲಯ" (ಕಾಟನ್ ಝೋನ್) ಎಂಬುದಾಗಿ ಪ್ರಖ್ಯಾತಿಯನ್ನು ಪಡೆದಿತ್ತು.

ಬೆಂಗಳೂರಿನಲ್ಲಿ ೧೮೮೪ರಲ್ಲಿ ಮೊದಲ ಹತ್ತಿಗಿರಣಿ ಪ್ರಾರಂಭವಾಯಿತು. ಅದು 'ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನ್ಯುಫ್ಯಾಕ್ಚರಿಂಗ್ ಮಿಲ್' ಎಂಬ ಹೆಸರಿನೊಂದಿಗೆ ಕಾರ್ಯಾರಂಭಮಾಡಿತು. ೪,೫೦,೦೦೦ ರೂ. ಬಂಡವಾಳ ಹಾಗೂ ೪,೦೦,೦೦೦ ರೂ. ಡಿಬೆಂಚರ್ ಸಾಲದೊಂದಿಗೆ

ಆರಂಭಗೊಂಡರೂ ಆರಂಭದಲ್ಲಿ ದೊಡ್ಡ ಮಟ್ಟದ ನಷ್ಟವನ್ನು ಎದುರಿಸಬೇಕಾಗಿ ಬಂದಿತು[೧೯]. ಕಾರಣ ಹತ್ತಿಯ ಬೆಲೆಯಲ್ಲಿನ ಹೆಚ್ಚಳ ಹಾಗೂ ನೂಲಿನ ಮಿತಿಮೀರಿದ ಮಾರುಕಟ್ಟೆಯಿಂದಾಗಿ ನಷ್ಟದಲ್ಲಿ ಕಾರ್ಯನಿರ್ವಹಿಸಬೇಕಾಯಿತು[೨೦]. ೧೮೯೦-೯೧ರಲ್ಲಿ ೧೨೦ ಮಗ್ಗಗಳು ಹಾಗೂ ೫,೧೯,೩೪೫ ರೂ. ಮೌಲ್ಯದ ೧,೪೨೯,೩೮೯ ಬೇಲ್‌ನಷ್ಟು ಹತ್ತಿ ನೂಲನ್ನು ಹಾಗೂ ೨೮೦೫೭-೮-೦ ರೂ. ಮೌಲ್ಯದ ೫೬೧೧೫ ಬೇಲ್ ತುಂಡು ಹತ್ತಿ ಪದಾರ್ಥಗಳನ್ನು ಉತ್ಪಾದಿಸಿತ್ತು. ಈ ವೇಳೆಯಲ್ಲಿ ೩೫೩ ಪುರುಷರು, ೧೦೫ ಮಹಿಳೆಯರು, ೧೩೮ ಯುವಕರು ಹಾಗೂ ೩೪ ಬಾಲ ಕಾರ್ಮಿಕರು, ಒಟ್ಟಾರೆ ೬೩೦ ಜನರು ಕಾರ್ಮಿಕರಾಗಿ ದುಡಿಯುತ್ತಿದ್ದರು. ಆದರೆ ೧೮೮೫-೮೬ರಲ್ಲಿ ಅಂದರೆ ಮೈಸೂರು ಮಿಲ್ಲು ಪ್ರಾರಂಭವಾದ ಒಂದು ವರ್ಷದಲ್ಲಿ ಕೇವಲ ೨೨೯ ಕಾರ್ಮಿಕರು ಮಾತ್ರ ಇದ್ದಿದ್ದು[೨೧] ಕೇವಲ ಆರೇಳು ವರ್ಷಗಳಲ್ಲಿ ಸುಮಾರು ಮೂರು ಪಟ್ಟು ಹೆಚ್ಚಾಯಿತು. 'ಕ್ರಿಸ್ಟಲ್ ಮತ್ತು ಕಂಪನಿ' ಮೈಸೂರು ಮಿಲ್ಲನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಅಲ್ಪಾವಧಿಯ ಆಡಳಿತ ನಿಯೋಗಿಯಾಗಿ (ಮ್ಯಾನೇಜಿಂಗ್ ಏಜೆಂಟ್) ನೇಮಕಗೊಂಡಿತು. ಇವರು ೭,೦೦,೦೦೦ ರೂ. ಬಂಡವಾಳವನ್ನು ಹಾಗೂ ೪,೮೩,೫೦೦ ರೂ. ಸಾಲ ರೂಪದ ಬಂಡವಾಳ ತೊಡಗಿಸಿದರು. ಹೀಗಿದ್ದರೂ ೧೯೦೧ರಲ್ಲಿ ಕೆಟ್ಟ ಪರಿಸ್ಥಿತಿಯನ್ನು ಈ ಮಿಲ್ ಎದುರಿಸಬೇಕಾಗಿ ಬಂದಿತು. ಹೀಗಾಗಿ ಈ ಕಂಪನಿಯು ದಿವಾಳಿಯಾಯಿತು[೨೨]. ಕ್ರಮೇಣ ಇದು ೧೯೧೦ರಿಂದಾಚೆಗೆ ಉತ್ಪಾದನೆ ಹಾಗೂ ವ್ಯವಹಾರದಲ್ಲಿ ಚೇತರಿಕೆಯನ್ನು ಕಂಡಿತು. ಇದರಲ್ಲಿ ಮೈಸೂರು ರಾಜ್ಯ(ಪ್ರಭುತ್ವ)ದ ಪಾಲು ಸ್ವಲ್ಪಮಟ್ಟಿಗೆ ಇದ್ದಿತು.

ಎರಡನೆಯ ಹಾಗೂ ಮುಖ್ಯವಾದ ಹತ್ತಿ ಗಿರಣಿಯೆಂದರೆ, 'ಬೆಂಗಳೂರು ಉಲನ್, ಕಾಟನ್ ಅಂಡ್ ಸಿಲ್ಕ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪನಿ' ಅಥವಾ ಸರಳವಾಗಿ ಹೇಳುವುದಾದರೆ 'ಬಿನ್ನಿಮಿಲ್' ಎಂದು. ಬಿನ್ನಿ ಅಂಡ್ ಮದ್ರಾಸ್ ಕಂಪನಿಯು ನವೆಂಬರ್ ೧, ೧೮೮೮ರಲ್ಲಿ ಈ ಗಿರಣಿಯನ್ನು ಪ್ರಾರಂಭಿಸಿತು[೨೩]. ೧೮೯೦-೯೧ರಲ್ಲಿ ೬,೦೮,೩೪೧ ರೂ. ಮೌಲ್ಯದ ೧,೬೧೫,೮೪೪ ಬೇಲ್ ಹತ್ತಿಯನ್ನು (ನೂಲು) ಉತ್ಪಾದಿಸಿತು[೨೪]. ಈ ವೇಳೆಯಲ್ಲಿ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಒಟ್ಟು ಸಂಖ್ಯೆ ೬೫೦, ಅದರಲ್ಲಿ ೨೦೦ ಪುರುಷರು, ೧೦೦ ಮಹಿಳೆಯರು, ೨೦೦ ಯುವಕರು ಹಾಗೂ ೧೫೦ ಬಾಲ ಕಾರ್ಮಿಕರಿದ್ದರು[೨೫]. ೧೯೩೭ರ ವೇಳೆಗೆ ಒಟ್ಟು ಕಾರ್ಮಿಕರ ಸಂಖ್ಯೆ ೩೯೫೦ಕ್ಕೆ ತಲುಪಿತ್ತು. ಇದೇ ವರ್ಷ ಗಿರಣಿಯಲ್ಲಿ ೧೩೨೦ ಮಗ್ಗಗಳು ಹಾಗೂ ೮೦,೦೦೦ ಸ್ಪಿಂಡಲ್‌ಗಳು ಕಾರ್ಯನಿರ್ವಹಿಸುತ್ತಿದ್ದವು.

ಮತ್ತೊಂದು ಮಿಲ್ ಬೆಂಗಳೂರಿನಲ್ಲಿ ಮೊದಲನೆಯ ಮಹಾಯುದ್ಧದ ನಂತರ ಸೆಪ್ಟಂಬರ್ ೧೯೨೦ರಲ್ಲಿ ಪ್ರಾರಂಭವಾಯಿತು. ಇದನ್ನು 'ಮಿನರ್ವ ಮಿಲ್' ಎಂದು ಕರೆಯಲಾಗಿದ್ದು, ೩೦ ಲಕ್ಷ ಬಂಡವಾಳದೊಂದಿಗೆ 'ಸಿರೂರ್ ಅಂಡ್ ಕಂಪನಿ'ಯಡಿಯಲ್ಲಿ ಸ್ಥಾಪನೆಯಾಯಿತು[೨೬]. ಮೈಸೂರು ಸರ್ಕಾರ ೭೦ ಎಕರೆ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು ಈ ಮಿಲ್‌ಗೆ ಮಾರಾಟ ಮಾಡಿತು. ಇದು ೨೦,೦೦೦ ಸ್ಪಿಂಡಲ್‌ಗಳ ಸೌಲಭ್ಯ ಹೊಂದಿದ್ದು, ೧೬೧೦ ಕಾರ್ಮಿಕರು ಪ್ರತಿದಿನ ಕೆಲಸ ನಿರ್ವಹಿಸುತ್ತಿದ್ದರು. ಮಿನರ್ವ ಮಿಲ್ ಸ್ಥಾಪನೆಯಾಗುವ ಸಂದರ್ಭದಲ್ಲಿ ಎಂ. ಕಾಂತರಾಜ ಅರಸು ಅವರು ಮೈಸೂರಿನ ದಿವಾನರಾಗಿದ್ದರು. ೩೦ ಲಕ್ಷ ಬಂಡವಾಳವನ್ನು ೩೦೦೦೦ ಷೇರುಗಳಾಗಿ ವಿಭಾಗಿಸಿದ್ದು, ಪ್ರತಿ ಷೇರು ೧೦೦ ರೂ.ಗಳದ್ದಾಗಿತ್ತು[೨೭]. ೧೯೨೦ರಲ್ಲಿ ಮೈಸೂರಿನಲ್ಲಿ ಸ್ಥಾಪನೆಯಾದ ಶ್ರೀ ಕೃಷ್ಣರಾಜೇಂದ್ರ ಮಿಲ್ಲು ೧೯೨೩ರಲ್ಲಿ ತನ್ನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಫೆಬ್ರವರಿಯಲ್ಲಿ ಉತ್ಪಾದನಾ ಕಾರ್ಯವನ್ನು ಆರಂಭಿಸಿತು. ಹೀಗಾಗಿ ಬೆಂಗಳೂರಿನ ಮಿನರ್ವ ಮಿಲ್ಲು ಹಾಗೂ ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್ಲು ರಾಜ್ಯದಲ್ಲಿ ಏಕ ಕಾಲದಲ್ಲಿ ಸ್ಥಾಪನೆಗೊಂಡು ಉತ್ತಮ ರೀತಿಯಲ್ಲಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿಕೊಂಡ ಗಿರಣಿಗಳಾಗಿದ್ದವು.

೧೯೦೫ರ ವೇಳೆಗೆ ಬೆಂಗಳೂರು ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದುಕೊಂಡ ಭಾರತದ ಮೊದಲ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಈ ವೇಳೆಗೆ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದ ಹತ್ತಿ ಗಿರಣಿಗಳೆಂದರೆ ಬಿನ್ನಿಮಿಲ್ ಹಾಗೂ ಮೈಸೂರು ಮಹಾರಾಜ ಮಿಲ್ಲು. ನಂತರದ ಕೆಲವು ದಿನಗಳೊಳಗೆ ಈ ಎರಡೂ ಗಿರಣಿಗಳು ಸಹ ವಿದ್ಯುತ್ ಸೌಲಭ್ಯವನ್ನು ಪಡೆದುಕೊಂಡಿದ್ದವು. ಆದರೆ ಇದರ ದುಷ್ಪರಿಣಾಮವೆಂದರೆ ಕಾರ್ಮಿಕ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಕೆಯನ್ನು ಕಂಡಿತು. ಅಂದರೆ ಭಾಗಶಃ ಕಾರ್ಮಿಕರು ತಮ್ಮ ಕೆಲಸವನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು[೨೮]. ಈ ಸಮಸ್ಯೆ ಇಡೀ ಭಾರತದ ಕೈಗಾರಿಕೆ ಅಥವಾ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹೊಸದಾದ ಸವಾಲನ್ನೊಡ್ಡಿತು. ಈ ಬಗೆಯ ಸಮಸ್ಯೆ ಹಾಗೂ ಸವಾಲಿಗೆ ಬೆಂಗಳೂರಿನ ಗಿರಣಿಗಳು ಹಾಗೂ ಕಾರ್ಮಿಕರು ಮುನ್ನಡಿಯನ್ನು ಬರೆದಿರುವುದು ವಿಶೇಷ. ಏಕೆಂದರೆ ಈ ಸಂದರ್ಭಕ್ಕೆ ಮೈಸೂರು ಸಂಸ್ಥಾನ ಬ್ರಿಟಿಷರು ಹಾಕಿಕೊಟ್ಟ ಮಾದರಿಯ ಕೈಗಾರಿಕೆಗಳಿಂದ ಸ್ವಲ್ಪ ಹಿಂದೆ ಉಳಿದಿತ್ತು. ಅಲ್ಲದೆ ಬ್ರಿಟಿಷ್ ಪ್ರೆಸಿಡೆನ್ಸಿಯ ನಗರಗಳು (ಕಲ್ಕತ್ತಾ, ಬಾಂಬೆ, ಮದ್ರಾಸ್ ಇತ್ಯಾದಿ) ಕೈಗಾರಿಕೆಗಳ ದೃಷ್ಟಿಯಿಂದ ಬೆಳವಣಿಗೆ ಸಾಧಿಸಿದ್ದವು. ಆದರೆ ಬೆಂಗಳೂರಿನ ಗಿರಣಿಗಳು, ಕಾರ್ಖಾನೆಗಳು ಹಾಗೂ

ಕಾರ್ಮಿಕರು ಮೇಲಿನ ನಗರಗಳಲ್ಲಿನ ಕೈಗಾರಿಕೆಗಳನ್ನು ಹಿಂದಿಕ್ಕಿ ವಿದ್ಯುತ್ ಸೌಲಭ್ಯ ಪಡೆದಿದ್ದು ಜಿಜ್ಞಾಸೆಯೇ ಸರಿ. ಹಾಗಾಗಿ ಈ ವೇಳೆಯಲ್ಲಿ ಭಾರತದ ಯಾವುದೇ ನಗರಗಳ ಕೈಗಾರಿಕೆಗಳು ಅಥವಾ ಗಿರಣಿಗಳಲ್ಲಿನ ಕಾರ್ಮಿಕರು ಎದುರಿಸಿದ ಸಮಸ್ಯೆಗಿಂತ ಬೆಂಗಳೂರಿನ ಕಾರ್ಮಿಕರು ಎದುರಿಸಿದ ಸಮಸ್ಯೆಗಳು ತೀರಾ ಭಿನ್ನ ಎಂಬುದಾಗಿ ಒತ್ತಿ ಹೇಳಲಾಗಿದೆ. ಈ ವಿದ್ಯುತ್ ಸೌಲಭ್ಯದಿಂದ ಆದ ಸಕಾರಾತ್ಮಕ ಪರಿಣಾಮವೆಂದರೆ ೧೯೦೬ರಲ್ಲಿ ಉತ್ಪಾದನೆ ಹಾಗೂ ಮೌಲ್ಯದಲ್ಲಿ ಹಿಂದೆಂದಿಗಿಂತಲೂ ಬೆಳವಣಿಗೆಯನ್ನು ಸಾಧಿಸಲಾಯಿತು. ಒಟ್ಟಾರೆ ವಸಾಹತು ಕಾಲದ ಭಾರತದ ಹತ್ತಿ ಗಿರಣಿಗಳು ಬೆಳೆದು ಬಂದ ಬಗೆಯಲ್ಲಿ ೧೯೦೫ರ ಸಂದರ್ಭ ಒಂದು ದೊಡ್ಡ ತಿರುವು ಅಂತಲೇ ಭಾವಿಸಲಾಗಿದೆ.

ಜಾನಕಿ ನಾಯರ್ ಅವರು ಹೇಳುವಂತೆ ಬ್ರಿಟಿಷರು ಮೈಸೂರನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡ ನಂತರ ಇಲ್ಲಿರುವ ಕೈಗಾರಿಕೆಗಳೆಲ್ಲವೂ ಅವನತಿ ಹೊಂದಿದವು. ನಂತರ ೧೯ನೇ ಶತಮಾನದ ಕೊನೆಯ ವೇಳೆಗೆ ಇದನ್ನು ಮೆಟ್ಟಿ ನಿಂತು ಕೆಲವು ಕಾರ್ಖಾನೆಗಳು ಹಾಗೂ ಗಿರಣಿಗಳು ಮೈಸೂರಿನಲ್ಲಿ ಪ್ರಾರಂಭವಾದವು. ನಾಯರ್ ಅವರ ಹೇಳಿಕೆಯನ್ನು ಸ್ವೀಕರಿಸುತ್ತಾ ಈ ಚರ್ಚೆಯನ್ನು ಮುಂದುವರೆಸುವುದಾದರೆ ಬ್ರಿಟಿಷರು ೨೦ನೇ ಶತಮಾನದಲ್ಲಿಯೂ ಕೂಡ ಮೈಸೂರಿನಲ್ಲಿ ಅಥವಾ ಅಖಂಡ ಭಾರತದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಯಾವುದೇ ಉದ್ದೇಶವನ್ನು ಹೊಂದಿರಲಿಲ್ಲ. ಹಾಗೆಯೇ ಹತ್ತಿ ಗಿರಣಿಗಳ ವಿಚಾರದಲ್ಲಿಯೂ ಕೂಡ ಇದೇ ವಾದವನ್ನು ಮಾಡಬಹುದು. ಬ್ರಿಟಿಷರು ತನ್ನ ವಸಾಹತು ರಾಷ್ಟ್ರಗಳಲ್ಲಿ ಹತ್ತಿ ಗಿರಣಿಗಳನ್ನು ಸ್ಥಾಪಿಸುವ ಉದ್ದೇಶವನ್ನಂತೂ ಯಾವತ್ತಿಗೂ ಹೊಂದಿರಲೇ ಇಲ್ಲ. ಬದಲಾಗಿ ಕೇವಲ ತನ್ನ ರಾಷ್ಟ್ರದಲ್ಲಿನ ಹತ್ತಿ ಬಟ್ಟೆ ಕೈಗಾರಿಕೆಗಳಿಗೆ ಹಚ್ಚಾ ಹತ್ತಿಯನ್ನು ಉತ್ಪಾದಿಸುವ ದೇಶಗಳನ್ನಾಗಿ ನಿರ್ಮಾಣ ಮಾಡಿಕೊಂಡಿದ್ದವು. ಇದಕ್ಕೆ ಪುಷ್ಟಿ ನೀಡುವಂತೆ ೧೯೧೭ರಲ್ಲಿ ಲಂಡನ್‌ನಲ್ಲಿ ಜರುಗಿದ ಸಭೆಯಲ್ಲಿ ಕೆಲವು ಅಂಶಗಳನ್ನು ಸ್ಪಷ್ಟಪಡಿಸುತ್ತಾರೆ.

ಅ. ಪ್ರಸ್ತುತ ಸಂದರ್ಭದಲ್ಲಿ ಹತ್ತಿ ಪೂರೈಕೆಯಲ್ಲಿ ಗಂಭೀರ ಸಮಸ್ಯೆ ಎದುರಿಸುತ್ತಿದ್ದೇವೆ ಹಾಗೂ ಘನವೆತ್ತ ಸರ್ಕಾರ ಈ ಸಲುವಾಗಿ ಎಚ್ಚರಿಕೆ ವಹಿಸಬೇಕಾಗಿದೆ.

ಆ. ಈ ದೇಶದ (ಬ್ರಿಟನ್) ಭವಿಷ್ಯದ ಏಳಿಗೆಗಾಗಿ ಮತ್ತು ವಸಾಹತುಗಳ ಕಲ್ಯಾಣಕ್ಕಾಗಿ ಇದು ಅತ್ಯಗತ್ಯ. ಸಾಮ್ರಾಜ್ಯದ ಸೂಕ್ತ ಪ್ರದೇಶಗಳಲ್ಲಿ ತ್ವರಿತವಾಗಿ ಹತ್ತಿ ಬೆಳೆಯನ್ನು ಅಭಿವೃದ್ಧಿಪಡಿಸಬೇಕಾಗಿದೆ ಎಂದು ಹೇಳುತ್ತಾ ಅದಕ್ಕೆ ಕೆಲವು ಸಮರ್ಥನೆಗಳನ್ನು ನೀಡುತ್ತಾರೆ. ಅವುಗಳು:

- ವಿಶೇಷವಾಗಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಪ್ರತಿಕೂಲ ಪರಿಣಾಮ.
- ಹತ್ತಿ ಕೈಗಾರಿಕೆಯು ಎಲ್ಲಾ ಹಿನ್ನೆಲೆಯಿಂದಲೂ ಬ್ರಿಟಿಷರ ಬಹಳ ಪ್ರಮುಖ ಕೈಗಾರಿಕೆ.
- ಹೀಗಾಗಿ ಹತ್ತಿಯು ಬ್ರಿಟಿಷ್ ಗಿರಣಿಗಳ ಉತ್ಪದನಾಂಗಗಳಿಗೆ ಮುಖ್ಯವಾದ ಪರಿಕರವಾಗಿದೆ[೨೯].

ಮೇಲಿನ ಅಂಶಗಳಿಂದ ನಮಗೆ ಒಂದಂತೂ ಸ್ಪಷ್ಟ. ಅದು ಬ್ರಿಟಿಷರು ತನ್ನ ವಸಾಹತು ರಾಷ್ಟ್ರಗಳನ್ನು ಯಾವ ಹಿನ್ನೆಲೆಯಿಂದ ಪರಿಭಾವಿಸುತ್ತಿದ್ದರು ಅಥವಾ ಬ್ರಿಟನ್ ತನ್ನ ವಸಾಹತು ರಾಷ್ಟ್ರಗಳೊಂದಿಗಿನ ಮುಖಾಮುಖಿ ಹೇಗಿತ್ತು ಎಂಬುದು. ಇದಕ್ಕೆ ಒಂದು ಪ್ರಮುಖ ದೃಷ್ಟಾಂತ ಎಂದರೆ ಹಾಗೋ ಹೀಗೋ ಬಿನ್ನಿಮಿಲ್ಲು ಬ್ರಿಟಿಷರ ಆರ್ಥಿಕ ನೆರವು ಹಾಗೂ ಆಡಳಿತಾತ್ಮಕ ಬೆಂಬಲದಿಂದ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು (೧೯ನೇ ಶತಮಾನದ ಕೊನೆಯಲ್ಲಿ). ಆದರೆ ಇದು ಕಾರ್ಯಾರಂಭ ಮಾಡಿ ೪೦ ವರ್ಷಗಳ ಬಳಿಕ ಅಗ್ರಹಾರ ಕೆರೆಯ ನೀರನ್ನು ಬಳಸಿಕೊಂಡು ನೀರಿನ ಶೇಖರಣೆ, ಸೋಸುವ ವ್ಯವಸ್ಥೆ ಹಾಗೂ ಮಲಿನ ನೀರನ್ನು ಹೊರಗಡೆ ಬಿಡಲು ಚರಂಡಿ ಸೌಲಭ್ಯವನ್ನು ಅಳವಡಿಸಿಕೊಂಡಿತು[೩೦]. ಅಂದರೆ ೪೦ ವರ್ಷಗಳವರೆಗೂ ಕಾರ್ಮಿಕರು ಈ ಸೌಲಭ್ಯಗಳಿಂದ ವಂಚಿತರಾಗಿದ್ದರು. ಅವರಿಗೆ ಶುಚಿಯಾದ ನೀರನ್ನು ಪೂರೈಸುವಲ್ಲಿ ಮಾಲೀಕರು ಅಂದರೆ ಬ್ರಿಟನ್‌ನ ಬಿನ್ನಿ ಅಂಡ್ ಕಂಪನಿ ಸಂಪೂರ್ಣ ವಿಫಲವಾಗಿತ್ತು. ಇದು ಬ್ರಿಟಿಷರು ಹೇಗೆ ತನ್ನ ವಸಾಹತು ರಾಷ್ಟ್ರಗಳಲ್ಲಿ ಕೈಗಾರಿಕೆಗಳನ್ನು ಒಲ್ಲದ ಮನಸ್ಸಿನಿಂದ ಸ್ಥಾಪಿಸಿ ನಂತರ ಅದಕ್ಕೆ ಒದಗಿಸುತ್ತಿದ್ದ ಸೌಲಭ್ಯಗಳ ಕುರಿತು ಬೆಳಕು ಚೆಲ್ಲುತ್ತದೆ.

ವಸಾಹತು ಕಾಲಘಟ್ಟದ ಸೂರ್ಯಾಸ್ತಮದ ವೇಳೆಗೆ ಅಂದರೆ ದೇಶ ಸ್ವತಂತ್ರಗೊಳ್ಳುವುದಕ್ಕೂ ನಾಲ್ಕು ತಿಂಗಳ ಮುಂಚೆ ರಾಜ್ಯದಲ್ಲಿ ದಾವಣಗೆರೆ ಹಾಗೂ ಬೆಂಗಳೂರಿನಲ್ಲಿ ಒಂದೊಂದು ಹತ್ತಿ ಬಟ್ಟೆ ಕಾರ್ಖಾನೆಗಳು ಸ್ಥಾಪನೆಯಾದವು. ಶ್ರೀ ಗಣೇಶರ್ ಟೆಕ್ಸ್‌ಟೈಲ್ಸ್ ಲಿ., ಎಂಬ ಹೆಸರಿನೊಂದಿಗೆ ಐದು ಲಕ್ಷ ರೂ.ಗಳ ಬಂಡವಾಳದಿಂದ ದಾವಣಗೆರೆಯಲ್ಲಿ ಒಂದು ಜವಳಿ ಕೈಗಾರಿಕೆ ಪ್ರಾರಂಭವಾದರೆ, ಏಪ್ರಿಲ್ ೧೯೪೭ರಲ್ಲಿ ಬೆಂಗಳೂರು ನಗರದಲ್ಲಿ ಮೈಸೂರು ಆಯಲ್ಸ್ ಅಂಡ್ ಕಾಟನ್ ಕಂ. ಲಿ., ಎಂಬ ಕಾರ್ಖಾನೆಯು ೧೦ ಲಕ್ಷ ರೂ.ಗಳ ಬಂಡವಾಳದ ನೆರವಿನೊಂದಿಗೆ ಸ್ಥಾಪನೆ ಮಾಡುವುದಾಗಿ ನೋಂದಾಯಿಸಿಕೊಂಡಿತು[೩೧]. ಇದು ಎಣ್ಣೆ ಬೀಜದೊಂದಿಗೆ ಹತ್ತಿ ನೂಲುವ ಮತ್ತು ನೇಯುವ ಗಿರಣಿಯಾಗಿದ್ದಿತು. ಅಲ್ಲದೆ ಇದು ರೇಷ್ಮೆ ಹಾಗೂ ಸೆಣಬಿನ ಗಿರಣಿಯು ಆಗಿದ್ದಿತು.

ರಾಜ್ಯದಲ್ಲಿ ೧೯೪೮ರ ನವೆಂಬರ್ ವೇಳೆಗೆ ಹತ್ತು ಹತ್ತಿ ಗಿರಣಿಗಳು ಕಾರ್ಯ ನಿರ್ವಹಿಸುತ್ತಿದ್ದವು. ಮತ್ತೊಂದು ಗಿರಣಿಯು ದಾವಣಗೆರೆಯಲ್ಲಿ ಪ್ರಾರಂಭವಾಗುವುದರೊಂದಿಗೆ ಇದರ ಸಂಖ್ಯೆ ಹೆಚ್ಚಿಸಿಕೊಂಡಿತು. ಆ ಗಿರಣಿಯೇ ದೀಕ್ಷಿತ್ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿ., ಎಂಬುದಾಗಿದ್ದು, ಐದು ಲಕ್ಷ ರೂ.ಗಳ ಬಂಡವಾಳದೊಂದಿಗೆ ಹತ್ತಿ, ಉಣ್ಣೆ, ರೇಷ್ಮೆ ಹಾಗೂ ರೆಯಾನ್ ಬಟ್ಟೆಯನ್ನು ಉತ್ಪಾದನೆ ಮಾಡುವುದರೊಂದಿಗೆ ಕಾರ್ಯಾರಂಭ ಮಾಡಿತು[೩೨]. ಇಲ್ಲಿ ಗಮನಾರ್ಹವಾದ ಒಂದಂಶವೆಂದರೆ ದಾವಣಗೆರೆಯಲ್ಲಿ ಪ್ರಮುಖ ಎಂದು ಪರಿಗಣಿಸಬಹುದಾದ ಹತ್ತಿ ಗಿರಣಿಗಳು ಸ್ಥಾಪನೆಗೊಂಡಿದ್ದು ದೇಶ ಸ್ವತಂತ್ರಗೊಳ್ಳುವ ಪ್ರಕ್ರಿಯೆಯ ಕೊನೆಯಲ್ಲಿನ ಆಸುಪಾಸಿನ ಸಂದರ್ಭದಲ್ಲಿ ಹಾಗೂ ಸ್ವತಂತ್ರಗೊಂಡ ನಂತರದಲ್ಲಿ. ಹೀಗಿದ್ದೂ ಇದು 'ಕರ್ನಾಟಕದ ಮ್ಯಾಂಚೆಸ್ಟರ್' ಎಂಬ ಕೀರ್ತಿಗೆ ಪಾತ್ರವಾಗಿದ್ದು ಪ್ರಶ್ನಾರ್ಹ. ಏಕೆಂದರೆ ಈ ವೇಳೆಗಾಗಲೇ ಬೆಂಗಳೂರಿನಲ್ಲಿ ಬಹಳ ಹಿಂದಿನಿಂದಲೂ ದೊಡ್ಡ ಗಿರಣಿಗಳು ಕಾರ್ಯನಿರ್ವಹಿಸಿಕೊಂಡು ಬಂದಿದ್ದವು. ಅಲ್ಲದೆ ಹಲವು ಏಳುಬೀಳುಗಳ ನಡುವೆಯೇ ತನ್ನ ಅಸ್ತಿತ್ವ–ಅಸ್ಮಿತೆಯನ್ನು ಬಲಿಷ್ಟವಾಗಿ ಉಳಿಸಿಕೊಂಡು ಬಂದಿದ್ದವು.

ಸ್ವತಂತ್ರಗೊಂಡ ನಂತರ ೧೯೫೦ ಆಗಸ್ಟ್ ತಿಂಗಳಲ್ಲಿ ಜಂಟಿ ಷೇರು ಕಂಪನಿಯು ಬೆಂಗಳೂರಿನಲ್ಲಿ ಐದು (೫) ಲಕ್ಷ ರೂ.ಗಳ ಬಂಡವಾಳದೊಂದಿಗೆ ಶ್ರೀ ವಿನಾಯಕ ಮಿಲ್ಸ್ ಲಿ., ಎಂಬ ಹತ್ತಿ, ಉಣ್ಣೆ, ರೇಷ್ಮೆ ಹಾಗೂ ರೆಯಾನ್ ರೇಷ್ಮೆಯನ್ನು ಉತ್ಪಾದಿಸುವ ಗಿರಣಿಯನ್ನು ತೆರೆದಿತ್ತು. ಅಲ್ಲದೆ ಇದೇ ವರ್ಷದಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಸುಬ್ರಹ್ಮಣ್ಯಪುರದಲ್ಲಿ ಶ್ರೀ ಕೃಷ್ಣ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಲಿ., ಎಂಬ ಗಿರಣಿಯನ್ನು ಜಂಟಿ ಷೇರು ಕಂಪನಿಯು ೨೫ ಲಕ್ಷ ರೂ.ಗಳ ಬಂಡವಾಳದೊಂದಿಗೆ ಹತ್ತಿ, ಉಣ್ಣೆ, ರೇಷ್ಮೆ ಮತ್ತು ಸೆಣಬಿನ ಉತ್ಪಾದನೆ ಮಾಡುವ ಗಿರಣಿಯನ್ನು ತೆರೆಯಿತು[೩೩]. ಈ ಎರಡೂ ಗಿರಣಿಗಳು ದಾವಣಗೆರೆಯಲ್ಲಿ ಪ್ರಾರಂಭವಾದ ಗಿರಣಿಗಳಿಗೆ ಪೈಪೋಟಿ ನೀಡಲು ಅದರ ನಂತರ ಅದೇ ಮಾದರಿಯಲ್ಲಿ ಪ್ರಾರಂಭವಾದ ಗಿರಣಿಗಳಾಗಿದ್ದವು ಎಂಬುದು ವಿಶೇಷ. ಆದರೆ ಇವುಗಳೆಲ್ಲವೂ ಜಂಟಿ ಷೇರು ಕಂಪನಿ ಸಹಾಯದಿಂದ ಪ್ರಾರಂಭವಾಗಿದ್ದವು ಎಂಬುದನ್ನು ಮರೆಯಬಾರದು. ಇದು ಬೆಂಗಳೂರಿನಲ್ಲಿ ಹತ್ತಿ ಗಿರಣಿಗಳು ಸಾಗಿ ಬಂದ ಚರಿತ್ರೆಯಾಗಿದೆ.

## ೨.೨. ಪ್ರಭುತ್ವ ಮತ್ತು ಬಟ್ಟೆ ಕಾರ್ಖಾನೆಗಳ ಹಿನ್ನೆಲೆ

ಮೊದಲ ಅಧ್ಯಾಯದಲ್ಲಿ ಚರ್ಚಿಸಿದಂತೆ ಮೈಸೂರು ಪ್ರಾಂತ್ಯ ಏಕಕಾಲದಲ್ಲಿ ಎರಡು ರೀತಿಯ ಆಡಳಿತ ಅನುಭವಕ್ಕೆ ಒಳಗಾಗಿತ್ತು. ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವ ಭಾರತ ಉಪಖಂಡವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದು ಒಂದೆಡೆಯಾದರೆ, ಮೈಸೂರು ಪ್ರಾಂತ್ಯ ಸ್ಥಳೀಯ ರಾಜಪ್ರಭುತ್ವಕ್ಕೂ ಒಳಗಾಗಿತ್ತು. ಇದೇ ತೆರನಾದ ಸ್ಥಿತಿ ಭಾರತದ ೫೬೦ಕ್ಕೂ ಹೆಚ್ಚು ಸಂಸ್ಥಾನಗಳಿಗೂ ಇದ್ದಿತು. ಹೀಗಾಗಿ ಮೈಸೂರಿನಲ್ಲಿ ಯಾವುದೇ ಆರ್ಥಿಕ ಅಭಿವೃದ್ಧಿಯಾಗಬೇಕಾದರೂ ಎರಡು ರೀತಿಯ ಪ್ರಭುತ್ವಗಳ ನೆರವು, ಒಪ್ಪಿಗೆ ಅಲ್ಲದೆ ಪ್ರಭುತ್ವಗಳನ್ನು ಓಲೈಸುವ, ಮೆಚ್ಚಿಸುವ ಹಾಗೂ ತೃಪ್ತಿಪಡಿಸುವ ಕಾರ್ಯವನ್ನು ಸ್ಥಳೀಯ ಬಂಡವಾಳಶಾಹಿಗಳು, ಗಿರಣಿಗಳ ಮಾಲೀಕರು ಮಾಡಬೇಕಿತ್ತು. ಹಾಗೆಯೇ ಗಿರಣಿಗಳು ಸ್ಥಾಪನೆಯಾಗಿ ಪ್ರಾರಂಭದಲ್ಲಿ ಅನುಭವಿಸುತ್ತಿದ್ದ ನಷ್ಟದಿಂದ ಹೊರಬರಲು ಹಾಗೂ ಚೇತರಿಕೆಗೆ ಪ್ರಭುತ್ವವು ಇದರ ಜೊತೆ ಕೈಜೋಡಿಸಿದ್ದುಂಟು. ೧೯೦೦ರ ಅವಧಿಯಲ್ಲಿ ಮೈಸೂರು ರಾಜ್ಯವು ಒಟ್ಟು ಎಂಟು (೮) ಜಿಲ್ಲೆಗಳನ್ನು ಒಳಗೊಂಡಿತ್ತು. ಅವುಗಳು ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಹಾಸನ, ಶಿವಮೊಗ್ಗ, ಕಡೂರು ಹಾಗೂ ಚಿತ್ರದುರ್ಗ[೩೪]. ನಂತರದಲ್ಲಿ ಮಂಡ್ಯ ಇದರ ಜೊತೆಗೆ ಸೇರಿಕೊಂಡು ಏಕೀಕರಣ ಚಳವಳಿಯ ವೇಳೆಗೆ ಒಂಭತ್ತು (೯) ಜಿಲ್ಲೆಗಳಾಗಿ ನಿರ್ಮಾಣಗೊಂಡಿತ್ತು. ಇಷ್ಟು ಜಿಲ್ಲೆಗಳಲ್ಲಿ ಬೆಂಗಳೂರು ಕಮಿಷನರ್‌ಗಳ ಆಳ್ವಿಕೆಯ ಕಾಲದಿಂದಲೇ ಕಾರ್ಖಾನೆ, ವಾಣಿಜ್ಯ, ವ್ಯಾಪಾರ-ವಹಿವಾಟು ಇನ್ನಿತರೆ ಆರ್ಥಿಕ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿ ಮರುರೂಪ ಪಡೆದುಕೊಂಡಿತ್ತು. ೧೯ನೇ ಶತಮಾನದ ಕೊನೆಯ ವೇಳೆಗೆ ಇಲ್ಲಿ ಹತ್ತಿ ಗಿರಣಿಗಳು ಸ್ಥಾಪನೆಯಾಗುವುದರೊಂದಿಗೆ ರಾಜಕೀಯ, ಆರ್ಥಿಕ ಚಟುವಟಿಕೆಗಳನ್ನು ನಿರ್ಧರಿಸುವ ಸ್ಥಳವಾಗಿ ಬೆಳೆಯಿತು. ಇದೆಲ್ಲದರ ಹಿಂದೆ ಪ್ರಭುತ್ವದ ಪ್ರಭಾವ ಹಾಗೂ ಹಸ್ತಕ್ಷೇಪ ಇರುವುದು ಎದ್ದು ಕಾಣುತ್ತದೆ. ಬ್ರಿಟಿಷ್ ಪ್ರಭುತ್ವ (ಕಮಿಷನರ್‌ಗಳ ಆಳ್ವಿಕೆಯಲ್ಲಿ) ಮೈಸೂರು ಪ್ರಾಂತ್ಯದಲ್ಲಿ ಕೈಗಾರಿಕಾ ಆರ್ಥಿಕ ಚಟುವಟಿಕೆಗಳನ್ನು ಸುಧಾರಿಸುವ, ಅಭಿವೃದ್ಧಿಪಡಿಸುವ ಸಲುವಾಗಿ ಕೃಷಿ ಆರ್ಥಿಕ ಚಟುವಟಿಕೆಗಳನ್ನು ಮೂಲೆಗುಂಪು ಮಾಡಿತ್ತು. ಮುಂದುವರಿಕೆಯಾಗಿ ನಂತರದ ದಿನಗಳಲ್ಲಿ ಬೆಂಗಳೂರಿನಲ್ಲಿ ಬ್ರಿಟಿಷ್ ಬಂಡವಾಳಶಾಹಿಗಳೇ ನೇರವಾಗಿ ಬಂಡವಾಳ ಹೂಡಿ ಕಾರ್ಖಾನೆಗಳು, ಗಿರಣಿಗಳನ್ನು ಸ್ಥಾಪಿಸಲು ಮುಂದೆ ಬಂದರು. ಬಿನ್ನಿ ಅಂಡ್ ಕಂಪನಿಯ ಮೂಲಕ ಬೆಂಗಳೂರಿನಲ್ಲಿ ಸ್ಥಾಪನೆಯಾದ ಬಿನ್ನಿಮಿಲ್ಲು ಇದಕ್ಕೆ ಮೊದಲ ನಿದರ್ಶನವಾಗಿದೆ.

ಮೇಲಿನ ಚರ್ಚೆ ಹೇಗಿದ್ದರೂ ಪ್ರಭುತ್ವ (ಸ್ಥಳೀಯ ಮತ್ತು ಬ್ರಿಟಿಷ್) ಹತ್ತಿ ಗಿರಣಿಗಳನ್ನು ಪ್ರೋತ್ಸಾಹಿಸುವ ಮೂಲಕ ಹಲವು ರೀತಿಯ ನೆರವನ್ನು ನೀಡಲು ಮುಂದೆ ಬಂದಿದ್ದನ್ನು ಮರೆಮಾಚಿಸುವಂತಿಲ್ಲ. ಮೈಸೂರು ಮಹಾರಾಜ ಮಿಲ್ ಸ್ಥಾಪನೆಯಾಗಿ ಎರಡು ಮೂರು ವರ್ಷಗಳು ಕಳೆಯುತ್ತಿದ್ದಂತೆ ನಷ್ಟವನ್ನು ಅನುಭವಿಸಬೇಕಾಗಿ ಬಂದಿತು. ಆಗ ಮೈಸೂರು ಸರ್ಕಾರ ೨೫,೦೦೦ ರೂ.ಗಳ ಮೌಲ್ಯದ ಷೇರುಗಳನ್ನು ಕೊಂಡುಕೊಂಡಿತು[೩೫]. ಸ್ಥಳೀಯ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವಂತೆ ೧೮೮೮ ಹಾಗೂ ೧೮೮೯ರಲ್ಲಿ ಸುಲಭ ಕಂತಿನ ಮೂಲಕ ತೀರಿಸುವಂತಹ ೨೧/೨ ಲಕ್ಷ ರೂ.ಗಳ ಸಾಲದ ನೆರವನ್ನು ನೀಡಿತು[೩೬]. ಇದರಿಂದ ಗಿರಣಿಯು ಹೆಚ್ಚಿನ ಮಗ್ಗಗಳನ್ನು ಕೊಳ್ಳಲು ಸಾಧ್ಯವಾಗಿ ೧೨೦ ಇದ್ದ ಮಗ್ಗಗಳ ಸಂಖ್ಯೆ ೨೦೦ಕ್ಕೆ ಏರಿಕೆಯಾಯಿತು. ಹಾಗೆಯೇ ನೂಲಿನ ಉತ್ಪಾದನೆಯಲ್ಲಿಯೂ ಏರಿಕೆಯನ್ನು ಕಂಡು ೩೦೦೦ ಬೇಲ್‌ಗಳಿಂದ ೫೦೦೦ ಬೇಲ್‌ಗಳಿಗೆ ಏರಿಕೆಯಾಯಿತು.

ಬಿನ್ನಿಮಿಲ್ ಪ್ರಾರಂಭವಾಗಿ ಎರಡು ವರ್ಷಗಳ ನಂತರ ೧೮೯೦ರಲ್ಲಿ ಮೈಸೂರು ಸರ್ಕಾರ ೧೫೧೦೦ ರೂ.ಗಳ ಮೌಲ್ಯದ ಷೇರುಗಳನ್ನು ಹೂಡಿಕೆ ಮಾಡಿತು[೩೭]. ಅಲ್ಲದೆ ಈ ಮಿಲ್ ಸರ್ಕಾರದಿಂದ ಸೂಕ್ತವಾದ ನಿವೇಶನ ಹಾಗೂ ನೀರಿನ ಸೌಲಭ್ಯವನ್ನು ಪಡೆಯುವುದರ ಮೂಲಕ ಹೆಚ್ಚಿನ ರಿಯಾಯಿತಿಯನ್ನು ಗಿಟ್ಟಿಸಿಕೊಳ್ಳಲು ಸಾಧ್ಯವಾಯಿತು. ಮಿನರ್ವ ಮಿಲ್ಲು ಸ್ಥಾಪನೆಯಾದ ಸಂದರ್ಭದಲ್ಲಿಯೂ ಸರ್ಕಾರ ೭೦ ಎಕರೆ ಭೂ ಪ್ರದೇಶವನ್ನು ಸಾರ್ವಜನಿಕರಿಂದ ಸ್ವಾಧೀನಪಡಿಸಿಕೊಂಡು ಸರಾಸರಿ ಬೆಲೆಯಲ್ಲಿ ಗಿರಣಿಯ ಮ್ಯಾನೇಜಿಂಗ್ ಏಜೆನ್ಸಿ (ಸಿರೂರ್ ಅಂಡ್ ಕಂಪನಿ)ಗೆ ಮಾರಾಟ ಮಾಡಿತು[೩೮].

೧೯೨೩ರ ಫೆಬ್ರವರಿಯಲ್ಲಿ ಮೈಸೂರಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ ಪ್ರಾರಂಭವಾಯಿತು. ಇದರ ಒಟ್ಟು ಬಂಡವಾಳ ೪೦ ಲಕ್ಷ ರೂ.ಗಳು. ಅದರಲ್ಲಿ ಮೈಸೂರು ಸರ್ಕಾರದ ಷೇರು ೫ ಲಕ್ಷ ರೂ.ಗಳ ಮೌಲ್ಯದ್ದಾಗಿತ್ತು. ಈ ಮಿಲ್ಲು ೨೩ ಸಾವಿರ ಸ್ಪಿಂಡಲ್‌ಗಳನ್ನು ಒಳಗೊಂಡಿತ್ತು[೩೯]. ೧೯೨೪ ಮಾರ್ಚ್‌ನ ಕೊನೆಯಲ್ಲಿ ಮಿನರ್ವ ಮಿಲ್ಲು ತನ್ನ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿತು[೪೦]. ಇದು ೨೫೦೦೦ ಸ್ಪಿಂಡಲ್‌ಗಳನ್ನು ಹೊಂದಿದ್ದು, ಇದಕ್ಕೆ ನಿವೇಶವನ್ನು ಒದಗಿಸಿಕೊಟ್ಟ ಕೀರ್ತಿ ಸರ್ಕಾರಕ್ಕೆ ಸಲ್ಲುತ್ತದೆ. ೧೯೨೪ರ ಕೊನೆಯ ವೇಳೆಗೆ ಮೈಸೂರು ರಾಜ್ಯದಲ್ಲಿ ನಾಲ್ಕು ದೊಡ್ಡ ಹತ್ತಿ ಗಿರಣಿಗಳು ಕಾರ್ಯನಿರ್ವಹಿಸುತ್ತಿದ್ದು, ೧,೨೫,೦೦೦ ಸ್ಪಿಂಡಲ್‌ಗಳು ಹಾಗೂ ೧,೧೦೦ ಮಗ್ಗಗಳನ್ನು

ಹೊಂದಿದ್ದವು. ಆದರೆ ಎರಡು ವರ್ಷದ ಹಿಂದೆ ಅಂದರೆ ೧೯೨೨ರಲ್ಲಿ ೪೦,೦೦೦ ಸ್ಪಿಂಡಲ್‌ಗಳು ಹಾಗೂ ೪೦೦ ಮಗ್ಗಗಳು ಮಾತ್ರ ಇದ್ದಿತು. ಕೇವಲ ಎರಡು ವರ್ಷಗಳ ಅಂತರದಲ್ಲಿ ಮೂರು ಪಟ್ಟು ಏರಿಕೆಯನ್ನು ಕಂಡಿತು. ಈ ರೀತಿಯ ಬೆಳವಣಿಗೆಗೆ ಮುಖ್ಯ ಕಾರಣ ರಾಜ್ಯದ ಉದಾರ ನೆರವು ಎಂದರೆ ತಪ್ಪಾಗಲಾರದು. ಪ್ರಾರಂಭದಲ್ಲಿ ಬೆಂಗಳೂರಿನ ಮೈಸೂರು ಮಹಾರಾಜ ಮಿಲ್ಲು ಹಾಗೂ ಬಿನ್ನಿ ಮಿಲ್ಲುಗಳು ಅನೇಕ ಪಲ್ಲಟಗಳನ್ನು ಎದುರಿಸಬೇಕಾಗಿ ಬಂದಿತ್ತು. ಹೀಗಿದ್ದರೂ ಸರ್ಕಾರ ಹಣಕಾಸು ಹಾಗೂ ಇನ್ನಿತರೆ ಸಹಾಯವನ್ನು ನೀಡುವುದರ ಮೂಲಕ ಮೇಲೆತ್ತದೆ ಹೋಗಿದ್ದರೆ ಇಂದು ಅಂದರೆ ೧೯೨೪ರ ವೇಳೆಗೆ ಅವುಗಳು ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಲು ಸಾಧ್ಯವಾಗುತ್ತಿರಲಿಲ್ಲ[೪೧].

೧೯೨೯ರಲ್ಲಿ ವಿಶ್ವದಲ್ಲಿ ಆರ್ಥಿಕ ಮುಗ್ಗಟ್ಟು ಸಂಭವಿಸಿದ ಸಂದರ್ಭದಲ್ಲಿ ಬೆಂಗಳೂರಿನ ಹತ್ತಿ ಗಿರಣಿಗಳಾದ ಮೈಸೂರು ಮಿಲ್ಲು ಹಾಗೂ ಬಿನ್ನಿಮಿಲ್ಲು ಈ ಸಮಸ್ಯೆಯನ್ನು ಎದುರಿಸಿ ತೃಪ್ತಿದಾಯಕವಾದ ನಿರ್ವಹಣೆಯನ್ನು ಮುಂದುವರೆಸಿದ್ದವು. ಮಿನರ್ವ ಮಿಲ್ಲು ಸಹ ಅದೇ ದಶಕದ ಪ್ರಾರಂಭದಲ್ಲಿ ತಲೆ ಎತ್ತಿದ್ದರೂ ಪ್ರಾಥಮಿಕ ಹಂತದ ಸಮಸ್ಯೆಗಳನ್ನು ಎದುರಿಸಿ ತನ್ನ ಕಾರ್ಯವನ್ನು ಯಶಸ್ವಿಯಾಗಿ ಆರಂಭಿಸಿತ್ತು. ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಮಿಲ್ ಸಹ ಮುಗ್ಗಟ್ಟು ಪ್ರಾರಂಭವಾಗುವುದಕ್ಕೂ ಹಿಂದಿನ ವರ್ಷ (೧೯೨೮) ಕೆಲವು ಆತಂಕದ ಸ್ಥಿತಿಯನ್ನು ಎದುರಿಸಿದ್ದನ್ನು ಬಿಟ್ಟರೆ ೧೯೨೮ರ ದ್ವಿತೀಯಾರ್ದದಲ್ಲಿಯೇ ತನ್ನ ಸಮಸ್ಯೆಯಿಂದ ಹೊರಬಂದಿತು. ಮೈಸೂರು ರಾಜ್ಯದ ಯಾವುದೇ ಹತ್ತಿ ಗಿರಣಿಗಳು ಏಕೆ ಮುಗ್ಗಟ್ಟಿನ ಪೆಟ್ಟನ್ನು ತಿನ್ನಲಿಲ್ಲ? ಇಡೀ ದೇಶದ ಕೈಗಾರಿಕೆಗಳು, ಆರ್ಥಿಕ ವ್ಯವಸ್ಥೆ ಇದರ ಸುಳಿಯಲ್ಲಿ ಸಿಲುಕಿದ್ದರೂ ಮೈಸೂರು ರಾಜ್ಯ ಇದರಿಂದ ಹೊರತಾಗಿದ್ದುದು ಏಕೆ? ಈ ಪ್ರಶ್ನೆಗಳು ನಮ್ಮಲ್ಲಿ ಹಲವಾರು ಸಂದರ್ಭಗಳಲ್ಲಿ ಎದ್ದಿದ್ದುಂಟು. ಹಾಗೆಯೇ ಈ ಪ್ರಶ್ನೆಗಳಿಗೆ ಉತ್ತರವಾಗಿ ನಾಲ್ವಡಿ ಕೃಷ್ಣರಾಜರ ಆಳ್ವಿಕೆ ಹಾಗೂ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ದಕ್ಷ ಆಡಳಿತ ಹಾಗೂ ಮುಂಜಾಗರುಕತೆಯಿಂದ ಕೂಡಿದ ಮುತ್ಸದ್ದಿತನ ಎಂದರೆ ತಪ್ಪಾಗಲಾರದು. ಆದರೆ ಇದರಿಂದಾಚೆಗೆ ಕೆಲವು ಅಂಶಗಳು ಇವೆ ಎಂಬುದು ಈ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ. ಮೈಸೂರು ಸಂಸ್ಥಾನದಲ್ಲಿದ್ದ ಎಲ್ಲಾ ಹತ್ತಿ ಗಿರಣಿಗಳ ಮ್ಯಾನೇಜಿಂಗ್ ಏಜೆಂಟ್ (ಆಡಳಿತ ಮಂಡಳಿ)ಗಳು ಒಂದು ಪರೀಕ್ಷೆ ನಡೆಸಿ ಅದರ ಪ್ರಕಾರ ಮಿಲ್‌ಗಳ ಕಾರ್ಯದಕ್ಷತೆಗೆ ಯಾವುದೇ ರೀತಿಯ ವ್ಯತಿರಿಕ್ತ ಪರಿಣಾಮ ಆಗದಂತೆ ಉತ್ಪಾದನಾ ವೆಚ್ಚವನ್ನು ಕಡಿತಗೊಳಿಸುವ ನಿರ್ಧಾರಕ್ಕೆ ಬಂದಿದ್ದರು[೪೨].

ಇದಲ್ಲದೆ ಇದಕ್ಕೂ ಮುನ್ನವೇ ಸೆಂಟ್ರಲ್ ಪ್ರಾವಿನ್ಸಸ್‌ನಿಂದ ಒಬ್ಬ ಪರಿಣಿತನನ್ನು ಆಯ್ಕೆ ಮಾಡಿ ಅವನಿಗೆ ಮಿಲ್‌ಗಳ ಕಾರ್ಯವನ್ನು ಪರೀಕ್ಷಿಸುವ ಜವಾಬ್ದಾರಿಯನ್ನು ವಹಿಸಿತ್ತು. ಇವನು ಮ್ಯಾನೇಜಿಂಗ್ ಏಜೆಂಟ್‌ಗಳಿಗಿಂತ ಮೊದಲೇ ಒಂದು ವರದಿಯನ್ನು ತಯಾರು ಮಾಡಿ ಸೆಂಟ್ರಲ್ ಪ್ರಾವಿನ್ಸ್‌ಸ್‌ಗೆ ಶಿಫಾರಸ್ಸು ಮಾಡಿದ್ದನು[೪೩]. ಈ ಚರ್ಚೆ ಏನೇ ಇರಲಿ, ಆದರೆ ಇಲ್ಲಿ ಮಹಾ ಆರ್ಥಿಕ ಮುಗ್ಗಟ್ಟಿನಿಂದ ಹೊರಬರಲು ಎರಡೂ ಪ್ರಭುತ್ವಗಳು ನಿರ್ವಹಿಸಿದ ಜವಾಬ್ದಾರಿಗಿಂತ ಗಿರಣಿಗಳ ಮ್ಯಾನೇಜಿಂಗ್ ಏಜೆಂಟ್‌ಗಳು ನಿರ್ವಹಿಸಿದ ಪರಿಶ್ರಮ ಒಂದೆಜ್ಜೆ ಮುಂದು. ಈ ಏಜೆಂಟ್‌ಗಳ ಇಂಜಿನಿಯರರಾದ ಬಿ. ಸೀತಾರಾಮಚಾರ್ ಅವರಿಗೆ ಮಿಲ್ಲುಗಳನ್ನು ಪರೀಕ್ಷಿಸುವ ಜವಾಬ್ದಾರಿ ವಹಿಸಿದ್ದರು[೪೪]. ಸೀತಾರಾಮಚಾರ್ ಅವರು ಕೊಟ್ಟ ವರದಿ ಹೀಗಿದೆ : 'ಕೆಲಸದಲ್ಲಿನ ವೆಚ್ಚವನ್ನು ಸೂಕ್ತ ರೀತಿಯಲ್ಲಿ ಕಡಿತಗೊಳಿಸುವುದರ ಜೊತೆಗೆ ಗಿರಣಿಗಳು ಗರಿಷ್ಠ ಮಟ್ಟದ ದಕ್ಷತಾ ಸಾಮರ್ಥ್ಯವನ್ನು ಹೊಂದಿವೆ ಅಥವಾ ಕಾಯ್ದುಕೊಂಡಿವೆ'[೪೫]. ಇದೇ ಸಂದರ್ಭದಲ್ಲಿ ಮ್ಯಾನೇಜಿಂಗ್ ಏಜೆಂಟರುಗಳು ತಮ್ಮ ಕೊನೆಯ ಷೇರುದಾರರ ಸಭೆಯಲ್ಲಿ ವರದಿಯನ್ನು ಪ್ರಕಟಿಸಿ ಅದರನ್ವಯ ಜೂನ್ ೩೦, ೧೯೨೬ರ ವೇಳೆಗೆ ಗಿರಣಿಗಳು ೩೮೨೦೫ ರೂ.ಗಳ ಲಾಭವನ್ನು ಗಳಿಸಿವೆ ಎಂಬುದಾಗಿ ಘೋಷಿಸುವ[೪೬] ಮೂಲಕ ಆ ವರದಿಯನ್ನು ಸಮರ್ಥಿಸಿಕೊಂಡರು. ಇದು ಮೈಸೂರು ಪ್ರಾಂತ್ಯದ ಪರಿಸ್ಥಿತಿಯಾದರೆ ಭಾರತದಾದ್ಯಂತ ಕಾರ್ಯಾಚರಣೆಯಲ್ಲಿದ್ದ ಹತ್ತಿ ಗಿರಣಿಗಳು ಈ ಅವಧಿಯಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದವು. ಇದರಿಂದ ಹೊರಗಡೆ ಬರಲು ಹಲವಾರು ರೀತಿಯ ಕ್ರಮಗಳನ್ನು ಕೈಗೊಂಡರೂ ಏಣಗಾಡುವ ಪರಿಸ್ಥಿತಿ ಅವುಗಳದ್ದಾಗಿತ್ತು. 'ಹತ್ತಿ ಸುಂಕ' (ಕಾಟನ್ ಎಕ್ಸೈಸ್ ಡ್ಯೂಟಿ) ವನ್ನು ರದ್ದುಪಡಿಸಲಾಯಿತಾದರೂ ಫಲಿತಾಂಶ ಅಷ್ಟಕಷ್ಟೆ. ಆಗ ಭಾರತ ಸರ್ಕಾರದಿಂದ 'ವಿಶೇಷ ತೆರಿಗೆ ಮಂಡಳಿ' (ಸ್ಪೆಷಲ್ ಟ್ಯಾರಿಫ್ ಬೋರ್ಡ್) ನೇಮಕ ಮಾಡಬೇಕಾಗಿ ಬಂದಿತು[೪೭]. ಇದು ಏನನ್ನು ತೋರಿಸುತ್ತದೆಂದರೆ ಮುಗ್ಗಟ್ಟಿನ ಸಂದರ್ಭದಲ್ಲಿ ಕಠಿಣ ಪರಿಸ್ಥಿತಿಯನ್ನು ಯಶಸ್ವಿಯಾಗಿ ನಿಭಾಯಿಸಿದ ಪ್ರಾಂತ್ಯಗಳಲ್ಲಿ ಮೈಸೂರು ರಾಜ್ಯವೇ ಮೊದಲನೆಯದಾಗಿತ್ತು. ಅಷ್ಟೇಕೆ ಭಾರತ ಸರ್ಕಾರವೇ ಪರದಾಡುವ ಸ್ಥಿತಿ ಉಂಟಾಗಿ ಮೈಸೂರಿನ ಕಡೆ ತಿರುಗಿ ನೋಡುವಂತಾಗಿತ್ತು ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ.

೧೯೧೧ರ ನಂತರ ಮೈಸೂರು ಜಿಲ್ಲೆಯಲ್ಲಿ ಆರ್ಥಿಕ ಸಮಾವೇಶ (ಎಕನಾಮಿಕ್ ಕಾನ್ಫರೆನ್ಸ್) ನಡೆದು, ಇದರ ಅಂಗವಾಗಿ ೧೯೧೨ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ವಿಭಾಗವನ್ನು

ಸ್ಥಾಪಿಸಲಾಯಿತು. ೧೯೧೯ರಲ್ಲಿ ಕೇಂದ್ರೀಯ ಮಂಡಳಿಯ ಸಹಯೋಗದೊಂದಿಗೆ ನಡೆದ ಆರ್ಥಿಕ ಸಮಾವೇಶವು, ಕೈಗಾರಿಕೆಯಲ್ಲಿ ಶಾಶ್ವತವಾದ ಹಾಗೂ ಬದಲು ಮಾಡಬಹುದಾದ ಕೆಲವು ಗುಣಲಕ್ಷಣಗಳನ್ನು ತಿಳಿಸಿತು[೪೮]. ಇದರನ್ವಯ ಜನರಿಗೆ ಕೈಗಾರಿಕೆಗಳಲ್ಲಿ ತರಬೇತಿಗಾಗಿ ಕೆಲವು ವಿಶೇಷ ಸೌಲಭ್ಯಗಳನ್ನು ಹಾಗೂ ಭಾರತ ಮತ್ತು ಹೊರಗಿನ ದೇಶಗಳಿಂದ ಸಂಶೋಧನೆಗೆ ಧನಸಹಾಯವನ್ನು ನೀಡಿ ಪ್ರೋತ್ಸಾಹಿಸಲಾಯಿತು. ೧೯೪೫ರಲ್ಲಿ ಮೈಸೂರು ಜಿಲ್ಲೆಯಲ್ಲಿ ಬಟ್ಟೆಯನ್ನು ನೂಲುವ ಮತ್ತು ನೇಯುವ ದೊಡ್ಡ ಕಾರ್ಖಾನೆಗಳು ಸ್ಥಾಪನೆಯಾದವು. ಅವುಗಳಲ್ಲಿ ಮುಖ್ಯವಾಗಿ ರಾಜಲಕ್ಷ್ಮಿ ವೀವಿಂಗ್ ಫ್ಯಾಕ್ಟರಿ (ಕಾರ್ಮಿಕರ ಸಂಖ್ಯೆ ೧೦), ಶ್ರೀ ಆಂಜನೇಯ ವೀವಿಂಗ್ ಫ್ಯಾಕ್ಟರಿ (೨೦), ಚಾಮುಂಡೇಶ್ವರಿ ವೀವಿಂಗ್ ಫ್ಯಾಕ್ಟರಿ (೧೦), ಮಾರುತಿ ಪವರ್ ಲೂಮ್ ಫ್ಯಾಕ್ಟರಿ (೧೦), ಜಯಚಾಮುಂಡೇಶ್ವರಿ ವೀವಿಂಗ್ ಫ್ಯಾಕ್ಟರಿ (೧೭), ಶ್ರೀ ಕನ್ನಿಕ ಪರಮೇಶ್ವರಿ ವೀವಿಂಗ್ ಫ್ಯಾಕ್ಟರಿ (೩೨), ಶ್ರೀ ಸಂಜೀವರಾಯಸ್ವಾಮಿ ವೀವಿಂಗ್ ಫ್ಯಾಕ್ಟರಿ (೧೦), ಪದ್ಮನಾಭ ವೀವಿಂಗ್ ಫ್ಯಾಕ್ಟರಿ (೨೫), ಕಾಳಿ ವೀವಿಂಗ್ ಮತ್ತು ಡೈಯಿಂಗ್ ಫ್ಯಾಕ್ಟರಿ (೧೩), ದ ಗವರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ–ಮೈಸೂರು (೨೨೨), ಬದನವಾಲ ವೀವಿಂಗ್ ಅಂಡ್ ಸ್ಪಿನ್ನಿಂಗ್ ಸೆಂಟರ್–ಬದನವಾಲ (೬೩೦೦), ದ ಮೈಸೂರು ಸಿಲ್ಕ್ ಫಿಲೆಟ್ಯೂರ್ ಲಿ. (೭೩೩), ದ ಸಿಲ್ಕ್ ಥ್ರೋಯಿಂಗ್ ಅಂಡ್ ವೀವಿಂಗ್ ಫ್ಯಾಕ್ಟರಿ (೬೮) ಇತ್ಯಾದಿ ಬಟ್ಟೆಗೆ ಸಂಬಂಧಿಸಿದ (ಹತ್ತಿ ಹಾಗೂ ರೇಷ್ಮೆ) ನೇಯ್ಗೆ ಮತ್ತು ನೂಲುವ ಕಾರ್ಖಾನೆಗಳು ಸ್ಥಾಪನೆಯಾದವು[೪೯]. ಈ ಸಣ್ಣ ಕಾರ್ಖಾನೆಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವ ಉದ್ದೇಶ ಮೈಸೂರಿನಲ್ಲಿ ತರಬೇತಿ ಶಾಲೆಗಳು ಪ್ರಾರಂಭವಾದ ನಂತರ (ಪ್ರಭುತ್ವದ ಬೆಂಬಲದಿಂದ) ಈ ಬೆಳವಣಿಗೆಯನ್ನು ಕಾಣಲು ಸಾಧ್ಯವಾಯಿತು ಎಂಬುದನ್ನು ಮನವರಿಕೆ ಮಾಡಿಕೊಡಲು.

ಮೈಸೂರು ಆರ್ಥಿಕವಾಗಿ ಕೃಷಿಯ ಮೇಲೆ ಹೆಚ್ಚಿನದಾಗಿ ಅವಲಂಬನೆಗೊಂಡಿದ್ದರೂ ಉತ್ತಮ ಗುಣಮಟ್ಟದ ಹತ್ತಿ ಬೆಳೆಯುವ ಯೋಗ್ಯ ಭೂಮಿಯನ್ನು ಹೊಂದಿರಲಿಲ್ಲ. ಕಾರ್ನವೋನಿಕಾ, ಪೆರುವಿಯನ್ ಹಾಗೂ ಸೀ–ಐಸಾಂಡ್ ಹತ್ತಿಯನ್ನು ವಿಶೇಷ ಸಂದರ್ಭಗಳಲ್ಲಿ ಹಾಗೂ ಉತ್ತಮ ಮಣ್ಣಿನಲ್ಲಿ ಮಾತ್ರ ಬೆಳೆಯಲಾಗುತ್ತಿತ್ತು[೫೦]. ಆದರೆ ಇದರ ಕೊರತೆಯನ್ನು ಮೈಸೂರು ರಾಜ್ಯ ಎದುರಿಸುತ್ತಿತ್ತು. ೧೯೦೯ರ ವೇಳೆಗೆ ಚಿತ್ರದುರ್ಗ ಜಿಲ್ಲೆಯು ಹತ್ತಿ ಬೆಳೆಯ ಉತ್ಪಾದನೆಯಲ್ಲಿ ಏರಿಕೆಯನ್ನು ಕಾಣತೊಡಗಿತು. ದೇಶೀಯ ಪ್ರಭುತ್ವವು ಇದಕ್ಕೆ ಉತ್ತೇಜನವನ್ನು ನೀಡಿತ್ತು. ಒಂಭತ್ತು ವಿಧದ ಹತ್ತಿ ಬೀಜದ ತಳಿಯನ್ನು ಹೆಬ್ಬಾಳದ ಫಾರ್ಮ್‌ನಲ್ಲಿ ಪರೀಕ್ಷೆಗೆ ಒಳಪಡಿಸಲಾಯಿತಾದರೂ

ಇಳುವರಿ ಮಾತ್ರ ಅತೃಪ್ತಿದಾಯಕವಾಗಿತ್ತು[೫೧]. ಆಗಿದ್ದೂ ದೊಡ್ಡಹಟ್ಟಿಯಲ್ಲಿ ಉತ್ತಮ ಇಳುವರಿಯನ್ನು ಪಡೆಯಲಾಯಿತು. ಹೀಗಾಗಿ ದಾವಣಗೆರೆ ಹತ್ತಿರ ಭೂಮಿಯನ್ನು ಗುತ್ತಿಗೆಗೆ ಪಡೆದುಕೊಂಡು ಹತ್ತಿ ಬೀಜದ ತಳಿಯ ಪರೀಕ್ಷೆ ಕಾರ್ಯ ಆರಂಭಿಸಲಾಯಿತು. ಅಲ್ಲದೆ ಇದನ್ನು ಹಿರಿಯೂರು ಫಾರ್ಮ್‌ಗೆ ನಂತರದ ದಿನಗಳಲ್ಲಿ ಸ್ಥಳಾಂತರಿಸಲಾಯಿತು[೫೨]. ಈ ಪ್ರಯತ್ನಗಳು ದಾವಣಗೆರೆಯಲ್ಲಿ ಹತ್ತಿ ಗಿರಣಿಗಳು ತಲೆ ಎತ್ತಲು ವೇದಿಕೆಯನ್ನು ಸೃಷ್ಟಿಮಾಡಿತು.

೧೯೧೨ರಲ್ಲಿ ಮೈಸೂರು ರಾಜ್ಯದಲ್ಲಿ ಒಂದು ಹೊಸ ಬೆಳವಣಿಗೆ ಕಂಡುಬಂದಿತು. ಅದು ಕೈಗಾರಿಕೆಗಳು ಹಾಗೂ ವಾಣಿಜ್ಯಕ್ಕಾಗಿ ಪ್ರತ್ಯೇಕ ಇಲಾಖೆಯನ್ನು ಸರ್ಕಾರದಿಂದ ರಚಿಸಲಾಯಿತು. ಆಲ್ಫ್ರೆಡ್ ಚಾಟರ್‌ಟನ್ ಅವರು ಕೈಗಾರಿಕೆಗಳ ವಿಶೇಷ ಸಲಹೆಗಾರರಾದರು. ಅಲ್ಲದೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಇವರನ್ನು ನಿರ್ದೇಶಕರನ್ನಾಗಿ (ಪ್ರಭಾರಿ) ಆಯ್ಕೆ ಮಾಡಲಾಯಿತು[೫೩]. ಈ ಇಲಾಖೆಯು ಮೂರು ಮುಖ್ಯ ವಿಭಾಗಗಳ ಅಡಿಯಲ್ಲಿ ತನ್ನ ಕಾರ್ಯವನ್ನು ನಿರ್ವಹಿಸಲು ಮುಂದಾಯಿತು.

೧. ಸರ್ಕಾರದ ವೆಚ್ಚದಲ್ಲಿ ಕಾರ್ಯನಿರ್ವಹಿಸುವ ಪ್ರಾಯೋಗಿಕ ಕೈಗಾರಿಕೆಗಳು.

೨. ಖಾಸಗಿ ವ್ಯಕ್ತಿಗಳು ಅವರ ಸ್ವಂತ ವೆಚ್ಚದಲ್ಲಿಯೇ ಕಾರ್ಯನಿರ್ವಹಿಸುವ ಕೈಗಾರಿಕೆಗಳು.

೩. ಕೈಗಾರಿಕೆಗಳ ಸಾಮಾನ್ಯ ವಿಚಾರಣೆ[೫೪].

ಇದರನ್ವಯ ಮೈಸೂರು ರಾಜ್ಯದ ಹತ್ತಿ ಗಿರಣಿಗಳೆಲ್ಲವೂ (ಬೆಂಗಳೂರು ಒಳಗೊಂಡಂತೆ) ಎರಡನೆಯ ವಿಭಾಗದ ಅಡಿಯಲ್ಲಿ ಬರಲು ಪ್ರಾರಂಭಿಸಿದವು. ಈ ಬೆಳವಣಿಗೆಯಲ್ಲಿ ಮೈಸೂರು ಸಂಸ್ಥಾನದ ಪ್ರಭುತ್ವಕ್ಕಿಂತ ಬ್ರಿಟಿಷ್ ವಸಾಹತುಶಾಹಿ–ಪ್ರಭುತ್ವದ ಪಾತ್ರ ಎದ್ದು ಕಾಣುವಂತದ್ದಾಗಿದೆ. ಆದರೆ ಇದರಿಂದ ನಂತರದ ವರ್ಷಗಳಲ್ಲಿ ಉತ್ಪಾದನೆ ಹಾಗೂ ಲಾಭಾಂಶದಲ್ಲಿ ಹೇಳಿಕೊಳ್ಳುವಂತಹ ಏರಿಕೆಯನ್ನು ಕಾಣಲು ಸಾಧ್ಯವಾಗಲಿಲ್ಲ. ಮೈಸೂರು ರಾಜ್ಯಕ್ಕೂ ಇದು ಅರ್ಥವಾದಂತಾಯಿತು. ಹೀಗಾಗಿ ಅದು ತನ್ನ ಮೊದಲಿನ ಪಾತ್ರವನ್ನು ನಿರ್ವಹಿಸಲು ಮುಂದಾಯಿತು. ಅದಕ್ಕೆ ಒಂದು ಉದಾಹರಣೆ : ಬೆಂಗಳೂರು ಕಾಟನ್, ಉಲನ್ ಅಂಡ್ ಸಿಲ್ಕ್ ಮಿಲ್ಸ್ (ಬಿನ್ನಿ ಮಿಲ್ಲು) ಹಾಗೂ ಮೈಸೂರು ಮ್ಯಾನ್ಯುಫ್ಯಾಕ್ಚರಿಂಗ್ ಅಂಡ್ ಸ್ಪಿನ್ನಿಂಗ್ ಕಂಪನಿಗಳಿಗೆ ಪ್ರಾರಂಭದ ಹಂತಗಳಲ್ಲಿ ಸರ್ಕಾರದಿಂದ ನೆರವು ಸಿಕ್ಕಿತು. ಹೀಗಾಗಿ ಇವುಗಳು ತನ್ನ ಸಾಮರ್ಥ್ಯಕ್ಕಿಂತ ಎರಡು ಪಟ್ಟು ಹೆಚ್ಚಿನ

ಲಾಭಗಳಿಸಲು ಸಾಧ್ಯವಾಯಿತು. ೧೯೨೫ರಲ್ಲಿ ಹತ್ತಿ ಗಿರಣಿಗಳಲ್ಲಿ ಮುಗ್ಗಟ್ಟು ಸಂಭವಿಸಿತು. ಆಗ ಸರ್ಕಾರ ಆ ವರ್ಷ ಹತ್ತಿಯ ಮೇಲಿನ ಅಬಕಾರಿ ಸುಂಕವನ್ನು ರದ್ದುಪಡಿಸುವುದರ ಮೂಲಕ ಗಿರಣಿಗಳು ಚೇತರಿಸಿಕೊಳ್ಳಲು ಅನುವುಮಾಡಿಕೊಟ್ಟಿತು[೫೫]. ನಂತರ ೧೯೨೬, ಏಪ್ರಿಲ್ ೧ರಂದು ಸ್ಥಳೀಯ ಗಿರಣಿಗಳಿಂದ ಉತ್ಪಾದನೆಯಾಗುತ್ತಿದ್ದ ತುಂಡು ಹತ್ತಿ ವಸ್ತುಗಳ ಮೇಲಿನ ಸುಂಕವನ್ನೂ ಸಹ ರದ್ದುಪಡಿಸಿತು[೫೬]. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಚಾಟರ್‌ಟನ್ ಅವರು ಎಷ್ಟೇ ದಕ್ಷ ಅಧಿಕಾರಿಯಾಗಿದ್ದರೂ ಅವರು ತಂದಂತಹ ಯೋಜನೆಗಳು ವಿಫಲ ಹೊಂದಿದವು. ಮತ್ತೊಂದು ಅಂಶವೆಂದರೆ ಎಲ್ಲಾ ಸಂದರ್ಭಗಳಲ್ಲೂ ಪ್ರಭುತ್ವ ನೆರವು ಹಾಗೂ ಸಲಹೆ ಸೂಚನೆಗಳನ್ನು ನೀಡುವುದರ ಮೂಲಕ ತನ್ನ ಇರುವಿಕೆ ಹಾಗೂ ಅಸ್ತಿತ್ವವನ್ನು ಖಾತ್ರಿಪಡಿಸಿಕೊಳ್ಳುತ್ತಿತ್ತು.

೧೯೨೬ರಲ್ಲಿ ಬ್ರಿಟಿಷ್ ಭಾರತದಲ್ಲಿ 'ವೃತ್ತಿ ಅಥವಾ ವರ್ತಕ ಸಂಘಟನಾ ಕಾಯ್ದೆ' (ಟ್ರೇಡ್ ಯೂನಿಯನ್ ಆಕ್ಟ್) ಜಾರಿಗೆ ಬಂದಿತು. ಆ ಅವಧಿಯಲ್ಲಿ ಬ್ರಿಟಿಷ್ ಪ್ರಸಿಡೆನ್ಸಿಗಳಾದ ಮದ್ರಾಸು, ಬಾಂಬೆ, ಬಂಗಾಳ, ಯುನೈಟೆಡ್ ಪ್ರಾವಿನ್ಸಸ್, ಪಂಜಾಬ್, ಸೆಂಟ್ರಲ್ ಪ್ರಾವಿನ್ಸಸ್, ಬಿಹಾರ್ ಮತ್ತು ಒರಿಸ್ಸಾ, ಅಸ್ಸಾಂ, ವಾಯುವ್ಯ ಗಡಿ ಪ್ರಾಂತ್ಯಗಳು (ಎನ್‌ಡಬ್ಲ್ಯೂಎಫ್‌ಪಿ), ಅಜ್ಮೀರ್ ಮತ್ತು ಮೇವಾರ, ಡೆಲ್ಲಿ ಮುಂತಾದ ಕಡೆಗಳಲ್ಲಿ ಕಾಟನ್ ಜನ್ನಿಂಗ್ ಮತ್ತು ಪ್ರೆಸ್ಸಿಂಗ್ ಮಿಲ್ಲುಗಳು ಪ್ರಾರಂಭವಾದವು[೫೭]. ಇವುಗಳಿಗೆ ಬ್ರಿಟಿಷರು ಪ್ರೋತ್ಸಾಹವನ್ನೂ ನೀಡಿದ್ದರು. ಆದರೆ ಮೈಸೂರು ರಾಜ್ಯದಲ್ಲಿ ಈ ರೀತಿಯ ಬೆಳವಣಿಗೆಯನ್ನು ನೋಡಲು ಸಾಧ್ಯವಿಲ್ಲ. ಪ್ರಭುತ್ವವು (ಮೈಸೂರು ರಾಜಪ್ರಭುತ್ವ) ಸ್ವಯಂ ಪ್ರೇರಣೆಯಿಂದ ಪ್ರೋತ್ಸಾಹಿಸಿ 'ವರ್ತಕ ಸಂಘಟನಾ ಕಾಯ್ದೆ'ಯನ್ನು ತನ್ನ ರಾಜ್ಯದಲ್ಲಿ ವಿಸ್ತರಿಸುವ ಗೊಡವೆಗೆ ಹೋಗದೇ ಇದ್ದಿದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ. ಇದರ ಬಗ್ಗೆ ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಹಲವು ಸಂದರ್ಭಗಳಲ್ಲಿ ಮೈಸೂರಿನ ರಾಜಪ್ರಭುತ್ವವು ಬೆಂಗಳೂರಿನ ಹತ್ತಿಗಿರಣಿಗಳ ಬೆಳವಣಿಗೆಗೆ ಕೈಜೋಡಿಸಿದ್ದುಂಟು. ಬಿನ್ನಿ ಮಿಲ್ಲಿನ ಆಡಳಿತ ನಿರ್ದೇಶಕರು ೧೯೨೮ರಲ್ಲಿ ಮಿಲ್ಲನ್ನು ವಿಸ್ತರಿಸುವ ಹಿನ್ನೆಲೆಯಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ವಿಷಯವಾಗಿ ಮೈಸೂರು ಸರ್ಕಾರಕ್ಕೆ ಪತ್ರವೊಂದನ್ನು ಬರೆದರು. ಆಗ ಆ ಪತ್ರಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿತು[೫೮]. ಈ ಸ್ವಾಧೀನದ ಉದ್ದೇಶ ಗಿರಣಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಗೃಹ ಸೌಲಭ್ಯವನ್ನು

ಒದಗಿಸುವುದಾಗಿತ್ತು. ೧೯೩೪ರಲ್ಲಿ ಬಿನ್ನಿಮಿಲ್‌ನ ನಿರ್ದೇಶಕರಾದ ಬಿ.ಡಬ್ಲು. ಬ್ಯಾಚುಲರ್ ಅವರು ದಿವಾನರಾದ ಮಿರ್ಜಾ ಇಸ್ಮಾಯಿಲ್ ಅವರಿಗೆ ಹತ್ತಿ ಗಿರಣಿಗಳ ಮೇಲಿನ ಸುಂಕ ಮಸೂದೆ (ಟಾರಿಫ್ ಬಿಲ್) ವಿಚಾರವಾಗಿ ಪತ್ರ ವ್ಯವಹಾರ ನಡೆಸಿದರು[೫೯]. ಈ ಸಂದರ್ಭದಲ್ಲಿ ದಿವಾನರು ಇದಕ್ಕೆ ಸಕರಾತ್ಮಕವಾಗಿ ಪ್ರತಿಕ್ರಿಯಿಸಿದ್ದೂ ಉಂಟು. ೧೯೩೫ರ ವೇಳೆಗೆ ಬೆಂಗಳೂರಿನ ಗಿರಣಿಗಳಿಂದ ಸಂಗ್ರಹವಾಗುತ್ತಿದ್ದ ಕಂದಾಯ ೫೪೩೪ ರೂ.ಗಳು. ೧೯೩೫ಕ್ಕೂ ಪೂರ್ವದಲ್ಲಿ ಇದು ೨೩೦೦ ರೂ.ಗಳು ಇದ್ದಿತು. ಇಷ್ಟು ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಲು ಮಿನರ್ವ ಮಿಲ್ಲು ಹಾಗೂ ಮೈಸೂರು ಮಿಲ್ಲು ಕಾರಣ ಎಂಬುದಾಗಿ ಸರ್ಕಾರ ಸ್ಪಷ್ಟನೆಯನ್ನು ಕೊಟ್ಟಿತು[೬೦].

ದೇಶ ಸ್ವತಂತ್ರಗೊಂಡಾಗ, ಮೈಸೂರಿನಲ್ಲಿ ಪ್ರಜಾತಾಂತ್ರಿಕ ಮಾದರಿಯ ಸರ್ಕಾರ ಎರಡು ತಿಂಗಳ ನಂತರ (೨೭ ಸೆಪ್ಟಂಬರ್ ೧೯೪೭) ಜಾರಿಯಾಯಿತು. ರಾಜ ಪ್ರಭುತ್ವವು ಕಾರ್ಖಾನೆಗಳ ಹಾಗೂ ಬಂಡವಾಳಶಾಹಿಗಳ ಪರ ಇದ್ದಂತೆ, ಪ್ರಜಾಪ್ರಭುತ್ವವೂ ಇದರ ಪರ ಇದ್ದಿದನ್ನು ಕಾಣಬಹುದು. ರಾಜ್ಯದ ಜವಳಿ ಗಿರಣಿಗಳು ಚೇತರಿಸಿಕೊಳ್ಳುವ ಉದ್ದೇಶದಿಂದ ಸರ್ಕಾರವು ಅವುಗಳಿಗೆ ೧,೬೪,೧೦೬ ರೂ.ಗಳಷ್ಟು ಮೊತ್ತದ ವಿಶೇಷ ಸಾಲವನ್ನು ಮಂಜೂರು ಮಾಡಿತು[೬೧]. ಇದರ ಬಗ್ಗೆ ನಮಗೆ ಯಾವುದೇ ತಕರಾರು ಆಗಲಿ ಅಥವಾ ವಿರೋಧವಾಗಲೀ ಇಲ್ಲ. ಏಕೆಂದರೆ ದೇಶದ ಆರ್ಥಿಕ ಬೆಳವಣಿಗೆಗೆ ಕೈಗಾರಿಕೆಗಳು ಹಾಗೂ ಅವುಗಳ ಅಭಿವೃದ್ಧಿ ನಿರ್ಣಾಯಕ ಪಾತ್ರವಹಿಸುತ್ತದೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯು ಇದೇ ರೀತಿಯ ಆದ್ಯತೆ ಕಾರ್ಮಿಕರಿಗೂ ನೀಡುತ್ತಾ ಬರಬೇಕು. ಆಗ ಮಾತ್ರ ಸಮಾಜವಾದ ಹಾಗೂ ಸಮತಾವಾದದ ಆಶಯ ಪ್ರಜಾಪ್ರಭುತ್ವದಿಂದ ಈಡೇರಲು ಸಾಧ್ಯ. ಇವತ್ತಿಗೂ ಅಸಂಘಟಿತ, ದಿನಗೂಲಿ ಕಾರ್ಮಿಕರ ಪರಿಸ್ಥಿತಿಯನ್ನು ನೋಡಿದರೆ ಒಂದು ಸಾರಿ ಮತ್ತೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕುರಿತು ಪ್ರಶ್ನೆ ಹಾಗೂ ಅನುಮಾನ ಎದುರಾಗುತ್ತದೆ.

### ೨.೩. ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಸಂದರ್ಭ

ಭಾರತದ ಚರಿತ್ರೆಯಲ್ಲಿ ಮೈಸೂರು ಸಂಸ್ಥಾನ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಇದು ವಿಶೇಷ ಛಾಪನ್ನು ಮೂಡಿಸಿದ್ದು ೧೮೩೦ ರಿಂದೀಚೆಗೆ. ಟಿಪ್ಪು ಮತ್ತು ಹೈದರ್ ಕಾಲದಲ್ಲಿ ಮೈಸೂರು ಸಂಸ್ಥಾನ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿತು. ಇವರ ಕಾಲ

ಆಡಳಿತ ಕ್ರಮ, ವಾಣಿಜ್ಯ-ವ್ಯವಹಾರ, ಸೈನಿಕ ಪದ್ಧತಿ, ಹಣಕಾಸಿನ ವ್ಯವಹಾರ, ರಾಜಕೀಯ, ಧಾರ್ಮಿಕ ಧೋರಣೆ ಇತ್ಯಾದಿ ವಿಚಾರಗಳಿಂದ ಚರ್ಚೆಗೊಳಗಾಗಿದೆ. ಟಿಪ್ಪು ತನ್ನ ರಾಜ್ಯದಲ್ಲಿ ನೀರಾವರಿ, ಹೊಸ ರಸ್ತೆ ನಿರ್ಮಾಣ ಮತ್ತು ಕೆರೆ ಬಾವಿಗಳ ಪುನರ್ ರಚನೆಗೆ ಹೆಚ್ಚಿನ ಆಸಕ್ತಿ ವಹಿಸಿದ್ದನು. ಆದರೆ ಟಿಪ್ಪುವಿನ ಆಡಳಿತ ಪರಿಷ್ಕರಣೆಗಳು ಆಗಿನ ಕಾಲಕ್ಕೆ ಮೀರಿದ್ದಾಗಿತ್ತು[೬೨]. ಸಂಸ್ಥಾನಿಕರ ದೃಷ್ಟಿಯಲ್ಲಿ ೧೮೮೧-೧೯೪೭ ಮಹತ್ವದ ಕಾಲವಾಗಿದೆ. ಏಕೆಂದರೆ ಈ ಸಂದರ್ಭದಲ್ಲಾದಂತಹ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ, ಕೈಗಾರಿಕೆ, ಕೃಷಿ, ನೀರಾವರಿ ಇನ್ನಿತರೆ ಹಲವಾರು ಅಭಿವೃದ್ಧಿ ಕಾರ್ಯಗಳಿಂದ ಮೈಸೂರು ಸಂಸ್ಥಾನವು ಭಾರತದಲ್ಲಿ ಮಾದರಿ ರಾಜ್ಯವಾಗಿ ಹೊರಹೊಮ್ಮಿತು. ಈ ಸಂದರ್ಭದ ಮೈಸೂರು ಸಂಸ್ಥಾನವನ್ನು ಗಾಂಧೀಜಿ ರಾಮರಾಜ್ಯ ಎಂದು ಕರೆದಿದ್ದರು. ಇದರ ಆದಾಯ, ಉತ್ಪತ್ತಿ, ಬಂಡವಾಳ ಇವೆಲ್ಲದರ ಪ್ರಗತಿ ದ್ವಿಮುಖಗೊಳ್ಳುತ್ತಾ ಹೋಯಿತು. ಈ ಕಾಲದಲ್ಲಿ ಬಂದಂತಹ ದಿವಾನರುಗಳು ಹಾಗೂ ರಾಜರು ಬದಲಾವಣೆಯನ್ನು ಸ್ವಾಗತಿಸಿದರು. ಹಾಗೆಯೇ ದಿವಾನರ ಹತ್ತಿರ ಬ್ರಿಟಿಷರ ಸಲಿಗೆ ಎಷ್ಟಿತ್ತೆಂದರೆ ಭಾರತ ಸರ್ಕಾರದಿಂದ ಖಾಸಗಿಯೆಂದು ಬರುತ್ತಿದ್ದ ಪತ್ರಗಳನ್ನೆಲ್ಲಾ ದಿವಾನರಿಗೆ ತೋರಿಸುತ್ತಿದ್ದರು[೬೩]. ಈ ಸಂದರ್ಭದಲ್ಲಾದ (೧೮೮೧-೧೯೦೦) ರಾಜಕೀಯ, ಸಾಮಾಜಿಕ ಹಾಗೂ ಶೈಕ್ಷಣಿಕ ಸುಧಾರಣೆಗಳ ಪರಿಣಾಮವೆಂದರೆ ಬಹುಸಂಖ್ಯಾತ ಆದರೆ ಹೆಚ್ಚಿನ ಜಾಗೃತಿ ಅರಿವು ಇಲ್ಲದ ಜನರು ಕ್ರಮೇಣ ಜಾಗೃತಗೊಂಡರು[೬೪].

ವಿಶ್ವೇಶ್ವರಯ್ಯನವರು ತಮ್ಮ ದಿವಾನ್ ಪದವಿಗೆ ರಾಜೀನಾಮೆ ನೀಡಿದ ನಂತರ ಕಾಂತರಾಜ ಅರಸರು ಮೈಸೂರು ಸಂಸ್ಥಾನದ ದಿವಾನರಾದರು. ಆ ಕಾಲ ಹಿಂದುಳಿದ ವರ್ಗಕ್ಕೆ ಪರ್ವಕಾಲ ಅಂತಲೇ ಹೇಳಬೇಕು. ಹಿಂದುಳಿದ ಬ್ರಾಹ್ಮಣೇತರ ಬೇಡಿಕೆಗಳ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ನೇಮಿಸಲಾದ ಮಿಲ್ಲರ್ ಸಮಿತಿಗೆ ಕಾಂತರಾಜರ ಪೂರ್ಣ ಬೆಂಬಲವಿತ್ತು. ೧೯೧೯ರ ಜುಲೈ ತಿಂಗಳಲ್ಲಿ ಸಮಿತಿ ತನ್ನ ವರದಿ ಸಲ್ಲಿಸಿತು[೬೫]. ಇವರು ಗ್ರಾಮಾಂತರ ಮತ್ತು ಕೃಷಿಯಾಧಾರಿತ ಕೈಗಾರಿಕೆಗಳಿಗೆ ಪ್ರೋತ್ಸಾಹವನ್ನು ಕೊಟ್ಟರು. ಸಂಸ್ಥಾನದ ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ಹೆಚ್ಚಿಸಲು ಶಿಫಾರಸ್ಸು ಮಾಡಿದರು. ಕಂದಾಯ ಮತ್ತು ಆರ್ಥಿಕ ನೀತಿಯಲ್ಲಿ ಸುಧಾರಣೆ ತಂದರು. ಇವೆಲ್ಲವುಗಳ ಹಿಂದೆ ರಾಜರ ಪಾತ್ರ ಪ್ರಮುಖವಾಗಿತ್ತು. ನಾಲ್ವಡಿ ಕೃಷ್ಣರಾಜ

ಒಡೆಯರಿಗೆ ದಲಿತರ ವಿಷಯದಲ್ಲಿ ಕಾಳಜಿ ಇದ್ದಿತು. ಇವರೂ ಸಹ ಅರಮನೆಯನ್ನು ಪ್ರವೇಶಿಸಬಹುದೆಂಬುದಾಗಿ ಹೇಳಿ, ಅದರಂತೆ ಅವಕಾಶ ಮಾಡಿಕೊಟ್ಟ ಭಾರತದ ಸಂಸ್ಥಾನಾಧೀಶರುಗಳಲ್ಲಿಯೇ ನಾಲ್ವಡಿ ಅವರು ಮೊಟ್ಟಮೊದಲನೆಯವರು ಎಂಬುದಾಗಿ ಬ್ರಿಟ್ಯಾನಿಕ್ ವಿಶ್ವಕೋಶವು ತಿಳಿಸಿದೆ[೬೬]. ಅಂತೆಯೇ ಮಹಿಳೆಯರ ಸುಧಾರಣೆಗೆ ಶ್ರಮಿಸಿದರು. ವಯಸ್ಕರಾಗಿದ್ದ ಹಿಂದೂ ವಿಧವೆಯರ ಶಿಕ್ಷಣಕ್ಕಾಗಿ ಮಹಾರಾಣಿ ಬಾಲಿಕಾ ಪಾಠಶಾಲೆಯಲ್ಲಿ ವಿಶೇಷ ಬಗೆಯ ಎರಡು ತರಗತಿಗಳನ್ನು ಆರಂಭಿಸಲಾಯಿತು[೬೭]. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಶಿಕ್ಷಣ ನೀಡುವ ಪ್ರಮುಖ ಉದ್ದೇಶದಿಂದ ೧೯೧೨ರಲ್ಲಿ ನಜರ್‌ಬಾದ್ ಅರಮನೆಯ ಬಂಗಲೆಯೊಂದರಲ್ಲಿ ವಾಣಿವಿಲಾಸ ಅರಸು ಗರ್ಲ್ಸ್ ಸ್ಕೂಲ್ ಹಾಗೂ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲ್‌ಗಳನ್ನು ತಮ್ಮ ಧನಸಹಾಯದಿಂದ ಸ್ಥಾಪಿಸಿದರು. ೧೯೦೯ರಲ್ಲಿ ದೇವದಾಸಿ ನಿಷೇದಾಜ್ಞೆ ಕಾನೂನು, ೧೯೩೬ ಜುಲೈ ೪ರಲ್ಲಿ ವೇಶ್ಯಾವೃತ್ತಿ ನಿಷೇದಾಜ್ಞೆ ಕಾನೂನು, ೧೯೩೮ ಜುಲೈ ೭ರ ದ ಮೈಸೂರು ಹಿಂದೂ ವಿಡೋ ರೀಮ್ಯಾರೇಜ್ ಆ್ಯಕ್ಟ್, ದಿ ಹಿಂದೂ ಲಾ ವುಮೆನ್ಸ್ ರೈಟ್ಸ್ ಆ್ಯಕ್ಟ್ (೧೯೩೩ ಜೂನ್ ೨೯), ೧೯೩೭ರ ದಿ ಮೈಸೂರು ಮೆಟರ್ನಿಟಿ ಬೆನಿಫಿಟ್ ಆ್ಯಕ್ಟ್ ಹೀಗೆ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡರು.

ಮಿರ್ಜಾ ಇಸ್ಮಾಯಿಲ್ ಅವರು ಸಹ ತಮ್ಮ ೧೫ ವರ್ಷಗಳ (೧೯೨೬–೧೯೪೧) ದಿವಾನ್ ಪದವಿಯಲ್ಲಿ ಹಲವಾರು ಸುಧಾರಣ ಕ್ರಮಗಳನ್ನು ತಂದು ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಶ್ರಮಿಸಿದರು. ಇವರ ಆರ್ಥಿಕ ನೀತಿಯನ್ನು ಸರಳವಾಗಿ 'ಸ್ವದೇಶಿ ಆರ್ಥಿಕ ನೀತಿ' ಎಂದು ಹೇಳಬಹುದು[೬೮]. ಇವರ ಸ್ವದೇಶಿ ಧೋರಣೆ ಗಾಂಧೀಜಿಗೆ ಬಹಳ ಮೆಚ್ಚುಗೆಯಾಗಿತ್ತು. ಆರ್ಥಿಕ ಸಮ್ಮೇಳನಗಳನ್ನು ಅಥವಾ ಸಮಾವೇಶಗಳನ್ನು ನಡೆಸಿ ಅದರ ಮೂಲಕ ಕೃಷಿ ಅಭಿವೃದ್ಧಿಗೆ ಪ್ರೋತ್ಸಾಹ ನೀಡಿದರು. ಬೆಂಗಳೂರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ೧೯೧೬ರಲ್ಲಿ ಸ್ಥಾಪನೆಯಾಯಿತು. ಇದು ಕೈಗಾರಿಕೆಗಳ ಸ್ಥಾಪನೆಗೆ ಸಾಲ ಸೌಲಭ್ಯವನ್ನು ನೀಡಲು ಪ್ರಾರಂಭಿಸಿತು. ಆ ವೇಳೆಗಾಗಲೇ ಬೆಂಗಳೂರು ಎರಡನೆಯ ರಾಜಧಾನಿ ಎಂಬ ಖ್ಯಾತಿಯನ್ನು ಹೊಂದಿತ್ತು.

ಭಾರತ ಕಾರ್ಖಾನೆಗಳ ಅಭಿವೃದ್ಧಿಗೆ ಕೇವಲ ಕೆಲವೇ ರಾಜ್ಯಗಳನ್ನಾಗಲೀ ಅಥವಾ ನಗರಗಳನ್ನಾಗಲಿ ಅವಲಂಬಿಸಿರಲಿಲ್ಲ. ಇಲ್ಲಿ ಪ್ರದೇಶಗಳ ವೈವಿಧ್ಯತೆಗೆ ಅನುಗುಣವಾಗಿ ಕಾರ್ಖಾನೆಗಳು

ಉಗಮವಾಗಿದ್ದವು. ಉದಾಹರಣೆಗೆ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ ಹತ್ತಿ ಕಾರ್ಖಾನೆ, ಸೆಣಬು ಬೆಳೆಯುವ ಪ್ರದೇಶಗಳಲ್ಲಿ ನಾರಿನ ಕಾರ್ಖಾನೆ, ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಸಕ್ಕರೆ ಕಾರ್ಖಾನೆ, ರೇಷ್ಮೆ ಬೆಳೆಯುವ ಪ್ರದೇಶಗಳಲ್ಲಿ ರೇಷ್ಮೆ ಕಾರ್ಖಾನೆ ಇತ್ಯಾದಿ. ಇದಕ್ಕೆ ಮೈಸೂರು ಸಂಸ್ಥಾನವೂ ಹೊರತಾಗಿರಲಿಲ್ಲ. ಇದು ಎಂಟು (ನಂತರ ಒಂಭತ್ತು) ಜಿಲ್ಲೆಗಳನ್ನು ಒಳಗೊಂಡಿದ್ದು ಮೈಸೂರು ಜಿಲ್ಲೆಯು ಹತ್ತಿ ಬಟ್ಟೆ, ರೇಷ್ಮೆ, ಸಾಬೂನು ಕಾರ್ಖಾನೆ, ಎಣ್ಣೆ ಗಿರಣಿಗಳು ಇತ್ಯಾದಿ ಕಾರ್ಖಾನೆಗಳಿಗೆ ಪ್ರಸಿದ್ಧಿ ಹೊಂದಿತ್ತು. ಮಂಡ್ಯ ಜಿಲ್ಲೆಯು ಕಬ್ಬು ಬೆಳೆಗೆ ಮತ್ತು ಭತ್ತಕ್ಕೆ ಪ್ರಸಿದ್ಧಿಯನ್ನು ಹೊಂದಿದ್ದು, ಇಲ್ಲಿ ಸಕ್ಕರೆ ಕಾರ್ಖಾನೆ ಹಾಗೂ ಅಕ್ಕಿ ಗಿರಣಿಗಳು ಹೆಚ್ಚಾಗಿದ್ದವು. ಬೆಂಗಳೂರು ಜಿಲ್ಲೆಯು ಬಟ್ಟೆ ಕಾರ್ಖಾನೆಗಳಿಗೆ, ಚಿತ್ರದುರ್ಗ ಜಿಲ್ಲೆಯು ಹತ್ತಿ ಬಟ್ಟೆ ಕಾರ್ಖಾನೆಗಳಿಗೆ ಹಾಗೆಯೇ ಶಿವಮೊಗ್ಗ ಜಿಲ್ಲೆಯು ಕಾಫಿ ಬೆಳೆಗೆ ಪ್ರಸಿದ್ಧಿಯನ್ನು ಪಡೆದಿತ್ತು. ಹಾಗೆಯೇ ಕೋಲಾರವು ಗಣಿಗಾರಿಕೆಗೆ ಹೆಸರುವಾಸಿಯಾಗಿದ್ದಿತು. ಒಟ್ಟಾರೆ ಎಲ್ಲಾ ಜಿಲ್ಲೆಗಳು ಆಯಾ ಪ್ರದೇಶಗಳಿಗೆ, ವಾತಾವರಣಕ್ಕೆ ಹೊಂದಿಕೊಂಡಂತೆ ಏರಿಳಿತಗಳಿಂದ ಬೆಳವಣಿಗೆ ಸಾಧಿಸಿದ್ದವು. ಇವೆಲ್ಲವುಗಳ ಒಟ್ಟಾರೆ ಪ್ರಗತಿಯಿಂದ ಮೈಸೂರು ಸಂಸ್ಥಾನ ಸಾಂಸ್ಕೃತಿಕವಾಗಿ ಪ್ರಗತಿಯನ್ನು ಸಾಧಿಸಿತ್ತು ಎಂದು ಹೇಳಬಹುದು.

ಮೈಸೂರು ರಾಜ್ಯದ ಹತ್ತಿ ಬೆಳೆಯ ಬಗ್ಗೆ ಹೇಳುವುದಾದರೆ ೧೯೩೨ರ ವೇಳೆಗೆ ರಾಜ್ಯದ ಒಟ್ಟಾರೆ ಹತ್ತಿ ಬೆಳೆಯ ಉತ್ಪಾದನೆಯಲ್ಲಿ ಶೇಕಡ ೫೦ರಷ್ಟನ್ನು ಚಿತ್ರದುರ್ಗ ಜಿಲ್ಲೆ ಒಂದರಿಂದಲೇ ಪಡೆಯಲಾಗುತ್ತಿದ್ದು, ೩೨೬೨೨ ಎಕರೆ ಭೂಮಿಯಲ್ಲಿ ಹತ್ತಿ ಬೆಳೆಯಲಾಗುತ್ತಿತ್ತು[೧೯]. ಒಟ್ಟಾರೆ ಮೈಸೂರು ಸಂಸ್ಥಾನದ ಬಹುತೇಕ ಹತ್ತಿ ಗಿರಣಿಗಳು ಚಿತ್ರದುರ್ಗದ ಕಚ್ಚಾ ಹತ್ತಿಯ ಮೇಲೆ ಅವಲಂಬಿತವಾಗಿದ್ದವು ಎಂದು ಹೇಳಬಹುದು. ೧೯೪೬-೪೭ರ ಸಂದರ್ಭದಲ್ಲಿ ರಾಜ್ಯವು ಹತ್ತಿ ಬೀಜದ ತಳಿಯಲ್ಲಿ ಹೊಸ ಹೊಸ ಪ್ರಯತ್ನಕ್ಕೆ ಮುಂದಾಗಿತ್ತು. ಈಜಿಪ್ಟ್, ಅಮೆರಿಕಾದ ಮಿಶ್ರ ತಳಿಯನ್ನು ಅಳವಡಿಸಿಕೊಂಡಿತ್ತು. ಇದನ್ನು ಎಂ.ಎ.– V, ಎಂ.ಎ.– VI, ಎಂ.ಎ.–XI (ಎಂ.ಎ. ಮೈಸೂರು–ಅಮೆರಿಕನ್ ಕಾಟನ್) ಎಂದು ಸಂಕ್ಷಿಪ್ತವಾಗಿ ಕರೆಯುತ್ತಿದ್ದರು[೨೦]. ಇದನ್ನು ಭಾರತದ ಕೇಂದ್ರೀಯ ಹತ್ತಿ ಸಮಿತಿ (ಇಂಡಿಯನ್ ಸೆಂಟ್ರಲ್ ಕಾಟನ್ ಕಮಿಟಿ) ವತಿಯಿಂದ ಮೈಸೂರಿಗೆ ಪೂರೈಕೆ ಮಾಡಲಾಗುತ್ತಿತ್ತು.

೧೯೫೩ರಲ್ಲಿ ರಾಜ್ಯದಲ್ಲಿ ಪ್ರಮುಖವಾದ ರಾಜಕೀಯ ಬೆಳವಣಿಗೆಯೊಂದು ಕಾಣಿಸಿಕೊಂಡಿತು. ಅದು ಬಳ್ಳಾರಿ ಜಿಲ್ಲೆಯು ಮೈಸೂರು ರಾಜ್ಯಕ್ಕೆ ವಿಲೀನಗೊಂಡಿತು. ಇದರಿಂದ ೮೩,೦೦೦ ಎಕರೆ ಹತ್ತಿ ಬೆಳೆಯುವ ಭೂ ಪ್ರದೇಶ ರಾಜ್ಯಕ್ಕೆ ಸೇರ್ಪಡೆಯಾಗಿ, ಒಟ್ಟಾರೆ ೨,೪೪,೦೦೦ ಎಕರೆ ಹತ್ತಿ ಬೆಳೆಯುವ ಭೂ ಪ್ರದೇಶ ಮೈಸೂರಿನದ್ದಾಗಿತ್ತು[೨೧]. ಇವೆಲ್ಲದರ ಪ್ರತಿಫಲವಾಗಿ ಈ ವೇಳೆಗೆ ಮೈಸೂರು ರಾಜ್ಯವು ಭಾರತದ ಒಕ್ಕೂಟದಲ್ಲಿಯೇ ಹತ್ತಿಯನ್ನು ಉತ್ಪಾದಿಸುವ ಪ್ರಮುಖ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಪ್‌ಲ್ಯಾಂಡ್, ಈಜಿಪ್ಟ್, ಕಾಂಬೋಡಿಯಾ, ಪಾಶ್ಚಿಮಾತ್ಯ ಮತ್ತು ಏಷ್ಯಾದ ವಿವಿಧ ತಳಿಯ ಹತ್ತಿಯು ಇಲ್ಲಿ ಚಿರಪರಿಚಿತ ಎನಿಸಿಕೊಂಡಿತು[೨೨]. ಇದು ಸ್ವಾತಂತ್ರ್ಯೋತ್ತರ ಸಂದರ್ಭದ ಬೆಳವಣಿಗೆ. ಹೀಗಿದ್ದೂ ಇಂದು ಎಲ್ಲಾ ಗಿರಣಿಗಳು (ಬೆಂಗಳೂರಿನಲ್ಲಿ) ನಶಿಸಿವೆ.

## ಕೊನೆ ಟಿಪ್ಪಣಿ

೧. ಮದನ್ ಪಿ., *ಬೆಂಗಳೂರಿನ ಬಿನ್ನಿಮಿಲ್ : ಒಂದು ಅಧ್ಯಯನ (ಅಪ್ರಕಟಿತ ಎಂ.ಫಿಲ್. ನಿಬಂಧ)*, ಪು. ೧೪.

೨. ಸಿದ್ಧಲಿಂಗಸ್ವಾಮಿ, *ಅಗ್ರೇರಿಯನ್ ರಿಲೇಷನ್ಸ್ ಇನ್ ಮೈಸೂರು: ೧೭೯೯–೧೮೮೧*, ಪು. ೬೧.

೩. ಅದೇ.

೪. ಮದನ್ ಪಿ., *ಬೆಂಗಳೂರಿನ ಬಿನ್ನಿಮಿಲ್ : ಒಂದು ಅಧ್ಯಯನ (ಅಪ್ರಕಟಿತ ಎಂ.ಫಿಲ್. ನಿಬಂಧ)*, ಪು. ೩.

೫. ಸಿದ್ಧಲಿಂಗಸ್ವಾಮಿ, ಪೂರ್ವೋಕ್ತ, ಪು. ೬೩.

೬. ಅದೇ.

೭. ಅದೇ.

೮. ಮದನ್ ಪಿ., ಪೂರ್ವೋಕ್ತ, ಪು. ೪.

೯. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ೧೮೮೬–೮೭*, ಪು. ೧೨೬.

೧೦. ಬಾಲಕೃಷ್ಣ ಆರ್., *ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು*, ಪು. ೯೬.

೧೧. *ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೮೮೨–೮೩, ೧೮೮೩–೮೪, ೧೮೮೪–೮೫*, ಪು. ೫೭, ೫೮, ೫೯ ಹಾಗೂ ೧೮೮೫–೮೬, ಪು. ೬೦.

೧೨. ಕಾಮತ್ ಯು. ಸೂರ್ಯನಾಥ್, *ಎ ಕಾನ್‌ಸೈಸ್ ಹಿಸ್ಟರಿ ಆಫ್ ಕರ್ನಾಟಕ*, ಪು. ೨೫೧.

೧೩. ನಾಯರ್ ಜಾನಕಿ, *ಮೈನರ್ಸ್ ಅಂಡ್ ಮಿಲ್ ಹ್ಯಾಂಡ್ಸ್ : ವರ್ಕ್, ಕಲ್ಚರ್ ಅಂಡ್ ಪಾಲಿಟಿಕ್ಸ್ ಇನ್ ಪ್ರಿನ್ಸ್‌ಲಿ ಮೈಸೂರು*, ಪು. ೧೭.

೧೪. ಅದೇ.

೧೫. ಅದೇ, ಪು. ೧೮.

೧೬. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ೧೯೧೪–೧೮*, ಪು. ೧೦.

೧೭. *ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೮೮೬–೮೭*, ಪು. ೭೩.

೧೮. ಉಷಾರಾಣಿ ಬನ್ಸಾಲ್ ಮತ್ತು ಬಿ.ಬಿ. ಬನ್ಸಾಲ್, ಇಂಡಸ್ಟ್ರೀಸ್ ಇನ್ ಇಂಡಿಯಾ ಡ್ಯೂರಿಂಗ್ ಎಟೀಂತ್ ಅಂಡ್ ನೈಂಟೀಂತ್ ಸೆಂಚುರೀಸ್, ಪು. ೨೧೮.

೧೯. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೫–೮೬, ಪು. ೧೨೭.

೨೦. ಅದೇ.

೨೧. ಅದೇ.

೨೨. ಬಾಲಕೃಷ್ಣ ಆರ್., ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು, ಪು. ೯೬.

೨೩. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೬–೮೭ ರಿಂದ ೧೮೯೦–೯೧, ಪು. ೧೨೭.

೨೪. ಅದೇ.

೨೫. ಅದೇ.

೨೬. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೦–೨೧, ಪು. ೧೨೬.

೨೭. ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೩೩೩ ಆಫ್ ೧೯೨೦.

೨೮. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೦೬–೦೭, ಪು. ೩೫.

೨೯. ರಿಪೋರ್ಟ್ ಟು ದಿ ಬೋರ್ಡ್ ಆಫ್ ಟ್ರೇಡ್ ಆಫ್ ದ ಎಂಪೈರ್ ಕಾಟನ್ ಗ್ರೋಯಿಂಗ್ ಕಮಿಟಿ, ಲಂಡನ್, ೧೯೨೦, ಪು. ೦೪.

೩೦. ಬೆಂಗಳೂರು ಮುನ್ಸಿಪಾಲ್ ಫೈಲ್, ದಿನಾಂಕ ಏಪ್ರಿಲ್ ೨, ೧೯೨೪.

೩೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೬–೪೭, ಪು. ೧೦೬.

೩೨. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೮–೪೯, ಪು. ೧೩೬.

೩೩. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೦–೫೧, ಪು. ೧೦೬.

೩೪. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೦.

೩೫. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೬–೮೭ ರಿಂದ ೧೮೯೦–೯೧, ಪು. ೧೨೭.

೩೬. ಅದೇ.

೩೭. ಅದೇ.

೩೮. ಬಾಲಕೃಷ್ಣ ಆರ್., ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು, ಪು. ೯೮.

೩೯. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ರಿಪೋರ್ಟ್, ೧೯೨೫*, ಪು. ೨.

೪೦. ಅದೇ.

೪೧. ಅದೇ.

೪೨. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ರಿಪೋರ್ಟ್, ೧೯೨೮-೨೯*, ಪು. ೩.

೪೩. ಅದೇ.

೪೪. ಅದೇ.

೪೫. ಅದೇ.

೪೬. ಅದೇ.

೪೭. ಅದೇ.

೪೮. ಸೂರ್ಯನಾಥ ಯು. ಕಾಮತ್, *ಕರ್ನಾಟಕ ಸ್ಟೇಟ್ ಗೆಜೆಟಿಯರ್, ಮೈಸೂರು ಡಿಸ್ಟ್ರಿಕ್ಟ್*, ಪು. ೨೬೪.

೪೯. ಅದೇ, ಪು. ೨೬೫.

೫೦. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೦೬-೦೭*, ಪು. ೩೪.

೫೧. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೧೫-೧೬*, ಪು. ೩೨.

೫೨. ಅದೇ.

೫೩. ಆಲ್ಫ್ರೆಡ್ ಚಾಟರ್‌ಟನ್ ಅವರು ೧೯೧೨ರಲ್ಲಿ ಒಂದು ಉತ್ತಮ ಚಾರಿತ್ರಿಕ ಕೃತಿಯನ್ನು ರಚಿಸಿದರು. ಅದು *ಇಂಡಸ್ಟ್ರಿಯಲ್ ಎವಲ್ಯೂಷನ್ ಇನ್ ಇಂಡಿಯಾ* ಎಂಬುದಾಗಿದ್ದು, ಮೈಸೂರಿನಲ್ಲಿ ಕೈಗಾರಿಕೆಗಳು ಯಾವ ರೀತಿ ವಿಕಾಸ ಹೊಂದಿತು ಹಾಗೂ ನೂಲುವ ಮತ್ತು ನೇಯುವ ಕಾರ್ಖಾನೆಗಳು ಯಾವ ರೀತಿ ಬೆಳವಣಿಗೆ ಹೊಂದಿತು ಎಂಬುದನ್ನು ಹಂತಹಂತವಾಗಿ ಕಟ್ಟಿಕೊಟ್ಟಿದ್ದಾರೆ. ಸಮಗ್ರ ಭಾರತದ ಆರ್ಥಿಕತೆಯಲ್ಲಿ ಮೈಸೂರು ರಾಜ್ಯದ ಆರ್ಥಿಕತೆಯ ಪಾತ್ರ ಬಹಳ ಮುಖ್ಯವಾದುದು ಎಂಬುದಾಗಿ ವಿಶ್ಲೇಷಿಸುತ್ತಾ ಭಾರತದ ಆರ್ಥಿಕ ಚರಿತ್ರೆಯಲ್ಲಿ ಮೈಸೂರು ಆರ್ಥಿಕ ಚರಿತ್ರೆಗೆ ಸ್ಥಳವನ್ನು ಒದಗಿಸಿದ್ದಾರೆ.

೫೪. ಅದೇ.

೫೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೫-೨೬*, ಪು. ೩೮.

೫೬. ಅದೇ, ಪು. ೪೧.

೫೭. ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೧೯೨೬, ಪು. ೩-೧೩.

೫೮. ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೫೧ ಆಫ್ ೧೯೨೮.

೫೯. ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್ ಫ್ರಮ್ ೧೫೮ ಆಫ್ ೧೯೩೩ ಟು ೪೨೮ ಆಫ್ ೧೯೩೯.

೬೦. ಬೆಂಗಳೂರು ಮುನ್ಸಿಫಲ್ ಫೈಲ್, ಲೆಟರ್ ಟು ಮಿರ್ಜಾ ಇಸ್ಮಾಯಿಲ್, ದಿವಾನ್, ೧೨-೩-೧೯೩೫.

೬೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೧-೫೨, ಪು. ೧೫೩.

೬೨. ಮೋಹನ್‌ಕೃಷ್ಣ ರೈ ಕೆ. (ಸಂ.), *ಚರಿತ್ರೆ ಅಧ್ಯಯನ, ಸಂಪುಟ ೩, ಸಂಚಿಕೆ ೧,* ಪು. ೯೭.

೬೩. ಚಂದ್ರಶೇಖರ್ ಎಸ್., *ವಸಾಹತುಕಾಲೀನ ಕರ್ನಾಟಕ,* ಪು. ೨೧೧.

೬೪. ಅದೇ, ಪು. ೨೧೮.

೬೫. ಅದೇ, ಪು. ೨೩೫.

೬೬. ಲಕ್ಷ್ಮಣ್ ತೆಲಗಾವಿ (ಸಂ.), ಲೇಖಕರು : ಚಿನ್ನಸ್ವಾಮಿ ಸೋಸಲೆ ಎನ್., *ಚರಿತ್ರೆ ಅಧ್ಯಯನ,* ಪು. ೨೯.

೬೭. ಅದೇ, ಪು. ೩೧.

೬೮. ಚಂದ್ರಶೇಖರ್ ಎಸ್., *ವಸಾಹತುಕಾಲೀನ ಕರ್ನಾಟಕ,* ಪು. ೨೬೭.

೬೯. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೨-೩೩, ಪು. ೫೮.

೭೦. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೬-೪೭, ಪು. ೮೦.

೭೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೩-೫೪, ಪು. ೮೬.

೭೨. ಅದೇ.

# ಅಧ್ಯಾಯ – ೩

# ಹತ್ತಿಗಿರಣಿಗಳ ಅಸ್ಮಿತೆಗಳು

---



---

# ಅಧ್ಯಾಯ – ೩

## ಹತ್ತಿ ಗಿರಣಿಗಳ ಅಸ್ಮಿತೆಗಳು

ವಸಾಹತು ಭಾರತದ ಅರ್ಥವ್ಯವಸ್ಥೆಯು ಕೆಲವೇ ಸೀಮಿತ ಪ್ರದೇಶಗಳಲ್ಲಿ ವ್ಯವಸ್ಥಿತವಾದ ಬಂಡವಾಳಶಾಹಿ ಕೈಗಾರಿಕೆಯ ಬೆಳವಣಿಗೆಗೆ ಆಸ್ಪದ ನೀಡಿತು. ಬ್ರಿಟಿಷರು ೧೯ನೇ ಶತಮಾನದ ಮಧ್ಯಭಾಗದ ವೇಳೆಗೆ ಮುಖ್ಯವಾಗಿ ತೋಟದ ಉದ್ಯಮ ಹಾಗೂ ಗಣಿಗಳಂತಹ ಉದ್ಯಮಗಳಿಗೆ ಪ್ರೋತ್ಸಾಹ ನೀಡಿದರು. ಪಶ್ಚಿಮ ಭಾರತದ ಮುಂಬಯಿ ಮತ್ತು ಅಹಮದಾಬಾದ್‌ಗಳಲ್ಲಿನ ಕೆಲವು ಬಂಡವಾಳಗಾರರು ಬಹಳ ಪರಿಶ್ರಮದಿಂದ ಭಾರತದ ಮೊಟ್ಟ ಮೊದಲನೆಯ ಹತ್ತಿ ಕಾರ್ಖಾನೆಯನ್ನು ಸ್ಥಾಪಿಸಿದರು[೧]. ಹೀಗೆ ಇಪ್ಪತ್ತನೆಯ ಶತಮಾನಕ್ಕೆ ಕಾಲಿಡುವ ವೇಳೆಗೆ ಕೆಲವು ಪ್ರದೇಶಗಳು ಕೆಲವು ವಿಶೇಷ ಕೈಗಾರಿಕೆಗಳಲ್ಲಿ ತಕ್ಕಮಟ್ಟಿಗೆ ಅಭಿವೃದ್ಧಿ ಹೊಂದಿದ್ದವು. ಅಸ್ಸಾಂನಲ್ಲಿ ಪ್ಲಾಂಟೇಷನ್‌ಗಳು, ಬಂಗಾಳದಲ್ಲಿ ಸೆಣಬು ಗಿರಣಿಗಳು, ಕಲ್ಲಿದ್ದಲು ಗಣಿಗಳು, ಅಹಮದಬಾದ್ ಮತ್ತು ಮುಂಬಯಿಯಲ್ಲಿ ಬಟ್ಟೆ ಗಿರಣಿಗಳು ಗಣನೀಯವಾಗಿ ಬಳೆದಿದ್ದವು. ಆದರೆ ಭಾರತದ ವಿಶಾಲ ಗ್ರಾಮಾಂತರ ಪ್ರದೇಶಗಳು ಕೈಗಾರಿಕೆಗಳ ನಾಶದ ಪರಿಣಾಮದಿಂದ ಇನ್ನೂ ಚೇತರಿಸಿಕೊಳ್ಳಬೇಕಾಗಿತ್ತು. ಬ್ರಿಟಿಷ್ ಭಾರತದ ಪರಿಸ್ತಿತಿಯೇ ಹೀಗಿದ್ದರೆ ಮೈಸೂರಿನಂತಹ ಸಂಸ್ಥಾನಗಳಲ್ಲಿ ಅದು ಇನ್ನೂ ನಿರುತ್ಸಾಹಕರವಾಗಿತ್ತು. ಇಲ್ಲೇನಿದ್ದರೂ ಬೃಹತ್ ಪ್ರಮಾಣದ ಬಂಡವಾಳ ಹೂಡಿಕೆ ಎನ್ನುವುದು ಮೂರು ಸ್ಥಳಗಳಿಗೆ ಮಾತ್ರ ಸೀಮಿತವಾಗಿತ್ತು. ಮೈಸೂರು ಕಾಫಿ ಮತ್ತು ಅಡಿಕೆ ತೋಟಗಳು, ಕೋಲಾರ ಚಿನ್ನದ ಗಣಿಗಳಿಗೆ ಹಾಗೂ ಬೆಂಗಳೂರು ವಿವಿಧ ಮಿಲ್ಲುಗಳು, ಕಾರ್ಖಾನೆಗಳಲ್ಲಿ ಬಂಡವಾಳ ತೊಡಗಿಸಲಾಗುತ್ತಿತ್ತು. ೧೯ನೇ ಶತಮನದ ಕೊನೆಯಲ್ಲಿ ಬೆಂಗಳೂರಿನಲ್ಲಿ ಆಧುನಿಕವಾದ ಎರಡು ಪ್ರಮುಖ ಹತ್ತಿ ಗಿರಣಿಗಳಿದ್ದವು ಅವುಗಳೆಂದರೆ ಮೈಸೂರು ಮಹಾರಾಜ ಮಿಲ್ಲು ಹಾಗೂ ಬಿನ್ನಿ ಮಿಲ್ಲು.

ವಸಾಹತು ಕಾಲದ ಮೈಸೂರು ಸಂಸ್ಥಾನದಲ್ಲಿ ಹತ್ತಿ ಗಿರಣಿಗಳ ಅಸ್ಮಿತೆ ಹಾಗೂ ಅಸ್ತಿತ್ವದ ಬಗ್ಗೆ ಹೇಳುವುದಾದರೆ ರಾಜ್ಯದಲ್ಲಿಯೇ ಚಿನ್ನದ ಗಣಿ ಉದ್ಯಮದ ನಂತರ ಸ್ಥಾನದ ಖಾಸಗಿ ಉದ್ಯಮ ಎಂಬುದಾಗಿ ಗುರುತಿಸಿಕೊಂಡಿತ್ತು. ಒಟ್ಟಾರೆ ಜವಳಿ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ ಅರವತ್ತೆರಡು (೬೨) ಕೈಗಾರಿಕೆಗಳಲ್ಲಿ ಪ್ರತಿದಿನ ಅಂದಾಜು ೧೦,೫೮೯ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು.

೧೯೩೦ರ ದಶಕದಲ್ಲಿ ರಾಜ್ಯದಲ್ಲಿನ ಗಿರಣಿಗಳಿಂದ ವಾರ್ಷಿಕವಾಗಿ ಸುಮಾರು ೫೨,೬೬೩ ಬೇಲ್ ಹತ್ತಿಯನ್ನು ಬಳಕೆ ಮಾಡಲಾಗುತ್ತಿತ್ತು. ಯಾವುದೇ ಒಂದು ಸಮಾಜ, ಸಂಸ್ಕೃತಿ ಹಾಗೂ ಆರ್ಥಿಕತೆ ಅಥವಾ ಇನ್ನಾವುದೇ ಆಗಿರಲಿ ನಿರಂತರತೆಯನ್ನು ಕಾಯ್ದುಕೊಂಡು ಬೆರಬೇಕಾದರೆ ಅದು ವ್ಯವಸ್ಥೆಯೊಂದಿಗೆ ಸದಾ ಮುಖಾಮುಖಿಯಾಗುತ್ತಲೇ ಇರಬೇಕಾಗುತ್ತದೆ. ಆಗಲೇ ಅದರ ಸಾಮರ್ಥ್ಯ ಏನೆಂಬುದು ಅರಿವಿಗೆ ಬರುವುದು. ಅದರ ಸಾಮರ್ಥ್ಯ ಎಷ್ಟು ಎಂಬುದರಲ್ಲಿಯೇ ಅದರ ಅಸ್ಮಿತೆಯು ಅಡಗಿದೆ. ಹತ್ತಿ ಗಿರಣಿಗಳ ವಿಷಯದಲ್ಲೂ ಇದನ್ನು ಅನ್ವಯಿಸಿ ನೋಡಬಹುದಾಗಿದೆ. ಬೆಂಗಳೂರಿನಲ್ಲಿ ೧೯ನೇ ಶತಮಾನದ ಎಂಭತ್ತರ ದಶಕದಲ್ಲಿ ಕೈಗಾರಿಕೆಗಳ ಬೆಳವಣಿಗೆ ತೀವ್ರತೆಯನ್ನು ಪಡೆದುಕೊಂಡಿತು. ೧೯೧೪ರಿಂದ ಭಾರತವು ಹತ್ತಿ ಬಟ್ಟೆ ಉತ್ಪಾದಕ ರಾಷ್ಟ್ರಗಳಲ್ಲಿಯೇ ವಿಶ್ವದಲ್ಲಿ ನಾಲ್ಕನೆಯ ಸ್ಥಾನವನ್ನು ಹಿಡಿದಿಟ್ಟುಕೊಂಡಿತು[೨]. ಯುದ್ಧದ ಸಂದರ್ಭದಲ್ಲಿ ಇದರ ಸಮೃದ್ಧಿಗೆ ಮತ್ತಷ್ಟು ವೇಗವನ್ನು ಒದಗಿಸಿಕೊಟ್ಟಿತು. ಇದು ಯುದ್ಧ ನಂತರದ ಕಾಲಾವಧಿಗೂ ಮುಂದುವರೆಯಿತು ಹಾಗೂ ೧೯೨೦ರಲ್ಲಾದ ವಸ್ತುಗಳ ದುತ್ತನೆ ಬೆಲೆ ಏರಿಕೆ (ಎಕನಾಮಿಕ್ ಬೂಮ್)ಯೊಡನೆ ಮರ್ಜುಗೊಂಡಿತು. ೧೯೨೧ರ ವರ್ಷ ಭಾರತದ ಹತ್ತಿ ಕೈಗಾರಿಕೆಯಲ್ಲಿ ಒಂದು ಪ್ರಮುಖವಾದ ಹೆಗ್ಗುರುತು ಎಂದರೆ ತಪ್ಪಾಗಲಾರದು[೩]. ಏಕೆಂದರೆ ವ್ಯಾಪಾರ ಹಾಗೂ ಉತ್ಪಾದನೆಯಲ್ಲಾದ ಪುನರ್ ಹೊಂದಾಣಿಕೆ ಮತ್ತು ಉತ್ಪಾದನಾ ವಸ್ತುಗಳನ್ನು ದೂರದ ಪ್ರದೇಶಗಳಿಗೆ ಸಕಾಲಕ್ಕೆ ತಲುಪಿಸಲು ಸಾಧ್ಯವಾಯಿತು. ಅಲ್ಲದೇ ದೇಶೀಯ ಮಾರುಕಟ್ಟೆಯಲ್ಲಿ ವಿದೇಶಿ ಸ್ಪರ್ಧೆಯ ಪ್ರಮಾಣದಲ್ಲಿ ಏರಿಕೆಯಾದರೂ ಅದನ್ನು ಯಶಸ್ವಿಯಾಗಿ ನಿಭಾಯಿಸಲಾಯಿತು.

ಬೆಂಗಳೂರಿನ ಹತ್ತಿ ಗಿರಣಿಗಳು ಹಲವು ರೂಪಗಳಲ್ಲಿ ತನ್ನ ಅಸ್ಮಿತೆಯನ್ನು ಕಂಡುಕೊಂಡಿದ್ದವು. ಇವು ಕಾರ್ಮಿಕರಿಗೆ ಉದ್ಯೋಗವನ್ನು ನೀಡಿದ್ದುದಲ್ಲದೇ ಅವರ ಜೀವನ ನಿರ್ವಹಣೆಗೆ ಸಹಾಯಕವಾಗಿದ್ದವು. ವಿವಿಧ ಹಿನ್ನೆಲೆಯ ಜನರು ಗಿರಣಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದುದರಿಂದ ವಿವಿಧ ಸಂಸ್ಕೃತಿ ಒಟ್ಟುಗೂಡಲು ಕಾರಣವಾಯಿತು. ಇದರಿಂದ ಕಾರ್ಮಿಕರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಬದಲಾವಣೆಯನ್ನು ಪಡೆದುಕೊಂಡಿತು. ಗಿರಣಿಗಳ ಉಚ್ಛ್ರಾಯ ಕಾಲದ ಸಂದರ್ಭದಲ್ಲಿ ಅಧಿಕ ಉತ್ಪಾದನೆಯನ್ನು ಕಂಡು ಹೆಚ್ಚಿನ ಲಾಭವನ್ನು ಗಳಿಸುವ ಮೂಲಕ ತನ್ನ ಅಸ್ಮಿತೆಯ ಇನ್ನೊಂದು ರೂಪವನ್ನು ಹೊರಚಾಚಿತು. ಇದರಿಂದ ದೇಶ–ವಿದೇಶ ಸಂಬಂಧ ವೃದ್ಧಿಸುವಲ್ಲಿ ನೆರವಾಯಿತು. ಹಾಗೆಯೇ ಬೆಂಗಳೂರು ನಗರದ ಅಭಿವೃದ್ಧಿಗೂ ಈ ಗಿರಣಿಗಳು ಶ್ರಮಿಸಿದವು ಅಂತಲೇ ಹೇಳಬಹುದು.

ಒಂದು ಕಾರ್ಖಾನೆ ಎಂದ ಮೇಲೆ ಅದರ ಸ್ಥಾಪನೆಯಿಂದ ಕಾರ್ಮಿಕರು, ಕಾರ್ಮಿಕರಿಂದ ಸಂಘಟನೆ, ಸಂಘಟನೆಯಿಂದ ಹೋರಾಟ, ಮುಷ್ಕರ, ಚಳವಳಿಗಳೆಲ್ಲವೂ ದೇಶಾತೀತವಾಗಿರುತ್ತವೆ. ಬೆಂಗಳೂರಿನಲ್ಲಿದ್ದ ಹತ್ತಿ ಗಿರಣಿಗಳು ಇದಕ್ಕೆ ಹೊರತಾಗಿರಲಿಲ್ಲ. ಹೀಗಾಗಿ ಗಿರಣಿಗಳ ಅಸ್ಮಿತೆಯ ಹುಡುಕಾಟವನ್ನು ಇದರ ಮೂಲಕವೂ ಕಾಣಬಹುದು. ಕಾರ್ಮಿಕ ಸಂಘಟನೆಗಳು ಅಂದ ಮೇಲೆ ಅವುಗಳು ರಾಜಕೀಯ ಚಟುವಟಿಕೆಗಳೊಂದಿಗೆ ಬೆಸೆದುಕೊಂಡಿರುವುದು ಎಲ್ಲಾ ಪ್ರದೇಶಗಳಲ್ಲಿಯೂ ಸರ್ವೇ ಸಾಮಾನ್ಯ. ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕ ಸಂಘಟನೆಗಳು ಕಾಂಗ್ರೆಸ್‌ನೊಂದಿಗೆ ಸೇರಿ ರಾಷ್ಟ್ರೀಯ ಚಳವಳಿ ಹಾಗೂ ರಾಜ್ಯದ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದವು. ತಗಡೂರು ರಾಮಚಂದ್ರರಾವ್, ಕೆ.ಟಿ.ಭಾಷ್ಯಂ ಮುಂತಾದ ದುರೀಣರೊಂದಿಗೆ ಸಂಘಟನೆಗಳು ಗುರುತಿಸಿಕೊಂಡು ಎಷ್ಟೋ ವ್ಯಾಜ್ಯಗಳು, ಮುಷ್ಕರಗಳಲ್ಲಿ ಪಾಲ್ಗೊಂಡು ತಮ್ಮ ಬೇಡಿಕೆಗಳ ಪರವಾಗಿ ಧ್ವನಿಯೆತ್ತಿದ್ದವು.

## ೩.೧. ಗಿರಣಿಗಳ ಸ್ಥಾಪನೆಯ ಹಿನ್ನೆಲೆ

ಮೊದಲನೇ ಮಹಾಯುದ್ಧದ ಕೊನೆಯ ವೇಳೆಗೆ ಬ್ರಿಟನ್‌ನಲ್ಲಿ ಹತ್ತಿ ಕ್ಷಾಮ (ಕಾಟನ್ ಫ್ಯಾಮೈನ್) ತಲೆದೂರಿತ್ತು. ಹೀಗಾಗಿ ಅಲ್ಲಿನ ಹತ್ತಿ ಗಿರಣಿಗಳಿಗೆ (ಲಂಕಾಶೈರ್, ಯಾರ್ಕ್‌ಶೈರ್, ಮ್ಯಾಂಚೆಸ್ಟರ್ ಇತ್ಯಾದಿ) ಕಚ್ಚಾ ಹತ್ತಿಯ ಪೂರೈಕೆಯೇ ಒಂದು ದೊಡ್ಡ ತಲೆನೋವಾಗಿತ್ತು. ಹೀಗಾಗಿ ಬ್ರಿಟಿಷರು ಈ ಕೊರತೆಯನ್ನು ನೀಗಿಸಿಕೊಳ್ಳುವ ನಿಟ್ಟಿನಲ್ಲಿ ತನ್ನ ವಸಾಹತು ನೆಲೆಗಳಲ್ಲಿ ಹತ್ತಿ ಬೆಳೆಯುವ ಭೂ ಪ್ರದೇಶಗಳನ್ನು ಗುರುತಿಸಲು ಮುಂದಾದರು. ಈ ಸಮಯದಲ್ಲಿ ಅವರಿಗೆ ಪ್ರಮುಖ ರಾಷ್ಟ್ರವೆನಿಸಿದ್ದು ಭಾರತ[೪]. ಇವರು ವಸಾಹತು ಭಾರತವನ್ನು ಯಾವ ಮಟ್ಟಿಗೆ ಅಪ್ಪಿಕೊಂಡರೆಂದರೆ ಲಂಕಾಶೈರ್ ಹತ್ತಿ ಗಿರಣಿಗಳನ್ನು ಭಾರತೀಯ ಹತ್ತಿ ಸಮಿತಿ (ಇಂಡಿಯನ್ ಕಾಟನ್ ಕಮಿಟಿ)ಗೆ ಸೇರಿಸುವುದಕ್ಕೆ ನೀವೇ ಸೂಕ್ತ ಪ್ರತಿನಿಧಿ ಎಂಬುದಾಗಿ ಸದ್ಯದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡುತ್ತಾ ಈ ಸಮಿತಿಗೆ ಸೇರಿಸುವಲ್ಲಿಯೂ ಯಶಸ್ವಿಯಾದರು[೫]. ಇದಕ್ಕಾಗಿ ೧೯೧೭ರಲ್ಲಿ ಬ್ರಿಟನ್ ಹತ್ತಿ ಕೈಗಾರಿಕಾ ಸಂಶೋಧನಾ ಸಂಸ್ಥೆ ಅಥವಾ ಸಂಘ (ಬ್ರಿಟನ್ ಕಾಟನ್ ಇಂಡಸ್ಟ್ರಿ ರೀಸರ್ಚ್ ಅಸೋಸಿಯೇಷನ್)ವನ್ನು ಲಂಕಾಶೈರ್‌ನಲ್ಲಿ ಸ್ಥಾಪನೆ ಮಾಡಲಾಯಿತು[೬]. ಅಷ್ಟರ ಮಟ್ಟಿಗೆ ಬ್ರಿಟನ್ ಹತ್ತಿ ಕ್ಷಾಮವನ್ನು ಎದುರಿಸಿತ್ತು. ಹೀಗಿದ್ದೂ ಬ್ರಿಟಿಷರು ಭಾರತದಲ್ಲಿ ಭಾರತೀಯರಿಗಾಗಿ ಅಥವಾ ಬ್ರಿಟಿಷರಿಗಾಗಿ, ಭಾರತದಲ್ಲಿ ಬೆಳೆಯುತ್ತಿದ್ದ ಹತ್ತಿಗಾಗಿ ಭಾರತದಲ್ಲಿಯೇ ಗಿರಣಿಗಳನ್ನು

ಸ್ಥಾಪಿಸುವ ಉದ್ದೇಶ ಹೊಂದಿರಲಿಲ್ಲ. ಆದರೆ ಇವೆಲ್ಲವುಗಳನ್ನೂ ಮೆಟ್ಟಿ ನಿಲ್ಲುವ ಶಕ್ತಿ ಭಾರತದ ಆರ್ಥಿಕತೆಗೆ ಆ ಸಂದರ್ಭದಲ್ಲಿ ಇತ್ತು ಎಂದು ಪೂರ್ಣವಾಗಿ ಹೇಳಲಾಗದೇ ಹೋದರೂ ಸ್ವಲ್ಪ ಮಟ್ಟಿಗಿನ ಪೈಪೋಟಿಯನ್ನಂತೂ ತಂದೊಡ್ಡಿತು. ಅಲ್ಲದೇ ೧೯ನೇ ಶತಮಾನದ ಕೊನೆಯ ಹಾಗೂ ೨೦ನೇ ಶತಮಾನದ ಪ್ರಾರಂಭದ ವೇಳೆಗಾಗಲೇ ಆರ್ಥಿಕ ರಾಷ್ಟ್ರೀಯತೆ'ಯ ಕುರಿತಾಗಿ ಚಿಂತಿಸುವ ವಿದ್ವಾಂಸರುಗಳು ಹಾಗೂ ರಾಷ್ಟ್ರೀಯ ಹೋರಾಟಗಾರರು ತಮ್ಮ ಅಸ್ತಿತ್ವವನ್ನು ಕಂಡುಕೊಂಡು ಭದ್ರವಾಗಿ ಬೇರುಬಿಟ್ಟಿದ್ದು, ನಂತರದ ನಾಯಕರುಗಳಿಗೆ ವಸಾಹತುಶಾಹಿಯ ಆರ್ಥಿಕ ಶೋಷಣೆಯು ಯಾವ ರೀತಿ ಭಾರತವನ್ನು ದಾರಿದ್ರ್ಯದ ಸ್ಥಿತಿಗೆ ನೂಕಿದೆ ಎಂಬುದನ್ನು ಪರಿಚಯಿಸಿದ್ದರು[೭].

ಈ ಎಲ್ಲಾ ಹಿನ್ನೆಲೆಯಿಂದ ಭಾರತದಲ್ಲಿ ಸ್ವದೇಶಿ ಹತ್ತಿ ಗಿರಣಿಗಳು ಸ್ಥಾಪನೆಯಾದವು. ಸ್ಥಳೀಯ ಸಂಸ್ಥಾನಗಳ ಪರಿಸ್ಥಿತಿ ಈ ಸಂದರ್ಭದಲ್ಲಿ ಬೇರೆ ಬಗೆಯ ರಾಜಕೀಯ ಹಿನ್ನೆಲೆಯಿಂದ ಕೂಡಿದ್ದರೂ ಸಹ ನಮ್ಮ ರಾಜರುಗಳು ಕೈಗಾರಿಕೆಗಳ ಸ್ಥಾಪನೆಗೆ ಬೆಂಬಲವನ್ನು ನೀಡಿದ್ದೂ ಸುಳ್ಳಲ್ಲ. ಮೈಸೂರು ರಾಜ್ಯವೂ ಇದೇ ಹಿನ್ನೆಲೆಯಿಂದ ತನ್ನನ್ನು ತಾನು ಪೈಪೋಟಿಗೆ ಒಡ್ಡಿಕೊಂಡು ಭೌಗೋಳಿಕವಾಗಿ ಕೃಷಿ ಹಿನ್ನೆಲೆಯ ರಾಜ್ಯವಾಗಿದ್ದರೂ ಆರ್ಥಿಕ ಚಟುವಟಿಕೆಗಳನ್ನು ವಿಸ್ತರಿಸುವ, ಬೆಳೆಸುವ ಪ್ರಯತ್ನಕ್ಕೆ ಮುಂದಾಯಿತು. ಹೀಗಾಗಿ ಬಿನ್ನಿಮಿಲ್ಲು, ಮಹಾರಾಜ ಮಿಲ್ಲು, ಶ್ರೀಕೃಷ್ಣರಾಜೇಂದ್ರ ಮಿಲ್ಲು, ಮಿನರ್ವ ಮಿಲ್ಲು, ರಾಮಕುಮಾರ್ ಮಿಲ್ಲು, ಟಿ.ಆರ್. ಮಿಲ್ಲು, ಗಣೇಶ ಮಿಲ್ಲು ಇತ್ಯಾದಿ ಹತ್ತಿ ಗಿರಣಿಗಳು ಹಾಗೂ ಇನ್ನಿತರೆ ದೊಡ್ಡ, ಸಣ್ಣ, ಮಧ್ಯಮ ಕೈಗಾರಿಕೆಗಳು ಸ್ಥಾಪನೆಯಾದವು. ಅದು ಖಾಸಗಿ ಹಾಗೂ ಸರ್ಕಾರದ ಸಹಯೋಗದಿಂದ ಆಗಿರಬಹುದು ಅಥವಾ ಪೂರ್ಣ ಖಾಸಗಿ ಮಾಲೀಕತ್ವದಿಂದಲೇ ಸ್ಥಾಪನೆಯಾಗಿರಬಹುದು ಒಟ್ಟಿನಲ್ಲಿ ರಾಜ್ಯವು ಇವುಗಳಿಗೆ ಸಹಕಾರವನ್ನು ನೀಡಿತ್ತು.

### ೩.೨. ಗಿರಣಿಗಳ ಸ್ಥಾಪನೆಯಿಂದ ಉಂಟಾದ ಸಾಂಸ್ಕೃತಿಕ ಪಲ್ಲಟಗಳು

ಮನುಷ್ಯ ನಗರ ಜೀವನಕ್ಕೆ ಹೊಂದಿಕೊಂಡಂತೆ ಅವನ ಬೇಕು-ಬೇಡಗಳಲ್ಲಿ ಬದಲಾವಣೆ ಉಂಟಾಗುತ್ತದೆ. ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲಿ ವಾಸ ಮಾಡುವವರು ಕೃಷಿ ಹೈನುಗಾರಿಕೆಯಿಂದ ಹೊರತಾದ ಕಾರ್ಖಾನೆ, ಕೈಗಾರಿಕೆ, ಉದ್ಯಮಗಳು ಇನ್ನಿತರ ಆರ್ಥಿಕ ಚಟುವಟಿಕೆಗಳ ಮೇಲೆ ಅವಲಂಬನೆಯಾಗಿ ಜೀವನ ನಡೆಸುತ್ತಾರೆ. ಒಂದೇ ಸಾಲಿನಲ್ಲಿ ಹೇಳುವುದಾದರೆ ಬಂಡವಾಳಶಾಹಿ ಹಾಗೂ ಕಾರ್ಮಿಕ (ಬೂರ್ಜ್ವ ಹಾಗೂ ಪ್ರೋಲೇಟೇರಿಯನ್)

ವರ್ಗದ ಏಳಿಗೆಯನ್ನು ಕಾಣಬಹುದು. ಬಹುಸಂಖ್ಯಾತರಾದ ಈ ಕಾರ್ಮಿಕ ವರ್ಗ ಎಲ್ಲಾ ನಗರಗಳಲ್ಲಿ ನೆಲೆಸಿ ಗ್ರಾಮೀಣ ಸಂಸ್ಕೃತಿಯಿಂದ ಹೊರತಾದ ನಗರ ಸಂಸ್ಕೃತಿಗೆ ಹೊಂದಿಕೊಳ್ಳಬೇಕಾಗುತ್ತದೆ. ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇವರ ಜೀವನ ಮಟ್ಟ ಬದಲಾಗುವುದರೊಂದಿಗೆ ಅನೇಕ ಸಮಸ್ಯೆಗಳನ್ನು ಆಹ್ವಾನಿಸಿಕೊಳ್ಳಬೇಕು. ಒಟ್ಟಾರೆಯಾಗಿ ಅವರ ಸಾಂಸ್ಕೃತಿಕ ಬದುಕು ಬದಲಾವಣೆಯಾಗುತ್ತದೆ. ಈ ಬದಲಾವಣೆಯನ್ನು ಪಲ್ಲಟ ಎಂದು ಬೇಕಾದರೂ ಕರೆಯಬಹುದು ಅಥವಾ ಏರು–ಪೇರು ಅಂತಲೂ ಕರೆಯಬಹುದು ಅಥವಾ ದ್ವಂದ್ವತೆ ಅಥವಾ ಸಾಂಸ್ಕೃತಿಕ ಬದುಕಿಗಾಗಿ ಪ್ರತಿಭಟನೆ, ಹೋರಾಟ ಹೇಗೆ ಬೇಕಾದರೂ ನಿರೂಪಿಸಬಹುದು. ಅದು ಸಂಶೋಧಕನ ದೃಷ್ಟಿಕೋನ, ನಿರೂಪಣೆ, ಅರ್ಥವಿವರಣೆ, ವಿಶ್ಲೇಷಣೆ ಹಾಗೂ ಇತಿಮಿತಿಗೆ ಒಳಪಟ್ಟಿರುತ್ತದೆ. ಇಷ್ಟೆಲ್ಲಾ ಪೀಠಿಕೆಯಾಕುತ್ತಿರುವ ಉದ್ದೇಶ ನಾವು ಯಾವುದೇ ಒಂದು ವ್ಯವಸ್ಥೆಯನ್ನು 'ಇದು ಇಂತದ್ದಕ್ಕೆ ಮಾತ್ರ ಸೀಮಿತ' ಎಂಬುದಾಗಿ ನಿಗದಿಪಡಿಸುವ ನಿರ್ಧಾರಕ್ಕೆ ಬಂದು ಬಿಡುತ್ತೇವೆ. ಅದು ಅಷ್ಟಕ್ಕೆ ಮಾತ್ರ ಸೀಮಿತವೇ? ಎಂಬ ಪ್ರಶ್ನೆ ಹಾಕಿಕೊಳ್ಳಬೇಕಾಗುತ್ತದೆ. ಒರಟು ಮಾದರಿಯ ಹತ್ತಿ ಬಟ್ಟೆಗಳು ಕೇವಲ ಗ್ರಾಮೀಣ ಪರಿಸರದಲ್ಲಿರುವವರಿಗೆ ಮಾತ್ರವೇ ಸೀಮಿತ, ಹೀಗಾಗಿ ಇಂತಹ ಬಟ್ಟೆಗಳನ್ನು ಹೆಚ್ಚು ಕಡಿಮೆ ಎಲ್ಲಾ ಹಳ್ಳಿಗಳಲ್ಲಿಯೂ ಉತ್ಪಾದಿಸಲಾಗುತ್ತದೆ ಎಂಬಂತಹ ಹೇಳಿಕೆಗಳನ್ನು ನಾವು ಪ್ರಶ್ನಿಸಿಕೊಳ್ಳಬೇಕು. ಏಕೆಂದರೆ ಬೆಂಗಳೂರು, ಮೈಸೂರು, ದಾವಣಗೆರೆ ಇನ್ನಿತರೆ ನಗರಗಳಲ್ಲಿ ತಲೆಯೆತ್ತಿದ ಹತ್ತಿ ಗಿರಣಿಗಳು ತಮ್ಮ ಉತ್ಪಾದಕ ಸರಕುಗಳನ್ನು ಬಹುಸಂಖ್ಯಾತ ಹಳ್ಳಿಗಳಿಗೂ ವಿಸ್ತರಿಸಿದ್ದವು. ಇದರಿಂದ ಗ್ರಾಮೀಣ ಜನರಿಗಾಗಿಯೇ ಹಳ್ಳಿಗಳ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗುಡಿಕೈಗಾರಿಕೆಗಳು ಇನ್ನಿಲ್ಲದಂತೆ ನೆಲಕಚ್ಚಿದವು, ಹೀಗಾಗಿ ಇದೂ ಸಹ ಸಾಂಸ್ಕೃತಿಕ (ಆರ್ಥಿಕತೆ ಯೊಳಗೆ) ಪಲ್ಲಟವೇ ಸರಿ. ಅದಲ್ಲದೇ ರಾಷ್ಟ್ರದ ಹಿನ್ನೆಲೆಯಿಂದ ವಿಶ್ಲೇಷಿಸುವುದಾದರೆ ಡೇವಿಡ್ ಕ್ಲಿಂಗ್‌ಸ್ಮಿತ್ ಮತ್ತು ಜೆಫ್ರಿ ಜಿ. ವಿಲಿಯಂಸನ್ ಅವರು ೧೮ ಮತ್ತು ೧೯ನೇ ಶತಮಾನದಲ್ಲಿ ಭಾರತದ ದೇಶೀಯ ಕೈಗಾರಿಕೆಗಳ ವಿನಾಶದ ಕುರಿತು ಚರ್ಚಿಸುತ್ತಾ ವಸಾಹತುಶಾಹಿಯ ಆರ್ಥಿಕತೆಯನ್ನು ವಿಸ್ತರಿಸುವ ಹಾಗೂ ಹೆಚ್ಚಿಸುವ ಯೂರೋಪ್ ಮಾದರಿಯ ಕೈಗಾರಿಕೆಗಳ ಬೆಳವಣಿಗೆಗೆ ಬ್ರಿಟಿಷರು ಬುನಾದಿಯನ್ನು ಹಾಕಿದರು ಎಂದು ವಿಶ್ಲೇಷಿಸುತ್ತಾರೆ.

ಬಿನ್ನಿಮಿಲ್ಲು ಸ್ಥಾಪನೆಯಿಂದ ಬೆಂಗಳೂರು ನಗರವು ಸಾಂಸ್ಕೃತಿಕವಾಗಿ ಪಲ್ಲಟವನ್ನು ಹೊಂದಿತು. ಮುಖ್ಯವಾಗಿ ಕಾರ್ಮಿಕರು ಇಲ್ಲಿಗೆ ಬಂದು ನೆಲೆಸಿದ್ದರಿಂದ ಪೇಟೆಗಳು ಅಭಿವೃದ್ಧಿಯನ್ನು ಹೊಂದಿದವು. ಬಿನ್ನಿ ಮಿಲ್ಲು ಕಾರ್ಮಿಕ ವರ್ಗ ವಾಸಮಾಡುವ ಪ್ರದೇಶವು ಶಾಂತಿಯಿಂದ ಕೂಡಿತ್ತು.

ನಗರದ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ದೊಡ್ಡಪೇಟೆ, ಚಿಕ್ಕಪೇಟೆ, ಅಕ್ಕಿಪೇಟೆ, ಅಲ್ಸೂರು ಪೇಟೆ, ಕಬ್ಬನ್‌ಪೇಟೆ, ಬಿನ್ನಿಪೇಟೆ ಹಾಗೂ ಗುಡುಮಾಯಮ್ ಪೇಟೆ[೧೦]ಗಳಲ್ಲಿ ನೆಲೆಸಿ, ತಮ್ಮ ಬದುಕನ್ನು ಕಟ್ಟಿಕೊಳ್ಳುವುದರ ಮೂಲಕ ಹಾಗೂ ಪೇಟೆ ನಗರವನ್ನು ಕಟ್ಟಿ ಬೆಳೆಸುವುದರ ಮೂಲಕ ಸಾಂಸ್ಕೃತಿಕ ಪಲ್ಲಟ ಅಥವಾ ಕೊಡುಕೊಡೆಗೆ ಕಾರಣೀಕರ್ತರಾಗಿದ್ದಾರೆ.

ಬಿನ್ನಿಮಿಲ್ ಹಾಗೂ ಮೈಸೂರು ಮಿಲ್ ಪ್ರಾರಂಭಗೊಂಡ ನಂತರ ಕಾರ್ಮಿಕರ ವಾಸಕ್ಕಾಗಿ ನಿವೇಶನ ಹಾಗೂ ಗೃಹಗಳನ್ನು ನಿರ್ಮಿಸಿಕೊಡಲಾಯಿತು. ಇದರ ಪ್ರತಿಫಲವೇ ಬೆಂಗಳೂರಿನಲ್ಲಿ ಬಿನ್ನಿಪೇಟೆ ಹಾಗೂ ಕಾಟನ್‌ಪೇಟೆ ನಿರ್ಮಾಣಗೊಳ್ಳಲು ಸಾಧ್ಯವಾಯಿತು. ಈ ಗಿರಣಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರು ಪ್ರಮುಖವಾಗಿ ಮೈಸೂರು, ಮದ್ರಾಸ್ ಹಾಗೂ ಹೈದರಾಬಾದ್ ಪ್ರಾಂತ್ಯಗಳಿಂದ ಬಂದವರಾಗಿದ್ದರು. ಇವರು ಕನ್ನಡ, ತಮಿಳು ಹಾಗೂ ಆಂದ್ರ ಸಂಸ್ಕೃತಿಯ ಹಿನ್ನೆಲೆಯನ್ನು ಹೊಂದಿದವರಾಗಿದ್ದು ಮೇಲೆ ತಿಳಿಸಿದ ಕಾರ್ಮಿಕರಿಗೆಂದೇ ನಿರ್ಮಾಣಗೊಂಡಿದ್ದ ಪೇಟೆಗಳಲ್ಲಿ ವಾಸಿಸಲು ಆರಂಭಿಸಿದರು. ಪರಿಣಾಮವಾಗಿ ಈ ಮೂರೂ ಭಾಷಿಕರ ನಡುವೆ ಸಾಂಸ್ಕೃತಿಕ ಜೀವನದಲ್ಲಿ ಕೊಡುಕೊಡೆ ಏರ್ಪಟ್ಟು ಕ್ರಮೇಣ ಅವರ ಬದುಕಿನ ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣವಾಯಿತು.

೧೯೨೦ರ ನಂತರ ಕಾರ್ಖಾನೆಗಳ ಬಂಡವಾಳ ಹಾಗೂ ಉತ್ಪತ್ತಿಯಲ್ಲಿ ಏರಿಕೆಯನ್ನು ಕಂಡಿತು. ಇದರಿಂದ ಸಾಮಾನ್ಯವಾಗಿ ಕಾರ್ಮಿಕರ ಆರ್ಥಿಕ ಪರಿಸ್ಥಿತಿಯು ಸುಧಾರಿಸಿತು. ಆರ್ಥಿಕ ಪರಿಸ್ಥಿತಿ ಹೆಚ್ಚಿದಂತೆ ಹಬ್ಬ ಹರಿದಿನ ಮಹೋತ್ಸವಗಳು, ಅವರ ಉಡುಗೆ-ತೊಡುಗೆಗಳಲ್ಲಿ ಬದಲಾವಣೆಯನ್ನು ಕಂಡಿತು. ಹಬ್ಬ-ಹರಿದಿನ, ಮದುವೆ, ಸಾವು ಮುಂತಾದ ಸಂದರ್ಭಗಳಲ್ಲಿ ಕಾರ್ಮಿಕರಿಗೆ ತಮ್ಮ ಕೆಲಸದಿಂದ ಬಿಡುವಿಗಾಗಿ ಬಿನ್ನಿಮಿಲ್ ಕಲ್ಯಾಣ ಸಮಿತಿ (ಬಿನ್ನಿಮಿಲ್ ವೆಲ್ಫೇರ್ ಕಮಿಟಿ)ಯು ತಮ್ಮಲ್ಲಿಯೇ ಒಂದು ಕಾರ್ಯ ಯೋಜನೆಯನ್ನು ರೂಪಿಸಿ ಮಾತುಕತೆ ನಡೆಸಿ ಆಡಳಿತಕ್ಕೆ ತನ್ನ ವರದಿಯನ್ನು ಸಲ್ಲಿಸಿತು[೧೧]. ಆಯುಧ ಪೂಜಾ ಹಬ್ಬದ ಸಂದರ್ಭದಲ್ಲಿ ಕಾರ್ಮಿಕರು ಯಂತ್ರಗಳು ಮತ್ತು ಸಲಕರಣೆಗಳಿಗೆ ಪೂಜೆ ಮಾಡುತ್ತಿದ್ದರು. ಇದರ ಅಂಗವಾಗಿ ಕಾರ್ಮಿಕರ ಮನವಿಯ ಮೇರೆಗೆ ಆ ಒಂದು ದಿನ ಮಿಲ್ ಅನ್ನು ಮುಚ್ಚಲು ಅನುಮತಿ ನೀಡಲಾಯಿತು. ನೇಯ್ಗೆ ಕೆಲಸ ಮಾಡುವ ದೇವರಾಜ ಎಂಬುವವನು ವರ್ಷಕ್ಕೆ ೧೦ ರಿಂದ ೧೧ ದಿನಗಳ ರಜೆಯನ್ನು ನೀಡಬೇಕೆಂದು ಹಾಗೂ ಧಾರ್ಮಿಕ ಸಂದರ್ಭದ ರಜೆಗಳು ಹಾಗೂ ಪ್ರತಿ ಭಾನುವಾರವೂ

ರಜೆಯನ್ನು ನೀಡಬೇಕೆಂದು ಮನವಿಯನ್ನು ಮಾಡಿಕೊಂಡನು[೧೨]. ಗಣೇಶ ಹಬ್ಬವು ೧೯೩೫ರಲ್ಲಿ ಭಾನುವಾರದಂದು ಬಿದ್ದಾಗ ಬದಲಿ ರಜೆಯನ್ನು ನೀಡಬೇಕೆಂದು ಕಾರ್ಮಿಕರು ಬೇಡಿಕೆಯನ್ನು ಮುಂದಿಟ್ಟರು.

ಆರ್ಕಾಟ್ ಶ್ರೀನಿವಾಸಚಾರ್ಯರು ಮುನಿಸಿಪಾಲಿಟಿಯ ಅಧ್ಯಕ್ಷರಾಗಿದ್ದಾಗ (೧೯೦೧) ವಾರಕ್ಕೊಮ್ಮೆ ಮುನ್ಸಿಪಲ್ ಪಾರ್ಕ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಓಲಗ ಊದಿಸುವ, ಬ್ಯಾಂಡ್ ಬಾಜಿಸುವ ಕಾರ್ಯಕ್ರಮ ಏರ್ಪಾಡಾಯಿತು. ಇಪ್ಪತ್ತನೆಯ ಶತಮಾನದ ಮೊದಲಲ್ಲಿ ಅನೇಕ ರಾಮಮಂದಿರಗಳಲ್ಲಿ ಪ್ರತಿವರ್ಷವೂ ರಾಮನವಮಿ ಸಂಗೀತೋತ್ಸವ ನಡೆಸುವ ಪರಿಪಾಠ ಶುರುವಾಯಿತು. ಬಿನ್ನಿಮಿಲ್ಲು ಕ್ರಾಸ್ ಮುಂತಾದ ಕಡೆ ರಾಮನವಮಿ ಸಂಗೀತೋತ್ಸವಗಳು ತಪ್ಪದೇ ನಡೆದು ಸಂಗೀತ ಪ್ರಿಯರನ್ನು ಆಕರ್ಷಿಸುತ್ತಿದ್ದವು[೧೩]. ಕಾರ್ಖಾನೆ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಬಿನ್ನಿಮಿಲ್ಲು ಆಡಳಿತವು ಕಾರ್ಖಾನೆಯ ಪರಿಸರದಿಂದ ಸಾರಾಯಿ ಮತ್ತು ಹೆಂಡದ ಅಂಗಡಿಗಳನ್ನು ಎತ್ತಂಗಡಿ ಮಾಡಿಸಿರುವ ಕಾರ್ಯಾಚರಣೆ ಗಮನಾರ್ಹವಾದುದು[೧೪].

ಸರ್.ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಏಳು ವರ್ಷಗಳಲ್ಲಿ (೧೯೧೨-೧೯೧೮) ಮೈಸೂರು ರಾಜ್ಯ ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಚೇತರಿಕೆಯನ್ನು ಕಂಡಿತು. ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ಸ್ಥಾಪನೆಯಾಯಿತು. ಇದರಿಂದ ನಗರದ ಕಾರ್ಖಾನೆ, ಗಿರಣಿಗಳಿಗೆ ಹಾಗೂ ಕಾರ್ಮಿಕರಿಗೆ ಹಣಕಾಸು ವ್ಯವಹಾರ ನಡೆಸಲು ಸಾಧ್ಯವಾಯಿತು. ೧೯೨೫ರಲ್ಲಿ ನಡೆದ ನ್ಯಾಯವಿದಾಯಕ ಸಭೆಯ (ಲೆಜಿಸ್ಲೇಟಿವ್ ಕೌನ್ಸಿಲ್) ಚರ್ಚೆಯಲ್ಲಿ ದುಡಿಯುವ ಮಕ್ಕಳ ಕನಿಷ್ಠ ವಯೋಮಿತಿಗೆ ಸಂಬಂಧಪಟ್ಟಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು. ಅದು ಬ್ರಿಟಿಷ್ ಪ್ರೆಸಿಡೆನ್ಸಿಯಲ್ಲಿ ಹತ್ತರಿಂದ ಹನ್ನೆರಡು ವರ್ಷಕ್ಕೆ ನಿಗದಿಪಡಿಸಿದರೆ, ಬಿನ್ನಿಮಿಲ್ಲು, ಮೈಸೂರು ಮಿಲ್ಲು ಹಾಗೂ ಮಿನರ್ವ ಮಿಲ್ಲುಗಳಲ್ಲಿ ಕನಿಷ್ಟ ಹನ್ನೊಂದು ವರ್ಷ ಪೂರೈಸಿರಬೇಕು ಎಂಬುದಾಗಿ ನಿರ್ಧರಿಸಲಾಯಿತು[೧೫]. ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಲ್ಲಿ ಪರಸ್ಪರ ಅನ್ಯೋನ್ಯತೆ ಇದ್ದಿತು ಎಂಬುದಾಗಿ ಹೇಳಲು ಸಾಧ್ಯವಿಲ್ಲ. ಏಕೆಂದರೆ ಗಿರಣಿಗಳಲ್ಲಿ ಅಸ್ಪೃಶ್ಯತೆ, ಜಾತಿಯತೆಯಂತಹ ಆಚರಣೆಗಳು ಜಾರಿಯಲ್ಲಿದ್ದಿತು. ಅಲ್ಲದೇ ಕನ್ನಡ ಹಾಗೂ ತಮಿಳು ಕೂಲಿಕಾರ್ಮಿಕರ ನಡುವೆ ಸಂಘರ್ಷಗಳು ಆಗಿಂದಾಗ್ಗೆ ನಡೆಯುತ್ತಿದ್ದುದರ ಬಗ್ಗೆ ದಾಖಲೆಗಳಿವೆ. ಹಾಗೆಯೇ ಕಾರ್ಮಿಕರುಗಳ ನಡುವೆ ವಿವಾದಗಳು ಸರ್ವೇಸಾಮಾನ್ಯ. ಬಿನ್ನಿಮಿಲ್ ಕಾರ್ಮಿಕರಲ್ಲಿನ ವಿವಾದವನ್ನು ಬಗೆಹರಿಸಲು

ಬೆಂಗಳೂರು ಜಿಲ್ಲಾ ಮ್ಯಾಜಿಸ್ಟ್ರೇಟ್ ಕಛೇರಿಗೆ ಬರೆದ ಪತ್ರದಲ್ಲಿ (೦೧-೦೬-೧೯೨೫) ಈ ಮೇಲಿನ ಹೇಳಿಕೆಗಳು ವ್ಯಕ್ತವಾಗಿವೆ[೧೬].

ಬಿನ್ನಿಮಿಲ್‌ನಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಹಾಗೂ ಅವರ ಕುಟುಂಬದವರಿಗೆ ಮನರಂಜನೆ ನೀಡುವ ಸಲುವಾಗಿ ಮನರಂಜನಾ ತೆರಿಗೆ ಕಾಯಿದೆಯ (ಎಂಟರ್ಟೈನ್‌ಮೆಂಟ್ ಟ್ಯಾಕ್ಸ್ ರೆಗ್ಯುಲೇಷನ್) ನಿಯಮದಡಿಯಲ್ಲಿ ತೆರಿಗೆ ವಿನಾಯಿತಿಯನ್ನು ನೀಡಬೇಕು ಎಂದು ಗಿರಣಿಯು ಮೈಸೂರು ರಾಜ್ಯಕ್ಕೆ ಒಂದು ಮನವಿ ಪತ್ರವನ್ನು ೧೯೩೩ರಲ್ಲಿ ಸಲ್ಲಿಸಿತು[೧೭]. ಈ ಮನರಂಜನೆಯನ್ನು ಮಿಲ್ಸ್ ಡ್ರಾಮಾಟಿಕ್ ಸೊಸೈಟಿಯ ಮೂಲಕವೇ ನೀಡಲಾಗುತ್ತಿದ್ದು ಈ ಸೊಸೈಟಿಯು ಕೈಗಾರಿಕಾ ಕಲ್ಯಾಣವನ್ನು ಬಯಸುತ್ತದೆಯೇ ಹೊರತು ಲಾಭ ಗಳಿಸುವ ಉದ್ದೇಶವನ್ನು ಹೊಂದಿಲ್ಲ ಎಂಬುದಾಗಿ ಸ್ಪಷ್ಟಪಡಿಸಿದರು[೧೮]. ಈ ಸೊಸೈಟಿಯು ಸಂಪೂರ್ಣವಾಗಿ ಖಾಸಗಿ ಲಕ್ಷಣವನ್ನು ಹೊಂದಿದ್ದು, ಕಾರ್ಮಿಕರು ಹಾಗೂ ಅವರ ಕುಟುಂಬ ಇದರಲ್ಲಿ ಪ್ರವೇಶ ಪಡೆಯಬೇಕಾದರೆ ಅತ್ಯಲ್ಪದ ಪ್ರವೇಶ ಶುಲ್ಕವನ್ನು ನೀಡಬೇಕಾಗಿತ್ತು.

ಮೈಸೂರು ಮಹಾರಾಜ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರಿಗಾಗಿ 'ಲೇಬರ್ ಕಾಲೋನಿ'ಯ ಬಡಾವಣೆಯನ್ನು ನವೀನಗೊಳಿಸುವ ಯೋಜನೆಯನ್ನು ೧೯೨೮ರಲ್ಲಿ ಹಮ್ಮಿಕೊಳ್ಳಲಾಯಿತು. ಇದಕ್ಕಾಗಿ ಬೆಂಗಳೂರು ತಾಲ್ಲೂಕಿನ ಹಳ್ಳಿಯಾದ ಕೇತುಮಾರನಹಳ್ಳಿಯ ಭೂಮಿಯನ್ನು ಸ್ವಾದೀನಪಡಿಸಿಕೊಳ್ಳಲಾಯಿತು. ಇದು ಶಾಲೆ, ಸಹಕಾರ ಸಂಘಗಳು, ದೇವಾಲಯಗಳು, ವಿಶಾಲ ರಸ್ತೆಗಳು, ರಸ್ತೆಯ ಬದುಗಳಲ್ಲಿ ಮರಗಳನ್ನು ನೆಡುವುದು ಇತ್ಯಾದಿ ಸೌಲಭ್ಯಗಳನ್ನು ಹೊಂದಿರಬೇಕು ಎಂಬ ಉದ್ದೇಶವನ್ನು ಹೊಂದಿತ್ತು. ಅದರಂತೆ ೨೫ ಅಡಿ ಅಗಲದ ರಸ್ತೆಗಳು, ೪೫'×೬೦' ಯಿಂದ ೫೦'×೬೪' ಅಳತೆಯ ೨೨೦ ನಿವೇಶನಗಳನ್ನು ನಿರ್ಮಿಸಲಾಯಿತು. ಅಡ್ಡೆ ರಸ್ತೆಗಳಿಗೆ ಎ, ಬಿ, ಸಿ, ಡಿ ಎಂಬ ಬ್ಲಾಕ್‌ಗಳಾಗಿ ಹೆಸರನ್ನಿಡಲಾಯಿತು[೧೯]. ಅದೇ ರೀತಿ ೧೯೩೪ರಲ್ಲಿ ಬಿನ್ನಿ ಮಿಲ್ಲಿನ ಕಾರ್ಮಿಕರಿಗೆ ಗೃಹ ಸೌಲಭ್ಯ ಒದಗಿಸುವ ವಿಷಯವಾಗಿ 'ಜೋಡಿ ಕೆಂಚಾಪುರ' ಎಂಬ ಹಳ್ಳಿಯ ಭೂಮಿಯನ್ನು ಸ್ವಾದೀನಪಡಿಸಿಕೊಂಡರು[೨೦]. ಹೀಗೆ ಗಿರಣಿಗಳಿಂದ ಬೆಂಗಳೂರಿನಲ್ಲಿ ಕಾಲೋನಿಗಳು ಹಾಗೂ ಪೇಟೆಗಳು ಹಚ್ಚಾಗಿ ನಗರದ ವಿಸ್ತರಣೆಗೆ ಅನುವು ಮಾಡಿಕೊಟ್ಟವು.

ರಾಜ್ಯವು ಸ್ವತಃ ಮುಂದಾಗಿ ಹಾಗೂ ನೆರವು ನೀಡುವುದರ ಮೂಲಕ ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕರಿಗಾಗಿ ಗೃಹ ಸೌಲಭ್ಯಗಳನ್ನು ಒದಗಿಸಲು ಮುಂದಾಯಿತು. ಈಗಾಗಲೇ ಬಿನ್ನಿಮಿಲ್ಲು ಕಾರ್ಮಿಕರಿಗಾಗಿ ಪ್ರಸ್ತುತ ೧೫೦ ಕ್ವಾರ್ಟರ್ಸ್‌ಗಳಿದ್ದು, ೧೯೪೦ರ ವೇಳೆಗೆ ೪೦ ಎಕರೆ ಭೂಮಿಯನ್ನು ಸ್ವಾದೀನಪಡಿಸಿಕೊಂಡು ಇವುಗಳ ಸಂಖ್ಯೆಯನ್ನು ಹೆಚ್ಚಿಸುವ ಯೋಜನೆಗೆ ಮುಂದಾಯಿತು[೨೧]. ಅದೇ ರೀತಿ ಮೈಸೂರು ಮಿಲ್ಲು ಹಾಗೂ ಕೃಷ್ಣ ವೀವಿಂಗ್ ಮಿಲ್ಲುಗಳ ಕಾರ್ಮಿಕರಿಗಾಗಿ ೫೬ ಇದ್ದ ಕ್ವಾರ್ಟರ್ಸ್‌ಗಳನ್ನು ೧೦೦ಕ್ಕೆ ವಿಸ್ತರಿಸುವ ಉದ್ದೇಶ ಹೊಂದಲಾಯಿತು[೨೨]. ಅದೇ ರೀತಿ ಮೈಸೂರಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಕಾರ್ಮಿಕರಿಗಾಗಿ ೪೦೦ ಕ್ವಾರ್ಟರ್ಸ್‌ಗಳನ್ನು ನಿರ್ಮಿಸುವ ಗುರಿ ಇಟ್ಟುಕೊಳ್ಳಲಾಯಿತು[೨೩]. ಹೀಗೆ ರಾಜ್ಯದ ನೆರವು ಹಾಗೂ ಪ್ರೋತ್ಸಾಹದಿಂದ ಕಾರ್ಮಿಕರು ಒಂದೆಡೆ ನೆಲೆಸಲು ಸಾಧ್ಯವಾಗಿ ಅದರ ಮೂಲಕ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಳ್ಳಲು ಹಾಗೂ ಮೇಳೈಸುವಿಕೆಗೂ ಇದು ದಾರಿಯಾಯಿತು. ಏಕೆಂದರೆ ಮೈಸೂರು ರಾಜ್ಯದ ಗಿರಣಿಗಳಲ್ಲಿ ಆಂಧ್ರ, ತಮಿಳು ಹಾಗೂ ಕನ್ನಡ ಭಾಷೆ ಮಾತನಾಡುವ ಹಾಗೂ ಭೌಗೋಳಿಕವಾಗಿಯೂ ಭಿನ್ನತೆಯನ್ನು ಹೊಂದಿದ್ದ ಕಾರ್ಮಿಕರು ಇದ್ದು ಇವರು ಒಂದೇ ಕಡೆ ನೆಲೆಸಿದ್ದರಿಂದ ಸಾಂಸ್ಕೃತಿಕ ಕೊಡುಕೊಡೆಗಳು ಸಾಧ್ಯವಾಯಿತು.

ಸ್ವಾತಂತ್ರ್ಯ ಭಾರತದಲ್ಲಿ ಗಿರಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ತಮ್ಮ ದೈನಂದಿನ ಬದುಕನ್ನು ಸಾಂಸ್ಕೃತಿಕ ಚಟುವಟಿಕೆಗಳ ಕಡೆಗೆ ಹರಿಸಲು ಸಾಧ್ಯವಾಯಿತು. ತಮ್ಮ ಹಕ್ಕುಗಳನ್ನು ಕೇಳಿ ಪಡೆದುಕೊಳ್ಳುವ ಸ್ಥಿತಿ ನಿರ್ಮಾಣವಾಗತೊಡಗಿತು. ಮೈಸೂರು ರಾಜ್ಯದಲ್ಲಿಯೂ ಈ ರೀತಿಯ ಬೆಳವಣಿಗೆ ಕಂಡುಬಂದಿತ್ತು. ಬೆಂಗಳೂರು ನಗರ ಪ್ರದೇಶದಲ್ಲಿ ಎರಡು ಮನರಂಜನಾ ಕೇಂದ್ರಗಳು ಕಾರ್ಮಿಕ ವರ್ಗಗಳಿಗಾಗಿಯೇ ಸ್ಥಾಪನೆಯಾಗಿದ್ದವು. ಕಾಟನ್ ಪೇಟೆ ಹಾಗೂ ಚಾಮರಾಜಪೇಟೆ ಈ ಎರಡೂ ಕಡೆಗಳಲ್ಲಿ ಇದ್ದು, ಒಳಾಂಗಣ ಕ್ರೀಡಾಂಗಣ, ಓದುವ ಕೊಠಡಿಗಳು, ಗ್ರಂಥಾಲಯ ಇತ್ಯಾದಿ ಸೌಲಭ್ಯಗಳನ್ನು ಒಳಗೊಂಡಿತ್ತು. ಅಲ್ಲದೇ ವೈದ್ಯಕೀಯ ನೆರವು, ಗೃಹ ಸೌಲಭ್ಯ, ಅಗ್ಗದ ದವಸದಾನ್ಯಗಳು, ಶಿಕ್ಷಣ ಸೌಲಭ್ಯ, ಆಹಾರ ಪದಾರ್ಥಗಳ ಸಂಗ್ರಹಣಾ ಕೇಂದ್ರಗಳು, ಕ್ರೀಡೆಗಳು, ರಾತ್ರಿ ಪಾಳಿಯಲ್ಲಿನ ಕಾರ್ಮಿಕರಿಗಾಗಿ ಉಚಿತ ಕಾಫಿ ಸೌಲಭ್ಯ, ಸಹಕಾರ ಸಂಘಗಳು ಇತ್ಯಾದಿ ಸೌಲಭ್ಯಗಳು ದೇಶ ಸ್ವತಂತ್ರಗೊಂಡ ನಂತರ ವಿಸ್ತಾರಗೊಂಡವು.

## ೩.೩. ಗಿರಣಿಗಳ ಉಚ್ಛ್ರಾಯ ಕಾಲ

ಬೆಂಗಳೂರಿನ ಹತ್ತಿ ಗಿರಣಿಗಳ ಉಚ್ಛ್ರಾಯ ಸ್ಥಿತಿ ಅಥವಾ ಸಂದರ್ಭವನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಏಕೆಂದರೆ 'ಉಚ್ಛ್ರಾಯ' ಎಂಬ ಪರಿಕಲ್ಪನೆಗೆ ಬಳಸುವ ಮಾನದಂಡ ಯಾವುದು? ಎಂಬದೇ ಪ್ರಶ್ನಾರ್ಹವಾಗಿದೆ. ಇದನ್ನು ಗಿರಣಿಗಳ ಸಂಖ್ಯೆಯಿಂದ ಗುರುತಿಸಬೇಕೋ? ಅಥವಾ ಉತ್ಪಾದನೆಯಿಂದಲೋ? ಅಥವಾ ಆಧುನಿಕ ತಂತ್ರಜ್ಞಾನದ ಅಳವಡಿಕೆಯಿಂದಲೋ? ಅಥವಾ ವಿದ್ಯುಚ್ಛಕ್ತಿಯ ಬಳಕೆಯ ಸೌಲಭ್ಯದಿಂದಲೋ? ಎಂಬಿತ್ಯಾದಿ ಪ್ರಶ್ನೆಗಳು ಏಕಕಾಲಕ್ಕೆ ಒಮ್ಮೇಲೆ ಮೂಡಿಬರುತ್ತವೆ. ಹೀಗಾಗಿ ಅಧ್ಯಯನದ ದೃಷ್ಟಿಯಿಂದ ಮೇಲೆ ಪ್ರಸ್ತಾಪಿಸಿದ ಎಲ್ಲವುಗಳನ್ನು ಒಟ್ಟುಗೂಡಿಸಿ ಒಂದು ಕಾಲಮಾನಕ್ಕೆ ತಂದು ಅವಧಿಯನ್ನು ನಿಗದಿಪಡಿಸಿಕೊಳ್ಳಲಾಗಿದೆ. ಅದು ೧೯೧೦ ರಿಂದ ೧೯೫೦ರ ನಡುವಿನ ಅವಧಿ ಎಂಬುದಾಗಿ ನಿಗದಿಪಡಿಸಿಕೊಳ್ಳಲಾಗಿದೆ. ಏಕೆ? ಇದೇ ಅವಧಿ ಎಂಬುದಾಗಿ ಪ್ರಶ್ನೆ ಎತ್ತಿದರೆ ಎದಕ್ಕೆ ನೀಡುವ ಉತ್ತರ ಈ ನಲವತ್ತು ವರ್ಷಗಳಲ್ಲಿ ಬೆಂಗಳೂರಿನ ಹತ್ತಿ ಗಿರಣಿಗಳು ಏಕಕಾಲಕ್ಕೆ ಎರಡು ರೀತಿಯ ಸವಾಲುಗಳನ್ನು ಹಾಗೂ ಪೈಪೋಟಿಯನ್ನು ಎದುರಿಸಬೇಕಾಗಿ ಬಂದಿತ್ತು. ಮೊದಲನೆಯದು ಅಂತರರಾಷ್ಟ್ರೀಯ ಪೈಪೋಟಿ ಎರಡನೆಯದು ಸ್ಥಳೀಯ ಪೈಪೋಟಿ. ಈ ಅವಧಿಯೊಳಗಡೆ ಪ್ರಪಂಚವು ಎರಡು ಜಾಗತಿಕ ಯುದ್ಧಗಳನ್ನು ಎದುರಿಸಬೇಕಾಗಿ ಬಂದಿತು. ವಸಾಹತು ರಾಷ್ಟ್ರಗಳಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ದೋರಣೆಯು ಭಿನ್ನ ನಿಲುವುಗಳನ್ನು ತಳೆಯುವುದರ ಮೂಲಕ ಮಾರುಕಟ್ಟೆಯನ್ನು ವಿಸ್ತರಿಸಿತು. ಹೀಗಾಗಿ ನಮ್ಮ ದೇಶದ ಗಿರಣಿಗಳಲ್ಲಿ ತಯಾರಾದ ಪದಾರ್ಥಗಳು ಯೂರೋಪಿನ ಪದಾರ್ಥಗಳೊಂದಿಗೆ ನೇರ ಪೈಪೋಟಿಗೆ ಇಳಿಯಬೇಕಾಗಿತ್ತು. ಇಂಥ ಸವಾಲುಗಳನ್ನು ಬೆಂಗಳೂರಿನ ಹತ್ತಿ ಗಿರಣಿಗಳು ಹೇಗೆ ಮೆಟ್ಟಿ ನಿಂತಿತ್ತು ಎಂಬುದೇ ಚರ್ಚೆ. ಮತ್ತೊಂದು ಅಂಶವೆಂದರೆ ಇದೇ ಅವಧಿಯಲ್ಲಿ ಸ್ಥಳೀಯವಾಗಿ ಮೈಸೂರು ಹಾಗೂ ದಾವಣಗೆರೆಯಲ್ಲಿ ಹತ್ತಿ ಗಿರಣಿಗಳು ಪ್ರಾರಂಭವಾದವು. ದಾವಣಗೆರೆಯಂತೂ 'ಕರ್ನಾಟಕದ ಮ್ಯಾಂಚೆಸ್ಟರ್' ಎಂಬ ಖ್ಯಾತಿಗೆ ಬೇಕಾದ ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುವ ತವಕದಲ್ಲಿ ೧೯೨೭ ರಿಂದ ಗಿರಣಿಗಳು ಸ್ಥಾಪನೆಗೊಂಡು ಪ್ರಮಾಣ ಹಾಗೂ ಉತ್ಪಾದನೆಯಲ್ಲಿ ಏರಿಕೆಯನ್ನು ಕಾಣುತ್ತಲಿತ್ತು. ಈ ಪೈಪೋಟಿಯನ್ನು ಬೆಂಗಳೂರಿನ ಗಿರಣಿಗಳು ಹೇಗೆ ಎದುರಿಸಿದ್ದವು ಎಂಬುದು ಮತ್ತೊಂದು ಚರ್ಚೆ. ಇದಲ್ಲದೇ ೧೯೨೭-೨೮ರಲ್ಲಿ ಬೆಂಗಳೂರಿನ ಬಹುತೇಕ ಗಿರಣಿಗಳು ಜಲವಿದ್ಯುಚ್ಛಕ್ತಿ ಸೌಲಭ್ಯವನ್ನು

ಪಡೆಯುವುದರ ಮೂಲಕ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದ ಏರಿಕೆಯನ್ನು ಕಂಡವು. ಹೀಗೆ ಅಂತರರಾಷ್ಟ್ರೀಯ ಪೈಪೋಟಿ ಹಾಗೂ ಸ್ಥಳೀಯ ಸವಾಲುಗಳನ್ನು ಮೆಟ್ಟಿ ಬೆಂಗಳೂರಿನ ಹತ್ತಿ ಗಿರಣಿಗಳು ತಮ್ಮ ಅಸ್ತಿತ್ವವನ್ನು ಭದ್ರವಾಗಿ ಉಳಿಸಿಕೊಂಡಿದ್ದವು. ಹೀಗಾಗಿ ೧೯೧೦ರಿಂದ ೧೯೫೦ರೊಳಗಿನ ಕಾಲಮಾನ ಉಚ್ಛ್ರಾಯ ಸ್ಥಿತಿಗೆ ಸೂಕ್ತ ಎಂಬುದಾಗಿ ನಿಗದಿಪಡಿಸಿಕೊಳ್ಳಲಾಗಿದೆ. ಆದರೆ ಇದೇ ಅಂತಿಮ ಅಥವಾ ಸತ್ಯ ಎಂದಲ್ಲ. ಆದಾಗ್ಯೂ ಇದಕ್ಕೆ ಸಮರ್ಥನೆ ಈ ಸಂಶೋಧನೆಯಲ್ಲಿದೆ.

ಸುಮಾರು ಒಂದು ಶತಮಾನಕ್ಕೂ ಹೆಚ್ಚು ಸುದೀರ್ಘ ಇತಿಹಾಸವನ್ನು ಹೊಂದಿದ್ದ ಬಿನ್ನಿಮಿಲ್ಲು ಸ್ಥಾಪನೆಯಾದಾಗಿನಿಂದ ತೀವ್ರ ಗತಿಯಲ್ಲಿಯೇ ಅಭಿವೃದ್ಧಿ ಪಥದತ್ತ ಸಾಗಿತು. ಆದರೆ ೧೮೯೮ರಲ್ಲಿ ಬೆಂಗಳೂರಿನಲ್ಲಿ ಕಾಣಿಸಿಕೊಂಡ ಪ್ಲೇಗು ಅಪಾರ ಸಾವು-ನೋವು ಹಾಗೂ ಜನರನ್ನು ಹಲವು ಸಂಕಷ್ಟಗಳಿಗೆ ಗುರಿಮಾಡಿತು. ನಗರದಲ್ಲಿರುವ ಎರಡು ಉಗಿಚಾಲಿತ ಕಾರ್ಖಾನೆ (ಬಟ್ಟೆ ಗಿರಣಿ)ಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲಾಗದೇ ನಷ್ಟಕ್ಕೊಳಗಾಗಿ ಷೇರುದಾರರಿಗೆ ಆ ವರ್ಷ ಡಿವಿಡೆಂಡ್ ನೀಡಲಾರದಾದವು[೨೪]. ಈ ಪ್ಲೇಗಿನ ದುಷ್ಪರಿಣಾಮದಿಂದ ಬಿನ್ನಿಮಿಲ್ಲು ಸಹ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ನಷ್ಟವನ್ನು ಅನುಭವಿಸಿತು. ಈ ಸಂದರ್ಭವನ್ನು (೧೮೯೮) ಹೊರತುಪಡಿಸಿ ಮಿಕ್ಕೆಲ್ಲಾ ಅವಧಿಯಲ್ಲಿ ಭಾರಿ ಗಾತ್ರದ ಕೈಗಾರಿಕೆಗಳು ಪ್ರಾರಂಭವಾಗುವವರೆಗೆ ಬಿನ್ನಿ ಮಿಲ್ಲು ಗಂಭೀರ ನಷ್ಟದ ಪರಿಣಾಮವನ್ನು ಎದುರಿಸಿರಲಿಲ್ಲ.

೧೯೧೦ರ ವೇಳೆಗೆ ಮೈಸೂರು ಮಿಲ್ಲು ಹಾಗೂ ಬಿನ್ನಿ ಮಿಲ್ಲು ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು ಎಂಬುದಾಗಿ ಮೈಸೂರು ಆಡಳಿತವು ವರದಿ ಮಾಡಿದೆ[೨೫]. ಈ ಅವಧಿಯಲ್ಲಿ ಮೇಲಿನ ಎರಡು ಗಿರಣಿಗಳಲ್ಲಿ ೧,೨೧೩ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು ಇವುಗಳ ಒಟ್ಟಾರೆ ಉತ್ಪಾದನೆ ೨೪,೦೪,೮೦೦ ಬೇಲ್‌ನಷ್ಟಿತ್ತು. ಇದು ೧೯೧೧ರ ವೇಳೆಗೆ ಮತ್ತಷ್ಟು ಏರಿಕೆಯನ್ನು ಕಂಡಿತು. ಈ ಅವಧಿಯಲ್ಲಿ ಎರಡೂ ಗಿರಣಿಗಳಿಂದ ೩೩ ಲಕ್ಷ ರೂಪಾಯಿ ಮೌಲ್ಯದ ವಸ್ತುಗಳನ್ನು ಉತ್ಪಾದಿಸಲಾಯಿತು. ಅಲ್ಲದೇ ದಿನನಿತ್ಯ ಸರಾಸರಿ ೧೬೦೦ ಕಾರ್ಮಿಕರು ಕೆಲಸ ಮಾಡುತ್ತಿದ್ದರು[೨೬].

ಬಬ್ಬೂರ್ ಫಾರ್ಮ್‌ನಲ್ಲಿ ೬೯ ವಿವಿಧ ರೀತಿಯ ಹತ್ತಿ ಬೀಜದ ತಳಿಗಳನ್ನು ಹಂಚಲಾಯಿತು. ಇಷ್ಟೂ ತಳಿಗಳ ಹತ್ತಿಯನ್ನು ಯಶಸ್ವಿಯಾಗಿ ಸಾಗುವಳಿ ಮಾಡಲಾಯಿತು. ವಿದೇಶಿ ಮಿಶ್ರತಳಿ ಹತ್ತಿಯನ್ನು ಇದೇ ಅವಧಿಯಲ್ಲಿ ಅಂದರೆ ೧೯೨೪ರಲ್ಲಿ ಅಭಿವೃದ್ಧಿಪಡಿಸಲಾಯಿತು. ಅದಕ್ಕೆ

'ಮೈಸೂರು-ಅಮೆರಿಕನ್-IV' ಎಂದು ನಾಮಕರಣ ಮಾಡಿ ಈ ತಳಿಯನ್ನು ಪರೀಕ್ಷೆಗೆ ಒಳಪಡಿಸಲಾಯಿತು[೨೭]. ಈ ಎಲ್ಲದರ ಪ್ರಯತ್ನದ ಫಲವಾಗಿ ಇಳುವರಿಯಲ್ಲಿ ಹೆಚ್ಚಿನ ಸುಧಾರಣೆ ಕಾಣಲು ಸಾಧ್ಯವಾಯಿತು.

ಇಷ್ಟೆಲ್ಲಾ ಪ್ರಯತ್ನಗಳಿದ್ದರೂ ಹತ್ತಿ ಕೈಗಾರಿಕೆಗಳು ಈ ಅವಧಿಯಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತು. ಇದಕ್ಕೆ ಕಾರಣ ಮಾರುಕಟ್ಟೆಯಲ್ಲಾದ ಕುಸಿತ[೨೮]. ಇದರಿಂದ ಹೊಸದಾಗಿ ಕಾರ್ಯಾರಂಭಗೊಂಡಿದ್ದ ಗಿರಣಿಗಳು ಸಮಸ್ಯೆಯನ್ನು ಎದುರಿಸಿದವು. ಹೀಗಾಗಿ ಇವುಗಳನ್ನು ಮೇಲೆತ್ತುವ ಉದ್ದೇಶದಿಂದ ವಿಶೇಷ ಮಾನದಂಡವನ್ನು ನುಸರಿಸಲಾಯಿತು. ಬಿನ್ನಿ ಮಿಲ್ಲು ಹಾಗೂ ಮೈಸೂರು ಮಿಲ್ಲುಗಳು ಗಮನಾರ್ಹವಾದ ವಿಸ್ತರಣೆ ಕಂಡವು. ಕೃಷ್ಣರಾಜೇಂದ್ರ ಮಿಲ್ಲಿನ ಎಲ್ಲಾ ೨೫,೦೦೦ ಸ್ಪಿಂಡಲ್‌ಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ಹೀಗಾಗಿ ಈ ಅವಧಿಯಲ್ಲಿ ರಾಜ್ಯದಲ್ಲಿ ಒಟ್ಟಾರೆ ಸ್ಪಿಂಡಲ್ಸ್‌ಗಳ ಸಂಖ್ಯೆ ೧,೩೦,೦೦೦ ಹಾಗೂ ಮಗ್ಗಗಳ ಸಂಖ್ಯೆ ೧೨೮೫[೨೯]. ರಾಜ್ಯದ ಒಟ್ಟಾರೆ ಉತ್ಪಾದನೆಯಲ್ಲಿ ಶೇ. ೮೦ಕ್ಕೂ ಹೆಚ್ಚು ಉತ್ಪಾದನೆ ಬೆಂಗಳೂರಿನ ಗಿರಣಿಗಳಿಂದಲೇ ಆಗುತ್ತಿತ್ತು ಎಂಬುದು ವಿಶೇಷ.

ಮೊದಲನೇ ಮಹಾಯುದ್ಧ ಪ್ರಾರಂಭವಾದಾಗಿನಿಂದ (೧೯೧೪) ಎರಡನೇ ಮಹಾಯುದ್ಧ ಮುಗಿಯುವವರೆಗೂ (೧೯೪೫) ಬೆಂಗಳೂರಿನ ಹತ್ತಿ ಗಿರಣಿಗಳು ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದವು. ಬಿನ್ನಿ ಮಿಲ್ಲಿನಲ್ಲಿ ಸುಮಾರು ೬,೫೦೦ ಮಂದಿ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದರು. ಒಂದನೇ ಮಹಾಯುದ್ಧದಲ್ಲಿ ಈ ಗಿರಣಿ ಉತ್ತಮ ಪ್ರಗತಿ ಸಾಧಿಸಿತು. ೧೯೨೧ರಲ್ಲಿ ಇದರ ಬಂಡವಾಳ ೨೬.೫ ಲಕ್ಷಗಳು ಇದ್ದು ಕಾರ್ಮಿಕರ ಸಂಖ್ಯೆ ೩,೦೩೭ ಇದ್ದಿತು[೩೦]. ಈ ಎರಡೂ ಯುದ್ಧಗಳಲ್ಲಿ ಯೂರೋಪಿನಲ್ಲಿ ಬ್ರಿಟನ್ ಪ್ರಮುಖ ಸ್ಥಾನ ಹೊಂದಿದ್ದರಿಂದ ಅದು ತನ್ನ ಸೈನಿಕರಿಗೆ ಬಟ್ಟೆಗಳನ್ನು ಪೂರೈಕೆ ಮಾಡಬೇಕಾಗಿದ್ದಿತು. ಹೀಗಾಗಿ ಇದು ತನ್ನ ವಸಾಹತು ರಾಷ್ಟ್ರಗಳ ಮೇಲೆ ಅವಲಂಬನೆಯಾಗಬೇಕಾಗಿ ಬಂದಿತು. ಆ ಸಂದರ್ಭದಲ್ಲಿ ಹತ್ತಿ ಬಟ್ಟೆಗಳಿಗೆ ಬೇಡಿಕೆ ಹೆಚ್ಚಾಗಿ ಅಧಿಕ ಉತ್ಪಾದನೆಯನ್ನು ಕಂಡಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಮೈಸೂರು ರಾಜ್ಯವೊಂದೇ ರಾಷ್ಟ್ರದ ಶೇ. ೫೦ರಷ್ಟು ರೇಷ್ಮೆ ತಯಾರಿಸುತ್ತಿತ್ತು[೩೧]. ಹೀಗಾಗಿ ಬೆಂಗಳೂರಿನ ಹತ್ತಿ ಗಿರಣಿಗಳ ಉತ್ಪಾದನಾ ವಸ್ತುಗಳಿಗೂ ಬೇಡಿಕೆ ಹೆಚ್ಚಾಯಿತು. ೧೯೩೧ರಲ್ಲಿ ಬಿನ್ನಿ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದ

ಕಾರ್ಮಿಕರ ಸಂಖ್ಯೆ ೪೩೦೦ ಆಗಿದ್ದಿತು[೩೨]. ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತಿದ್ದಂತೆ ಅದನ್ನು ಉತ್ಪಾದಿಸುವ ಕಾರ್ಮಿಕರು ಹೆಚ್ಚಾಗುತ್ತಿದ್ದರು.

ಗಿರಣಿಗಳಲ್ಲಿ ಮಹಿಳಾ ಮತ್ತು ಪುರುಷ ಕಾರ್ಮಿಕರಿದ್ದು ದಿನದಲ್ಲಿ ಮೂರು ಪಾಳಿಯಲ್ಲಿ ಕ್ರಮಾನುಸಾರವಾಗಿ ಕಾರ್ಯನಿರ್ವಹಿಸುತ್ತಿದ್ದರು. ನಿಗದಿಪಡಿಸಿದ ಸಮಯದಂತೆ ಬೆಳಿಗ್ಗೆ ೭ ಗಂಟೆಯಿಂದ ಮಧ್ಯಾಹ್ನ ೩ ಗಂಟೆಯವರೆಗೆ ಒಂದು ಪಾಳಿಯಾದರೆ, ಮಧ್ಯಾಹ್ನ ೩ ಗಂಟೆಯಿಂದ ರಾತ್ರಿ ೧೧ ಗಂಟೆಯವರೆಗೆ ಎರಡನೇ ಪಾಳಿ, ರಾತ್ರಿ ೧೧ ಗಂಟೆಯಿಂದ ಬೆಳಿಗ್ಗೆ ೭ ಗಂಟೆಯವರೆಗೆ ಕೊನೆಯ ಪಾಳಿ (ಶಿಫ್ಟ್)ಯಾಗಿದ್ದಿತು. ಕಾರ್ಮಿಕರು ವಿವಿಧ ವಿಭಾಗಗಳಲ್ಲಿ ಅಂದರೆ ವೈಂಡಿಂಗ್, ರಂಗ್‌ಕಾತ್, ರಿಂಗ್‌ಫ್ರೇಮ್, ಕಫಡ್‌ಖಾತ್, ಇಂಜಿನಿಯರಿಂಗ್ ವಿಭಾಗಗಳಲ್ಲಿ ಪುರುಷ ಮತ್ತು ಮಹಿಳಾ ಕಾರ್ಮಿಕರು ಕೆಲಸವನ್ನು ನಿರ್ವಹಸುತ್ತಿದ್ದರು. ಪುರುಷರು ಮೂರೂ ಶಿಫ್ಟ್ ಅಥವಾ ಪಾಳಿಗಳಲ್ಲಿ ಕೆಲಸ ಮಾಡುತ್ತಿದ್ದರು. ಆದರೆ ಮಹಿಳೆಯರು ಕೇವಲ ಒಂದೇ ಒಂದು ಪಾಳಿಯಲ್ಲಿ ಅಂದರೆ ಬೆಳಿಗ್ಗೆ ೬ ಗಂಟೆಯಿಂದ ಸಂಜೆ ೫ ಗಂಟೆಯವರೆಗೆ ಕೆಲಸ ಮಾಡಬೇಕಾಗಿತ್ತು. ಅಂದರೆ ಪ್ರತಿದಿನ ಒಂದೇ ಪಾಳಿಯಾದರೂ ೧೧ ಗಂಟೆಗಳ ಕಾಲ ದುಡಿಯಬೇಕಾಗಿತ್ತು. ಗಿರಣಿಗಳು ತಮ್ಮ ಉಚ್ಛ್ರಾಯ ಸ್ಥಿತಿಯನ್ನು ತಲುಪಲು ಮಹಿಳಾ ಕಾರ್ಮಿಕರ ಶೋಚನೀಯ ಸ್ಥಿತಿಯು ಬೆನ್ನೆಲುಬಾಗಿತ್ತು ಎಂದರೆ ತಪ್ಪಾಗಲಾರದು.

ಗಿರಣಿಗಳ ಕಾರ್ಮಿಕರು ಸಮಸ್ಯೆಗಳನ್ನು ಹಲವು ರೀತಿಯಲ್ಲಿ ಎದುರಿಸುತ್ತಿದ್ದರೂ ಸಹ ನಿಗದಿಪಡಿಸಿದ ಕೂಲಿ ಅಥವಾ ಸಂಬಳವು ಸಕಾಲಕ್ಕೆ ಸಂದಾಯವಾಗುತ್ತಿತ್ತು. ಎರಡು ಮಹಾಯುದ್ಧಗಳ ನಡುವೆ ಬೇಡಿಕೆ ಹಾಗೂ ಪೂರೈಕೆಯಲ್ಲಿ ಏರಿಕೆಯನ್ನು ಕಂಡಿದ್ದರಿಂದ ಕಾರ್ಮಿಕರು ಹೆಚ್ಚಿನ ಸಂಬಳ ಹಾಗೂ ಬೋನಸ್ ಪಡೆದಿದ್ದರು. ಆದರೆ ಇದು ಬಂಡವಾಳಶಾಹಿಗಳಿಂದ (ಗಿರಣಿಗಳ ಮಾಲೀಕರು) ಅಷ್ಟು ಸುಲಭವಾಗಿ ಸಂದಾಯವಾಗುತ್ತಿರಲಿಲ್ಲ. ಒಂದು ವೇಳೆ ಸಂದರ್ಭಗಳು ಕಾರ್ಮಿಕರ ಪರವಾಗಿಯೇ ಇದ್ದಿದ್ದರೆ ಬೋನಸ್ ನೀಡಿಕೆಯ ವಿಷಯದಲ್ಲಿ ೧೯೨೬, ೧೯೩೦, ೧೯೩೧, ೧೯೪೦ ಹಾಗೂ ೧೯೪೧ರಲ್ಲಿ ಗಿರಣಿಗಳಲ್ಲಿ ಮುಷ್ಕರಗಳು ನಡೆಯುತ್ತಿರಲಿಲ್ಲ[೩೩]. ಕಾರ್ಮಿಕರಿಗೆ ಆರೋಗ್ಯ, ವಸತಿ, ಶಿಕ್ಷಣ ಹೀಗೆ ಹಲವು ರೀತಿಯ ಸೌಲಭ್ಯಗಳನ್ನು ನೀಡಲಾಗಿತ್ತು.

೧೯೪೦ರ ಸಂದರ್ಭದಲ್ಲಿ ಕೈಗಾರಿಕೆಗಳ ಬೆಳವಣಿಗೆ ಗಣನೀಯ ಪ್ರಮಾಣದಲ್ಲಿ ಪ್ರಾರಂಭವಾಯಿತು. ರಾಷ್ಟ್ರೀಯ ಚಳವಳಿ ಉತ್ತುಂಗ ತಲುಪಿದ್ದ ಈ ಸಂದರ್ಭದಲ್ಲಿ ವಿದೇಶಿ ಬಟ್ಟೆ

ಹಾಗೂ ಕಾರ್ಖಾನೆಗಳನ್ನು ತೊರೆದು ಸ್ವದೇಶಿ ಕಾರ್ಖಾನೆಗಳು ಹಾಗೂ ಜವಳಿ ಉದ್ಯಮವು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಮೈಸೂರು ಸರ್ಕಾರ ಮೊದಲಿಗಿಂತ ಹೆಚ್ಚು ಬಂಡವಾಳ ಹೂಡಲು ಮುಂದಾಯಿತು. ಇದರ ಪರಿಣಾಮವಾಗಿ ಸರ್ಕಾರಿ ಸಾಬೂನು ಕಾರ್ಖಾನೆ, ಸರ್ಕಾರಿ ಪಿಂಗಾಣಿ ಕಾರ್ಖಾನೆ ಇತ್ಯಾದಿ ಪ್ರಾರಂಭವಾಗಿ ಮೈಸೂರಿನ ಶಿಕ್ಷಿತ ವರ್ಗ ಉದ್ಯೋಗವನ್ನು ಪಡೆದುಕೊಳ್ಳುವಂತಾಯಿತು. ಈ ಸಂದರ್ಭದಲ್ಲಿ ಇಂಡಿಯನ್ ಮ್ಯಾನುಫ್ಯಾಕ್ಚರರ್ಸ್ ಆರ್ಗನೈಸೇಷನ್‌ನ ಅಧ್ಯಕ್ಷರಾದ ಸರ್.ಎಂ. ವಿಶ್ವೇಶ್ವರಯ್ಯನವರು 'ಕೈಗಾರಿಕೀಕರಣ ಇಲ್ಲವೇ ನಾಶ' ಎಂಬ ಕರೆಯನ್ನು ಕೊಟ್ಟರು[೩೪]. ಈ ಬದಲಾವಣೆ ಹಾಗೂ ಬೆಳವಣಿಗೆಗೆ ಬೆಂಗಳೂರಿನ ಹತ್ತಿ ಗಿರಣಿಗಳೂ ಸಹ ಮುಖಾಮುಖಿಯಾದವು. ಗಿರಣಿಗಳ ಕಾರ್ಮಿಕರು ರಾಷ್ಟ್ರೀಯ ಚಳವಳಿಯನ್ನು ತಮ್ಮ ಹೋರಾಟದ ಭಾಗವಾಗಿ ಸ್ವೀಕರಿಸಿದರು. ತಗಡೂರು ರಾಮಚಂದ್ರರಾವ್ ಹಾಗೂ ಕೆ.ಟಿ. ಭಾಷಂ ಅವರು ಕಾರ್ಮಿಕರಿಗೆ ನಾಯಕರುಗಳಾಗಿ ಕಾಣಿಸಿಕೊಂಡರು. ಕಾಂಗ್ರೆಸ್ ಕಾರ್ಮಿಕರ ಅನುಕೂಲವನ್ನು ಪಡೆದುಕೊಂಡು ಪ್ರತಿಯಾಗಿ ಮುಷ್ಕರಗಳಲ್ಲಿ ಪಾಲ್ಗೊಳ್ಳಲು ಹಾಗೂ ಬೆಂಬಲ ನೀಡಲು ಹಿಂದೆ ಬೀಳಲಿಲ್ಲ. ಈ ಎಲ್ಲಾ ಸ್ಥಿತ್ಯಂತರಗಳ ನಡುವೆಯೇ ಗಿರಣಿಗಳು ಉತ್ಪಾದನೆ, ವ್ಯಾಪಾರ ವಹಿವಾಟು ಇನ್ನಿತರ ಆರ್ಥಿಕ ಚಟುವಟಿಕೆಗಳನ್ನು ಯಶಸ್ವಿಯಾಗಿ ನಡೆಸಿತು.

ಲೇಖಕ ಎಸ್.ಎಲ್. ಭೈರಪ್ಪನವರು ತಮ್ಮ ಆತ್ಮ ವೃತ್ತಾಂತವಾದ 'ಭಿತ್ತಿ'ಯಲ್ಲಿ ಒಂದೆರಡು ಸಂದರ್ಭಗಳನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಶಿವಪ್ಪನವರು ತುಂಬಾ ಅದ್ದೂರಿ ವ್ಯವಹಾರದ ವ್ಯಕ್ತಿ, ಗ್ರೀನ್ ರ್‍ಯಾಲಿ ಸೈಕಲ್, ಉಲನ್ ಪ್ಯಾಂಟು, ಬಿನ್ನಿ ಶರ್ಟು, ಒಂದೊಂದು ದಿನ ಖಾದಿ ಜುಬ್ಬ, ಪೈಜಾಮು[೩೫] ಧರಿಸುತ್ತಿದ್ದನು. ಹಾಗೆಯೇ ಇನ್ನೊಂದು ಕಡೆ ಕೃಷ್ಣೇಗೌಡರು ನನ್ನ ಹರಿದ ಬಟ್ಟೆ ನೋಡಿ ಮೂರು ರೂಪಾಯಿಗೆ ಎರಡು ಬಿನ್ನಿ ಚಡ್ಡಿ ಮತ್ತು ಎರಡು ಬಿನ್ನಿ ಅಂಗಿಯನ್ನು ಹೊಲೆಸಿಕೊಟ್ಟರು ಎಂದು ತಿಳಿಸಿದ್ದಾರೆ[೩೬]. ಮತ್ತೊಂದು ಕಡೆ ಮೈಸೂರಿಗೆ ಹೋದಾಗ ಅಲ್ಲಿ ಬಿನ್ನಿ ಶರ್ಟು ಮತ್ತು ಬಿನ್ನಿ ಪ್ಯಾಂಟನ್ನು ಕೊಂಡಿದ್ದಾಗಿ ತಿಳಿಸಿದ್ದಾರೆ[೩೭]. ಭೈರಪ್ಪನವರ ಜನ್ಮ ದಿನಾಂಕ ೨೬-೦೭-೧೯೩೪ ಆಗಿದ್ದು, ಈ ಮೇಲಿನ ಸಂದರ್ಭಗಳು ೧೯೪೦ ರಿಂದ ೧೯೫೦ರ ಆಸುಪಾಸಿನದ್ದು. ಇದು ಬಿನ್ನಿ ಮಿಲ್ಲಿನ ಉಚ್ಛ್ರಾಯ ಸ್ಥಿತಿಯನ್ನು ಸೂಚಿಸುತ್ತಿದ್ದು ಈ ಗಿರಣಿಯಲ್ಲಿ ಉತ್ಪಾದನೆಯಾಗುತ್ತಿದ್ದ ಉಡುಪುಗಳು ಶ್ರೀಸಾಮಾನ್ಯನಿಂದ ಹಿಡಿದು ಶ್ರೀಮಂತರವರೆಗೂ ಧರಿಸಲು ಯೋಗ್ಯವಾಗಿದ್ದವು.

ಆರ್ಥಿಕ ಮುಗ್ಗಟ್ಟು ದೇಶದಲ್ಲಿ ವ್ಯಾಪಕವಾಗಿ ಆವರಿಸಿ ದೊಡ್ಡ ಕೈಗಾರಿಕಾ ಉದ್ಯಮಗಳು ಇದರ ಬೇಗೆಗೆ ಬಳಲಿದ್ದವು. ಆದರೂ ಸಹ ಬೆಂಗಳೂರಿನ ಪ್ರಮುಖ ಹತ್ತಿ ಗಿರಣಿಗಳಾದ ಬಿನ್ನಿ ಮಿಲ್ಲು ಹಾಗೂ ಮಹಾರಾಜ ಮಿಲ್ಲು ಈ ಪರಿಸ್ಥಿತಿಯನ್ನು ಮೆಟ್ಟಿ ನಿಂತು ಉತ್ಪಾದನೆ ಹಾಗೂ ವ್ಯವಹಾರದಲ್ಲಿ ತೃಪ್ತಿದಾಯಕ ಬೆಳವಣಿಗೆಯನ್ನು ಮುಂದುವರೆಸಿದವು. ಮಿನರ್ವ ಮಿಲ್ಲು ಸ್ವಲ್ಪ ಮಟ್ಟಿಗೆ ಪೆಟ್ಟನ್ನು ತಿಂದು ಪ್ರಾರಂಭದ ತೊಂದರೆಗಳಿಂದ ಹೊರಬಂದಿತು[೩೮]. ಆದರೆ ಶ್ರೀಕೃಷ್ಣರಾಜೇಂದ್ರ ಮಿಲ್ಲು (ಮೈಸೂರು) ಈ ಅವಧಿಯಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾಯಿತು[೩೯]. ಪರಿಣಾಮವಾಗಿ ಇದನ್ನು ಪರಿಶೀಲನೆ ಮಾಡಲು 'ಮ್ಯಾನೇಜಿಂಗ್ ಏಜೆಂಟ್' ಯಿಂದ ಒಂದು ತಜ್ಞರ ಸಮಿತಿಯನ್ನು ರಚಿಸಿದಾಗ ಅವರು 'ಗರಿಷ್ಠ ದಕ್ಷತೆ'ಯ ಅವಶ್ಯಕತೆ ಇದೆ ಎಂಬ ಸಲಹೆ ನೀಡಿದರು[೪೦]. ಇಲ್ಲಿ ಗಮನಿಸಬೇಕಾದ ಒಂದು ಸೂಕ್ಷ್ಮ ವಿಚಾರವೆಂದರೆ ಮುಗ್ಗಟ್ಟಿನ ಸಂದರ್ಭದಲ್ಲಿ ಬೆಂಗಳೂರು ನಗರದ ಗಿರಣಿಗಳು ನಿರ್ವಹಿಸಿದ ದಕ್ಷತೆಯನ್ನು ಮೈಸೂರು ನಗರದ ಗಿರಣಿಯು ನಿರ್ವಹಿಸಲು ಸಾಧ್ಯವಾಗಲಿಲ್ಲ.

## ಕೊನೆ ಟಿಪ್ಪಣಿ

೧. ಜಾನಕಿ ನಾಯರ್, ತಂಬಂಡ ವಿಜಯ್ ಪೂಣಚ್ಚ (ಸಂ.), *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ಚರಿತ್ರೆ*, ಪುಟ ೮೩೨.

೨. ಬಾಲಕೃಷ್ಣ ಆರ್., *ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಆಫ್ ಮೈಸೂರು*, ಪುಟ ೯೮.

೩. ಅದೇ.

೪. *ರಿಪೋರ್ಟ್ ಆಫ್ ದ ಬೋರ್ಡ್ ಆಫ್ ಟ್ರೇಡ್ ಆಫ್ ದ ಎಂಪೈರ್ ಕಾಟನ್ ಗ್ರೋಯಿಂಗ್ ಕಮಿಟಿ, ಲಂಡನ್, ೧೯೨೦*, ಪುಟ ೦೫.

೫. ಅದೇ.

೬. ಅದೇ, ಪುಟ ೭.

೭. ಬಿಪನ್ ಚಂದ್ರ ಅವರ *ರೈಸ್ ಅಂಡ್ ಗ್ರೋಥ್ ಆಫ್ ಎಕನಾಮಿಕ್ ನ್ಯಾಷನಾಲಿಸಂ ಇನ್ ಮಾಡರ್ನ್ ಇಂಡಿಯಾ.*

೮. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್–೧೮೮೬–೮೭ರಿಂದ ೧೮೯೦–೯೧*, ಪುಟ ೧೨೭.

೯. ಡೇವಿಡ್ ಕ್ಲಿಂಗ್‌ಸ್ಮಿತ್ ಮತ್ತು ಜೆಫ್ರಿ ಜಿ. ವಿಲಿಯಂಸನ್, *ಇಂಡಿಯಾಸ್ ಡಿ–ಇಂಡಸ್ಟ್ರಿಯಲೈಜೇಷನ್ ಇನ್ ದಿ ಎಟೀಂತ್ ಅಂಡ್ ನೈಂಟೀಂತ್ ಸೆಂಚುರೀಸ್*, ಪು. ೨೬.

೧೦. ಜಾನಕಿ ನಾಯರ್, *ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್ : ವರ್ಕ್, ಕಲ್ಚರ್ ಅಂಡ್ ಪಾಲಿಟಿಕ್ಸ್ ಇನ್ ಪ್ರಿನ್ಸ್‌ಲಿ ಮೈಸೂರು*, ಪುಟ ೧೯೫.

೧೧. ಅದೇ, ಪುಟ ೧೯೮.

೧೨. ಅದೇ.

೧೩. ಮದನ್ ಪಿ., *ಬೆಂಗಳೂರಿನ ಬಿನ್ನಿಮಿಲ್ :ಒಂದು ಅಧ್ಯಯನ. (ಅಪ್ರಕಟಿತ ಎಂ.ಫಿಲ್ ನಿಬಂಧ)*, ಪುಟ ೩೧.

೧೪. ಅದೇ.

೧೫. ಜಾನಕಿ ನಾಯರ್, ಪೂರ್ವೋಕ್ತ.

೧೬. *ಕಾನ್ಫಿಡೆನ್ಷಿಯಲ್ ಫೈಲ್, ಬೆಂಗಳೂರು, ಜೂನ್ ೧೯೨೫*, ನಂ. ೮೪.

೧೭. *ಬೆಂಗಳೂರು ಮುನ್ಸಿಪಾಲ್ ಫೈಲ್, ಲೆಟರ್ ಟು ಗವರ್ನಮೆಂಟ್ ಆಫ್ ಮೈಸೂರು*, ದಿನಾಂಕ ೨೩ ಆಗಸ್ಟ್ ೧೯೩೩.

೧೮. ಅದೇ.

೧೯. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್, ೭೪ ಆಫ್ ೧೯೨೭.*

೨೦. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್, ೧೯೩೪.*

೨೧. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ೧೯೩೯–೪೦*, ಪುಟ ೫೦.

೨೨. ಅದೇ, ಪುಟ ೫೧.

೨೩. ಅದೇ.

೨೪. ಸೂರ್ಯನಾಥ ಯು. ಕಾಮತ್ ಮತ್ತು ಲಕ್ಷ್ಮಣ್ ತೆಲಗಾವಿ, *ಇತಿಹಾಸ ದರ್ಶನ*, ಸಂ. ೫, ಪುಟ ೧೯೦.

೨೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೧೦–೧೧*, ಪುಟ ೩೪.

೨೬. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೧೧–೧೨*, ಪುಟ ೩೬.

೨೭. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೪–೨೫*, ಪುಟ ೨೬.

೨೮. ಅದೇ, ಪುಟ ೩೧.

೨೯. ಅದೇ.

೩೦. ಸೂರ್ಯನಾಥ ಯು. ಕಾಮತ್ ಮತ್ತು ಕೃಷ್ಣಯ್ಯ ಎಂ.ಎಚ್., *ಬೆಂಗಳೂರು ದರ್ಶನ, ೧೯೭೫*, ಪುಟ ೪೨.

೩೧. ಚಂದ್ರಮೌಳಿ ಕೆ., *ಬೆಂಗಳೂರಿನ ನೋಟಗಳು*, ಪುಟ ೩೪೩.

೩೨. ಸೂರ್ಯನಾಥ ಯು. ಕಾಮತ್ ಮತ್ತು ಕೃಷ್ಣಯ್ಯ ಎಂ.ಎಚ್., ಪೂರ್ವೋಕ್ತ, ಪುಟ ೨೯೧.

೩೩. ಜಾನಕಿ ನಾಯರ್. ತಂಬಂಡ ವಿಜಯ್ ಪೂಣಚ್ಚ (ಸಂ.), *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ಚರಿತ್ರೆ*, ಪುಟ ೮೩೭.

೩೪. ರಾವ್ ಎಸ್.ಆರ್., *ಬೆಂಗಳೂರು ಥ್ರೂ ದ ಏಜಸ್*, ಪುಟ ೨೨.

೩೫. ಭೈರಪ್ಪ ಎಸ್.ಎಲ್., *ಭಿತ್ತಿ*, ಪುಟ ೭೦.

೩೬. ಅದೇ, ಪುಟ ೯೦.

೩೭. ಅದೇ, ಪುಟ ೧೮೯.

೩೮. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೫–೨೬*, ಪುಟ ೩೮.

೩೯. ಅದೇ.

೪೦. ಅದೇ.

# ಅಧ್ಯಾಯ – ೪

# ವಾಣಿಜ್ಯ ಮತ್ತು ವ್ಯಾಪಾರ

---



---

# ಅಧ್ಯಾಯ – ೪

# ವಾಣಿಜ್ಯ ಮತ್ತು ವ್ಯಾಪಾರ

ಪ್ರಸ್ತುತ ಅಧ್ಯಾಯವನ್ನು ಕಾರ್ಲ್ ಮಾರ್ಕ್ಸ್ ಅವರ ಕೆಲವು ವ್ಯಾಖ್ಯಾನಗಳೊಂದಿಗೆ ಪ್ರಾರಂಭಿಸೋಣ :

History is simply the record of how one class has gained wealth and then secured political power only to be overthrown and succeeded in wealth and power by another class.

Communist Manifesto of 1848

Economic Determination : This may be stated in three postulates :

1. That the distinctive civilization-culture, religion, morality and art of each is determined by its material and economic conditions.
2. That the course of history is determined by a succession of class struggles for material supremacy and
3. That present day bourgeois capitalist society will inevitable be transformed into another society, proletarian and collectivist.

ತನ್ನ ಉಳಿವಿಗಾಗಿ ಮನುಷ್ಯ ಬದುಕಿನ ಅವಶ್ಯಕತೆಗಳ ಉತ್ಪಾದನೆ ಮತ್ತು ಮರು ಉತ್ಪಾದನೆಯಲ್ಲಿ ತೊಡಗಲೇಬೇಕು. ಇದನ್ನು ಮನುಷ್ಯ ಸಮಾಜದೊಳಗೆ ಮಾಡುವುದರಿಂದ ನಮ್ಮ ಸಾಮಾಜಿಕ ಸಂಬಂಧಗಳು ಮೂಲಭೂತವಾಗಿ ಉತ್ಪಾದನೆಯ ಸಂಬಂಧಗಳೇ ಆಗಿವೆ. ಅಂದರೆ ಸಮಾಜಿಕ ಸಂಬಂಧಗಳನ್ನು ಉತ್ಪಾದನೆಯ ಸಂಬಂಧಗಳು ರೂಪಿಸುತ್ತವೆ. ಸಮಾಜ ಮತ್ತು ಸಂಸ್ಕೃತಿಗಳನ್ನು ರೂಪಿಸುವುದು ಮಾನವನ ಶ್ರಮ ಅಥವಾ ಲೇಬರ್. ಅಂದರೆ ಶ್ರಮದ ಮೂಲಕವೇ ನಮ್ಮ ಸಾಮಾಜಿಕ ಅಸ್ತಿತ್ವದ ನಿರ್ಮಾಣ ಮತ್ತು ಮನುಷ್ಯ ಪ್ರಜ್ಞೆಯನ್ನು ಕಟ್ಟುವ ಕೆಲಸ ನಡೆಯುತ್ತಿದೆ. ಇದರ ಅರ್ಥ ಇತಿಹಾಸ ಸಹ ಶ್ರಮದ ಮೂಲಕವೇ ಹುಟ್ಟುತ್ತದೆ.

ಮೇಲಿನ ಕಾರ್ಲ್ ಮಾರ್ಕ್ಸ್ ಅವರ ಪ್ರತಿಪಾದನೆ ಅಥವಾ ಸಿದ್ಧಾಂತಗಳು ನಾಲ್ಕು ಹಾಗೂ ಐದನೇ ಅಧ್ಯಾಯಕ್ಕೆ ಮುನ್ನುಡಿಯಾಗಿ ಸ್ವೀಕರಿಸಬಹುದು. ಈ ಅಧ್ಯಾಯವು ತೌಲನಿಕವಾದ ವಿಶ್ಲೇಷಣೆಯನ್ನು ಒಳಗೊಂಡಿದೆ. ಮೂರನೆಯ ಅಧ್ಯಾಯದಲ್ಲಿ ಹೇಳಿದಂತೆ ಒಂದು ಪ್ರದೇಶ ಅಥವಾ ನಗರದಲ್ಲಿ ಕೈಗಾರಿಕೆ ಇಲ್ಲವೆ ಗಿರಣಿಗಳು ಸ್ಥಾಪನೆಯಾಗಿವೆ ಎಂದರೆ ಅವುಗಳು ಸಾಮಾನ್ಯವಾಗಿ ಏಕಕಾಲಕ್ಕೆ ಮೂರು ರೀತಿಯ ಪೈಪೋಟಿಯನ್ನು ಎದುರಿಸುತ್ತವೆ. ಒಂದು, ನಗರದಲ್ಲಿಯೇ ಸ್ಥಾಪನೆಯಾಗಿರುವ ಗಿರಣಿಗಳ ನಡುವಿನ ಪೈಪೋಟಿ, ಎರಡು, ದೇಶದೊಳಗಿನ ಪೈಪೋಟಿ ಹಾಗೂ ಕೊನೆಯದಾಗಿ, ಅಂತರರಾಷ್ಟ್ರೀಯ ಪೈಪೋಟಿ. ಈ ರೀತಿಯ ಪೈಪೋಟಿಯೊಳಗಡೆಯೇ ಬಂಡವಾಳ ಹೂಡುವಿಕೆ, ಉತ್ಪಾದನೆ, ವ್ಯಾಪಾರ (ದೇಶೀಯ ಹಾಗೂ ವಿದೇಶಿ ವ್ಯಾಪಾರ), ವಾಣಿಜ್ಯ ಎಲ್ಲವೂ ಅಡಗಿರುತ್ತದೆ ಎಂಬುದು ಗಮನಾರ್ಹವಾದ ಅಂಶ. ಹತ್ತಿ ಗಿರಣಿಗಳು ಇದಕ್ಕೆ ಹೊರತಾಗಿಲ್ಲ.

ಮೈಸೂರು ಪ್ರಾಂತ್ಯದಲ್ಲಿ ವ್ಯಾಪಾರವು ೧೮೮೬–೮೭ರಲ್ಲಿ ಬಹಳ ಇತಿಮಿತಿಗೆ ಒಳಪಟ್ಟಿತ್ತು. ರಫ್ತು ವ್ಯಾಪಾರವು ಪ್ರಮುಖವಾಗಿ ಆಹಾರ ಪದಾರ್ಥಗಳು, ಕಾಫಿ, ಸ್ಥಳೀಯವಾಗಿ ಉತ್ಪಾದನೆಯಾಗುತ್ತಿದ್ದ ವಿವಿಧ ಬಗೆಯ ವಸ್ತುಗಳನ್ನು ಒಳಗೊಂಡಿತ್ತು. ಇದೇ ಸಂದರ್ಭದಲ್ಲಿ ಆಮದು ವ್ಯಾಪಾರವು ಮುಖ್ಯವಾಗಿ ಯೂರೋಪಿನಲ್ಲಿ ಉತ್ಪಾದನೆಯಾದ ವಸ್ತುಗಳು, ಅವುಗಳೆಂದರೆ ಹತ್ತಿ ಮತ್ತು ಉಣ್ಣೆ ಬಟ್ಟೆಗಳು, ಕಬ್ಬಿಣದ ಸಾಮಾನುಗಳು, ಆಹಾರ ಪದಾರ್ಥಗಳಾದ ಗೋದಿ, ಬೇಳೆ ಇತ್ಯಾದಿ ಒಳಗೊಂಡಿತ್ತು. ಮೇಲೆ ತಿಳಿಸಿದ ಎಲ್ಲಾ ರಫ್ತು–ಆಮದು ವ್ಯಾಪಾರವು ಬಹುತೇಕ ಬ್ರಿಟಿಷ್ ಪ್ರಾಂತ್ಯಗಳನ್ನು ಮಾತ್ರ ಸುತ್ತುವರಿದಿತ್ತು[೧]. ಗುಬ್ಬಿಯಿಂದ ಹರಿಹರಕ್ಕೆ ರೈಲ್ವೇ ಮಾರ್ಗವನ್ನು ವಿಸ್ತರಿಸಿದ್ದು ಹಾಗೂ ಬ್ರಿಟಿಷ್ ಪ್ರದೇಶಗಳನ್ನು ಒಳಗೊಂಡಿರುವುದರ ಜೊತೆಗೆ ಮೈಸೂರು ಪ್ರಾಂತ್ಯದಲ್ಲಿ ವ್ಯಾಪಾರವನ್ನು ಉತ್ತೇಜಿಸುವ ಉದ್ದೇಶದಿಂದ ಸ್ಥಳೀಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ರಸ್ತೆ ಸಾರಿಗೆಯಲ್ಲಿ ಸುಧಾರಣೆ ತರಲಾಯಿತು[೨]. ನಂತರದ ದಿನಗಳಲ್ಲಿ ಹತ್ತಿ ಗಿರಣಿಗಳು ಪ್ರಾರಂಭವಾಗಿ ವ್ಯಾಪಾರ ಮತ್ತು ವಾಣಿಜ್ಯದಲ್ಲಿ ಬೆಳವಣಿಗೆಯನ್ನು ಸಾಧಿಸಲಾಯಿತು. ಒಟ್ಟಾರೆ ಈ ಅಧ್ಯಾಯದಲ್ಲಿ ಅಂಕಿ ಅಂಶಗಳ ಜೊತೆಗೆ ಹಲವು ಕೋಷ್ಟಕಗಳನ್ನು ಬಳಸಿಕೊಳ್ಳಲಾಗಿದೆ. ಈ ಕೋಷ್ಟಕಗಳನ್ನು ಪ್ರಾಥಮಿಕ ಆಕರಗಳಾದ ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಹಾಗೂ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ರಿಪೋರ್ಟ್‌ಗಳಿಂದ ಪಡೆದುಕೊಳ್ಳಲಾಗಿದೆ.

ಭಾರತದಲ್ಲಿ ಗಿರಣಿಗಳಿಂದ ಉತ್ಪಾದನೆಯಾಗುತ್ತಿದ್ದ ಹತ್ತಿ ಬಟ್ಟೆಗಳಿಗೂ ಮುನ್ನ ಅದನ್ನು ದೇಶದಲ್ಲಿ ಎಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು ಎಂಬುದನ್ನು ತಿಳಿದುಕೊಳ್ಳುವುದು ಸಹ ಪ್ರಮುಖವಾದ ಅಂಶವಾಗಿದೆ. ೧೯೧೨-೧೪ರ ಅಂಕಿ ಅಂಶಗಳನ್ನು ಗಮನಿಸಿದರೆ ಅಮೆರಿಕಾವನ್ನು ಹೊರತುಪಡಿಸಿದರೆ ಭಾರತವು ಇಡೀ ಪ್ರಪಂಚದಲ್ಲಿ ಅತೀ ಹೆಚ್ಚು ಹತ್ತಿ ಬೆಳೆಯುವ ರಾಷ್ಟ್ರವಾಗಿದ್ದು ಯುದ್ಧಕ್ಕೂ ಪೂರ್ವದಲ್ಲಿ ಭಾರತದಲ್ಲಿ ೨,೫೦,೦೦,೦೦೦ ಎಕರೆ ಭೂ ಪ್ರದೇಶದಲ್ಲಿ ಹತ್ತಿಯನ್ನು ಬೆಳೆದರೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ೩,೬೦,೦೦,೦೦೦ ಎಕರೆ ಭೂ ಪ್ರದೇಶದಲ್ಲಿ ಬೆಳೆಯಲಾಗುತ್ತಿತ್ತು. ವಿಸ್ತರಿಸಿ ಹೇಳುವುದಾದರೆ ಅಮೆರಿಕಾದಲ್ಲಿ ಒಂದು ಎಕರೆ ಭೂ ಪ್ರದೇಶದಲ್ಲಿ ಸರಾಸರಿ ೧೯೫ ಬೇಲ್‌ನಷ್ಟು ಹತ್ತಿಯನ್ನು ಬೆಳೆದರೆ ಭಾರತದಲ್ಲಿ ಅದರ ಉತ್ಪಾದನೆ ಸುಮಾರು ೭೫ ಬೇಲ್‌ನಷ್ಟು ಮಾತ್ರ[೩]. ಇಳುವರಿಯಲ್ಲಿಯೂ ಭಾರತವು ಅಮೆರಿಕಾಗಿಂತ ಹಿಂದುಳಿದಿತ್ತು ಎಂಬುದು ಇರಿಂದರಿಂದ ಸ್ಪಷ್ಟವಾಗುತ್ತದೆ.

ಆದಾಗ್ಯೂ ೧೯೧೨-೧೪ರ ಸಂದರ್ಭದ ಭಾರತದ ಹತ್ತಿ ರಫ್ತು ವ್ಯಾಪಾರವನ್ನು ಒಂದು ಅಂಕಿ ಅಂಶದ ಮೂಲಕ ಗಮನಿಸಬಹುದು[೪].

| ದೇಶಗಳು | ರಫ್ತು (೫೦೦) ಬೇಲ್‌ಗಳಲ್ಲಿ |
|---|---|
| ಗ್ರೇಟ್ ಬ್ರಿಟನ್ | ೯೧,೦೦೦ |
| ಯೂರೋಪ್ | ೧೧,೨೪,೦೦೦ |
| ಚೈನಾ ಮತ್ತು ಜಪಾನ್ | ೧೦,೬೫,೦೦೦ |
| ಒಟ್ಟು | ೨೨,೮೦,೦೦೦ |
| ಭಾರತೀಯ ಮಿಲ್ಲುಗಳು | ೧೭,೦೦,೦೦೦ |

ಮೇಲಿನ ಕೋಷ್ಟಕವನ್ನು ನೋಡಿದರೆ ಒಟ್ಟಾರೆ ಭಾರತ ಹತ್ತಿಯಲ್ಲಿ ಸ್ವಯಂ ಪರಿಪೂರ್ಣತೆಯನ್ನು ಸಾಧಿಸಿತ್ತು. ಏಕೆಂದರೆ ಈ ವೇಳೆಗೆ ಯೂರೋಪ್, ಬ್ರಿಟನ್, ಚೈನಾ ಹಾಗೂ ಜಪಾನ್ ರಾಷ್ಟ್ರಗಳಿಗಿಂತಲೂ ಹೆಚ್ಚಿನ ಹತ್ತಿಯನ್ನು ಭಾರತ ರಫ್ತು ಮಾಡುತ್ತಿತ್ತು. ಇದಲ್ಲದೇ ಹೆಚ್ಚಿನ ಪ್ರಮಾಣದಲ್ಲಿಯೇ ಭಾರತದ ಮಿಲ್ಲುಗಳು ಹತ್ತಿಯನ್ನು ಉಪಯೋಗಿಸುತ್ತಿದ್ದವು. ಹೀಗಿದ್ದೂ ಸಹ ಅಮೆರಿಕಾದ ಹತ್ತಿಗಿಂತ ಶೇಕಡಾ ೨೦ರಷ್ಟು ಕಡಿಮೆ ಮೌಲ್ಯವನ್ನು[೫] ನಮ್ಮ ಹತ್ತಿಯು ಹೊಂದಿದ್ದಿದು ಅದರ ದೋಷವಾಗಿದ್ದಿತು.

ಬ್ರಿಟಿಷ್ ಸಾಮ್ರಾಜ್ಯದ ವಸಾಹತು ರಾಷ್ಟ್ರಗಳಲ್ಲಿ ವಿವಿಧ ಗುಣಮಟ್ಟದ ಹತ್ತಿಯನ್ನು ಚದರ ಮೈಲಿ ಪ್ರದೇಶದಲ್ಲಿ ಒಟ್ಟಾರೆ ಜನಸಂಖ್ಯೆಗೆ ಆಯಾ ರಾಷ್ಟ್ರಗಳು ಎಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು ಅಥವಾ ಉತ್ಪಾದಿಸುತ್ತಿದ್ದವು ಎಂಬುದನ್ನು ಈ ಕೆಳಗಿನ ಕೋಷ್ಟಕದ ಮೂಲಕ ತಿಳಿಯಬಹುದು[೬].

| ವಸಾಹತು ರಾಷ್ಟ್ರಗಳು | ಚದರ ಮೈಲಿ ಪ್ರದೇಶ | ಜನಸಂಖ್ಯೆ | ಅಂದಾಜು ಉತ್ಪಾದನೆ ಬೇಲ್‌ಗಳಲ್ಲಿ (೫೦೦ ಬೇಲ್) |
|---|---|---|---|
| **ಉತ್ತಮ ಗುಣಮಟ್ಟ** | | | |
| ವೆಸ್ಟ್ ಇಂಡೀಸ್ | ೧೨೧೪೦ | ೧೭೧೮೨೧೬ | ೫೦೦೦ |
| **ಉದ್ದನೆಯ ಎಳೆಯ ಹತ್ತಿ** | | | |
| ಈಜಿಪ್ಟ್ | ೩,೬೩,೧೮೧ | ೧,೧೨,೮೭,೩೫೯ | ೧೫,೦೦,೦೦೦ |
| ಸೂಡಾನ್ | ೯,೮೪,೫೨೦ | ೩೦,೦೦,೦೦೦ | ೨೦,೦೦೦ |
| **ಮಧ್ಯಮ ಎಳೆಯ ಹತ್ತಿ** | | | |
| ಉಗಾಂಡ | ೧,೨೧,೪೩೭ | ೨೮,೯೩,೪೯೪ | ೩೨,೦೦೦ |
| ನಾಗಾಲ್ಯಾಂಡ್ ಮತ್ತು ಈಶಾನ್ಯ ರೊಡೋಶಿಯಾ | ೩,೨೯,೮೦೧ | ೧೮,೪೭,೯೦೪ | ೬,೦೦೦ |
| ನೈಜೀರಿಯಾ | ೩,೩೬,೦೦೦ | ೧,೭೬,೧೧,೯೪೪ | ೩೨,೦೦೦ |
| | | ಒಟ್ಟು | ೧೫,೯೫,೦೦೦ |
| **ಚಿಕ್ಕ ಎಳೆಯ ಹತ್ತಿ** | | | |
| ಭಾರತ | ೧೮,೦೨,೬೫೭ | ೩೧,೫೧,೫೬,೩೯೩ | ೪೦,೦೦,೦೦೦ |
| ಒಟ್ಟು | ೩೯,೪೯,೭೩೬ | ೩೫,೩೫,೧೫,೩೧೦ | ೫೫,೯೫,೦೦೦ |

ಮೇಲಿನ ಕೋಷ್ಟಕದಲ್ಲಿ ಒಂದಂಶ ಸ್ಪಷ್ಟವಾಗುವುದೇನೆಂದರೆ ೧೯೧೨–೧೪ರ ಅವಧಿಯಲ್ಲಿ ಭಾರತದ ಜನಸಂಖ್ಯೆ ಸುಮಾರು ೩೧ ಕೋಟಿಗೂ ಅಧಿಕವಿದ್ದು ಅಷ್ಟೂ ಜನಸಂಖ್ಯೆಗೂ ಬಳಕೆಯಾಗುತ್ತಿದ್ದ ಅಥವಾ ಬೆಳೆಯುತ್ತಿದ್ದ ಹತ್ತಿ ಗುಣಮಟ್ಟದಲ್ಲಿ ಚಿಕ್ಕ ನೂಲಿನ ಎಳೆಯದ್ದಾಗಿತ್ತು. ಆದರೆ ವಸಾಹತು ದ್ವೀಪರಾಷ್ಟ್ರವಾದ ವೆಸ್ಟ್ ಇಂಡೀಸ್‌ನಲ್ಲಿ ಕಡಿಮೆ ಪ್ರದೇಶದ ಭೂ ವಿಸ್ತೀರ್ಣವನ್ನು ಹೊಂದಿದ್ದರೂ ಉತ್ತಮ ಗುಣಮಟ್ಟದ ಹತ್ತಿಯನ್ನು ಈ ಸಂದರ್ಭದಲ್ಲಿ ಬೆಳೆಯುತ್ತಿದ್ದುದು ವಿಶೇಷ.

## ೪.೧. ಬಂಡವಾಳ

ಯಾವುದೇ ಒಂದು ಆರ್ಥಿಕ ಚಟುವಟಿಕೆಯಲ್ಲಿ ತೊಡಗಬೇಕಾದರೆ ಅದಕ್ಕೆ ಬಂಡವಾಳ ಅತ್ಯಗತ್ಯ ಹಾಗೂ ಇದು ಮೂಲಭೂತ ಪರಿಕರಗಳಲ್ಲಿ ಮೊದಲನೆಯದ್ದು. ೧೯ನೇ ಶತಮಾನದ ಕೊನೆಯ ಅಂದರೆ ೧೮೮೦ರ ದಶಕದಲ್ಲಿ ಒಟ್ಟಾರೆ ಮೈಸೂರು ಪ್ರಾಂತ್ಯದಲ್ಲಿ ಎರಡು ಹತ್ತಿ ಗಿರಣಿಗಳು ಮಾತ್ರ ಕಾರ್ಯ ನಿರ್ವಹಿಸುತ್ತಿದ್ದವು. ಆ ಎರಡೂ ಗಿರಣಿಗಳು ಬೆಂಗಳೂರಿನಲ್ಲಿಯೇ ಇದ್ದವು ಎಂಬುದು ವಿಶೇಷ. ಅದನ್ನು ಹೊರತುಪಡಿಸಿ ತುಮಕೂರಿನಲ್ಲಿ ಹತ್ತಿಯಿಂದ ಸಿದ್ಧವಸ್ತುಗಳನ್ನು ಉತ್ಪಾದಿಸಲಾಗುತ್ತಿದ್ದರೂ ಅದು ಗಿರಣಿ ಎಂಬುದಾಗಿ ಕರೆಸಿಕೊಳ್ಳುತ್ತಿರಲಿಲ್ಲ. ಹಾಗೆಯೇ ಚಿತ್ರದುರ್ಗದಲ್ಲಿ ಪ್ರೆಸ್ಸಿಂಗ್ ಅಥವಾ ಹತ್ತಿ ಒತ್ತುವ ಕಾಟನ್ ಕಂಪನಿಯನ್ನು ಕಾಣಬಹುದಿತ್ತು. ಇದನ್ನು ೧೮೯೪-೯೫ರಲ್ಲಿನ ಈ ಕೆಳಗಿನ ಕೋಷ್ಟಕದ ಮೂಲಕ ತಿಳಿದುಕೊಳ್ಳಬಹುದು[೭].

| ಕಂಪನಿಯ ಹೆಸರು | ಉಪಯೋಗಿಸುತ್ತಿದ್ದ ಯಂತ್ರ | ಪ್ರತಿದಿನ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸರಾಸರಿ ಸಂಖ್ಯೆ | ಹೂಡಿಕೆಯಾದ ಬಂಡವಾಳ (ರೂಪಾಯಿಗಳಲ್ಲಿ) | ಸ್ಥಾಪನೆಯಾದ ವರ್ಷ | ೧೮೯೪-೯೫ರ ಫಲಿತಾಂಶ | | ಟೀಕೆಗಳು |
|---|---|---|---|---|---|---|---|
| | | | | | ಪ್ರಮಾಣ | ಮೊತ್ತ (ರೂ.ಗಳಲ್ಲಿ) | |
| ಮೈಸೂರು ಸ್ಪಿನ್ನಿಂಗ್ ಮತ್ತು ಮ್ಯಾನುಫ್ಯಾಕ್ಚರಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು | ಉಗಿಯಂತ್ರ (ಸ್ಟೀಮ್ ಪವರ್) | ೧೮೯೪-೯೫ ೬೩೬ | ೭,೦೦,೦೦೦ | ಫೆಬ್ರುವರಿ ೧೮೮೪ | ನೂಲು ೧೩,೦೪,೮೪೦ ಬೇಲ್‌ಗಳು | ನೂಲು ೫,೦೯,೭೦೩ | ಕಾರ್ಖಾನೆಯು ಸ್ಥಾಪನೆಯಾದ ಪ್ರಮುಖ ಉದ್ದೇಶ ಅನಾಥ ಮಕ್ಕಳಿಗೆ ಕೈಗಾರಿಕೆ ಬಗ್ಗೆ ಶಿಕ್ಷಣ ನೀಡುವುದು |
| | | | | | ಬಟ್ಟೆ | ಬಟ್ಟೆ | |
| | | | | | ೪,೬೪,೪೨೬ ಗಜಗಳು | ೨,೧೭,೫೫೯ | |
| ಬೆಂಗಳೂರು ಉಲ್ಲನ್, ಕಾಟನ್ ಮತ್ತು ಸಿಲ್ಕ್ ಮಿಲ್ಸ್ ಕಂ. ಲಿ. ಬೆಂಗಳೂರು (ಬಿನ್ನಿಮಿಲ್) | ಉಗಿಯಂತ್ರ | ೮೨೦ | ೪,೦೦,೦೦೦ | ೧೮೮೮ | ೯೫೬೩೪೪ | ೨,೩೯,೦೮೬ | |
| ಕಾರ್ಪೆಂಟರಿ ಬ್ಲ್ಯಾಕ್‌ಸ್ಮಿತ್ ಅಥವಾ ಕಾಯರ್ ರೋಪ್ ಮ್ಯಾನ್ಯುಫ್ಯಾಕ್ಚರಿ, ತುಮಕೂರು | ಹ್ಯಾಂಡ್ ಪವರ್ | ೮ ವಯಸ್ಕರು ೪೫ ಹುಡುಗರು | ತಿಳಿಸಿಲ್ಲ | ೧೮೮೦-೮೧ | ಖಚಿತ ಪಡಿಸಿಲ್ಲ | ೮೦೦ | |
| ಪ್ರೆಸ್ಸಿಂಗ್ ಕಾಟನ್, ಚಿತ್ರದುರ್ಗ | ೧ ಇಂಜಿನ್<br>೧ ಬಾಯ್ಲರ್<br>೧ ಪೇಟೆಂಟ್<br>೧ ಪಂಪಿನ ಸೆಟ್ | ೮೮ | ೪೦,೦೦೦ | ೧೮೭೧ | ೧,೮೦೦ ಕಾಟನ್ ಕ್ಯಾಂಡಿಗಳನ್ನು ಪ್ರೆಸ್ ಮಾಡಲಾಯಿತು | ಖಚಿತ ಪಡಿಸಿಲ್ಲ | |

ರಾಜ್ಯದಲ್ಲಿ ಗಿರಣಿಗಳು ಸ್ಥಾಪನೆಯಾದ ಸಂದರ್ಭದಲ್ಲಿ ಅವುಗಳಿಗೆ ಹೂಡುವ ಬಂಡವಾಳವು ವಿವಿಧ ಹಿನ್ನೆಲೆಯಿಂದ ಕೂಡಿದ್ದಿತು. ೧೯೨೦ರಲ್ಲಿ ಮೈಸೂರಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಮಿಲ್ಲು ಸ್ಥಾಪನೆಯಾಗುವ ವೇಳೆಯಲ್ಲಿ ಅದಕ್ಕೆ ಹೂಡಿಕೆ ಮಾಡಿದ ಬಂಡವಾಳ ೪೦ ಲಕ್ಷ ರೂಪಾಯಿಗಳು. ಇಷ್ಟು ಮೊತ್ತವನ್ನು ಕಲೆಹಾಕಿದ್ದು ಷೇರುಗಳ ಮೂಲಕ ಎಂಬುದು ಗಮನಿಸಬೇಕಾಗಿರುವ ಪ್ರಮುಖಾಂಶ. ೮೦,೦೦೦ ಷೇರುಗಳಾಗಿ ವಿಭಾಗಿಸಿ, ಪ್ರತಿ ಷೇರಿಗೆ ತಲಾ ೫೦ ರೂ.ಗಳ ಮೊತ್ತವನ್ನು ನಿಗದಿಮಾಡಲಾಗಿತ್ತು[೮]. ಅದೇ ರೀತಿ ಈ ಅವಧಿಯಲ್ಲಿ (೧೯೨೦) ಬೆಂಗಳೂರಿನಲ್ಲಿ ಮಿನರ್ವ ಮಿಲ್ಲು ಸ್ಥಾಪನೆಯಾಯಿತು. ಇದಕ್ಕೆ ತೊಡಗಿಸಲಾದ ಬಂಡವಾಳ ೩೦ ಲಕ್ಷ ರೂಪಾಯಿಗಳು. ಇದನ್ನು ೩೦,೦೦೦ ಷೇರುಗಳಾಗಿ ವಿಭಾಗಿಸಿ, ಪ್ರತಿ ಷೇರು ೧೦೦ ರೂ.ಗಳ ಮೊತ್ತವನ್ನು ಹೊಂದಿತ್ತು[೯]. ಇದಲ್ಲದೇ ಡೈರೆಕ್ಟರುಗಳು, ಬ್ಯಾಂಕರುಗಳು (ದಿ ಬ್ಯಾಂಕ್ ಆಫ್ ಮೈಸೂರು ಲಿ., ದಿ ಈಸ್ಟರ್ನ್ ಬ್ಯಾಂಕ್ ಲಿ., ದಿ ಟಾಟಾ ಇಂಡಸ್ಟ್ರಿಯಲ್ ಬ್ಯಾಂಕ್ ಲಿ.) ಆಡಿಟರ್‌ಗಳು (ಫ್ರೀಸರ್ ಅಂಡ್ ರೋಸ್, ಛಾರ್ಟರ್ಡ್ ಅಕೌಂಟೆಂಟ್, ಮದರಾಸು), ಕಾನೂನು ಸಲಹೆಗಾರರು ಹಾಗೂ ಏಜೆಂಟರುಗಳು ಇವರೆಲ್ಲರೂ ಒಂದು ಗಿರಣಿಯ ಆಡಳಿತದೊಳಗೆ ಬರುತ್ತಿದ್ದರು. ಈ ಶ್ರೇಣಿಕರಣವು ಕೇವಲ ಬೆಂಗಳೂರು ಅಥವಾ ಮೈಸೂರಿನ ಗಿರಣಿಗಳಿಗೆ ಮಾತ್ರ ಸೀಮಿತವಾಗಿರದೆ ರಾಜ್ಯದ ಅಥವಾ ದೇಶದ ಯಾವುದೇ ಗಿರಣಿ ಅಥವಾ ಕಾರ್ಖಾನೆಗಳನ್ನು ತೆರೆಯುವಾಗ ಸರ್ವೆ ಸಾಮಾನ್ಯವಾಗಿದ್ದಿತು.

ಆರ್. ಬಾಲಕೃಷ್ಣ ಅವರು ೧೯೩೭ರಲ್ಲಿ ಬೆಂಗಳೂರಿನ ಪ್ರಮುಖ ಮೂರು ಹತ್ತಿ ಗಿರಣಿಗಳಲ್ಲಿ ಎಷ್ಟು ಬಂಡವಾಳ ತೊಡಗಿಸಲಾಗಿತ್ತು ಹಾಗೂ ಎಷ್ಟೆಷ್ಟು ಲಾಭಾಂಶ (ಡಿವಿಡೆಂಡ್) ವನ್ನು ಪಡೆದುಕೊಂಡವು ಎಂಬುದನ್ನು ಒಂದು ಕೋಷ್ಟಕದ ಮೂಲಕ ವಿವರಿಸಲು ಪ್ರಯತ್ನಿಸಿದ್ದಾರೆ. ಅದು ಹೀಗಿದೆ.

| | ಬೆಂಗಳೂರು ಕಾಟನ್ ಉಲನ್ ಅಂಡ್ ಸಿಲ್ಕ್ ಮಿಲ್ಸ್ ಅಥವಾ ಬಿನ್ನಿ ಮಿಲ್ | ಮೈಸೂರು ಸ್ಪಿನ್ನಿಂಗ್ ಅಂಡ್ ಮ್ಯಾನ್ಯುಫ್ಯಾಕ್ಚರಿಂಗ್ ಕಂ. ಲಿ. | ಮಿನರ್ವ ಮಿಲ್ಸ್ ಲಿ. |
|---|---|---|---|
| ತೊಡಗಿಸಲಾದ ಬಂಡವಾಳ | ೨೬,೨೫,೦೦೦ | ೧೨,೪೪,೯೦೦ | ೨೬,೬೧,೭೭೯ |
| ನೂಲುವ ಯಂತ್ರಗಳು | ೪೦೦೦೦ | ೪೭೦೦೦ | ೩೪೦೧೬ |
| ಮಗ್ಗಗಳು | ೧೧೭೦ | ೫೦೦ | ೪೪೦ |
| ಕಾರ್ಮಿಕರು | ೩೯೫೦ | ೨೨೦೪ | ೧೬೧೦ |
| ಷೇರು ಮೌಲ್ಯ | ೧೬೫–೧೦೦ | ೯೫ ೭/೮ – ೫೦ | ೫೯–೧೦೦ |
| ಲಾಭಾಂಶ (ಡಿವಿಡೆಂಡ್) | | | |
| ೧೯೩೪ | ಶೇ.೨ | ಶೇ.೫ | – |
| ೧೯೩೫ | ಶೇ.೭ | ಶೇ.೧೦ | ಶೇ.೨ |
| ೧೯೩೬ | ಶೇ.೮ | ಶೇ.೧೦ | ಶೇ.೨ |
| ೧೯೩೭ | ಶೇ.೪ | – | ಶೇ.೩ |
| | ಅರ್ಧ ವರ್ಷಕ್ಕೆ | | |

ಮೇಲಿನ ಕೋಷ್ಠಕವನ್ನು ಗಮನಿಸಿದರೆ ತೊಡಗಿಸಿದ ಬಂಡವಾಳದಲ್ಲಿ ಮೂರು ಗಿರಣಿಗಳಲ್ಲಿ ಮೈಸೂರು ಮಹಾರಾಜ ಮಿಲ್ಲು ಕಡಿಮೆ ಬಂಡವಾಳವನ್ನು ನಿರೀಕ್ಷೆ ಮಾಡಿತ್ತು. ಲಾಭಾಂಶದಲ್ಲಿಯೂ ಮಹಾರಾಜ ಮಿಲ್ಲು ವರ್ಷದಿಂದ ವರ್ಷಕ್ಕೆ ಒಂದು ಪಟ್ಟು ಜಾಸ್ತಿ (೫, –೧೦, –೧೦) ಏರಿಕೆಯನ್ನು ಕಾಣುತ್ತಿತ್ತು. ಆದರೆ ಮಿಕ್ಕ ಎರಡು ಮಿಲ್ಲುಗಳ ಪರಿಸ್ಥಿತಿ ಇದಕ್ಕಿಂತ ಸ್ವಲ್ಪ ಭಿನ್ನವೇ ಆಗಿದ್ದಿತು.

## ೪.೨. ಉತ್ಪಾದನೆ

ಮೊದಲೇ ಚರ್ಚೆಯನ್ನು ಎತ್ತಿದಂತೆ ೧೮೮೬–೮೭ರಲ್ಲಿ ಮೈಸೂರು ಪ್ರಾಂತ್ಯದಲ್ಲಿ ವ್ಯಾಪಾರವು ಹಲವು ಮಿತಿಗೆ ಒಳಪಟ್ಟಿತ್ತು. ಈ ಅವಧಿಯಲ್ಲಿ ಹಾಗೂ ಅನಂತರ ಕೆಲವು ವರ್ಷಗಳಲ್ಲಿ ಬೆಂಗಳೂರು ಹಾಗೂ ಇತರೆ ಜಿಲ್ಲೆಗಳಲ್ಲಿ ಸ್ಥಾಪನೆಯಾಗಿದ್ದ ಹತ್ತಿ ಗಿರಣಿಗಳು ಹಾಗೂ ಅದರ ಉತ್ಪಾದನೆಯನ್ನು ತೌಲನಿಕ ಹಿನ್ನೆಲೆಯಿಂದ ಕೆಲವು ಕೋಷ್ಟಕಗಳ ಮೂಲಕ ತಿಳಿಸಲಾಗಿದೆ.

| ವರ್ಷ ೧೮೮೬-೮೭ | ಉತ್ಪಾದನೆಯಾದ ಹತ್ತಿ ಬಟ್ಟೆ[೧೧] | | |
|---|---|---|---|
| | ಬೆಂಗಳೂರು | ತುಮಕೂರು | ಮೈಸೂರು |
| ಗಿರಣಿಗಳು ಹಾಗೂ ದೊಡ್ಡ ಉತ್ಪಾದನಾ ಘಟಕಗಳ ಸಂಖ್ಯೆ | ೧ | - | - |
| ಖಾಸಗಿ ಮಗ್ಗಗಳು ಅಥವಾ ಸಣ್ಣ ಘಟಕಗಳು | ೪,೫೭೨ | ೩,೦೦೪ | ೪,೪೭೨ |
| ದೊಡ್ಡ ಗಿರಣಿಗಳಲ್ಲಿದ್ದ ಕಾರ್ಮಿಕರ ಸಂಖ್ಯೆ | | | |
| ಪುರುಷರು | ೧೭೦ | - | - |
| ಮಹಿಳೆಯರು | ೭೦ | - | - |
| ಸಣ್ಣ ಘಟಕಗಳು ಅಥವಾ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ | ೧೩,೭೧೬ | ೫,೬೮೫ | ೭,೨೯೭ |
| ಗಿರಣಿಗಳಲ್ಲಿದ್ದ ಯೂರೋಪಿನ ಮೇಲ್ವಿಚಾರಕರ ಸಂಖ್ಯೆ | ೨ | - | - |
| ಒಟ್ಟಾರೆ ಎಲ್ಲಾ ಕಾರ್ಯಗಳಿಂದ ವಾರ್ಷಿಕವಾಗಿ ಉತ್ಪಾದನೆಯಾದ ಅಂದಾಜಿನ ಪ್ರಮಾಣ | ೪,೫೦,೦೦೦ ಬೇಲ್ | ೧,೦೦,೩೨೪ ಬೇಲ್ | ೧೩,೯೭೯೦ ಬೇಲ್ |

| ವರ್ಷ ೧೮೮೭-೮೮ | ಉತ್ಪಾದನೆಯಾದ ಹತ್ತಿ ಬಟ್ಟೆ[೧೧] | | |
|---|---|---|---|
| | ಬೆಂಗಳೂರು | ತುಮಕೂರು | ಮೈಸೂರು |
| ಗಿರಣಿಗಳು ಹಾಗೂ ದೊಡ್ಡ ಉತ್ಪಾದನಾ ಘಟಕಗಳ ಸಂಖ್ಯೆ | ೧ | - | - |
| ಖಾಸಗಿ ಮಗ್ಗಗಳು ಅಥವಾ ಸಣ್ಣ ಘಟಕಗಳು | ೪,೪೪೩ | ೩,೧೪೦ | ೫,೦೪೭ |
| ದೊಡ್ಡ ಗಿರಣಿಗಳಲ್ಲಿದ್ದ ಕಾರ್ಮಿಕರ ಸಂಖ್ಯೆ | | | |
| ಪುರುಷರು | ೨೨೦ | - | - |
| ಮಹಿಳೆಯರು | ೨೦ | - | - |
| ಸಣ್ಣ ಘಟಕಗಳು ಅಥವಾ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ | ೧,೩೩೨೯ | ೬,೩೫೧ | ೫,೨೮೯ |
| ಗಿರಣಿಗಳಲ್ಲಿದ್ದ ಯೂರೋಪಿನ ಮೇಲ್ವಿಚಾರಕರ ಸಂಖ್ಯೆ | ೨ | - | - |
| ಒಟ್ಟಾರೆ ಎಲ್ಲಾ ಕಾರ್ಯಗಳಿಂದ ವಾರ್ಷಿಕವಾಗಿ ಉತ್ಪಾದನೆಯಾದ ಅಂದಾಜಿನ ಪ್ರಮಾಣ | ೪,೫೦,೦೦೦ ಬೇಲ್ | ೧,೩೭,೨೮೦ ಬೇಲ್ | ೨,೫೧,೯೪೪ ಬೇಲ್ |

| ವರ್ಷ ೧೮೮೮-೮೯ | ಉತ್ಪಾದನೆಯಾದ ಹತ್ತಿ ಬಟ್ಟೆ[೧೨] | | |
|---|---|---|---|
| | ಬೆಂಗಳೂರು | ತುಮಕೂರು | ಮೈಸೂರು |
| ಗಿರಣಿಗಳು ಹಾಗೂ ದೊಡ್ಡ ಉತ್ಪಾದನಾ ಘಟಕಗಳ ಸಂಖ್ಯೆ | ೨ | - | - |
| ಖಾಸಗಿ ಮಗ್ಗಗಳು ಅಥವಾ ಸಣ್ಣ ಘಟಕಗಳು | ೪,೫೫೨ | ೩,೧೯೧ | ೪,೮೩೯ |
| ದೊಡ್ಡ ಗಿರಣಿಗಳಲ್ಲಿದ್ದ ಕಾರ್ಮಿಕರ ಸಂಖ್ಯೆ | | | |
| ಪುರುಷರು | ೪೧೦ | - | -ಞ |
| ಮಹಿಳೆಯರು | ೯೦ | - | - |
| ಸಣ್ಣ ಘಟಕಗಳು ಅಥವಾ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ | ೧೩,೬೫೬ | ೭,೩೭೫ | ೧೪,೪೮೭ |
| ಗಿರಣಿಗಳಲ್ಲಿದ್ದ ಯೂರೋಪಿನ ಮೇಲ್ವಿಚಾರಕರ ಸಂಖ್ಯೆ | ೨ | - | - |
| ಒಟ್ಟಾರೆ ಎಲ್ಲಾ ಕಾರ್ಯಗಳಿಂದ ವಾರ್ಷಿಕವಾಗಿ ಉತ್ಪಾದನೆಯಾದ ಅಂದಾಜಿನ ಪ್ರಮಾಣ | ೯,೫೦,೦೦೦ ಬೇಲ್ | - | - |

| ವರ್ಷ ೧೮೮೯-೯೦ | ಉತ್ಪಾದನೆಯಾದ ಹತ್ತಿ ಬಟ್ಟೆ[೧೩] | | |
|---|---|---|---|
| | ಬೆಂಗಳೂರು | ತುಮಕೂರು | ಮೈಸೂರು |
| ಗಿರಣಿಗಳು ಹಾಗೂ ದೊಡ್ಡ ಉತ್ಪಾದನಾ ಘಟಕಗಳ ಸಂಖ್ಯೆ | ೨ | - | - |
| ಖಾಸಗಿ ಮಗ್ಗಗಳು ಅಥವಾ ಸಣ್ಣ ಘಟಕಗಳು | ೪,೫೫೮ | ೨,೮೯೦ | ೪,೭೬೪ |
| ದೊಡ್ಡ ಗಿರಣಿಗಳಲ್ಲಿದ್ದ ಕಾರ್ಮಿಕರ ಸಂಖ್ಯೆ | | | |
| ಪುರುಷರು | ೬೬೩ | - | - |
| ಮಹಿಳೆಯರು | ೩೧೭ | - | - |
| ಸಣ್ಣ ಘಟಕಗಳು ಅಥವಾ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ | ೧೩,೬೭೪ | ೬,೩೫೦ | ೫,೫೭೭ |
| ಗಿರಣಿಗಳಲ್ಲಿದ್ದ ಯೂರೋಪಿನ ಮೇಲ್ವಿಚಾರಕರ ಸಂಖ್ಯೆ | ೨ | - | - |
| ಒಟ್ಟಾರೆ ಎಲ್ಲಾ ಕಾರ್ಯಗಳಿಂದ ವಾರ್ಷಿಕವಾಗಿ ಉತ್ಪಾದನೆಯಾದ ಅಂದಾಜಿನ ಪ್ರಮಾಣ | ೯,೫೦,೦೦೦ ಬೇಲ್ | ೧,೬೩,೮೯೮ ಬೇಲ್ | ೨,೯೬,೧೯೮ ಬೇಲ್ |

| ವರ್ಷ ೧೮೯೦-೯೧ | ಉತ್ಪಾದನೆಯಾದ ಹತ್ತಿ ಬಟ್ಟೆ[೧೪] | | |
|---|---|---|---|
| | ಬೆಂಗಳೂರು | ತುಮಕೂರು | ಮೈಸೂರು |
| ಗಿರಣಿಗಳು ಹಾಗೂ ದೊಡ್ಡ ಉತ್ಪಾದನಾ ಘಟಕಗಳ ಸಂಖ್ಯೆ | ೨ | – | – |
| ಖಾಸಗಿ ಮಗ್ಗಗಳು ಅಥವಾ ಸಣ್ಣ ಘಟಕಗಳು | ೪,೬೬೮ | ೨,೯೯೦ | ೪,೭೩೨ |
| ದೊಡ್ಡ ಗಿರಣಿಗಳಲ್ಲಿದ್ದ ಕಾರ್ಮಿಕರ ಸಂಖ್ಯೆ | | | |
| ಪುರುಷರು | ೫೫೩ | – | – |
| ಮಹಿಳೆಯರು | ೨೦೫ | – | – |
| ಸಣ್ಣ ಘಟಕಗಳು ಅಥವಾ ಸ್ವತಂತ್ರವಾಗಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಸಂಖ್ಯೆ | ೧೪,೦೦೪ | ೫,೯೫೨ | ೬,೩೬೧ |
| ಗಿರಣಿಗಳಲ್ಲಿದ್ದ ಯೂರೋಪಿನ ಮೇಲ್ವಿಚಾರಕರ ಸಂಖ್ಯೆ | ೨ | – | – |
| ಒಟ್ಟಾರೆ ಎಲ್ಲಾ ಕಾರ್ಯಗಳಿಂದ ವಾರ್ಷಿಕವಾಗಿ ಉತ್ಪಾದನೆಯಾದ ಅಂದಾಜಿನ ಪ್ರಮಾಣ | ೯,೫೦,೦೦೦ ಬೇಲ್ | ೧,೮೦,೮೭೦ ಬೇಲ್ | ೧,೮೭,೮೮೭ ಬೇಲ್ |

ಮೇಲಿನ ಐದು ಕೋಷ್ಟಕಗಳಲ್ಲಿ ನಮಗೆ ತಿಳಿಯುವ ಅಂಶವೆಂದರೆ ೧೮೮೬-೯೧ರ ಅವಧಿಯವರೆಗೆ ಮೈಸೂರು ರಾಜ್ಯದಲ್ಲಿ ಬೆಂಗಳೂರನ್ನು ಹೊರತುಪಡಿಸಿ ಇನ್ನೆಲ್ಲಿಯೂ ಆಧುನಿಕ ದೊಡ್ಡ ಹತ್ತಿ ಗಿರಣಿಯು ಸ್ಥಾಪನೆಯಾಗಿರುವುದರ ಬಗ್ಗೆ ದಾಖಲಾಗಿಲ್ಲ. ಅಲ್ಲದೇ ಒಟ್ಟಾರೆಯಾಗಿ ಅದು ಸಣ್ಣ ಹಾಗೂ ದೊಡ್ಡ ಘಟಕಗಳಿಂದ ಉತ್ಪಾದನೆಯಾದ ಹತ್ತಿ ಬಟ್ಟೆಯನ್ನು ಬೇಲ್‌ಗಳಲ್ಲಿ ದಾಖಲಿಸಲಾಗಿದೆ. ೧೮೮೮-೮೯ರಿಂದ ೧೮೯೦-೯೧ರವರೆಗೆ ಬೆಂಗಳೂರಿನಲ್ಲಿ ಉತ್ಪಾದನೆಯಾದ ಹತ್ತಿ ಬಟ್ಟೆಯ ಪ್ರಮಾಣ ಒಂದೇ ಅಳತೆಯಲ್ಲಿದೆ. ಅದು ಎಲ್ಲಿಯೂ ಏರಿಕೆಯಾಗಿಲ್ಲ (೯,೫೦,೦೦೦ ಬೇಲ್).

ಬೆಂಗಳೂರಿನ ಹತ್ತಿ ಗಿರಣಿಗಳಿಂದ ೧೯೦೬-೦೮ರ ಸಂದರ್ಭದಲ್ಲಿ ಎಷ್ಟು ಪ್ರಮಾಣದಲ್ಲಿ ಹತ್ತಿ ಬಟ್ಟೆ ಮತ್ತು ನೂಲು ಉತ್ಪಾದನೆಯಾಯಿತು ಎಂಬುದನ್ನು ಒಂದು ಸಣ್ಣ ಅಂಕಿ ಅಂಶದ ಮೂಲಕ ತೋರಿಸಲಾಗಿದೆ[೧೫].

| ಕಾಲಾವಧಿ | ಉತ್ಪಾದನೆಯಾದ ವಸ್ತುಗಳ ತೂಕ ಬೇಲ್‌ಗಳಲ್ಲಿ | ಉತ್ಪಾದನೆಯಾದ ನೂಲಿನ ತೂಕ ಬೇಲ್‌ಗಳಲ್ಲಿ |
|---|---|---|
| ೧೯೦೬-೦೭ | ೮,೦೪,೮೯೯ | ೨೬,೭೬,೦೯೩ |
| ೧೯೦೭-೦೮ | ೮,೧೫,೧೫೧ | ೩೦,೩೮,೭೩೮ |

ಆದರೆ ಈ ಅಂಕಿ ಅಂಶದಲ್ಲಿ ಎರಡೂ ರೀತಿಯ ಉತ್ಪಾದನೆಯಲ್ಲಿ ಗರಿಷ್ಠ ಪ್ರಮಾಣದ ಏರಿಕೆಯನ್ನು ಕಾಣಬಹುದು.

೧೯೧೩-೧೪ರಲ್ಲಿ ಮೈಸೂರು ರಾಜ್ಯದ ಹತ್ತಿ ಗಿರಣಿಗಳ ಒಟ್ಟಾರೆ ಉತ್ಪಾದನೆ ೪.೬ ಮಿಲಿಯನ್ ಗಜಗಳಷ್ಟಾಗಿದ್ದು ಇದು ೧೯೨೨-೨೩ರ ವೇಳೆಗೆ ೧೨.೩ ಮಿಲಿಯನ್ ಗಜಗಳಿಗೆ ಏರಿಕೆಯಾಯಿತು. ಒಂದು ದಶಕದ ಒಳಗಡೆ ಇಷ್ಟು ಪ್ರಮಾಣದಲ್ಲಿ ಏರಿಕೆಯಾಗಿರುವುದು ಅಂದರೆ ಶೇ. ೩೦೦ರಷ್ಟು ಏರಿಕೆಯಾಗಿರುವುದು ಒಂದು ದಾಖಲೆಯೆಂದೇ ಪರಿಗಣಿಸಬಹುದು[೧೬]. ನಂತರ ಹದಿಮೂರು ವರ್ಷದ ಅವಧಿಯೊಳಗೆ ಮೂರು ಪಟ್ಟಿಗಿಂತಲೂ ಜಾಸ್ತಿ ಉತ್ಪಾದನೆಯನ್ನು ಮಾಡಲಾಯಿತು. ಇದು ಪ್ರತಿ ವರ್ಷವೂ ಕ್ರಮೇಣವಾಗಿ ಹಾಗೂ ಸ್ಥಿರವಾದ ಏರಿಕೆಯನ್ನು ಕಂಡಿತು ಎಂಬುದು ಆರ್. ಬಾಲಕೃಷ್ಣರವರ ವಾದವಾಗಿದೆ. ಆದರೆ ೧೯೩೪ರ ವೇಳೆಗೆ ಬಾಂಬೆ ಹಾಗೂ ಅಹಮದಾಬಾದ್‌ನಲ್ಲಿನ ಉತ್ಪಾದನೆಯನ್ನು ಗಮನಿಸಿದರೆ ದೇಶದ ಹತ್ತಿ ಬಟ್ಟೆಯ ಒಟ್ಟು ಉತ್ಪಾದನೆಯಲ್ಲಿ ಶೇ. ೬೦ರಷ್ಟು ಪಾಲು ಈ ಎರಡೂ ಪ್ರಾಂತ್ಯಗಳದ್ದಾಗಿತ್ತು. ಅಲ್ಲದೇ ದೇಶದಾದ್ಯಂತ ಚದುರಿದ ಸ್ಥಿತಿಯಲ್ಲಿದ್ದ ಹತ್ತಿ ಬಟ್ಟೆ ಕೈಗಾರಿಕೆಗಳು ಯಾವುದೇ ಉತ್ಪಾದನಾ ಕೇಂದ್ರವನ್ನು ಹೊಂದಿರಲಿಲ್ಲ[೧೭] ಎಂಬ ಕುತೂಹಲಕರವಾದ ವಾಸ್ತವಾಂಶವನ್ನು ಕೆಲವು ದಾಖಲೆಗಳು ನಮ್ಮ ಮುಂದಿಡುತ್ತವೆ.

೧೯೩೯ರ ಮಾರ್ಚ್ ವೇಳೆಗೆ ರಾಜ್ಯದಲ್ಲಿ ಒಟ್ಟಾರೆ ಎಂಟು (೦೮) ಹತ್ತಿ ಗಿರಣಿಗಳು ಕಾರ್ಯ ನಿರ್ವಹಿಸುತ್ತಿದ್ದು, ಒಟ್ಟು ಸ್ಪಿಂಡಲ್‌ಗಳ ಸಂಖ್ಯೆ ೧೬೦೪೮೧ ಹಾಗೂ ಮಗ್ಗಗಳು ೨೫೪೫ ಸಂಖ್ಯೆಯಲ್ಲಿದ್ದವು. ಈ ಅವಧಿಯ ಒಟ್ಟಾರೆ ಉತ್ಪಾದನೆ ೨೧,೦೦೦,೦೦೦ ಬೇಲ್ ಅಂದರೆ ೩೮,೫೦೦,೦೦೦ ಗಜಗಳಿಗೆ ಸಮನಾಗಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ (೨೦,೭೫೯,೦೦೦ ಬೇಲ್ ಅಥವಾ ೩೫,೦೦೦,೦೦೦ ಗಜ) ಸ್ವಲ್ಪ ಮಟ್ಟಿಗಿನ ಏರಿಕೆಯನ್ನು ಕಾಣಬಹುದು. ಮೇಲಿನ ಎರಡು ಗಿರಣಿಗಳಲ್ಲದೇ ೪೮ ಸಣ್ಣ ಯಾಂತ್ರಿಕ ಮಗ್ಗಗಳ ಕಾರ್ಖಾನೆಗಳು ಕಾರ್ಯಾಚರಣೆಯಲ್ಲಿದ್ದು ಪ್ರತಿದಿನ ಸರಾಸರಿ ಹತ್ತು ಜನರಿಗಿಂತಲೂ ಅಧಿಕ ಕಾರ್ಮಿಕರು ಹತ್ತಿ ನೇಯ್ಗೆಯಲ್ಲಿ ನಿರತರಾಗಿದ್ದರು[೧೮].

೧೯೪೦ರ ವೇಳೆಗೆ ರಾಜ್ಯದಲ್ಲಿ ಒಂಭತ್ತು (೦೯) ಗಿರಣಿಗಳು ಕಾರ್ಯನಿರ್ವಹಿಸುತ್ತಿದ್ದು ಈ ಮಿಲ್ಲುಗಳು ೩೪೯೧೪೭ ಸ್ಪಿಂಡಲ್‌ಗಳು ಹಾಗೂ ೨೫೭೩ ಮಗ್ಗಗಳನ್ನು (ಲೂಮ್‌ಗಳು) ಹೊಂದಿದ್ದವು. ೧೯೪೦ರ ಮಾರ್ಚ್ ೩೧ರ ವೇಳೆಗೆ ೧೨೮೧೬೦೦೦ ಬೇಲ್‌ನಷ್ಟು ಚೂರು ಬಟ್ಟೆಯನ್ನು ಉತ್ಪಾದಿಸಿದ್ದವು. ಅಂದರೆ ೪೦೮೬೨೦೦೦ ಗಜಗಳಿಗೆ ಸಮ[೧೯]. ೧೯೪೪ರಲ್ಲಿ ಇದರ ಪ್ರಮಾಣ ಎಷ್ಟಿತ್ತೆಂಬುದನ್ನು ಒಂದು ಕೋಷ್ಟಕದ ಮೂಲಕ ನೋಡೋಣ.

| ಗಿರಣಿಗಳ ಸಂಖ್ಯೆ | ವರ್ಷ | ಉತ್ಪಾದನೆ |
|---|---|---|
| ೦೯ | ೧೯೪೩ ಏಪ್ರಿಲ್ ನಿಂದ ೧೯೪೪ ಮಾರ್ಚ್ ೩೧ರವರೆಗೆ | ೨,೭೩,೪೯,೫೩೪ ಬೇಲ್‌ಗಳು ಅಥವಾ ೫,೨೭,೮೪,೭೯೭ ಗಜ |

ಈ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಗಿರಣಿಗಳು ಯುದ್ಧ ಪೂರೈಕೆಗಾಗಿಯೇ ಉತ್ಪಾದನೆಯಲ್ಲಿ ತೊಡಗಿದ್ದವು. ಅಲ್ಲದೇ 'ಹತ್ತಿ ಬಟ್ಟೆ ನಿಯಂತ್ರಣ ಆಜ್ಞೆ' (ಕಾಟನ್ ಕ್ಲಾತ್ ಕಂಟ್ರೋಲ್ ಆರ್ಡರ್) ಜಾರಿಗೆ ಬಂದಿದ್ದರಿಂದ[೨೦] ಚಿಲ್ಲರೆ ದರದಲ್ಲಿ ಬದಲಾವಣೆಯಾಗಿ ಗ್ರಾಹಕರು ತಮ್ಮ ಅಗತ್ಯತೆಗಳಿಗೆ ತಕ್ಕಂತೆ ಮಿತವಾಗಿ ಬಳಸಲು ಪ್ರಾರಂಭಿಸಿದರು.

ಸ್ವಾತಂತ್ರ್ಯ ನಂತರ ರಾಜ್ಯದಲ್ಲಿ ಒಟ್ಟು ಹದಿಮೂರು (೧೩) ಹತ್ತಿ ಗಿರಣಿಗಳು ಕಾರ್ಯ ನಿರ್ವಹಿಸುತ್ತಿದ್ದವು. ೨೭,೬೪೦,೨೮೦ ಬೇಲ್‌ನಷ್ಟು ನೂಲನ್ನು ಉತ್ಪಾದಿಸಲಾಗುತ್ತಿದ್ದು[೨೧], ೧೯೪೭ರ ನಂತರ ಉತ್ಪಾದನೆಯಲ್ಲಿ ಏರಿಕೆಯಾಗಿದ್ದರೂ ಸಹ ಅದು ಉತ್ತಮ ಮಟ್ಟದಲ್ಲಿರಲಿಲ್ಲ. ಕಾರ್ಮಿಕ-ಮಾಲೀಕರ ನಡುವೆ ವಿವಾದಗಳು ಕಾಣಿಸಿಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ಅಲ್ಲದೇ ಮುಷ್ಕರಗಳು ದಿನನಿತ್ಯದ ಚಟುವಟಿಕೆಗಳಂತಿದ್ದವು. ೧೯೫೨-೫೩ರ ಅವಧಿಯಲ್ಲಿ ಈ ಗಿರಣಿಗಳು ಒಟ್ಟಾರೆ ೫,೫೪,೦೯,೮೦೩ ಗಜದಷ್ಟು ಬಟ್ಟೆ ಉತ್ಪಾದಿಸಿದರೆ, ೩,೩೧,೩೩,೨೬೨ ಬೇಲ್‌ನಷ್ಟು ನೂಲನ್ನು ಉತ್ಪಾದಿಸಿತ್ತು. ಇದು ಕಳೆದ ವರ್ಷದ ಉತ್ಪಾದನೆಗೆ ಹೋಲಿಸಿದರೆ (೫,೧೬,೪೩,೯೭೬ ಗಜ ಬಟ್ಟೆ ಮತ್ತು ೨,೭೬,೪೦,೨೮೦ ಬೇಲ್ ನೂಲು) ಏರಿಕೆಯನ್ನು ಕಂಡಿತ್ತು. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಒಟ್ಟಾರೆ ರಾಜ್ಯದ ಉತ್ಪಾದನೆಯಲ್ಲಿ ಬೆಂಗಳೂರಿನ ಗಿರಣಿಗಳದ್ದು ಸಿಂಹಪಾಲಿಗಿಂತಲೂ ಜಾಸ್ತಿ ಇತ್ತು. ಆದರೆ ೧೯೩೭ರ ನಂತರ ಇದರ ಪ್ರಮಾಣದಲ್ಲಿ

ಸ್ವಲ್ಪ ಕಡಿಮೆಯಾದಂತೆ ಕಂಡಿತು. ಏಕೆಂದರೆ ಚಿತ್ರದುರ್ಗ ಜಿಲ್ಲೆಯ ದಾವಣಗೆರೆ ನಗರದಲ್ಲಿ ಒಂದಾದ ನಂತರ ಒಂದರಂತೆ ಹತ್ತಿ ಗಿರಣಿಗಳು ತಲೆಯೆತ್ತಿ ಬೆಂಗಳೂರಿನ ಗಿರಣಿಗಳಿಗೆ ಹೆಚ್ಚಿನ ಸವಾಲನ್ನು ಒಡ್ಡಿದ್ದವು. ಆದಾಗ್ಯೂ ಸಹ ಭಾರತ ಸ್ವಾತಂತ್ರ್ಯಗೊಂಡ ನಂತರವೂ ಬಿನ್ನಿಮಿಲ್ ಹಾಗೂ ಮಿನರ್ವ ಮಿಲ್ಲು ತಮ್ಮ ಹಿಂದಿನ ಹಿರಿಮೆಯನ್ನು ಉಳಿಸಿಕೊಂಡು ಕಾರ್ಯಾಚರಣೆಯಲ್ಲಿ ತೊಡಗಿದ್ದವು. ಆದರೆ ೧೯೮೦ರ ನಂತರ ಬೆಂಗಳೂರನ್ನೂ ಒಳಗೊಂಡಂತೆ ಕರ್ನಾಟಕದ ಎಲ್ಲಾ ಗಿರಣಿಗಳು ಅವಸಾನದತ್ತ ಮುಖ ಮಾಡಿದ್ದವು.

## ೪.೩. ದೇಶೀಯ ವಾಣಿಜ್ಯ ಮತ್ತು ವ್ಯಾಪಾರ

೧೮೮೪-೮೫ರ ವೇಳೆಗಾಗಲೇ ಬೆಂಗಳೂರು ಇಡೀ ಮೈಸೂರು ಸಂಸ್ಥಾನದಲ್ಲಿಯೇ ಉತ್ತಮವಾದ ವಾಣಿಜ್ಯ ಸ್ಥಳ ಎಂಬುದಾಗಿ ಗುರುತಿಸಿಕೊಂಡಿತ್ತು. ಸಂಸ್ಥಾನದ ಇನ್ನಿತರ ಆರ್ಥಿಕ ಸಂಕೀರ್ಣಗಳಾದ ಮೈಸೂರು, ಗುಬ್ಬಿ, ಹರಿಹರ, ಹಾಸನ, ಕಡೂರು, ಶಿವಮೊಗ್ಗ, ತುಮಕೂರು ಇವುಗಳಿಗೆ ಹೋಲಿಸಿದರೆ ಬೆಂಗಳೂರು ಯಾವುದೇ ವಾಣಿಜ್ಯ ವ್ಯಾಪಾರಕ್ಕೆ ಆಯಕಟ್ಟಿನ ಸ್ಥಳ ಎಂಬ ಮನ್ನಣೆಯನ್ನು ಪಡೆದುಕೊಳ್ಳುವತ್ತ ಸಾಗಿತ್ತು. ವಾರದ ಮಾರುಕಟ್ಟೆಗಳು ಹಾಗೂ ವರ್ಷದ ಜಾತ್ರೆಗಳು ಅಥವಾ ಸಂತೆಗಳು ಸುತ್ತಮುತ್ತಲ ಗ್ರಾಮೀಣ ಜನರನ್ನು ತನ್ನತ್ತ ಆಕರ್ಷಿಸುವ ಲಕ್ಷಣ ಇದರದ್ದಾಗಿತ್ತು. ಈ ರೀತಿಯ ಪ್ರಕ್ರಿಯೆಯಿಂದ ಯಾವುದೇ ಬಂದರು ಅಥವಾ ರೇವು ಪಟ್ಟಣವಿಲ್ಲದ ಬೆಂಗಳೂರು ವಾಣಿಜ್ಯ ಮತ್ತು ವ್ಯಾಪಾರವನ್ನು ತನ್ನ ಮೂಲಕ ನಡೆಸುವ ಪ್ರಯತ್ನಕ್ಕೆ ಸನ್ನದ್ಧವಾಗಿತ್ತು. ಆದರೆ ಹಿಂದಿನಿಂದಲೂ ಹತ್ತಿಯ ವಹಿವಾಟು ಹೆಚ್ಚಿನದಾಗಿರಲಿಲ್ಲ. ಬ್ರಿಟಿಷ್ ಪ್ರದೇಶಗಳಾದ ಧಾರವಾಡ ಹಾಗೂ ಮಂಗಳೂರಿನಿಂದ ಹತ್ತಿ ಹಾಗೂ ಅದರ ಸಿದ್ಧ ವಸ್ತುಗಳ ಆಮದಾಗುತ್ತಿತ್ತು. ೧೮೮೪-೮೫ರ ಅಂಕಿ ಅಂಶದ ಪ್ರಕಾರ ಹೇಳುವುದಾದರೆ ಒಟ್ಟಾರೆ ಮೈಸೂರು ರಾಜ್ಯದಲ್ಲಿ ೫೪೪೨೦೧ರೂ. ಮೌಲ್ಯದ ೬೭೫ ಬೇಲ್‌ನಷ್ಟು ಹತ್ತಿಯನ್ನು ಹಾಗೂ ರೂ. ೧,೯೮,೧೨೬ ಮೌಲ್ಯದ ಹತ್ತಿ ನೂಲನ್ನು ಆಮದು ಮಾಡಿಕೊಂಡಿತ್ತು. ರೂ. ೧,೧೯,೦೯೦ ಮೌಲ್ಯದ ೨೬೦ ಬೇಲ್‌ನಷ್ಟು ಹತ್ತಿಯನ್ನು ಹಾಗೂ ರೂ. ೩೯,೭೭೫ ಮೌಲ್ಯದ ೪೧ ಬೇಲ್ ಹತ್ತಿ ನೂಲನ್ನು ರಫ್ತು ಮಾಡಿತ್ತು[೨]. ಈ ಅವಧಿಯಲ್ಲಿ ನಾವು ಸಂಶೋಧನೆಗಾಗಿ ಚರ್ಚೆಗೆತ್ತಿಕೊಳ್ಳುತ್ತಿರುವ ಆಧುನಿಕ ಮಾದರಿಯ ಹತ್ತಿ ಗಿರಣಿಗಳು ಮೈಸೂರು ರಾಜ್ಯದಲ್ಲಿ ಇನ್ನೂ ತಲೆಯೆತ್ತಿರಲಿಲ್ಲ. ಅಲ್ಲದೇ ಈ ಸಂದರ್ಭದಲ್ಲಿ ಹತ್ತಿಯ ರಫ್ತು

ವ್ಯಾಪಾರಕ್ಕಿಂತ ಆಮದಿನ ವ್ಯಾಪಾರವೇ ಹೆಚ್ಚಾಗಿತ್ತು ಎಂಬುದಾಗಿ ಮೇಲಿನ ಅಂಕಿ ಅಂಶಗಳು ದೃಢಪಡಿಸುತ್ತವೆ. ೧೮೮೫-೮೬ರ ವೇಳೆಗೆ ಈ ಪ್ರಮಾಣ ೨,೭೨,೩೧೩ ರೂ. ಮೌಲ್ಯದ ೫೧೩ ಬೇಲ್‌ಗೆ ಆಮದು ವ್ಯಾಪಾರ ಇಳಿಕೆಯನ್ನು ಕಂಡು ರಫ್ತು ವ್ಯಾಪಾರದಲ್ಲಿಯೂ ರೂ. ೧,೯೮,೦೫೮ ಇಳಿಕೆಯಾಗಿತ್ತು[೨೩].

ಈ ಪ್ರಕ್ರಿಯೆ ೧೮೯೦ರ ದಶಕದಲ್ಲಿಯೂ ಮುಂದುವರೆಯಿತು. ಆಂತರಿಕ ವ್ಯಾಪಾರದಲ್ಲಿ ಮೈಸೂರು ಪ್ರಾಂತ್ಯ ಹಿಂದುಳಿದ ಸ್ಥಿತಿಯನ್ನೇ ಎದುರಿಸಬೇಕಾಗಿತ್ತು. ಕಾರಣ ಬ್ರಿಟಿಷ್ ಪ್ರೆಸಿಡೆನ್ಸಿಗಳು ಈ ಸಂದರ್ಭದಲ್ಲಿ ಆರ್ಥಿಕವಾಗಿ ಪ್ರಗತಿಯತ್ತ ಹೆಜ್ಜೆ ಹಾಕಿದ್ದವು. ಆದರೆ ಇನ್ನಿತರ ದೇಶೀಯ ಸಂಸ್ಥಾನಗಳು ಅದು ಮೈಸೂರನ್ನೂ ಒಳಗೊಂಡಂತೆ ಆ ಮಟ್ಟಿಗೆ ಇರಲಿಲ್ಲ. ಅದರಲ್ಲೂ ಮೈಸೂರು ಸಂಸ್ಥಾನ ಕೃಷಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರಿಂದ ವಾಣಿಜ್ಯ ವ್ಯವಹಾರಗಳಿಂದ ಸ್ವಲ್ಪ ಅಂತರವನ್ನು ಕಾಯ್ದುಕೊಂಡಿತ್ತು. ಇದಷ್ಟೇ ಕಾರಣವಲ್ಲದೆ ಮತ್ತೊಂದು ಪ್ರಮುಖ ಅಂಶವೆಂದರೆ ಬ್ರಿಟಿಷ್ ಪ್ರೆಸಿಡೆನ್ಸಿಗಳೊಂದಿಗೆ ವ್ಯಾಪಾರ ಕೈಗೊಳ್ಳಲು ಇಲ್ಲಿ ರೈಲ್ವೇ ಮಾರ್ಗದ ಸೌಲಭ್ಯವಿರಲಿಲ್ಲ[೨೪]. ಹೀಗಿದ್ದರೂ ಸಹ ಇಲ್ಲಿ ಜವಳಿ ಅಂಗಡಿಗಳಿಗೆ ಸಾಕಷ್ಟು ಭರವಿರಲಿಲ್ಲ. ೧೮೯೪-೯೫ರ ಅಂಕಿ ಅಂಶವನ್ನು ಗಮನಿಸಿದರೆ ೨,೫೫೪ ಜವಳಿ ಅಂಗಡಿಗಳಿದ್ದು, ಇವುಗಳಿಂದ ಸರ್ಕಾರಕ್ಕೆ ೧೬,೬೪೦ ರೂಪಾಯಿಗಳಷ್ಟು ತೆರಿಗೆ ಬರುತ್ತಿತ್ತು[೨೪]. ಇದು ಒಟ್ಟಾರೆ ಮೈಸೂರು ರಾಜ್ಯದ ಪರಿಸ್ಥಿತಿಯಾದರೆ ಬೆಂಗಳೂರಿನದ್ದು ಸ್ವಲ್ಪ ಭಿನ್ನವಾಗಿತ್ತು. ಈ ಅವಧಿಯಲ್ಲಿ ಬೆಂಗಳೂರಿನಲ್ಲಿ ಎರಡು ದೊಡ್ಡ ಹತ್ತಿ ಗಿರಣಿಗಳಿದ್ದು ಅವುಗಳು ಉತ್ತಮ ಗುಣಮಟ್ಟದ ಬಟ್ಟೆಗಳ ಉತ್ಪಾದನೆಯಲ್ಲಿ ತೊಡಗಿಕೊಂಡಿದ್ದವು. ಇವುಗಳು ಉಗಿ ಯಂತ್ರದ ಮಗ್ಗಗಳನ್ನು ಹೊಂದಿದ್ದು ಉತ್ಪಾದನೆಯಲ್ಲಿ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿತ್ತು. ಇಂತಹ ಸಂದರ್ಭದಲ್ಲಿ ಇದನ್ನು ಸೂಕ್ಷ್ಮವಾಗಿ ಗಮನಿಸಿದ ಸರ್ಕಾರ ೧೮೯೬ ಡಿಸೆಂಬರ್ ೧ ರಂದು ಒಂದು ಕಾಯಿದೆಯನ್ನು (೧೮೯೬ರ ಕಾಯಿದೆ ನಂ. II) ಜಾರಿಗೆ ತಂದಿತು. ಇದು ವಿಶೇಷವಾಗಿ ಮೈಸೂರು ಮಹಾರಾಜ ಮಿಲ್ಲು ಹಾಗೂ ಬಿನ್ನಿ ಮಿಲ್ಲುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಜಾರಿಗೆ ತಂದ ಕಾಯಿದೆಯಾಗಿತ್ತು ಎಂಬುದು ಗಮನಾರ್ಹ ಅಂಶ. ಇದರ ಪ್ರಕಾರ ಹತ್ತಿ ಬಟ್ಟೆಗಳ ಉತ್ಪಾದನೆಯ ಮೇಲೆ ಶೇ. ೩ $೧/೨$ ರಷ್ಟು ತೆರಿಗೆಯನ್ನು ವಿಧಿಸಲಾಯಿತು[೨೬]. ಈ ಅವಧಿಯಲ್ಲಾದ ಉತ್ಪಾದನೆ ಹಾಗೂ ಅದಕ್ಕೆ ವಿಧಿಸಿದ ತೆರಿಗೆಯನ್ನು ಒಂದು ಅಂಕಿ ಅಂಶದ ಮೂಲಕ ತಿಳಿಯೋಣ[೨೭].

| ಕಾಲಾವಧಿ : ಡಿಸೆಂಬರ್‌ನಿಂದ ಜೂನ್‌ವರೆಗೆ | ಉತ್ಪಾದನೆಯಾದ ಪ್ರಮಾಣ (ಬೇಲ್‌ಗಳಲ್ಲಿ) | | ಮೌಲ್ಯೀಕರಿಸಿದ ಪ್ರಮಾಣ (ಬೇಲ್‌ಗಳಲ್ಲಿ) | ಸ್ವೀಕರಿಸಿದ ತೆರಿಗೆ ರೂ.ಗಳಲ್ಲಿ | ಉತ್ಪಾದನೆಯಾದ ನೂಲಿನ ತೂಕ (ಬೇಲ್‌ಗಳಲ್ಲಿ) |
|---|---|---|---|---|---|
| ೧೮೯೬–೧೮೯೭ | ೩,೧೭,೦೬೧ | ೯,೩೮,೪೦೧ ೮/೯ ಗಜಗಳು<br>೩,೧೬೭ ೧/೨ ಡಿಸೈನ್‌ಗಳು | ೨,೧೮,೪೬೫ ೭/೮ | ೩,೩೭೧ | ೧೯,೫೯,೫೬೮ |
| ೧೮೯೭–೧೮೯೮ | ೬,೧೭,೨೭೮ ೧/೪ | ೧೬,೧೮,೪೨೪ ೧/೩ ೭/೬ ಗಜಗಳು<br>೨೫,೦೯೮ ೫/೬ ಡಿಸೈನ್‌ಗಳು | ೬,೬೫,೫೮೧ ೭/೮ | ೯,೭೯೦ | ೩೪,೯೬,೩೫೪ |
| ೧೮೯೮–೧೮೯೯ | ೪,೦೮,೪೪೭ ೪/೫ ೮/೪ | ೧೦,೬೩,೦೬೯ ೧/೧ ೭/೮ ಗಜಗಳು<br>೨೮,೫೦೩ ೨/೩ ಡಿಸೈನ್‌ಗಳು | ೪,೧೩,೫೯೯ | ೬,೧೬೧ | ೧೯,೬೧,೦೫೮ |

೧೯೦೭–೦೮ರ ವೇಳೆಗೆ ಬಿನ್ನಿ ಮಿಲ್ಲು ನಾಲ್ಕು ವಿಭಾಗಗಳನ್ನು ಹೊಂದಿತ್ತು. ಅವುಗಳು (೧) ನೂಲುಗಳನ್ನು ಒಳಗೊಂಡಂತೆ ಬಟ್ಟೆ ವಿಭಾಗ (೨) ಉಣ್ಣೆ ವಿಭಾಗ (೩) ಬಣ್ಣ (ರಂಗು) ಹಾಕುವ ವಿಭಾಗ ಹಾಗೂ (೪) ಸಿದ್ಧ ಉಡುಪುಗಳ ವಿಭಾಗ. ಈ ವಿಭಾಗಗಳಲ್ಲಿ ವಸ್ತುಗಳ ಮೌಲ್ಯ ಕ್ರಮವಾಗಿ ರೂ. ೮೧೦೬೧೯, ರೂ. ೯೮೩೧೮, ರೂ. ೪೯೯೪೭ ಹಾಗೂ ರೂ.೧೯೭೩೨೭ ಆಗಿದ್ದಿತು[೨೮]. ಯೂರೋಪಿನಲ್ಲಿ ಮೊದಲನೇ ಮಹಾಯುದ್ಧ ಪ್ರಾರಂಭವಾಗುತ್ತಿದ್ದಂತೆ (೧೯೧೪) ವಿಶ್ವಾದ್ಯಂತ ಕೈಗಾರಿಕೆ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ದೊಡ್ಡ ಮಟ್ಟದ ಪೆಟ್ಟು ಬಿದ್ದಿತು. ಆದರೆ ಒಂದು ಗಮನಾರ್ಹ ಸಂಗತಿ ಎಂದರೆ ಮೈಸೂರು ರಾಜ್ಯ ಈ ಪೆಟ್ಟಿನಿಂದ ಪಾರಾಗಿದ್ದರೂ ಸಹ ಬೆಳವಣಿಗೆಯು ನಿಧಾನ ಗತಿಯನ್ನು ತಾಳಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು[೨೯]. ಬೆಂಗಳೂರಿನ ಬಿನ್ನಿ ಮತ್ತು ಕಂಪನಿಯು ಭಾರತದಾದ್ಯಂತ ತನ್ನ ಘಟಕಗಳನ್ನು ಹೊಂದಿತ್ತು. ಅದು ಪ್ರಮುಖವಾಗಿ ಮದ್ರಾಸು, ಹೈದರಾಬಾದ್, ಬಾಂಬೆ, ಕಲ್ಕತ್ತಾ ಇತ್ಯಾದಿ ಕಡೆಗಳಲ್ಲಿ ತನ್ನ ಕಾರ್ಯಚಟುವಟಿಕೆಯಲ್ಲಿ ತೊಡಗಿತ್ತು[೩೦]. ಹೀಗಾಗಿ ಬೆಂಗಳೂರಿನ ಬಿನ್ನಿ ಮಿಲ್ಲು ಕಾರ್ಖಾನೆಯು ದೇಶದ ಇತರೆ ಬಿನ್ನಿ ಮಿಲ್ ಕಾರ್ಖಾನೆಗಳೊಂದಿಗೆ ವಾಣಿಜ್ಯ ವ್ಯಾಪಾರ ಸಂಬಂಧ ಹೊಂದಿದ್ದಿದು ಸಾಮಾನ್ಯ ಸಂಗತಿ. ಹೀಗಾಗಿ ಅನೇಕ ಅನಿಶ್ಚಿತತೆಯ ಸಂದರ್ಭಗಳಲ್ಲಿ ಸವಾಲುಗಳನ್ನು ಮೆಟ್ಟಿನಿಲ್ಲಲು ಸಾಧ್ಯವಾಯಿತು. ಬೆಂಗಳೂರಿನಿಂದ ಉತ್ಪಾದನೆಯಾದ ಬಟ್ಟೆಗಳು ಮೈಸೂರು ಸಂಸ್ಥಾನದ ನಾನಾ ಭಾಗಗಳಿಗೆ ರಫ್ತಾಗುತ್ತಿತ್ತು. ಹಳ್ಳಿಯ ಜನರಿಂದ ನಗರ–ಪಟ್ಟಣಗಳ ಜನರವರೆಗೂ ಗುಣಮಟ್ಟದಲ್ಲಿ ಇದು ತನ್ನ

ಘನತೆಯನ್ನು ಉಳಿಸಿಕೊಂಡಿತ್ತು. ಮದ್ರಾಸ್ ಬಿನ್ನಿ ಮತ್ತು ಕಂಪನಿಯು ಮೈಸೂರು ಸರ್ಕಾರದಿಂದ ಬೆಂಗಳೂರು ಸ್ಟೋರ್ಸ್ ಪರ್ಚೇಸ್ ಕಮಿಟಿಯ ಮೂಲಕ ಸರಕುಗಳನ್ನು ಕೊಂಡಿದ್ದಕ್ಕಾಗಿ ಹಾಗೂ ಆಮದು ಮಾಡಿದ್ದಕ್ಕಾಗಿ ಕ್ಲೀನಿಂಗ್ ಏಜೆಂಟ್ ರೂಪದಲ್ಲಿ ೧೪೦೩೮ ರೂ.ಗಳನ್ನು ಸ್ವೀಕರಿಸಿತ್ತು[೩೧]. ಇದು ಬೆಂಗಳೂರಿನ ಬಿನ್ನಿ ಮಿಲ್ಲು ದೇಶದ ಇನ್ನಿತರ ಬಿನ್ನಿ ಮಿಲ್ಲು ಮತ್ತು ಕಂಪನಿಯೊಂದಿಗೆ ನಿರಂತರ ವ್ಯವಹಾರದಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಿತ್ತು ಎಂಬುದಕ್ಕೆ ನಿದರ್ಶನ.

ಭಾರತದಲ್ಲಿ ೧೯೨೦ಕ್ಕೂ ಪೂರ್ವದಲ್ಲಿ ಜಂಟಿ ಸ್ಟಾಕ್ (ಷೇರು) ಕಂಪನಿಗಳ ಸಂಖ್ಯೆ ೭೯ ಇದ್ದು (೭೮ ಸಾರ್ವಜನಿಕ ಹಾಗೂ ಒಂದು ಖಾಸಗಿ). ಅದು ೧೯೨೦ರ ನಂತರ ೯೪ಕ್ಕೆ (೮೭ ಸಾರ್ವಜನಿಕ ಹಾಗೂ ೭ ಖಾಸಗಿ)[೩೨] ಏರಿಕೆಯಾಗಿದ್ದರ ಪರಿಣಾಮ ಕೈಗಾರಿಕಾ ಚಟುವಟಿಕೆಗಳು ಹೆಚ್ಚಾಯಿತು. ಇದೇ ಅವಧಿಯಲ್ಲಿ (೦೭) ಏಳು ಹೊಸ ಮಿಲ್ಲುಗಳು ದೇಶದಲ್ಲಿ ಪ್ರಾರಂಭವಾದವು. ಮೈಸೂರಿನಲ್ಲಿ ನಲವತ್ತು (೪೦) ಲಕ್ಷ ರೂಪಾಯಿ ಬಂಡವಾಳದೊಂದಿಗೆ ಶ್ರೀಕೃಷ್ಣರಾಜೇಂದ್ರ ಮಿಲ್ಲು ಪ್ರಾರಂಭವಾಯಿತು[೩೩]. ನಲವತ್ತೊಂದು ಬಗೆಯ ಬ್ಯಾಂಕಿಂಗ್ ಸಾಲ ಸೌಲಭ್ಯಗಳು ಈ ಸಂದರ್ಭದಲ್ಲಿ ಪ್ರಾರಂಭವಾಗಿದ್ದರ ಪ್ರಯುಕ್ತ ದೇಶದ ಯಾವುದೇ ಉದ್ದಿಮೆ, ಕೈಗಾರಿಕೆ, ಕಾರ್ಖಾನೆ, ಗಿರಣಿಗಳ ಸ್ಥಾಪನೆಗೆ ಹೆಚ್ಚಿನ ಸಾಲದ ನೆರವು ದೊರೆತಿದ್ದರಿಂದಲೇ ಇಷ್ಟು ದೊಡ್ಡ ಬಂಡವಾಳದಿಂದ ಮೈಸೂರಿನ ಶ್ರೀಕೃಷ್ಣರಾಜೇಂದ್ರ ಮಿಲ್ಲು ಸ್ಥಾಪನೆಯಾಗಲು ಕಾರಣವಾಯಿತು. ಹೀಗಾಗಿ ಈಗಾಗಲೇ ಅಸ್ತಿತ್ವದಲ್ಲಿದ್ದ ಬೆಂಗಳೂರಿನ ಹತ್ತಿ ಗಿರಣಿಗಳು ದೊಡ್ಡ ಪೈಪೋಟಿಯನ್ನು ಎದುರಿಸಬೇಕಾಯಿತು. ಹೀಗಿದ್ದೂ ಬೆಂಗಳೂರಿನ ಬಿನ್ನಿ ಮಿಲ್ಲು ಹಾಗೂ ಮೈಸೂರು ಮಹಾರಾಜ ಮಿಲ್ಲು ತನ್ನ ಉಚ್ಛ್ರಾಯ ಸ್ಥಿತಿಯನ್ನು ಮುಂದುವರೆಸಿ ದೊಡ್ಡ ಪ್ರಮಾಣದ ಲಾಭಾಂಶವನ್ನು ಘೋಷಿಸಿಕೊಳ್ಳುವಲ್ಲಿ ಸಮರ್ಥವಾದವು. 'ಮೈಸೂರು ಹತ್ತಿ ಮತ್ತು ರೇಷ್ಮೆ ಉತ್ಪಾದನಾ ಕಂಪನಿ'ಯ ಆಡಳಿತ ಮಂಡಳಿಯಿಂದ ಹೆಚ್ಚುವರಿಯಾಗಿ ಒಂದು ಮಿಲ್ಲನ್ನು ಪ್ರಾರಂಭಿಸಲು ಬೆಂಗಳೂರಿನಲ್ಲಿ ಅನುಮತಿ ನೀಡಲಾಯಿತು. ಅದೇ ಮಿನರ್ವ ಮಿಲ್ಲು. ಇದಕ್ಕಾಗಿ ಒಂದು ನಿವೇಶನವನ್ನೂ ಮಂಜೂರು ಮಾಡಲಾಯಿತು[೩೪].

ಮೊದಲನೆಯ ಮಹಾಯುದ್ಧದ ಅವಧಿ ಮತ್ತೊಂದು ಆಯಾಮವನ್ನು ಒದಗಿಸಿತು. ೧೯೨೧ನೇ ವರ್ಷ ಭಾರತದ ಹತ್ತಿ ಬಟ್ಟೆ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಮಹತ್ವದ ಘಟ್ಟ ಅಂತಲೇ ಹೇಳಬಹುದು. ಆದರೆ ಉತ್ಪಾದನೆಯಲ್ಲಿ ಹಿನ್ನಡೆಯನ್ನು ಅನುಭವಿಸಿತ್ತೋ? ಅಥವಾ ದೇಶೀಯ

ಮಾರುಕಟ್ಟೆಯಲ್ಲಿ ವಿದೇಶಿ ಸ್ಪರ್ಧೆ ಹೆಚ್ಚಾಗಿತ್ತೋ? ಎಂಬುದರ ಕುರಿತು ಹೇಳಲು ಸ್ವಲ್ಪ ಕಷ್ಟ ಬೆಂಗಳೂರಿನ ಹಿನ್ನೆಲೆಯಿಂದ ನೋಡುವುದಾದರೆ ಯುದ್ಧದ ಅವಧಿಯು ಒಂದು ತಿರುವನ್ನು ಕೊಟ್ಟ ಸಂದರ್ಭ ಅಂತಲೇ ಹೇಳಬಹುದು. ಈ ವೇಳೆಯಲ್ಲಿ ಬೆಂಗಳೂರು ಉಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಲಿ. (ಬಿನ್ನಿಮಿಲ್) ಉತ್ಪಾದನೆಯಲ್ಲಿ ಹೆಚ್ಚಿನ ಏರಿಕೆಯನ್ನು ಕಂಡು ಒಂದು ದೊಡ್ಡ ಉದ್ಯಮ ಅಥವಾ ಗಿರಣಿ ಎಂಬುದಾಗಿ ಹೆಸರಾಗಿತ್ತು. ಯುದ್ಧದಲ್ಲಿ ಪಾಲ್ಗೊಂಡ ಸೈನಿಕರಿಗೆ ಅಗತ್ಯವಿದ್ದ ಬಟ್ಟೆಗಳನ್ನು ಗಣನೀಯ ಪ್ರಮಾಣದಲ್ಲಿ ಒದಗಿಸಿತು[೩೫].

೧೯೩೧-೩೨ರಲ್ಲಿ ಭಾರತದ ಹತ್ತಿ ನೂಲಿನ ಉತ್ಪಾದನೆ ನಲವತ್ತು (೪೦) ಮಿಲಿಯನ್ ಪೌಂಡು ಆಗಿದ್ದು ಇದನ್ನು ಕೈಮಗ್ಗಗಳ ಕೈಗಾರಿಕೆಗೆ ಮಾರಾಟ ಮಾಡುವುದಕ್ಕೆ ಒಪ್ಪಿಗೆಯನ್ನು ನೀಡಲಾಗಿತ್ತು. ಪರಿಣಾಮವಾಗಿ ಅಂದಾಜು (೩೨) ಮೂವತ್ತೆರಡು ಮಿಲಿಯನ್ ಪೌಂಡು ಹತ್ತಿಯನ್ನು ಮಾರಾಟ ಮಾಡಲಾಯಿತು[೩೬]. ಇದೇ ಅವಧಿಯಲ್ಲಿ 'ಹ್ಯಾರ್ಡಿ' ಅವರು ವರದಿ ಮಾಡುತ್ತಾ ಬಾಂಬೆ ಮಿಲ್ಲುಗಳು ೧೯೨೮ರಲ್ಲಿ ಒಟ್ಟಾರೆ ಉತ್ಪಾದನೆಯಾದ ನೂಲಿನಲ್ಲಿ ಶೇ. ೩೦ರಷ್ಟನ್ನು ಬಾಂಬೆ ಹೊರಗಿನ ಇನ್ನಿತರೆ ಗಿರಣಿಗಳಿಗೆ ಮಾರಾಟ ಮಾಡಿತು ಎಂಬುದಾಗಿ ತಿಳಿಸುತ್ತಾರೆ[೩೭]. ಬೆಂಗಳೂರಿನ ಹತ್ತಿ ಗಿರಣಿಗಳೂ ಬಾಂಬೆಯಿಂದ ನೂಲನ್ನು ಆಮದು ಮಾಡಿಕೊಳ್ಳುತ್ತಿತ್ತು. ೧೯೩೧-೩೨ರಲ್ಲಿ ಮೈಸೂರು ರಾಜ್ಯದಲ್ಲಿ ಒಟ್ಟಾರೆ ಗಿರಣಿಗಳಿಂದ ಬಳಸಲಾದ ಹತ್ತಿಯು ೫೧,೧೭೫ ಬೇಲ್‌ನಷ್ಟು, ಅದು ಹಿಂದಿನ ವರ್ಷಕ್ಕೆ ಹೋಲಿಸಿದರೆ (೪೬,೧೫೧ ಬೇಲ್) ಉತ್ತಮ ರೀತಿಯಲ್ಲಿಯೇ ಏರಿಕೆಯನ್ನು ಕಂಡಿತ್ತು[೩೮]. ಆದರೆ ೧೯೩೬ರಲ್ಲಿ ರಾಜ್ಯದಲ್ಲಿ ಕಚ್ಚಾ ಹತ್ತಿಯ ರಫ್ತು ವ್ಯಾಪಾರ ದೊಡ್ಡ ಮಟ್ಟದಲ್ಲಿ ಕುಸಿತವನ್ನು  ಕಂಡಿತು. ಅದು ಕಳೆದ ವರ್ಷ (೧೯೩೪-೩೫) ೧೭,೭೬,೪೬೦ ರೂ. ಮೌಲ್ಯದ ೮೯,೨೪೨ ಮೌಂಡ್‌ಗಳಷ್ಟಿದ್ದಿದ್ದು ಈ ವರ್ಷದ ಕೊನೆಯ ವೇಳೆಗೆ ೬,೭೪,೭೯೬ ರೂ. ಮೌಲ್ಯದ ೨೫,೯೬೮ ಮೌಂಡ್‌ಗಳಿಗೆ ಇಳಿದಿತ್ತು[೩೯].

೧೯೪೭ರಲ್ಲಿ ಹತ್ತಿ ಆಮದು ಮತ್ತು ರಫ್ತು ವ್ಯಾಪಾರದಲ್ಲಿ ಬಹುಮುಖ್ಯವಾದ ಸ್ಥಿತ್ಯಂತರವೆಂದರೆ ಈ ವರ್ಷದಲ್ಲಿ ಕಚ್ಚಾ ಹತ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯಾಪಾರ ವಹಿವಾಟು ನಡೆಯದಿರುವುದು[೪೦]. ಇದಕ್ಕೆ ಕಾರಣ ದೇಶ ಸ್ವಾತಂತ್ರ್ಯಗೊಳ್ಳುವ ಪ್ರಕ್ರಿಯೆಯಲ್ಲಿ ಅಂತಿಮಘಟ್ಟ ತಲುಪಿದ್ದು ಹಾಗೂ ಸ್ವಾತಂತ್ರ್ಯಗೊಂಡಿದ್ದರ ಪರಿಣಾಮದಿಂದ. ಆದರೆ ರಾಜ್ಯದಲ್ಲಿ

ಎಂದಿನಂತೆ ಒಂಭತ್ತು ದೊಡ್ಡ ಹತ್ತಿ ಗಿರಣಿಗಳು ಕಾರ್ಯನಿರ್ವಹಿಸುತ್ತಿದ್ದವು. ಈ ಅವಧಿಯಲ್ಲಿ ಒಟ್ಟಾರೆ ೫೩,೧೦,೮೦,೯೪೨ ಗಜಗಳಷ್ಟು ಚೂರು ಹತ್ತಿ ವಸ್ತುಗಳನ್ನು ಉತ್ಪಾದಿಸಿದರೆ, ೨,೭೦,೨೧,೮೮೬ ಬೇಲ್‌ಗಳಷ್ಟು ನೂಲು ಹತ್ತಿಯನ್ನು ಉತ್ಪಾದಿಸಲಾಗಿತ್ತು. ೧೯೪೮ರಲ್ಲಿ ರಾಜ್ಯವು ಗಿರಣಿಗಳನ್ನು ಮೇಲೆತ್ತುವ ಉದ್ದೇಶದಿಂದ ಹಾಗೂ ನಷ್ಟದಿಂದ ಹೊರಬರಲು ಹತ್ತಿ ಬಟ್ಟೆಯ ಮೇಲಿನ ನಿಯಂತ್ರಣವನ್ನು ಹಿಂತೆಗೆದುಕೊಂಡಿತು[೪೧].

ಸ್ವಾತಂತ್ರ್ಯ ನಂತರ ಭಾರತದ ಹತ್ತಿ ಬಟ್ಟೆ ಕೈಗಾರಿಕೆಗಳು ಅಥವಾ ಗಿರಣಿಗಳು ಹಲವು ಸ್ಥಿತ್ಯಂತರಕ್ಕೆ ಒಳಗಾಗಿದ್ದವು. ಹತ್ತಿ ದಾರವನ್ನು ನೂಲುವ ಕೈಮಗ್ಗಗಳು ಸಾಕಷ್ಟು ಪ್ರಮಾಣದಲ್ಲಿ ತಲೆಯೆತ್ತಿದ್ದವು. ಹಳೆಯ ಸಾಂಪ್ರದಾಯಿಕ ತಂತ್ರಜ್ಞಾನ ಶೈಲಿಯ ಗಿರಣಿಗಳಂತೂ (ಅದು ಬಿನ್ನಿ ಮಿಲ್ಲು, ಮಹಾರಾಜ ಮಿಲ್ಲು, ಮಿನರ್ವ ಮಿಲ್ಲು, ಶ್ರೀಕೃಷ್ಣರಾಜೇಂದ್ರ ಮಿಲ್ಲು ಇತ್ಯಾದಿ ಮಾದರಿಗಳದ್ದು) ಇವುಗಳಿಗೆ ಪೈಪೋಟಿಯನ್ನು ದೊಡ್ಡ ಮಟ್ಟದಲ್ಲಿಯೇ ನೀಡಬೇಕಾಗಿತ್ತು. ಮೈಸೂರು ರಾಜ್ಯವೂ ಸಹ ಇದಕ್ಕೆ ಹೊರತಾಗಿರಲಿಲ್ಲ. ೧೯೬೧-೬೨ರಲ್ಲಿ ರಾಜ್ಯದಲ್ಲಿ ಇವುಗಳ ಸಂಖ್ಯೆ ೧೦೨೩೬೫ ರಷ್ಟಿದ್ದವು. ಅಲ್ಲದೇ ಇವುಗಳು 'ಹತ್ತಿ ಜವಳಿ ನಿಯಂತ್ರಣ ಆಜ್ಞೆ' (ಕಾಟನ್ ಟೆಕ್ಸ್‌ಟೈಲ್ ಕಂಟ್ರೋಲ್ ಆರ್ಡರ್)ಯ ಅಡಿಯಲ್ಲಿ ಕೈ ಮಗ್ಗಗಳನ್ನು ನೋಂದಣಿ ಮಾಡಿಸುವುದು ಕಡ್ಡಾಯವಾಗಿತ್ತು[೪೨]. ಈ ವರ್ಷದ ಕೊನೆಯ ವೇಳೆಗೆ ರಾಜ್ಯದ ಶೇ. ೭೫ರಷ್ಟು ಮಗ್ಗಗಳು 'ಸಹಕಾರ'ದ ಅಡಿಯಲ್ಲಿ ಗುರುತಿಸಿಕೊಂಡವು. ಈ ಅವಧಿಯಲ್ಲಿ ಸಹಕಾರದ ಅಡಿಯಲ್ಲಿ (ಕೋಆಪರೇಟಿವ್ ಫೋಲ್ಡ್) ಬರುತ್ತಿದ್ದ ಹತ್ತಿ, ಉಣ್ಣೆ ಹಾಗೂ ರೇಷ್ಮೆ ಕೈ ಮಗ್ಗಗಳ ಅಂಕಿ-ಅಂಶವನ್ನು ಗಮನಿಸೋಣ[೪೩].

| | |
|---|---|
| ಹತ್ತಿ ಕೈ ಮಗ್ಗಗಳು | ೮೨,೭೨೬ |
| ಉಣ್ಣೆ ಕೈ ಮಗ್ಗಗಳು | ೧೪,೪೪೦ |
| ರೇಷ್ಮೆ ಕೈ ಮಗ್ಗಗಳು | ೪,೪೮೩ |
| **ಒಟ್ಟು** | ೧,೦೧,೬೪೯ |

ಈ ಸಹಕಾರ ವಲಯ ಹಾಗೂ ಹೊರಗಿನ ಮಗ್ಗಗಳ ಅಂದಾಜು ಉತ್ಪಾದನೆಯು ಸುಮಾರು ೬೦ ಮಿಲಿಯನ್ ಗಜಗಳಷ್ಟಿದ್ದು, ಸಹಕಾರದ ಅಡಿಯಲ್ಲಿ ಮಗ್ಗಗಳ ಉತ್ಪಾದನೆಯು ಸುಮಾರು ೪೪ ಮಿಲಿಯನ್ ಗಜಗಳಷ್ಟಿತ್ತು[೪೪]. ಸಹಕಾರ ಸಂಸ್ಥೆಯು ಇವುಗಳು ಸ್ಥಾಪನೆ, ಮುಂದುವರಿಕೆಗೆ ಸಾಲ, ಅನುದಾನದ ರೂಪದಲ್ಲಿ ನೇರವಾಗಿ ಉತ್ತೇಜನವನ್ನು ನೀಡುವಲ್ಲಿಯೂ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿತ್ತು. ಇದೇ ವರ್ಷದಲ್ಲಿ ಕೈಮಗ್ಗಗಳ ಯೋಜನೆಯಡಿಯಲ್ಲಿ ೩೨.೫೦ ಲಕ್ಷ ರೂ.ಗಳನ್ನು ಸಾಲ ಅನುದಾನದ ರೂಪದಲ್ಲಿ ಹಂಚಿಕೆ ಮಾಡಿತು[೪೫]. ವರ್ಗವಾರು ಹಂಚಿಕೆಯಾದ ಹಣವು ಈ ರೀತಿ ಇದೆ.

| ರೂ.ಗಳು (ಲಕ್ಷಗಳಲ್ಲಿ) | ಸಾಲ | ಅನುದಾನ | ಒಟ್ಟು |
|---|---|---|---|
| ಹತ್ತಿ ಯೋಜನೆಗಳು | ೫.೫೯ | ೨೧.೩೧ | ೨೬.೯೦ |
| ಉಣ್ಣೆ ಯೋಜನೆಗಳು | ೧.೨೩ | ೧.೫೨ | ೨.೭೫ |
| ರೇಷ್ಮೆ ಯೋಜನೆಗಳು | ೨.೬೫ | ೦.೨೦ | ೨.೮೫ |
| ಒಟ್ಟು | ೯.೪೭ | ೨೩.೦೩ | ೩೨.೫೦ |

ಇದೊಂದು ಕಡೆಯಾದರೆ ಮತ್ತೊಂದು ಕಡೆ ನೇಯ್ಗೆ ವರ್ಗಗಳು ರಾಜ್ಯಾದ್ಯಂತ ಪ್ರಾಬಲ್ಯತೆಯನ್ನು ಪಡೆದಿದ್ದವು. ನೇಕಾರರ ಹಿತ ದೃಷ್ಟಿಯಿಂದ 'ನೇಕಾರರ ಸಹಕಾರ ಸಂಸ್ಥೆಗಳು' (ವೀವರ್ಸ್ ಕೋ-ಆಪರೇಟಿವ್ ಸೊಸೈಟೀಸ್) ಅಸಂಖ್ಯ ಪ್ರಮಾಣದಲ್ಲಿ ತಲೆ ಎತ್ತಿದವು. ಇವರಿಗೆ ಅಪೆಕ್ಸ್ ಬ್ಯಾಂಕುಗಳು ಹಾಗೂ ಭಾರತದ ರಿಸರ್ವ್ ಬ್ಯಾಂಕ್ ಸಾಲ ಸೌಲಭ್ಯ ನೀಡಲು ಮುಂದೆ ಬಂದವು. ಈ ಸಂಸ್ಥೆಯ ಅಡಿಯಲ್ಲಿ ರಾಷ್ಟ್ರ ಮಟ್ಟದ ಅದಿವೇಶನಗಳನ್ನು ಪ್ರತಿವರ್ಷ ಜನವರಿ ತಿಂಗಳಲ್ಲಿ ಏರ್ಪಡಿಸುತ್ತಿದ್ದವು[೪೬]. ೧೯೬೨ರ ವೇಳೆಗೆ ಇದರ ಒಂಭತ್ತನೆಯ ಸಮ್ಮೇಳನವಾಗಿತ್ತು. ಇದಕ್ಕೆ ನೇಕಾರರೂ ಹಾಗೂ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿ ಮನ್ನಣೆ ಗಳಿಸಿದವು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬಹಳ ಮುಖ್ಯವಾಗಿರುವ ಸ್ಥಿತ್ಯಂತರವೆಂದರೆ ವಸಾಹತು ಕಾಲದಲ್ಲಿ ಪ್ರಾರಂಭವಾಗಿ ಸ್ವತಂತ್ರ್ಯ ನಂತರದಲ್ಲೂ ಕಾರ್ಯ ನಿರ್ವಹಿಸುತ್ತಿದ್ದ ಸಾಂಪ್ರದಾಯಿಕ ಹತ್ತಿ ಗಿರಣಿಗಳು ಭೌತಿಕವಾಗಿ ಸ್ಥಾನ ಪಲ್ಲಟಕ್ಕೆ ವೇದಿಕೆಯನ್ನು ಸಿದ್ಧಪಡಿಸಿಕೊಳ್ಳುತ್ತಿದ್ದವು. ಏಕೆಂದರೆ ಜನತೆ

ಪರ್ಯಾಯವನ್ನು ಹುಡುಕಲು ಆರಂಭಿಸಿದ್ದರು. ಸರ್ಕಾರವೂ ಸಹ ಈ ಕೈಮಗ್ಗಗಳು ಹಾಗೂ ನೇಕಾರರ ಸಂಸ್ಥೆಗಳ ಬೆಂಬಲಕ್ಕೆ ಕೈ ಜೋಡಿಸಿತ್ತು. ೧೯೬೫ನೇ ಜೂನ್ ೩೦ರಂದು ರಾಜ್ಯದಲ್ಲಿ ಸಹಕಾರಿ ನೂಲುವ ಗಿರಣಿಗಳು (ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್) ಸ್ಥಾಪನೆಯಾದವು[೪೭]. ಈ ಗಿರಣಿಗಳು ಸಣ್ಣ ಪ್ರಮಾಣದ ಲಾಭವನ್ನು ತಂದುಕೊಡುವ ಸಾಮರ್ಥ್ಯ ಹೊಂದಿದ್ದರೂ ಸಹ ಸಾಂಪ್ರದಾಯಿಕ ಹತ್ತಿ ಗಿರಣಿಗಳಿಗೆ ದೊಡ್ಡ ಪ್ರಮಾಣದ ಪೈಪೋಟಿ ನೀಡುವ ಸಾಮರ್ಥ್ಯ ಪಡೆದಿದ್ದವು. ಯಾವುದೋ ಒಂದು ಪ್ರದೇಶವನ್ನು ಅಥವಾ ನಗರವನ್ನು ಪ್ರತಿನಿಧಿಸುತ್ತಿದ್ದ ನಮ್ಮ ರಾಜ್ಯದ ಹೆಸರು ಬದಲಾಗುತ್ತಿದ್ದಂತೆ ಮಗ್ಗಗಳು ಹಾಗೂ ನೇಕಾರರ ಸಹಕಾರ ಸಂಸ್ಥೆಗಳೊಂದಿಗಿನ ರಾಜ್ಯ ಸರ್ಕಾರದ ಒಡನಾಟವೂ ಹೆಚ್ಚಾಯಿತು. ಮಗ್ಗಗಳ ಅಭಿವೃದ್ಧಿ ಕಾರ್ಯಕ್ರಮ (ಲೂಮ್ಸ್ ಡೆವೆಲಪ್‌ಮೆಂಟ್ ಪ್ರೋಗ್ರಾಂ)ಗಳಿಗೆ ತೀವ್ರವಾದ ಉತ್ತೇಜನ ನೀಡಬೇಕು ಎನ್ನುವ ಬೇಡಿಕೆಯು ಹೆಚ್ಚಾಯಿತು[೪೮]. ಕರ್ನಾಟಕ ಸರ್ಕಾರವು ಇದಕ್ಕೆ ಸಕಾರಾತ್ಮಕವಾಗಿಯೇ ಸ್ಪಂದಿಸಿತು. ಹೀಗಾಗಿ ರಾಜ್ಯಾದ್ಯಂತ ವಿವಿಧ ಬಗೆಯ ಸಹಕಾರ ಸಂಸ್ಥೆಗಳು ತಲೆ ಎತ್ತಿದವು. 'ಜನತಾ ಬಟ್ಟೆ'ಗಳ ಉತ್ಪಾದನೆಯು 'ಬೆಂಗಳೂರು ಹಾಗೂ ಕರ್ನಾಟಕದ ಕೈಮಗ್ಗ ಅಭಿವೃದ್ಧಿ ಸಂಸ್ಥೆ'ಯ[೪೯] ಅಡಿಯಲ್ಲಿ ತನ್ನ ಕಾರ್ಯವನ್ನು ಯಶಸ್ವಿಯಾಗಿ ಮುಂದುವರೆಸಿತು. ಈ ಸಂದರ್ಭದಲ್ಲಿ ಇವುಗಳ ಪೈಪೋಟಿಯನ್ನು ಎದುರಿಸುವ ಹಾಗೂ ವ್ಯಾಪಾರದ ಬೆಳವಣಿಗೆಯನ್ನು ಕಾಯ್ದುಕೊಳ್ಳುವ ಹಿನ್ನೆಲೆಯಿಂದ ಬಿನ್ನಿಮಿಲ್ಲು ಪರ್ಯಾಯ ಮಾರ್ಗವನ್ನು ಕಂಡುಕೊಳ್ಳಲು ಪ್ರಯತ್ನಿಸಿತು. ಶಾಲೆಗಳಲ್ಲಿ ಮಕ್ಕಳು ಧರಿಸುವ ಸಮವಸ್ತ್ರಗಳನ್ನು ಸ್ವತಃ ಬಿನ್ನಿಮಿಲ್ಲು ಪೂರೈಸಲು ಮುಂದಾಗಿ ತನ್ನ ವ್ಯವಹಾರದ ಪಥ ಅಥವಾ ಟ್ರ್ಯಾಕ್ ಅನ್ನು ಬದಲಿಸಿಕೊಂಡು ಮುನ್ನಡೆಯುವ ನಿಲುವನ್ನು ತಾಳಿತು[೫೦]. ಆದರೆ ಈ ಎಲ್ಲಾ ಕಸರತ್ತುಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಒಂದು ರೀತಿಯಲ್ಲಿ ಬಿನ್ನಿಮಿಲ್ಲು ತನ್ನ ಅವಸಾನದ ಪ್ರಕ್ರಿಯೆಯ ಹೊಸಲಿಗೆ ಬಂದು ನಿಂತಿತ್ತು ಎಂತಲೇ ಹೇಳಬಹುದು.

### ೪.೪. ವಿದೇಶಿ ವಾಣಿಜ್ಯ ಮತ್ತು ವ್ಯಾಪಾರ

ಮೈಸೂರು ಸಂಸ್ಥಾನ ವಸಾಹತು ಕಾಲದ ಪ್ರಾರಂಭದಲ್ಲಿ ಹತ್ತಿ ಬಟ್ಟೆ ವ್ಯಾಪಾರದಲ್ಲಿ ತನ್ನ ಬಾಹುವನ್ನು ಭಾರತದಿಂದಾಚೆಗೆ ವಿಸ್ತರಿಸಿತ್ತು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಆಧುನಿಕ ಮಾದರಿಯ ಗಿರಣಿಗಳು ಇಲ್ಲಿ ಪ್ರಾರಂಭವಾಗಿದ್ದೇ ೧೮೮೦ರ ನಂತರದ ದಿನಗಳಲ್ಲಿ. ಅದರಲ್ಲೂ ಬೆಂಗಳೂರಿನಲ್ಲಿ ಮೊದಲಿಗೆ ಎರಡು ಗಿರಣಿಗಳು ೧೮೮೦ರ ದಶಕದಲ್ಲಿ ಪ್ರಾರಂಭವಾದವು. ಹಾಗಿದ್ದೂ

ಈ ಎರಡು ಗಿರಣಿಗಳೂ ಪ್ರಾರಂಭದಲ್ಲಿಯೇ ವಿದೇಶಗಳೊಂದಿಗೆ ವ್ಯವಹರಿಸುವ ಸಾಮರ್ಥ್ಯ ಪಡೆದಿರಲಿಲ್ಲ. ಹೀಗಾಗಿ ಮೈಸೂರು ಸಂಸ್ಥಾನದಲ್ಲಿ ಪರಿಗಣಿಸಬಹುದಾದ ಆಮದು ಹಾಗೂ ರಫ್ತು ವ್ಯಾಪಾರವೆಂದರೆ ಕಾಫಿ, ಅಡಿಕೆ ಮತ್ತು ಆಹಾರ ದಾನ್ಯಗಳನ್ನು ರಫ್ತು ಮಾಡುತ್ತಿದ್ದರೆ, ಬಟ್ಟೆಗಳು ಮತ್ತು ಇನ್ನಿತರ ಯೂರೋಪಿನಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಮೈಸೂರು ರಾಜ್ಯವು ಈ ಅವಧಿಯಲ್ಲಿ ರೈಲ್ವೆ ಮಾರ್ಗವನ್ನು ಹೊಂದಿರಲಿಲ್ಲ ಹಾಗೂ ಯಾವುದೇ ಕರಾವಳಿ ತೀರ ಪ್ರದೇಶಗಳ ಭೌಗೋಳಿಕ ಸೌಲಭ್ಯವನ್ನು ಹೊಂದಿರಲಿಲ್ಲ. ಆದಾಗ್ಯೂ ೧೮೯೦ರ ದಶಕದಲ್ಲಿ ಸಂಸ್ಥಾನದ ಒಟ್ಟಾರೆ ಆಮದು-ರಫ್ತು ವ್ಯಾಪಾರದ ಕುರಿತು ಉಪ-ಆಯುಕ್ತರು ವರದಿ ಮಾಡಿದ್ದಾರೆ[೫೧]. ಅದರ ಅಂಕಿ ಅಂಶಗಳು ಹೀಗಿವೆ.

| ವರ್ಷಗಳು | ರಫ್ತು (ರೂ.ಗಳಲ್ಲಿ) | ಆಮದು (ರೂ.ಗಳಲ್ಲಿ) |
|---|---|---|
| ೧೮೯೧-೯೨ | ೩,೩೨,೭೧,೪೫೦ | ೩,೮೩,೩೪,೭೯೨ |
| ೧೮೯೨-೯೩ | ೬,೦೩,೭೦,೦೪೫ | ೩,೩೬,೮೩,೧೧೧ |
| ೧೮೯೩-೯೪ | ೫,೬೭,೨೦,೬೫೬ | ೩,೩೩,೫೩,೭೩೭ |
| ೧೮೯೪-೯೫ | ೭,೭೯,೦೭,೧೮೭ | ೩,೮೭,೨೫,೬೩೬ |

ಈ ಅಂಕಿ ಅಂಶವನ್ನು ಗಮನಿಸಿದರೆ ಆಮದಿನ ಮೌಲ್ಯಕ್ಕಿಂತ ರಫ್ತಿನ ಮೌಲ್ಯದಲ್ಲಿ ಏರಿಕೆಯನ್ನು ಕಾಣಬಹುದು. ಆಮದು ಮೌಲ್ಯವು ೧೮೯೧ ರಿಂದ ೧೮೯೪ರ ವೇಳೆಯಲ್ಲಿ ಕೇವಲ ೪ ಲಕ್ಷ ರೂ.ಗಳ ಏರಿಕೆಯನ್ನು ಕಂಡರೆ ರಫ್ತು ಮೌಲ್ಯವು ಇದೇ ಅವಧಿಯಲ್ಲಿ ೪ ಕೋಟಿ ರೂ.ಗಳಿಗಿಂತಲೂ ಅಧಿಕ ಏರಿಕೆಯನ್ನು ಕಂಡಿದೆ. ಅಂದರೆ ಮೈಸೂರು ಸಂಸ್ಥಾನವು ಒಟ್ಟಾರೆ ಆಯಾತ-ನಿರ್ಯಾತ ವ್ಯಾಪಾರದಲ್ಲಿ ಸಮತೋಲನವನ್ನು ಕಾಯ್ದುಕೊಂಡಿತ್ತು.

ಕಚ್ಚಾ ಹತ್ತಿಯ ಹಿನ್ನೆಲೆಯಲ್ಲಿ ಮೈಸೂರಿನ ಆಮದು-ರಫ್ತು ವ್ಯಾಪಾರದ ಬಗ್ಗೆಯೂ ದಾಖಲೆಗಳು ಲಭ್ಯವಿದ್ದು ಇದನ್ನು ಕೋಷ್ಟಕದ ಮೂಲಕ ನೀಡಲಾಗಿದೆ[೫೨].

**ಕಚ್ಚಾ ಹತ್ತಿ**

| ವರ್ಷ | ರಫ್ತು | | ಆಮದು | |
|---|---|---|---|---|
| | ಪ್ರಮಾಣ ಟನ್‌ಗಳಲ್ಲಿ | ಸರಾಸರಿ ಮೌಲ್ಯ (ರೂ.ಗಳಲ್ಲಿ) | ಪ್ರಮಾಣ ಟನ್‌ಗಳಲ್ಲಿ | ಸರಾಸರಿ ಮೌಲ್ಯ (ರೂ.ಗಳಲ್ಲಿ) |
| ೧೮೯೧-೯೨ | ೧೭೮ | ೭೧,೧೫೨ | ೨೦೨೫ | ೭,೭೭,೯೮೮ |
| ೧೮೯೨-೯೩ | ೨೦೭ | ೮೧,೩೨೯ | ೨೧೬ | ೧,೨೧,೧೩೨ |
| ೧೮೯೩-೯೪ | ೨೦೦ | ೮೨,೬೬೧ | ೨೬೬ | ೧,೫೦,೪೭೫ |
| ೧೮೯೪-೯೫ | ೭೫೭ | ೪,೬೫,೦೩೦ | ೮೪೭ | ೨,೫೩,೪೯೯ |
| ೧೮೯೭-೯೮ | ೩೦೫೯ | ೫,೫೫,೮೫೦ | ೧೦೦೪ | ೫,೫೬,೦೪೪ |
| ೧೮೯೭-೯೮ ಹತ್ತಿಯ ದಾರ | ೩೨೩ | ೧,೮೦,೪೮೦ | ೧೪೮೦ | ೧೦,೪೯,೯೮ |

ಕಚ್ಚಾ ಹತ್ತಿಯಲ್ಲಿ ಮೈಸೂರು ಬಾಹ್ಯ ಮೂಲವನ್ನು ಅವಲಂಬಿಸಿರುವುದು ಈ ಮೇಲಿನ ಅಂಕಿ ಅಂಶದಿಂದ ದೃಢಪಡುತ್ತದೆ. ಪ್ರಾರಂಭದಲ್ಲಿ ಆಮದು ಮೇಲುಗೈ ಸಾಧಿಸಿದ್ದು ಕೊನೆಯ ವರ್ಷ ಅಂದರೆ ೧೮೯೭-೯೮ರಲ್ಲಿ ರಫ್ತು ವ್ಯಾಪಾರ ಆಮದುಗಿಂತ ಏರಿಕೆಯಾಗಿದೆ. ಆದರೆ ಮೌಲ್ಯದಲ್ಲಿ ಹೊರಗಿನ ಹತ್ತಿಗೆ ಹೆಚ್ಚು ಬೆಲೆಯಿದ್ದು, ಮೈಸೂರು ರಾಜ್ಯದ ಹತ್ತಿಯು ಕಳಪೆ ಗುಣಮಟ್ಟದ್ದಾಗಿದೆ ಎಂಬುದಾಗಿ ಇದರಿಂದ ತಿಳಿಯಬಹುದು. ಬೆಂಗಳೂರು ಹಾಗೂ ಮೈಸೂರು ನಗರಗಳಲ್ಲಿ ಹತ್ತಿ ಗಿರಣಿಗಳು ಸ್ಥಿರವಾಗಿ ಕಾರ್ಯಚರಣೆಗೊಂಡ ನಂತರ ಮೈಸೂರು ಸಂಸ್ಥಾನವು ಹತ್ತಿಯ ದಾರ (ಕಾಟನ್ ಥ್ರೆಡ್)ದ ವ್ಯಾಪಾರಕ್ಕೂ ಕೈ ಹಾಕಿತು. ಆದರೆ ಇದರ ರಫ್ತು-ಆಮದುಗಳ ನಡುವೆ ಅಜಗಜಾಂತರ ವ್ಯತ್ಯಾಸ ಕಂಡುಬಂದಿದೆ. ಅಂದರೆ ಮೈಸೂರು ಸಂಸ್ಥಾನದ ಬೇಡಿಕೆಯನ್ನು ಪೂರೈಸಲು ಬೆಂಗಳೂರಿನ ಗಿರಣಿಗಳಿಂದಾಗಲಿ (ಮೈಸೂರು ಹಾಗೂ ಬಿನ್ನಿ ಮಿಲ್ಲು) ಅಥವಾ ಮೈಸೂರಿನ ಗಿರಣಿಯಿಂದಾಗಲಿ (ಕೆ.ಆರ್. ಮಿಲ್ಲು) ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಹತ್ತಿ ಬಟ್ಟೆಯಲ್ಲಿ ನಾವು ಆಮದು ರೂಪದಲ್ಲಿಯೇ ದುಬಾರಿ ಬೆಲೆ ತೆತ್ತು ತರಬೇಕಾಗಿತ್ತು.

೧೯೦೪-೦೫ ರ ವೇಳೆಗೂ ಸಹ ಭಾರತ ಹಾಗೂ ಮೈಸೂರು ಸಂಸ್ಥಾನ ಹತ್ತಿ ನೂಲನ್ನು ಯೂರೋಪಿನಿಂದ ಆಮದು ಮಾಡಿಕೊಳ್ಳುತ್ತಿತ್ತು[೫೩]. ೧೯೨೦-೨೧ರಲ್ಲಿ ವ್ಯಾಪಾರಿ ಸಮತೋಲನವು

ರಾಜ್ಯದ ವಿರುದ್ಧವಾಗಿದ್ದಿತು. ಆದರೆ ೧೯೨೨ರ ವೇಳೆಗೆ ಸುಧಾರಣೆಯಾಯಿತು. ಕಚ್ಚಾ ವಸ್ತುಗಳಿಗೆ ಬೇಡಿಕೆಯು ಹೆಚ್ಚಾಯಿತು. ಒಟ್ಟಾರೆ ೧೯೨೨ರಲ್ಲಿ ನಮ್ಮ ರಾಜ್ಯದ ಆಮದು ಮೌಲ್ಯ ಅಂದಾಜು ೧೬.೩೯ ಕೋಟಿ ಇದ್ದು, ರಫ್ತು ೧೬.೮೧ ಕೋಟಿ ಇದ್ದಿತು. ಅಂದರೆ ಆಮದಿಗಿಂತ ರಫ್ತು ಮೌಲ್ಯವೇ ಸ್ವಲ್ಪ ಮಟ್ಟಿಗೆ ಹೆಚಾಗಿತ್ತು. ಆದಾಗ್ಯೂ ಕಚ್ಚಾ ಹತ್ತಿ, ರೇಷ್ಮೆ ಹಾಗೂ ಉಣ್ಣೆಯ ರಫ್ತಿನಲ್ಲಿ ಕುಸಿತ ಉಂಟಾಯಿತು[೫೪]. ಅದಕ್ಕೆ ಕಾರಣ ಈ ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ಎರಡು ಹೊಸ ಗಿರಣಿಗಳು ಪ್ರಾರಂಭಾವಾಗಿದ್ದು, ಸ್ಥಳೀಯ ಕಚ್ಚಾ ಹತ್ತಿ, ರೇಷ್ಮೆ ಹಾಗೂ ಉಣ್ಣೆಯನ್ನು ತನ್ನ ಗಿರಣಿಗಳಲ್ಲಿ ಸಿದ್ಧ ವಸ್ತುಗಳ ಉತ್ಪಾದನೆಗೆ ಬಳಸಿಕೊಳ್ಳುತ್ತಿದ್ದವು.

೨೦ನೇ ಶತಮಾನದ ಪ್ರಥಮಾರ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಹತ್ತಿ ಬೆಳೆಯುವ ಪ್ರದೇಶಗಳು ಹಾಗೂ ವಿವಿಧ ತಳಿಗಳ ಸಮೀಕ್ಷೆಯನ್ನು ಕೆಳಕಂಡ ಪಟ್ಟಿಯ ಮೂಲಕ ತಿಳಿಸಲಾಗಿದೆ[೫೫].

| ಹತ್ತಿ ತಳಿ ಮತ್ತು ಗುಣಮಟ್ಟ | ಬೆಳೆಯುವ ಪ್ರದೇಶಗಳು | ವಿಶ್ವದ ಬೆಳೆ ೫೦೦ ಬೇಲ್‌ಗಳಲ್ಲಿ | ಸಾಮ್ರಾಜ್ಯದ ಷೇರು ಬೇಲ್‌ಗಳಲ್ಲಿ | ಶೇಕಡಾವಾರು |
|---|---|---|---|---|
| ಬೆಸ್ಟ್ ಸೀ ಐಲ್ಯಾಂಡ್ | ಐಲ್ಯಾಂಡ್<br>ಕರೋಲಿನಾ<br>ವೆಸ್ಟ್ ಇಂಡೀಸ್ | ೮,೦೦೦<br>೪,೦೦೦ | | |
| | | ೧೨,೦೦೦ | ೪,೦೦೦ | ೩೩ |
| ಸೀ ಐಲ್ಯಾಂಡ್ | ಫ್ಲೋರಿಡಾ ಮತ್ತು ಜಾರ್ಜಿಯಾ<br>ವೆಸ್ಟ್ ಇಂಡೀಸ್ | ೭೦,೦೦೦<br>೨,೦೦೦ | | |
| ಬೆಸ್ಟ್ ಈಜಿಪ್ಷಿಯನ್ | ಈಜಿಪ್ಟ್ | ೫,೫೦,೦೦೦ | | |
| | | ೬,೨೨,೦೦೦ | ೫,೫೨,೦೦೦ | ೮೯ |
| ಈಜಿಪ್ಷಿಯನ್ | ಈಜಿಪ್ಟ್<br>ಸೂಡಾನ್ | ೭,೦೦,೦೦೦<br>೨೦,೦೦೦ | | |
| ಸ್ಟೇಪಲ್ ಅಮೆರಿಕನ್ | ಮಿಸ್ಸಿಸ್ಸಿಪ್ಪಿ ಡೆಲ್ಟಾ | ೨,೦೦,೦೦೦ | | |
| | ನ್ಯಾಸಲ್ಯಾಂಡ್, ಉಗಾಂಡ ಮತ್ತು ಉತ್ತರ ಮತ್ತು ದಕ್ಷಿಣ ಆಫ್ರಿಕಾ | ೪೦,೦೦೦ | | |

| | | | | |
|---|---|---|---|---|
| ಪೆರುವಿಯನ್ | ಪೆರು | ೧,೨೫,೦೦೦ | | |
| | | ೧೦,೮೫,೦೦೦ | ೭,೬೦,೦೦೦ | ೭೦ |
| ಅಮೆರಿಕನ್ | ಅಮೆರಿಕಾ ಸಂ.ಸಂ.<br>ಮೆಕ್ಸಿಕೋ<br>ಬ್ರೆಜಿಲ್<br>ರಷ್ಯಾ<br>ಪಶ್ಚಿಮ ಆಫ್ರಿಕಾ<br>ಲೆವ್ಯಾಂಟ್<br>ಭಾರತ<br>ಚೈನಾ, ಕೊರಿಯಾ | ೧,೫೦,೦೦,೦೦೦<br>೧,೫೦,೦೦೦<br>೩,೦೦,೦೦೦<br>೫,೦೦,೦೦೦<br>೧೫,೦೦೦<br>೧,೦೦,೦೦೦<br>೪,೦೦,೦೦೦<br>೨,೫೦,೦೦೦ | | |
| | | ೧,೬೭,೧೫,೦೦೦ | ೪,೧೫,೦೦೦ | ೨.೫ |
| ಇಂಡಿಯನ್ಸ್ ಅಂಡ್ ಕಂ. | ಭಾರತ | ೪೫,೦೦,೦೦೦ | | |
| ಇಂಡಿಯನ್ಸ್ ಅಂಡ್ ಕಂ. | ರಷ್ಯಾ<br>ಚೈನಾ | ೭,೫೦,೦೦೦<br>೧೮,೦೦,೦೦೦ | | |
| | | ೭೦,೫೦,೦೦೦ | ೪೫,೦೦,೦೦೦ | ೬೪ |
| | **ಒಟ್ಟು** | **೨,೫೪,೮೪,೦೦೦** | **೬೨,೩೧,೦೦೦** | **೨೪.೫** |

ನಿಖರವಾಗಿ ಈ ಅಂಕಿ ಅಂಶದ ಕಾಲಾವಧಿಯನ್ನು ಹೇಳುವುದಾದರೆ ಇದು ಮೊದಲನೇ ಮಹಾಯುದ್ಧದ ಪೂರ್ವದ್ದು. ಆ ವೇಳೆಗೆ ಭಾರತದಲ್ಲಿ ಅನೇಕ ಹತ್ತಿ ಗಿರಣಿಗಳು ಸ್ಥಾಪನೆಯಾಗಿದ್ದರೂ ವಿವಿಧ ಉತ್ತಮ ತಳಿಯ ಉದ್ದನೆಯ ನೂಲಿನ ಎಳೆಯ ಲಕ್ಷಣಗಳುಳ್ಳ ಗುಣಮಟ್ಟದ ಹತ್ತಿಯು ಬ್ರಿಟನ್‌ಗೆ ರಫ್ತಾಗುತ್ತಿತ್ತು.

೧೯೩೧-೩೨ ರಿಂದ ೧೯೩೨-೩೩ರ ನಡುವೆ ಭಾರತದ ಹತ್ತಿ ಬಟ್ಟೆ ಗಿರಣಿಗಳು ವಿದೇಶಿ ವ್ಯಾಪಾರದಲ್ಲಿ ತೊಂದರೆಯನ್ನು ಎದುರಿಸುತ್ತಿದ್ದುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಅಗ್ಗದ ವಿದೇಶಿ ಹತ್ತಿ ನೂಲು ಭಾರತಕ್ಕೆ ಆಮದು ಆಗಿತ್ತಿದ್ದುದರಿಂದ ಸ್ಥಳೀಯ ಹತ್ತಿ ನೂಲಿನ ಕೈಗಾರಿಕೆಗಳು ಹೆಚ್ಚಿನ ದುಷ್ಪರಿಣಾಮವನ್ನು ಎದುರಿಸುತ್ತಿತ್ತು. ೧೯೩೧ ಜನವರಿ-ಜೂನ್ ವೇಳೆಗೆ ಇದರ ಸರಾಸರಿ ಮೌಲ್ಯ ೧-೪-೧೦ ರೂ. ಇದ್ದಿದು, ೧೯೩೩ ಜನವರಿ-ಜೂನ್ ವೇಳೆಗೆ ೦-೧೩-೫ ರೂ.ಗಳಿಗೆ ಕುಸಿದಿದ್ದು

ಇದಕ್ಕೆ ಸಾಕ್ಷಿಯಾಗಿದೆ[೫೬]. ವಿದೇಶಗಳಿಂದ ಅಗ್ಗವಾಗಿ ಆಮದು ಆಗುತ್ತಿರುವುದನ್ನು ನಿಯಂತ್ರಿಸದೇ ಹೋದರೆ ಭಾರತದ ಗಿರಣಿಗಳು ತಮ್ಮ ಅಸ್ತಿತ್ವವನ್ನು ಮುಂದುವರೆಸಿಕೊಂಡು ಹೋಗುವುದು ದುಸ್ಸಾಧ್ಯ ಎಂಬ ಆಕ್ಷೇಪಣೆಗಳು ಆ ಸಂದರ್ಭದಲ್ಲಿ ಕೇಳಿಬರುತ್ತಿದ್ದವು. ಹೀಗಾಗಿ ಈ ವಿಷಯವಾಗಿ ಭಾರತ ಸರ್ಕಾರವು ಏನಾದರೂ ತೀರ್ಮಾನಗಳನ್ನು ತೆಗೆದುಕೊಳ್ಳುತ್ತದೆಯೇ ಎಂಬುದನ್ನು ಮೈಸೂರು ರಾಜ್ಯವು ಬಹಳ ಉತ್ಸುಕತೆಯಿಂದ ನೋಡುತ್ತಿತ್ತು. ಅಲ್ಲದೆ ಈ ದೆಸೆಯಲ್ಲಿ ಕ್ರಮ ಕೈಗೊಳ್ಳುವುದಕ್ಕೆ ಭಾರತ ಸರ್ಕಾರದ ಮೇಲೆ ಪ್ರೇರಣೆ ಬೀರಲು ಕಾಯುತ್ತಿತ್ತು. ಅಂದರೆ ಮೈಸೂರು ರಾಜ್ಯವು ಈಗಾಗಲೇ ಈ ಸಮಸ್ಯೆಯಿಂದ ಹೊರಬರಲು ಕಾರ್ಯತಂತ್ರವನ್ನು ರೂಪಿಸಿಕೊಂಡಿದ್ದುದು ತಿಳಿದುಬರುತ್ತದೆ. ಬೆಂಗಳೂರಿನ ಪ್ರಮುಖ ಮೂರು ಗಿರಣಿಗಳು (ಬಿನ್ನಿಮಿಲ್ಲು, ಮಹಾರಾಜ ಮಿಲ್ಲು ಮತ್ತು ಮಿನರ್ವ ಮಿಲ್ಲು) ಉಣ್ಣೆ ವ್ಯಾಪಾರದಲ್ಲಿ ಭಾರತದ ಮಾರುಕಟ್ಟೆಯಲ್ಲಿ ಈ ಅವಧಿಯಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆಯನ್ನು ಎದುರಿಸಿದ್ದವು. ಈ ಎರಡು ವರ್ಷಗಳಲ್ಲಿ ಸರಾಸರಿ ಮೌಲ್ಯದಲ್ಲಿ ಶೇಕಡ ೨೫ರಷ್ಟು ಇಳಿಕೆಯನ್ನು ಕಂಡಿದ್ದವು[೫೭]. ಆದರೆ ಹತ್ತಿ ಬಟ್ಟೆಯಲ್ಲಿ ನಷ್ಟವನ್ನು ಹೊಂದಿದಂತೆ ಕಂಡುಬಂದಿಲ್ಲ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಸಂಗತಿಯೆಂದರೆ 'ವಿದೇಶದಿಂದ ಆಮದಾಗುತ್ತಿದ್ದ ಅಗ್ಗದ ಹತ್ತಿಯ ನೂಲು' ಎಂಬ ತಕರಾರು ತೆಗೆದಿರುವುದೇ ಬ್ರಿಟಿಷರು. ಏಕೆಂದರೆ ಇಲ್ಲಿ ವಿದೇಶ ಎಂದರೆ ಜಪಾನ್ ಆಗಿದ್ದು, ಈ ವೇಳೆಯಲ್ಲಿ ಜಪಾನ್ ಏಷ್ಯಾದಲ್ಲಿಯೇ ಪ್ರಬಲ ರಾಷ್ಟ್ರವಾಗಿ ಬೆಳೆದಿದ್ದು, ಯುರೋಪಿಗೆ ಆರ್ಥಿಕವಾಗಿ ಪ್ರಬಲ ಪೈಪೋಟಿ ನೀಡುವ ಸಶಕ್ತ ರಾಷ್ಟ್ರವೆಂಬ ಹಣೆ ಪಟ್ಟಿಯನ್ನು ಹೊಂದಿತ್ತು. ಅಲ್ಲದೆ ಎರಡನೇ ಮಹಾಯುದ್ಧಕ್ಕೆ ವೇದಿಕೆಯು ಈ ಅವಧಿಯಲ್ಲಿಯೇ ಸಿದ್ಧವಾಗುತ್ತಿತ್ತು ಹಾಗೂ ಜಪಾನ್ ರಾಷ್ಟ್ರವು ಬ್ರಿಟನ್ ವಿರೋಧಿ ಪಾಳಯದಲ್ಲಿ ಅಂದರೆ ಶತ್ರು ಬಣದಲ್ಲಿ ಕಾಣಿಸಿಕೊಳ್ಳುವ ಎಲ್ಲಾ ಲಕ್ಷಣವೂ ಮೂಡಿತ್ತು. ಹೀಗಾಗಿ ಈ ಎಲ್ಲಾ ಹಿನ್ನೆಲೆಯಿಂದ ಆರ್ಥಿಕತೆಯ ಹಿನ್ನೆಲೆಯಿಂದ ಜಪಾನ್ ಭಾರತಕ್ಕೆ ಒಡ್ಡುತ್ತಿದ್ದ ಪೈಪೋಟಿಯನ್ನು ಹಾಗೂ ವ್ಯಾಪಾರ ವಹಿವಾಟನ್ನು ಸಹಿಸಿಕೊಳ್ಳುವಷ್ಟು ಸ್ಪರ್ಧಾತ್ಮಕ ಗುಣ ಬ್ರಿಟಿಷ್ ವಸಾಹತುಶಾಹಿಗಳದ್ದಾಗಿರಲಿಲ್ಲ. ಆದಾಗ್ಯೂ ಜಪಾನ್ ಸಹ ಏಷ್ಯಾದ ಒಂದು ವಸಾಹತು ಶಕ್ತಿ ಎಂಬುದನ್ನು ಮರೆಯಬಾರದು. ಒಟ್ಟಿನಲ್ಲಿ ಬ್ರಿಟಿಷರಿಗೆ ಈ ವೇಳೆಯಲ್ಲಿ ಜಪಾನ್‌ನ ಆರ್ಥಿಕತೆಯ ಮೇಲೆ ಅಸಹನೆ ಎದ್ದು ಕಾಣುತ್ತಿದ್ದುದಂತೂ ಸ್ಪಷ್ಟ.

ಮೇಲಿನ ವಿಶ್ಲೇಷಣೆಗೆ ಸಮರ್ಥನೆಯನ್ನು ಈ ಸಂದರ್ಭದಲ್ಲಿ ಅಂದರೆ ೧೯೩೪ ಫೆಬ್ರವರಿ ೨ರಂದು ಜೆ.ಡಬ್ಲು. ಬೋರ್ ಅವರಿಂದ ವ್ಯಕ್ತವಾದ ಹೇಳಿಕೆಯಿಂದ ಕಾಣಬಹುದು. ಇದನ್ನು ಕೆಳಗೆ ಯಥಾವತ್ತಾಗಿ ನೀಡಲಾಗಿದೆ.

"By the Cotton Textile Industry (Protection) Act, 1930, the Indian industry was given a temporary measure of protection which will cease to have effect on 31st March 1934. In accordance with the undertaking given when the Act was passed, the claims of the industry to substantive protection have been examined by a Tariff Board. The Tariff Board has found that the Indian cotton textile industry has established a claim to substantive protection, but the Government of India, while accepting this conclusion, have found it necessary to review the measures of protection recommended by the Tariff Board in the light of events subsequent to the submission of its Report. The denunciation of the Indo-Japanese Trade Convention and the subsequent conclusion of a new trade agreement with the Japan together with the unofficial agreement between representatives of the Indian and United Kingdom textile industries have introduced entirely new factors into the situation. The present Bill gives statutory effect to the aforementioned agreements which the Government of India accept as a satisfactory basis for a protective scheme subject to any readjustment which may be found necessary on the expiry of these agreements. The opportunity has also been taken of incorporating into the Bill the decisions of the Government of India on the recommendations of the Tariff Board appointed to investigate the claims of the sericultural industry to protection[೫೮].

೧೯೩೧-೩೨ರಲ್ಲಿ ಆಮದುವಿನ ಪ್ರಮಾಣ ಹೆಚ್ಚಾಗಿತ್ತು. ಒಂದು ಪೌಂಡ್‌ಗೆ ೪.೫ ಗಜಗಳಷ್ಟು ಹತ್ತಿ ಬಟ್ಟೆಯನ್ನು ಕೊಳ್ಳಬಹುದಿತ್ತು. ಈ ವರ್ಷದಲ್ಲಿ ಭಾರತಕ್ಕೆ ೭೬೫ ಮಿಲಿಯನ್ ಗಜಗಳ ಹತ್ತಿ ಬಟ್ಟೆ ಆಮದಾಗಿತ್ತು[೫೯]. ಅಂದರೆ ಈ ಅವಧಿಯಲ್ಲಿ ಭಾರತದಲ್ಲಿ ಹತ್ತಿ ಗಿರಣಿಗಳ ಸಂಖ್ಯೆ ಹೆಚ್ಚಿದ್ದು, ಉತ್ಪಾದನೆಯೂ ಸಹ ಹೆಚ್ಚಿದ್ದರೂ ನಮ್ಮ ಜನಸಂಖ್ಯೆಗೆ ಅದು ಸಾಕಾಗುತ್ತಿರಲಿಲ್ಲ. ಅಲ್ಲದೆ ಬ್ರಿಟಿಷರು

ಸಿದ್ಧ ವಸ್ತುಗಳ ಆಮದು ವ್ಯಾಪಾರಕ್ಕೆ ಹೆಚ್ಚಿನ ಒತ್ತನ್ನು ನೀಡಿದ್ದರು. ಕಾರಣ ಲಾಭ ಅಧಿಕವಾಗಿತ್ತು ಹಾಗೂ ಬ್ರಿಟನ್‌ಯಿಂದಲೇ ಹತ್ತಿ ಬಟ್ಟೆಯು ಭಾರತಕ್ಕೆ ಆಮದಾಗುತ್ತಿತ್ತು. ಅದೂ ಆಮದು ಸುಂಕ ರಹಿತವಾಗಿ. ಇಂಡಸ್ಟ್ರೀ ಅಂಡ್ ಟಾರಿಫ್ ಬೋರ್ಡ್ ೧೯೩೧-೩೨ರ ತನ್ನ ವರದಿಯಲ್ಲಿ ತಿಳಿಸುತ್ತಾ ಈ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ೧೯೩೧-೩೨ಕ್ಕೂ ಪೂರ್ವದಲ್ಲಿ ಭಾರತವು ಚೈನಾದಿಂದ ಸುಂಕ ರಹಿತವಾಗಿ ಪ್ರತಿ ಬೇಲ್‌ಗೆ ೩೧ ಪೈಸೆಯಿಂದ ೪೦ ಪೈಸೆಗೆ ಹತ್ತಿ ನೂಲನ್ನು ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಈಗ ಇದರ ಮೊತ್ತ ಸುಂಕರಹಿತ ಪ್ರತಿ ಬೇಲ್‌ಗೆ ೧೩೦ ಪೈಸೆ ಏರಿಕೆಯಾಗಿದೆ ಎಂದು[೬೦]. ಅಂದರೆ ಕೇವಲ ಒಂದು ವರ್ಷದ ಅಂತರದಲ್ಲಿ ೧೦ ಪಟ್ಟು ಬೆಲೆಯನ್ನು ಏರಿಸಿತ್ತು. ಇದಕ್ಕೆ ರಾಜಕೀಯ ಕಾರಣವು ಪ್ರಮುಖವಾಗಿದ್ದು, ಇದೇ ಅವಧಿಯಲ್ಲಿ 'ಮಂಚೂರಿಯಾ' ವಿಷಯವಾಗಿ ಚೀನ-ಜಪಾನ್ ನಡುವೆ ಸಮಸ್ಯೆ ಉಲ್ಬಣಿಸಿತ್ತು. ಇದರಿಂದ ಹತ್ತಿ ಬೆಲೆಯಲ್ಲಿ ನ್ಯಾಯಸಮ್ಮತವಲ್ಲದ ರೀತಿಯಲ್ಲಿ ಏರಿಕೆಯಾಯಿತು. ಬೆಂಗಳೂರಿನ ಹತ್ತಿಗಿರಣಿಗಳ ಮೇಲೂ ಇದರ ಪರಿಣಾಮ ಬೀರಿತು. ಹೀಗಾಗಿ ಮೈಸೂರು ಸಂಸ್ಥಾನದ ಎಲ್ಲಾ ಹತ್ತಿಗಿರಣಿಗಳು ಉತ್ಪಾದನೆಯಾದ ವಸ್ತುಗಳ ಬೆಲೆಯನ್ನು ಐದು ಪಟ್ಟು ಹೆಚ್ಚಿಸಿದರು. ಇದ್ದಕ್ಕಿದ್ದಂತೆ ಈ ರೀತಿ ಬೆಲೆಯಲ್ಲಿ ಏರಿಕೆಯಾಗುತ್ತಿದ್ದ ಪರಿಣಾಮ ಜನರು ದುಬಾರಿ ಬೆಲೆ ತೆತ್ತಿ ಬಟ್ಟೆಗಳನ್ನು ಕೊಳ್ಳಬೇಕಾದ ಪರಿಸ್ಥಿತಿ ಬಂದೊದಗಿತು. ಹೀಗಾಗಿ ಯಾವುದೇ ದೇಶದ ರಾಜಕೀಯ ಬೆಳವಣಿಗೆಯಲ್ಲಿ ಏರುಪೇರು ಉಂಟಾದರೆ ಅಥವಾ ವಿವಿಧ ರಾಷ್ಟ್ರಗಳ ನಡುವೆ ಗಡಿ ಸಮಸ್ಯೆ ಉಲ್ಬಣಿಸಿದರೆ ಅದು ಒಟ್ಟಾರೆ ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟುಮಾಡುತ್ತಿತ್ತು. ಪ್ರಸ್ತುತ ವಿಚಾರವಾದ ಬ್ರೆಕ್ಸಿಟ್ (ಬ್ರಿಟನ್ ಎಕ್ಸಿಟ್) ಅಂದರೆ ಯುರೋಪಿನ ಒಕ್ಕೂಟದಿಂದ ಬ್ರಿಟನ್ ಹೊರಬಂದಿದ್ದರಿಂದ ಜಾಗತಿಕ ಆರ್ಥಿಕತೆಯ ಮೇಲೆ ಉಂಟುಮಾಡಿದ ಪ್ರತಿಕೂಲ ಪರಿಣಾಮವನ್ನು ನಾವು ಈ ಹಿನ್ನೆಲೆಯಿಂದಲೇ ವಿಶ್ಲೇಷಿಸಬಹುದು. ಹೀಗಾಗಿ ಎಲ್ಲಾ ರಾಷ್ಟ್ರಗಳ ಅರ್ಥವ್ಯವಸ್ಥೆಯು ರಾಜಕೀಯ-ಆರ್ಥಿಕತೆಯ (ಪೊಲಿಟಿಕಲ್ ಎಕಾನಮಿ) ಮೇಲೆ ಅವಲಂಬನೆಯಾಗಿರುತ್ತದೆ. ಈ ಒಂದು ಘಟನೆಯಿಂದ ಭಾರತವು ಅಗತ್ಯವಿರುವ ಹತ್ತಿಯನ್ನು ಆಮದು ಮಾಡಿಕೊಳ್ಳುವಲ್ಲಿ ನಾವು ಕೇವಲ ಬ್ರಿಟನ್ ಹಾಗೂ ಜಪಾನ್ ಈ ಎರಡು ರಾಷ್ಟ್ರಗಳ ಮೇಲೆಯೇ ಅವಲಂಬನೆಯಾಗಿದ್ದಾಗಿ ಭಾವಿಸಿದ್ದೊ; ಆದರೆ ವಾಸ್ತವದಲ್ಲಿ ನಮ್ಮ ಬೇಡಿಕೆಯನ್ನು ಪೂರೈಸುವಲ್ಲಿ ಈ ಎರಡೂ ರಾಷ್ಟ್ರಗಳು ಪ್ರಮುಖ ಸ್ಪರ್ಧಿಗಳೇ ಅಲ್ಲ[೬೧]. ಹೀಗಾಗಿ ಭಾರತದ ಹತ್ತಿಬಟ್ಟೆ ಕೈಗಾರಿಕೆಗಳು ಈ ಎರಡು ರಾಷ್ಟ್ರಗಳ

ವಿಚಾರವಾಗಿ ಹಿಂದೆ ಏನು ಸಮರ್ಥನೆಯನ್ನು ಮಾಡಿಕೊಳ್ಳುತ್ತಿತ್ತೋ ಅದನ್ನು ಬದಲಾಯಿಸಿಕೊಳ್ಳಬೇಕಾಗಿದೆ. ಏಕೆಂದರೆ ಈ ಎರಡು ರಾಷ್ಟ್ರಗಳಿಗೆ ನಿಜವಾಗಿಯೂ ಸ್ಪರ್ಧೆ ಒಡ್ಡುವ ಮತ್ತೊಂದು ಬಲಿಷ್ಠ (ಚೀನಾ) ರಾಷ್ಟ್ರ ಹುಟ್ಟಿಕೊಂಡಿದೆ ಎಂಬ ನಿಲುವನ್ನು ತಾಳುವತ್ತ ಯೋಚಿಸಿತು.

ಭಾರತದ ಮಾರುಕಗಟ್ಟೆಗೆ ವಿವಿಧ ಬಗೆಯ ಹತ್ತಿ ಸರಕುಗಳ (ಪೀಸ್ ಗೂಡ್ಸ್) ಅಗತ್ಯತೆ ಇತ್ತು. ಹೀಗಾಗಿ ಭಾರತದ ಹತ್ತಿ ಗಿರಣಿಗಳಿಂದ ವಿಶೇಷ ರೀತಿಯಲ್ಲಿ ಉತ್ಪಾದನೆಯನ್ನು ನಮ್ಮ ಮಾರುಕಟ್ಟೆ ನಿರೀಕ್ಷೆ ಮಾಡಿತ್ತು. ಆದರೆ ಈ ನಿರೀಕ್ಷೆಯನ್ನು ಈಡೇರಿಸಲು ನಮ್ಮ ಗಿರಣಿಗಳಿಗೆ ಸ್ವಲ್ಪ ಕಷ್ಟವೇ ಆಗಿತ್ತು. ಹೀಗಾಗಿ ಹಲವು ರೀತಿಯ ಲೆಕ್ಕಾಚಾರಗಳು ಅಂದರೆ ಅನುಧಾನ ನೀಡುವ, ಉತ್ತಮ ಬಟ್ಟೆಗಳಿಗೆ ಉತ್ಪಾದನಾ ವೆಚ್ಚವನ್ನು ಇಳಿಸುವ, ಗಿರಣಿಗಳ ರಕ್ಷಣೆಯನ್ನು ವಿಸ್ತರಿಸುವ ಇತ್ಯಾದಿ ಕ್ರಮವನ್ನು ಅನುಸರಿಸಿ ದೇಶದ ಹೊರೆಯನ್ನು ಕಡಿಮೆ ಮಾಡುವ ಪ್ರಯತ್ನಕ್ಕೆ ಯತ್ನಿಸುವ ನಾಟಕವನ್ನು ವಸಾಹತು ಸರ್ಕಾರ ಮಾಡಿತು[೬೨]. ಆದರೆ ವಾಸ್ತವದಲ್ಲಿ ಇದಾವುದು ಬ್ರಿಟಿಷರಿಗೆ ಬೇಕಿರಲಿಲ್ಲ. ಏಕೆಂದರೆ ನಮ್ಮ ಗಿರಣಿಗಳಿಂದ ಉತ್ಪಾದನೆಯಾದ ವಸ್ತುಗಳಿಗೆ ಮಾರುಕಟ್ಟೆ ಕುಸಿಯುವಂತೆ ಮಾಡುವ ಉದ್ದೇಶ ವಸಾಹತುಶಾಹಿ ವ್ಯವಸ್ಥೆಯದ್ದಾಗಿತ್ತು. ಇದರ ಮೂಲಕ ಯುರೋಪಿನ ವಸ್ತುಗಳಿಗೆ ಅದರಲ್ಲೂ ಇಂಗ್ಲೆಂಡಿನ ಮ್ಯಾಂಚೆಸ್ಟರ್, ಲಂಕಾಶೈರ್ ಮತ್ತು ಯಾರ್ಕ್‌ಶೈರ್‌ನ ಹತ್ತಿ ಬಟ್ಟೆಗಳೇ ಭಾರತದಲ್ಲಿ ಮಾರಾಟವಾಗಬೇಕು ಎಂಬ ನಿಲುವು ಇವರದ್ದಾಗಿತ್ತು. ಇದೇ ಅವಧಿಯ ಈ ಸಂದರ್ಭದಲ್ಲಿ ನೂಲುವ ಕೈಗಾರಿಕೆಗಳು ಸುರಕ್ಷತೆಯನ್ನು ನಿರೀಕ್ಷಿಸುವುದು ದೂರದ ಮಾತಾಗಿತ್ತು. ಹೀಗಾಗಿ ಟಾರೀಫ್ ಬೋರ್ಡ್ ಅಥವಾ ಸುಂಕ ಮಂಡಳಿ ಕಂಡುಕೊಂಡ ಮಾರ್ಗೋಪಾಯವೆಂದರೆ ಜವಳಿ ಕೈಗಾರಿಕೆಗಳು ತನ್ನದೇ ರಕ್ಷಣೆಯೊಂದಿಗೆ ಪ್ರಾರಂಭವಾಗಬೇಕು ಎಂಬುದು[೬೩]. ಇದೇ ಸಂದರ್ಭದಲ್ಲಿ ಜಪಾನ್, ಚೀನಾ ಹಾಗೂ ಇನ್ನಿತರೆ ವಿದೇಶಿ ರಾಷ್ಟ್ರಗಳು ಸುಂಕದ ದರವನ್ನು ನಿಗದಿಪಡಿಸಿದವು. ಅದು ಪ್ರತಿ ಬೇಲ್‌ಗೆ ೨೧/೨ ಆಣೆ (ಆನಸ್) ಅಥವಾ ಶೇಕಡ ೬.೨೫ರಷ್ಟಾಗಿತ್ತು[೬೪]. ಇದು ಎಲ್ಲಾ ಸಂದರ್ಭಕ್ಕೂ ದುಬಾರಿಯಾದ ಸುಂಕವೇ ಆಗಿದ್ದಿತು. ಪೈಪೋಟಿಯನ್ನರಿತ ಜಪಾನ್ ತನ್ನ ನಿರ್ಧಾರ ಬದಲಿಸಿ ಪ್ರಪಂಚದ ಎಲ್ಲಾ ರಾಷ್ಟ್ರಗಳನ್ನು ತನ್ನ ಬಾಗಿಲ ಬಳಿಯೇ ಇಟ್ಟುಕೊಳ್ಳುವ ಪ್ರಯತ್ನಕ್ಕೆ ಕೈ ಹಾಕಿ ಅಗ್ಗದ ದರದಲ್ಲಿ ಹತ್ತಿ ಸರಕುಗಳನ್ನು ರಫ್ತು ಮಾಡುವ ಪ್ರಕ್ರಿಯೆ ಬೆಳೆಸಿಕೊಂಡಿತು. ಒಟ್ಟಾರೆ ಜಪಾನ್ ಭಾರತದ ಮಾರುಕಟ್ಟೆಯಲ್ಲಿ ಯಾವುದೇ ಸಂದೇಹವಿಟ್ಟುಕೊಳ್ಳದೆ ತನ್ನ ಅಂಕೆಯಲ್ಲಿಟ್ಟುಕೊಳ್ಳುವ ಪ್ರಯತ್ನಕ್ಕೆ ಮುಂದಾಯಿತು[೬೫]. ಇದರ ಪ್ರಕಾರ

ಹಳೆಯ ಸುಂಕವನ್ನು ಮುಂದುವರೆಸಿ, ಸ್ವಲ್ಪ ನೆರವನ್ನು ನೀಡುವುದರ ಮೂಲಕ ವಿದೇಶಿಗಳ ಪೈಪೋಟಿಯನ್ನು ಗೆಲ್ಲುವ ಲಕ್ಷಣವನ್ನು ತೋರಿಸಿತು.

ಒಂದು ಕಡೆ ಈ ರೀತಿಯ ನಿಲುವನ್ನು ಜಪಾನ್ ತಾಳಿದರೆ, ಇನ್ನೊಂದು ಕಡೆ ಬ್ರಿಟಿಷರು ಬೇರೆಯದೇ ಆದ ಆಟವನ್ನು ಆಡಲು ಮುಂದಾದರು. ಲಂಕಾಶೈರು ಮಿಲ್ಲುಗಳು ಒಂದು ಅನುಕೂಲವನ್ನು ಪಡೆದುಕೊಂಡು ಭಾರತದ ಗಿರಣಿಗಳ ಮೇಲಿನ ಸವಕಳಿಯಾದ ಶುಲ್ಕಗಳನ್ನು ತೆಗೆಸುವುದರ ಮೂಲಕ ತನ್ನ ಸರಕುಗಳು, ಯಂತ್ರಗಳು ಹಾಗೂ ಉಕ್ಕಿನ ಪದಾರ್ಥಗಳ ಮೇಲೆ ಶೇಕಡ ೩೦ ರಿಂದ ೪೦ರವರೆಗೆ ವಿಮೆ ಹಾಗೂ ಸುಂಕದಲ್ಲಿ ರಿಯಾಯಿತಿ ನೀಡಿ ಭಾರತಕ್ಕೆ ರಫ್ತು ಮಾಡಲು ಮುಂದಾಯಿತು[೬೬]. ಆದರೆ ಭಾರತದ ಗಿರಣಿಗಳು ಈ ಸಂದರ್ಭದಲ್ಲಿ ಆಮದು ಹತ್ತಿಯ ಮೇಲೆ ಕೇವಲ ೧/೨ ಆಣೆಯನ್ನೂ ನೀಡಲಾಗದ ಅಸಮರ್ಥತೆಯನ್ನು ಎದುರಿಸುತ್ತಿದ್ದವು. ಆಗ ಲಂಕಾಶೈರ್, ಭಾರತದ ಗಿರಣಿಗಳು ಕಳೆದ ಎಂಟು ಅಥವಾ ಒಂಭತ್ತು ವರ್ಷಗಳಿಂದಲೂ ನೀಡಬೇಕಾದ ಶುಲ್ಕಗಳಲ್ಲಿ ವಿನಾಯಿತಿ ತರಲು ಮುಂದಾಯಿತು[೬೭]. ಒಟ್ಟಾರೆ ಇಂಗ್ಲೆಂಡಿನ ಉದ್ದೇಶ ಜಪಾನ್ ಮತ್ತು ಚೀನಾದ ವಿರುದ್ಧ ಅಧಿಕಾರಯುತವಾಗಿ ಸೆಣೆಸಾಟ ಅಥವಾ ಪೈಪೋಟಿಯ ಕ್ಲೇಮನ್ನು (ಹಕ್ಕು) ಚಲಾಯಿಸುವುದಾಗಿತ್ತು. ಇದೇ ಅವಧಿಯಲ್ಲಿ ಮೈಸೂರಿನ ಎಲ್ಲಾ ಹತ್ತಿ ಬಟ್ಟೆ ಗಿರಣಿಗಳು ಲಂಕಾಶೈರ್‌ನ ಗಿರಣಿಗಳೊಂದಿಗೆ ಒಟ್ಟುಗೂಡುವ ಇರಾದೆಯನ್ನು ತೋರಿದ್ದವು[೬೮]. ಕಾರಣ ಮೈಸೂರು ರಾಜ್ಯ, ಈ ವೇಳೆಗಾಗಲೇ ಬ್ರಿಟಿಷರ ಕೃಪೆಗೆ ಒಳಗಾಗಿ 'ಮಾದರಿ ರಾಜ್ಯ' (ಮಾಡಲ್ ಸ್ಟೇಟ್) ಎಂಬ ಹಣೆಪಟ್ಟಿಯನ್ನು ಪಡೆದುಕೊಂಡಿತ್ತು. ಬೆಂಗಳೂರನ್ನೂ ಒಳಗೊಂಡಂತೆ ಮೈಸೂರು ಸಂಸ್ಥಾನದಲ್ಲಿ ಎಲ್ಲಾ ಹತ್ತಿಗಿರಣಿಗಳು ಒಂದಲ್ಲಾ ಒಂದು ರೀತಿಯಲ್ಲಿ ಮಹಾರಾಜರ ನೆರವನ್ನು ಪಡೆದುಕೊಂಡಿದ್ದವು. ಹೀಗಾಗಿ ಇಲ್ಲಿನ ಗಿರಣಿಗಳು ಲಂಕಾಶೈರ್‌ನೊಂದಿಗೆ ಒಟ್ಟುಗೂಡಿರುವುದರಲ್ಲಿ ವಿಶೇಷವೇನಿಲ್ಲ.

೧೯೩೯ರಲ್ಲಿ ಮೈಸೂರು ರಾಜ್ಯವು ಆಮದು ಮಾಡಿಕೊಳ್ಳುತ್ತಿದ್ದ ಕಚ್ಚಾ ಹತ್ತಿಯು ೨,೩೬,೩೮೪ (೧೯೩೭–೩೮) ಪೌಂಡ್ಸ್‌ನಿಂದ ೨,೪೭,೬೫೩ ಪೌಂಡ್ಸ್‌ಗಳಿಗೆ ಏರಿಕೆಯನ್ನು ಕಂಡಿತು. ಆದರೆ ಅದೇ ವೇಳೆಯಲ್ಲಿ ಅದರ ಮೌಲ್ಯ ಮಾತ್ರ ಗಣನೀಯ ಪ್ರಮಾಣದಲ್ಲಿ ಕುಸಿತವನ್ನು ಕಂಡಿತು. ಅದು ೪೫ ಲಕ್ಷ ರೂ.ಗಳಿದ್ದು, ೨೮ ಲಕ್ಷ ರೂ.ಗಳಿಗೆ ಇಳಿಕೆಯನ್ನು ಕಂಡಿತು[೬೯]. ಅದೇ ರೀತಿ ಕಚ್ಚಾ ಹತ್ತಿಯ ರಫ್ತು ವ್ಯಾಪಾರವು ಗಣನೀಯವಾಗಿ ಇಳಿಕೆಯಾಯಿತು. ಅದು ೫೯೭೯

ಮೌಂಡ್‌ಗಳಿಂದ ೨೮,೬೩೯ ಮೌಂಡ್‌ಗಳಿಗೆ ಇಳಿಕೆಯಾಗಿ; ಮೌಲ್ಯದಲ್ಲಿ ೧೨,೮೭,೩೪೮ ರೂ.ಗಳಿಂದ ೩,೨೭,೭೮೫ ರೂ.ಗಳಿಗೆ ಇಳಿಕೆಯನ್ನು ಕಂಡಿತು[೨೦]. ಇದಕ್ಕೆ ಪ್ರಮುಖ ಕಾರಣ ಯುರೋಪಿನಲ್ಲಿ ಆರಂಭವಾದ ಎರಡನೇ ಮಹಾಯುದ್ಧ. ಇದು ಮೈಸೂರಿನ ಕಚ್ಚಾ ಹತ್ತಿಯ ಆಯಾತ-ನಿರ್ಯಾತ ವ್ಯಾಪಾರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿತ್ತು. ಆದರೆ ಕೇವಲ ಒಂದೇ ವರ್ಷದಲ್ಲಿ ಎಚ್ಚೆತ್ತುಕೊಂಡ ಮೈಸೂರು ರಾಜ್ಯ ತ್ವರಿತವಾಗಿ ಈ ಅಪಾಯದಿಂದ ಹೊರಬರಲು ಪ್ರಯತ್ನಿಸಿತು. ಅದರ ಒಂದು ಅಂಕಿಅಂಶ ಈ ರೀತಿ ಇದೆ. ೧೯೩೯ರಲ್ಲಿ ೨೮,೬೩೯ ಮೌಂಡ್‌ಗಳಷ್ಟು ರಫ್ತು ವ್ಯಾಪಾರ ಹೊಂದಿದ್ದು, ೧೯೪೦ರ ವೇಳೆಗೆ ೪೯,೮೩೬ ಮೌಂಡುಗಳಿಗೆ ಬೃಹತ್ ಏರಿಕೆಯನ್ನು ಕಂಡಿತು[೨೧]. ಈ ಮಟ್ಟದ ಚೇತರಿಕೆಗೆ ಸರ್ಕಾರದ ಪಾಲು ದೊಡ್ಡದು. ಆದರೆ ಮತ್ತೆ ೧೯೪೪ರ ವೇಳೆಗೆ ಭಾರತದ ಬಿಡಿ ಹತ್ತಿ ವಸ್ತುಗಳ ರಫ್ತು ವ್ಯಾಪಾರದಲ್ಲಿ ದೊಡ್ಡ ಪ್ರಮಾಣದ ಇಳಿಕೆಯನ್ನು ಕಾಣಬಹುದು. ಅದು ೧,೩೩,೪೬೮ ರೈಲ್ವೆ ಮೌಂಡ್‌ಯಿಂದ ೮೦,೬೩೮ ಮೌಂಡ್‌ಗಳಿಗೆ ಕುಸಿಯಿತು. ಈ ಸಂದರ್ಭದಲ್ಲಿ ಜಾಗತಿಕ ಯುದ್ಧ ಅಂತಿಮ ಘಟ್ಟವನ್ನು ತಲುಪಿ ಎಲ್ಲಾ ರಾಷ್ಟ್ರಗಳು ಒಪ್ಪಂದಗಳ ಕಡೆ ಮುಖ ಮಾಡಿದ್ದವು. ಅಲ್ಲದೆ ವಿಶ್ವಸಂಸ್ಥೆಯ ಸ್ಥಾಪನೆಗೆ ವೇದಿಕೆ ಸಿದ್ಧಗೊಳ್ಳುತ್ತಿತ್ತು. ಹಾಗಿದ್ದೂ ಹತ್ತಿ ಬಟ್ಟೆ ವ್ಯಾಪಾರದಲ್ಲಿ ಕುಸಿತವನ್ನು ಕಂಡಿತು. ಭಾರತಕ್ಕೂ ಇದರ ಬಿಸಿ ಸ್ವಲ್ಪ ಜೋರಾಗಿಯೇ ತಟ್ಟಿತ್ತು.

## ಕೊನೆ ಟಿಪ್ಪಣಿ

೧. ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೮೮೬-೮೭ ರಿಂದ ೧೮೯೦-೯೧, ಪು. ೧೨೯.

೨. ಅದೇ.

೩. ರಿಪೋರ್ಟ್ ಟು ದಿ ಬೋರ್ಡ್ ಆಫ್ ಟ್ರೇಡ್ ಆಫ್ ದ ಎಂಪೈರ್ ಕಾಟನ್ ಗ್ರೋಯಿಂಗ್ ಕಮಿಟಿ, ಲಂಡನ್, ೧೯೨೦, ಪು. ೫೪.

೪. ಅದೇ.

೫. ಅದೇ.

೬. ಅದೇ, ಪು. ೫೫.

೭. ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು ಫ್ರಂ ೧೮೯೧-೯೨ ಟು ೧೮೯೮-೯೯.

೮. ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೧೯೨೦.

೯. ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೩೩೩ ಆಫ್ ೧೯೨೦.

೧೦. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೬-೮೭ ರಿಂದ ೧೮೯೦-೯೧, ಪು. ೭೬.

೧೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೭-೮೮, ಪು. ೧೭೯.

೧೨. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೮-೮೯, ಪು. ೨೮೩.

೧೩. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೮೯-೯೦, ಪು. ೩೯೧.

೧೪. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೦-೯೧, ಪು. ೫೦೩.

೧೫. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೦೭-೦೮, ಪು. ೩೭.

೧೬. ಬಾಲಕೃಷ್ಣ ಆರ್., ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು, ಪು. ೯೯.

೧೭. ರಿಪೋರ್ಟ್ ಆಫ್ ದ ಇಂಡಿಯನ್ ಕಾಟನ್ ಯಾರ್ನ್ ಇಂಡಸ್ಟ್ರಿ ಅಂಡ್ ದ ಟಾರಿಫ್ ಬೋರ್ಡ್, ೨೬ನೇ ಫೆಬ್ರವರಿ ೧೯೩೪, ಪು. ೩.

೧೮. ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ೧೯೩೯, ಪು. ೫.

೧೯. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೯-೪೦, ಪು. ೧೨೬.

೨೦. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೩-೪೪, ಪು. ೧೧೫.

೨೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೧-೫೨, ಪು. ೧೫೨.

೨೨. ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೮೮೪-೮೫, ಪು. ೬೦.

೨೩. ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಮೈಸೂರು, ೧೮೮೫-೮೬, ಪು. ೬೩.

೨೪. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೧-೯೨ ಟು ೧೮೯೮-೯೯.

೨೫. ಅದೇ.

೨೬. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೫-೯೬, ಪು. ೧೦೪.

೨೭. ಅದೇ.

೨೮. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೦೭-೦೮, ಪು. ೩೬.

೨೯. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೧೪-೧೫, ಪು. ೩೯.

೩೦. ಮದನ್ ಪಿ., *ಬೆಂಗಳೂರಿನ ಬಿನ್ನಿಮಿಲ್ : ಒಂದು ಅಧ್ಯಯನ (ಅಪ್ರಕಟಿತ ಎಂ.ಫಿಲ್. ನಿಬಂಧ)*, ಪು. ೩೮.

೩೧. ಜನರಲ್ ಅಂಡ್ ಮಿಸಲೇನಿಯಸ್ ಫೈಲ್, ಬೆಂಗಳೂರು, ಏಪ್ರಿಲ್ ೩, ೧೯೨೫, ಫೈಲ್ ನಂ. ೫೨೧ ಟಿ.ಎ.ಡಿ.ಸಿ.

೩೨. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೦-೨೧, ಪು. ೩೦.

೩೩. ಅದೇ, ಪು. ೩೧.

೩೪. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೧-೨೨, ಪು. ೩೨.

೩೫. ಬಾಲಕೃಷ್ಣ ಆರ್., ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು, ಪು. ೧೦೧.

೩೬. ದ ಇಂಡಿಯನ್ ಕಾಟನ್ ಯಾರ್ನ್ ಇಂಡಸ್ಟ್ರಿ ಅಂಡ್ ದ ಟಾರಿಫ್ ಬೋರ್ಡ್, ೨೬ನೇ ಫೆಬ್ರವರಿ ೧೯೩೪, ಪು. ೨.

೩೭. ಅದೇ.

೩೮. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೨-೩೩, ಪು. ೭೬.

೩೯. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೫-೩೬, ಪು. ೭೨.

೪೦. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೬-೪೭, ಪು. ೧೦೪ ಮತ್ತು ೧೦೫.

೪೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೭-೪೮, ಪು. ೧೧೦.

೪೨. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೬೧-೬೨, ಪು. ೧೨೯.

೪೩. ಅದೇ.

೪೪. ಅದೇ.

೪೫. ಅದೇ, ಪು. ೧೩೦.

೪೬. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೬೧-೬೨, ಪು. ೧೩೧.

೪೭. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೬೪-೬೫, ಪು. ೧೦೬.

೪೮. ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ದ ಸ್ಟೇಟ್ ಆಫ್ ಕರ್ನಾಟಕ, ೧೯೭೪-೭೫, ಪು. ೧೭೧.

೪೯. ಕರ್ನಾಟಕ ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೭೯-೮೦, ಪು. ೧೮೨.

೫೦. ಕಲೋಕ್ವಿಯಂನ ಸಂದರ್ಭದಲ್ಲಿ ಪ್ರೊ. ಸಿ.ಆರ್. ಗೋವಿಂದರಾಜು ಅವರು ನೀಡಿರುವ ಸಲಹೆ.

೫೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೧-೯೨ ರಿಂದ ೧೮೯೮-೯೯.

೫೨. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೮೯೧-೯೨ ರಿಂದ ೧೮೯೮-೯೯, ಪು. ೮೫.

೫೩. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೦೪-೦೫, ಪು. ೩೬.

೫೪. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೨೨-೨೩, ಪು. ೩೫.

೫೫. ಈ ಅಂಕಿ ಅಂಶವನ್ನು ೧೯೨೦ರಲ್ಲಿ ಲಂಡನ್‌ನಲ್ಲಿ ಪ್ರಕಟವಾದ ವರದಿ *ರಿಪೋರ್ಟ್ ಟು ದ ಬೋರ್ಡ್ ಆಫ್ ಟ್ರೇಡ್ ಆಫ್ ದ ಎಂಪೈರ್ ಕಾಟನ್ ಗ್ರೋಯಿಂಗ್ ಕಮಿಟಿಯಿಂದ* ಪಡೆದುಕೊಳ್ಳಲಾಗಿದೆ.

೫೬. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್, ೧೫೮ ಆಫ್ ೧೯೩೩ ಟು ೪೨೮ ಆಫ್ ೧೯೩೯.*

೫೭. ಅದೇ.

೫೮. ಅದೇ.

೫೯. *ದ ಇಂಡಿಯನ್ ಕಾಟನ್ ಯಾರ್ನ್ ಇಂಡಸ್ಟ್ರಿ ಅಂಡ್ ದ ಟಾರಿಫ್ ಬೋರ್ಡ್, ೨೬ನೇ ಫೆಬ್ರವರಿ ೧೯೩೪*, ಪು. ೨.

೬೦. ಅದೇ, ಪು. ೭.

೬೧. ಅದೇ, ಪು. ೧೪.

೬೨. ಅದೇ.

೬೩. ಅದೇ, ಪು. ೧೭.

೬೪. ಅದೇ.

೬೫. ಅದೇ.

೬೬. ಅದೇ, ಪು. ೧೮.

೬೭. ಅದೇ.

೬೮. ಬಾಲಕೃಷ್ಣ ಆರ್., ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು, ಪು. ೧೨೪.

೬೯. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೮-೩೯, ಪು. ೧೧೦.

೭೦. ಅದೇ, ಪು. ೧೧೧.

೭೧. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೯-೪೦, ಪು. ೧೨೫.

# ಅಧ್ಯಾಯ – ೫

# ಕಾರ್ಮಿಕ ಸಂಘದ ಚರಿತ್ರೆ

---

೫.೧. ವಸಾಹತು ಪೂರ್ವ

೫.೨. ವಸಾಹತು ಕಾಲಘಟ್ಟ

೫.೩. ಸ್ವಾತಂತ್ರ್ಯನಂತರ

೫.೪. ಸಮಕಾಲೀನ ಸಂದರ್ಭದಲ್ಲಿ ಕಾರ್ಮಿಕ ಸಂಘಗಳು ಹಾಗೂ ಅಸಂಘಟಿತ ಕಾರ್ಮಿಕರು

೫.೫. ಮಹಿಳಾ ಕಾರ್ಮಿಕರು ಹಾಗೂ ಸಮಸ್ಯೆಗಳು

---

# ಅಧ್ಯಾಯ – ೫

# ಕಾರ್ಮಿಕ ಸಂಘದ ಚರಿತ್ರೆ

ಕಾರ್ಲ್ ಮಾರ್ಕ್ಸ್ ಅವರು ಚರಿತ್ರೆ ಎಂದರೆ ಸರಳವಾಗಿ ಹೇಳುವುದಾದರೆ "ಒಂದು ವರ್ಗ ಮತ್ತೊಂದು ವರ್ಗವನ್ನು ಮೂಲೆ ಗುಂಪು ಮಾಡಿ ಹೇಗೆ ಸಂಪತ್ತು ಹಾಗೂ ರಾಜಕೀಯ ಅಧಿಕಾರವನ್ನು ಪಡೆದುಕೊಳ್ಳುತ್ತದೆ" ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಅವರು ಮುಂದುವರೆದು ಭೌತಿಕ ಪಾರಮ್ಯಕ್ಕಾಗಿ ನಡೆಯುವ ವರ್ಗ ಸಂಘರ್ಷಗಳು ಚರಿತ್ರೆಯನ್ನು ನಿರ್ಧರಿಸಲ್ಪಡುತ್ತದೆ ಎಂಬುದಾಗಿಯೂ ತಿಳಿಸಿದ್ದಾರೆ[೧]. ಹೀಗಾಗಿ ಕಾರ್ಮಿಕ ವರ್ಗ ಎಚ್ಚೆತ್ತುಕೊಂಡು, ಬಂಡವಾಳಶಾಹಿಗಳ ನಿಯಂತ್ರಣದಿಂದ ಬಿಡುಗಡೆಗೊಂಡು; ಸಂಪತ್ತು ಹಾಗೂ ಅಧಿಕಾರದ ಮೇಲೆ ಒಡೆತನವನ್ನು ಕೇವಲ ಬೌದ್ಧಿಕ ಜ್ಞಾನಕ್ಕೆ ಸೀಮಿತಗೊಳಿಸದೆ ಚಾರಿತ್ರಿಕ ಸಾಕ್ಷ್ಯಗಳ ಮೂಲಕ ರುಜುವಾತುಪಡಿಸುತ್ತಾರೆ. ಮಾರ್ಕ್ಸ್ ತನ್ನ ಸಿದ್ಧಾಂತವಾದ "ಐತಿಹಾಸಿಕ ಭೌತಿಕವಾದ" (ಹಿಸ್ಟಾರಿಕಲ್ ಮೆಟಿರಿಯಾಲಿಸಂ) ದುದ್ದಕ್ಕೂ ಪ್ರತಿಪಾದಿಸುವುದೇನೆಂದರೆ ಶ್ರಮದ (ಲೇಬರ್) ಮೂಲಕ ಸಾಮಾಜಿಕ ಅಸ್ತಿತ್ವದ ನಿರೂಪಣೆ ಕುರಿತು. ಈ ಅಧ್ಯಾಯವು ಒಟ್ಟಾರೆಯಾಗಿ ಚರ್ಚಿಸಲೊರಟಿರುವುದು ಶ್ರಮದ ಸಂಕೇತವಾದ ಕಾರ್ಮಿಕರು ಹಾಗೂ ಅವರ ಸಂಘಗಳ ಕುರಿತು; ಅದು ಚಾರಿತ್ರಿಕ ಸಾಕ್ಷ್ಯಗಳ ರುಜುವಾತಿನ ಮೂಲಕ.

ಮೈಸೂರು ಸಂಸ್ಥಾನದಲ್ಲಿ ಗಣಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರನ್ನು ಹೊರತುಪಡಿಸಿದರೆ ಹೆಚ್ಚು ಕಾರ್ಮಿಕರನ್ನು ಬೇಡುತ್ತಿದ್ದ ಕಾರ್ಖಾನೆಗಳೆಂದರೆ ಅದು ಹತ್ತಿ ಬಟ್ಟೆ ಗಿರಣಿಗಳು. ಹತ್ತಿ ಬಟ್ಟೆಗೆ ಪೂರಕವಾದ ಗಿರಣಿಗಳಾದ ನೂಲುವ, ನೇಯುವ ಹಾಗೂ ಹತ್ತಿ ಹಿಂಜುವ (ಜಿನ್ನಿಂಗ್ ಅಂಡ್ ಪ್ರೆಸ್ಸಿಂಗ್) ಇತ್ಯಾದಿ ಹೆಚ್ಚು ಶ್ರಮಿಕರನ್ನು ಬೇಡುತ್ತಿತ್ತು. ಮೈಸೂರು ರಾಜ್ಯದಲ್ಲಿ ೧೯೩೫ರ ಅಂಕಿ ಅಂಶದ ಪ್ರಕಾರ ಕೋಲಾರ ನಗರವನ್ನು ಹೊರತುಪಡಿಸಿದರೆ (೨೪,೩೫೦ ಕಾರ್ಮಿಕರು) ಅತೀ ಹೆಚ್ಚು ಕಾರ್ಮಿಕರಿದ್ದ ನಗರ ಪ್ರದೇಶ ಬೆಂಗಳೂರಾಗಿತ್ತು (೧೫,೨೮೮ ಕಾರ್ಮಿಕರು). ಆರ್.ಬಾಲಕೃಷ್ಣ ಅವರು ಒಟ್ಟಾರೆ ಮೈಸೂರು ಪ್ರಾಂತ್ಯದಲ್ಲಿ ೧೯೩೫ರಲ್ಲಿ ಅಸ್ತಿತ್ವದಲ್ಲಿದ್ದ ಉತ್ಪಾದನಾ ಘಟಕಗಳನ್ನು ಕೈಗಾರಿಕಾವಾರು ಮತ್ತು ಪ್ರದೇಶವಾರು ಮಾಹಿತಿಯನ್ನು ಅಂಕಿಅಂಶಗಳ ಮೂಲಕ ನೀಡಿದ್ದಾರೆ[೨].

## ಕೈಗಾರಿಕಾವಾರು

| ಕೈಗಾರಿಕೆ | ಒಟ್ಟು ಕೈಗಾರಿಕೆಗಳು | ಪ್ರತಿದಿನ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು | ಪ್ರತಿ ಕೈಗಾರಿಕೆಯಲ್ಲಿ ಶೇಕಡವಾರು ಕಾರ್ಮಿಕರು |
|---|---|---|---|
| ಜವಳಿ : ನೂಲುವ ಮತ್ತು ನೇಯ್ಗೆ (ಉಣ್ಣೆ, ಹತ್ತಿ ಮತ್ತು ರೇಷ್ಮೆ) | ೬೬ | ೧೯೯೮೮ | ೨೦.೮ |
| ಚಿನ್ನದ ಗಣಿ | ೪ | ೨೩೩೩೮ | ೪೪.೩ |
| ಹತ್ತಿ ಜಿನ್ನಿಂಗ್ ಮತ್ತು ಪ್ರೆಸ್ಸಿಂಗ್ | ೨೧ | ೧೧೧೩ | ೨.೧ |

## ಪ್ರದೇಶವಾರು

| ಜಿಲ್ಲೆ | ಒಟ್ಟು | ಪ್ರತಿದಿನ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರು | ಪ್ರತಿ ಜಿಲ್ಲೆಯ ಕೈಗಾರಿಕಾ ಕಾರ್ಮಿಕರ ಪ್ರಮಾಣ |
|---|---|---|---|
| ೧. ಬೆಂಗಳೂರು | ೧೫೨ | ೧೫,೨೮೮ | ೨೯.೦ |
| ೨. ಮೈಸೂರು | ೮೩ | ೬,೮೨೩ | ೧೨.೯ |
| ೩. ಕೋಲಾರ | ೧೯ | ೨೪,೩೫೦ | ೪೬.೨ |
| ೪. ಚಿತ್ರದುರ್ಗ | ೩೦ | ೧,೫೬೯ | ೨.೯ |
| ೫. ಶಿವಮೊಗ್ಗ | ೧೧ | ೨,೩೬೨ | ೪.೪ |
| ೬. ಕಡೂರು | ೧೪ | ೧,೭೩೦ | ೩.೨ |
| ೭. ತುಮಕೂರು | ೧೪ | ೩೧೨ | ೦.೫ |
| ೮. ಹಾಸನ | ೧೨ | ೨೩೩ | ೦.೪ |
| ಒಟ್ಟು | ೩೩೫ | ೫೨,೬೩೭ | ೧೦೦ |

## ೫.೧. ವಸಾಹತು ಪೂರ್ವ

ಬ್ರಿಟನ್ನಿನಲ್ಲಿ ವೃತ್ತಿ ಸಂಘಗಳು ಅಥವಾ ಟ್ರೇಡ್ ಯೂನಿಯನ್‌ಗಳ ಹುಟ್ಟಿನ ಕುರಿತ ವಿಚಾರಗಳನ್ನು ತಿಳಿಯೋಣ. ಮೊದಮೊದಲು ಕಾರ್ಮಿಕರು ಈ ಯಂತ್ರಗಳೇ ತಮ್ಮ ಅಧೋಗತಿಗೆ ಕಾರಣವೆಂದು ತಿಳಿದು ಅವುಗಳನ್ನು ಪುಡಿ ಮಾಡತೊಡಗಿದರು. ೧೬೩೦ರಲ್ಲಿ ಲಂಡನ್ನಿನಲ್ಲಿ ವಾಯು ಚಾಲಿತ ಸಾ-ಮಿಲ್ಲೊಂದು ಸ್ಥಾಪನೆಯಾದಾಗ ಸಿಟ್ಟಿಗೆದ್ದ ಕಾರ್ಮಿಕರು ಅದನ್ನು ನಾಶಗೊಳಿಸದರು. ೧೭೫೮ರಲ್ಲಿ ಎವರೆಟ್ ಎಂಬಾತ ಸ್ಥಾಪಿಸಿದ ಪ್ರಥಮ ಉಣ್ಣೆ ನೇಯುವ ಯಂತ್ರವನ್ನು, ಅದರಿಂದಾಗಿ ಕೆಲಸ ಕಳೆದುಕೊಂಡ ಕಾರ್ಮಿಕರು ಬೆಂಕಿಗೆ ಆಹುತಿ ಮಾಡಿದರು. ಆರ್ಕ್‌ರೈಟನ ಬಟ್ಟೆ ಯಂತ್ರಗಳ ಉಪಯೋಗದ ವಿರುದ್ಧ ೫೦ ಸಹಸ್ರ ಕಾರ್ಮಿಕರು ಪಾರ್ಲಿಮೆಂಟಿಗೆ ಮನವಿ ಅರ್ಪಿಸಿದರು. ಆದರೆ ಬ್ರಿಟಿಷ್ ಸರ್ಕಾರ ಈ ಚಳವಳಿಯನ್ನು ಕ್ರೂರವಾಗಿ ಅಡಗಿಸಿತು. ಯಂತ್ರಗಳ ವಿಧ್ವಂಸದ ವಿರುದ್ಧ ಘೋರ ಕಾನೂನುಗಳು ರಚಿಸಲ್ಪಟ್ಟವು. ೧೮೧೩ರಲ್ಲಿ ಯಾರ್ಕ್‌ಶೈರ್‌ನ ೧೮ ಮಂದಿ ಕಾರ್ಮಿಕರನ್ನು ಈ ಅಪರಾಧಕ್ಕಾಗಿ ಗಲ್ಲಿಗೇರಿಸಲಾಯಿತು. ೧೮೩೧ರಲ್ಲಿ ಫ್ರಾನ್ಸ್‌ನ ಲಯನ್ಸ್ ಎಂಬಲ್ಲಿ ಯಂತ್ರಗಳ ವಿರುದ್ಧ ಸಿಲ್ಕ್ ಕಾರ್ಮಿಕರ ಒಂದು ದಂಗೆಯೇ ನಡೆದು ಹಲವರು ಹತರಾದರು. ಆದರೆ ಕಾರ್ಮಿಕರು ಕ್ರಮೇಣ ನಿರ್ಜೀವ ಯಂತ್ರ ತಮ್ಮ ವೈರಿಯಲ್ಲ ಎಂಬುದನ್ನು ಅರಿತರು. ಹೋರಾಟದ ರೀತಿ ಬದಲಾಯಿತು. ಜೀವನ ಸುಧಾರಣೆಗಾಗಿ ವೇತನ ಹೆಚ್ಚಳ, ಶ್ರಮ ಭಾರದ ಇಳಿತ ಮುಂತಾದ ಕೇಳಿಕೆಗಳು ಮಾಲೀಕರ ಅಥವಾ ಸರ್ಕಾರದ ಮುಂದೆ ಮಂಡಿಸಲ್ಪಟ್ಟವು. ಮುಷ್ಕರ ಮತ್ತು ಸಂಧಾನಗಳು ಪ್ರಾರಂಭವಾದವು. ಇದಕ್ಕಾಗಿ ಕಾರ್ಮಿಕರ ಸಂಘಟನೆ ಅನಿವಾರ್ಯವಾಯಿತು. ಹಿಂದೆ ಗುಡಿ ಕೈಗಾರಿಕೆಯ ಕಾಲದಲ್ಲಿ ಅಪ್ರೆಂಟೀಸ್‌ಗಳ ವೃತ್ತಿ ಕೂಟಗಳಿದ್ದವು. ಅದೇ ಮಾದರಿಯಲ್ಲಿ ಈಗ ಕಾರ್ಮಿಕ ಸಂಘಗಳು ಹುಟ್ಟಿಕೊಂಡವು ಆದುದರಿಂದಲೇ ಅವುಗಳಿಗೆ ಟ್ರೇಡ್ ಯೂನಿಯನ್ ಎಂದರೆ ವೃತ್ತಿ ಸಂಘಗಳು ಎಂಬ ಹೆಸರು ಬಂತು. ಹೀಗೆ ಟ್ರೇಡ್ ಯೂನಿಯನ್ ಚಳವಳಿ ಇತಿಹಾಸ ರಂಗವನ್ನು ಪ್ರವೇಶಿಸಿತು.

ಇಂತಹ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗಕ್ಕೆ ದಾರಿ ತೋರಿಸಿ, ಟ್ರೇಡ್ ಯೂನಿಯನ್ ಚಳವಳಿಗೆ ನಿರ್ದಿಷ್ಟ ಧ್ಯೇಯ-ಧೋರಣೆಗಳನ್ನು ಮತ್ತು ಅಂತಿಮ ಗುರಿಯನ್ನು ಕಲ್ಪಿಸಿಕೊಟ್ಟವರು ವೈಜ್ಞಾನಿಕ ಸಮಾಜವಾದದ ಸಂಸ್ಥಾಪಕರಾದ ಕಾರ್ಲ್ ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗಲ್ಸ್‌ರವರು. ೧೮೪೮ರಲ್ಲಿ ಅವರ "ಕಮ್ಯುನಿಸ್ಟ್ ಪ್ರಣಾಳಿಕೆ" ಪ್ರಕಟವಾಯಿತು. "ವಿಶ್ವದ ಕಾರ್ಮಿಕರೇ ಒಂದಾಗಿರಿ"

ಎಂಬ ಘೋಷಣೆ ಮೊಳಗಿತು. ಮಾರ್ಕ್ಸ್ ಮತ್ತು ಏಂಗಲ್ಸ್‌ರವರು ಸಮಾಜದ ಬೆಳವಣಿಗೆಯ ಮೂಲಭೂತ ನಿಯಮಗಳನ್ನು ಕಂಡುಹಿಡಿದರು. ಬಂಡವಾಳಶಾಹಿ ಪದ್ಧತಿಯ ಅಂತರ್ಗತ ವೈರುದ್ಯಗಳನ್ನು ಹೊರಗೆಡವಿದರು. ಅದು ಶಾಶ್ವತವಲ್ಲವೆಂಬುದನ್ನು ಸಾಧಾರವಾಗಿ ತೋರಿಸಿ, ಅದನ್ನು ಕೊನೆಗೊಳಿಸುವುದೊಂದೇ ಕಾರ್ಮಿಕ ವರ್ಗದ ಮತ್ತು ಇತರ ಎಲ್ಲಾ ಶೋಷಿತ ಜನ ವಿಭಾಗಗಳ ವಿಮೋಚನೆಗೆ ಏಕೈಕ ಮಾರ್ಗವೆಂದು ಅವರು ಸ್ಪಷ್ಟಪಡಿಸಿದರು. ಪಾಳೆಯಗಾರಿ ಪದ್ಧತಿಯ ವಿನಾಶಕ್ಕೆ ಹೇಗೆ ಬಂಡವಾಳಶಾಹಿ ವರ್ಗ ಕಾರಣವಾಯಿತೋ, ಹಾಗೆಯೇ ಬಂಡವಾಳಶಾಹಿ ಪದ್ದತಿಯ ನಾಶಕ್ಕೆ ಕಾರ್ಮಿಕ ವರ್ಗವೇ ಪ್ರಧಾನ ಅಸ್ತ್ರವೆಂದೂ ಅವರು ತೋರಿಸಿಕೊಟ್ಟರು. ಈ ಸಿದ್ಧಾಂತದ ಸಾರವನ್ನು ಸ್ವತಃ ಮಾರ್ಕ್ಸ್‌ರವರೇ ಸಂಕ್ಷಿಪ್ತವಾಗಿ ಹೀಗೆ ವಿವರಿಸಿದ್ದಾರೆ. 'ತಮ್ಮ ಅಸ್ತಿತ್ವಕ್ಕೆ ಅವಶ್ಯವಾದ ಸಾಮಾಜಿಕ ಉತ್ಪಾದನೆಯ ಕಾರ್ಯದಲ್ಲಿ ಮಾನವರ ನಡುವೆ ಕೆಲವು ನಿರ್ದಿಷ್ಟ ಸಂಬಂಧಗಳು ಏರ್ಪಡುತ್ತವೆ. ಇವು ಉತ್ಪಾದನಾ ಸಂಬಂಧಗಳು. (ಉದಾಹರಣೆ : ಒಡೆಯ ಮತ್ತು ಗುಲಾಮರು, ಜಮೀನ್ದಾರ ಮತ್ತು ಗೇಣಿದಾರರು ಅಥವಾ ಕೃಷಿ ಕೂಲಿಗಾರರು, ಮಾಲೀಕ ಮತ್ತು ಕಾರ್ಮಿಕರು, ಇತ್ಯಾದಿ). ಇವು ಮಾನವನ ವೈಯಕ್ತಿಕ ಇಚ್ಛೆಗೆ ಅಧೀನವಾಗಿರದ ಸಂಬಂಧಗಳು. ಸಮಾಜದ ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಒಂದು ನಿರ್ದಿಷ್ಟ ಹಂತಕ್ಕೆ ಅನುಗುಣವಾದ ಸಂಬಂಧಗಳು. ಸಮಾಜದ ಆರ್ಥಿಕ ರಚನೆ ಎಂಬುದು ಈ ಉತ್ಪಾದನಾ ಸಂಬಂಧಗಳ ಒಟ್ಟು ಮೊತ್ತವೇ ಹೊರತು ಬೇರೇನಲ್ಲ. ಇದೇ ಸಮಾಜದ ನಿಜವಾದ ಅಡಿಗಲ್ಲು. ಈ ಅಡಿಗಲ್ಲಿನ ಮೇಲೆ ಸಮಾಜದ ರಾಜಕೀಯ ಮತ್ತು ನ್ಯಾಯವಿಧಾಯಕ ಮೇಲ್ಮನೆ ಎದ್ದೇಳುತ್ತದೆ. ಆಯಾ ಕಾಲದ ಸಾಮಾಜಿಕ ಪ್ರಜ್ಞೆಯ ನಿರ್ದಿಷ್ಟ ರೂಪಗಳು ಇದಕ್ಕೆ ಅನುಗುಣವಾಗಿರುತ್ತವೆ. ಹೀಗೆ ಮಾನವನ ಸಾಮಾಜಿಕ, ರಾಜಕೀಯ ಮತ್ತು ಬೌದ್ಧಿಕ ಜೀವನ, ಅವನ ಜೀವನಾವಶ್ಯಕತೆಗಳ ಉತ್ಪಾದನಾ ವಿಧಾನವನ್ನು ಹೊಂದಿಕೊಂಡಿದೆ. ಅಂದರೆ ಮಾನವನ ಜೀವನವನ್ನು ರೂಪಿಸುವುದು ಆತನ ಪ್ರಜ್ಞೆಯಲ್ಲಿ ; ತದ್ವಿರುದ್ಧವಾಗಿ ಆ ಪ್ರಜ್ಞೆಯೇ ಸಾಮಾಜಿಕ ಜೀವನದಿಂದ ರೂಪಿಸಲ್ಪಡುತ್ತದೆ'. ಈ ಚರ್ಚೆಯ ಕುರಿತು ಎಸ್.ಆರ್. ಭಟ್‌ರವರು 'ಕರ್ನಾಟಕದಲ್ಲಿ ಕಾರ್ಮಿಕ ಚಳವಳಿ ನಡೆದು ಬಂದ ದಾರಿ' ಎಂಬ ಗ್ರಂಥದಲ್ಲಿ ಸುವಿಸ್ತಾರವಾಗಿ ಚರ್ಚಿಸಿದ್ದಾರೆ.

ಕಾರ್ಮಿಕ ಸಂಘ ಎಂದರೇನು? ಅದರ ಸ್ವರೂಪ, ಲಕ್ಷಣ ಹೇಗಿರುತ್ತದೆ? ಎಂಬಿತ್ಯಾದಿ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ ಅದಕ್ಕೆ ಉತ್ತರ ಹುಡುಕಲು ಹೊರಟಾಗ ಅದನ್ನು ಅರ್ಥಮಾಡಿಕೊಳ್ಳಲು

ಕಾರ್ಮಿಕ ಸಂಘಟನೆ ಕುರಿತು ಹಲವು ವಿದ್ವಾಂಸರು ನೀಡಿರುವ ವ್ಯಾಖ್ಯಾನಗಳು ಹಾಗೂ ಜಾಗತಿಕ ಮಟ್ಟದಲ್ಲಿ ಸಂಘದ ಹುಟ್ಟು ಹಾಗೂ ಬೆಳವಣಿಗೆಗಳ ಕುರಿತು ಅಧ್ಯಯನ ಮಾಡಬೇಕಾಗುತ್ತದೆ. ಆಗ ಆ ವ್ಯಾಖ್ಯಾನಗಳ ಪರಿಧಿಯೊಳಗೆ ಅಥವಾ ಆ ಚಹರೆಯ ಲಕ್ಷಣಗಳನ್ನು ಹೊಂದಿದ್ದ ಕಾರ್ಮಿಕ ಸಂಘಟನೆಗಳಿದ್ದವೇ? ಎಂಬುದಾಗಿ ನಿರ್ಧರಿಸಬೇಕಾಗುತ್ತದೆ. ಅಂತಹ ಕೆಲವು ವ್ಯಾಖ್ಯಾನಗಳನ್ನು ಇಲ್ಲಿ ನೀಡಲಾಗಿದೆ.

ವೆಬ್ಸ್ ಅವರ ವ್ಯಾಖ್ಯಾನದಂತೆ "ಕಾರ್ಮಿಕ ಸಂಘವು ಕೂಲಿ ಅಥವಾ ವೇತನ ಪಡೆಯುವವರ ನಿರಂತರ ಸಂಸ್ಥೆಯಾಗಿದ್ದು, ದುಡಿಯುವ ವರ್ಗದ ಸ್ಥಿತಿಗತಿಗಳನ್ನು ಸುಧಾರಿಸುವ ಅಥವಾ ಅಭಿವೃದ್ಧಿಪಡಿಸುವುದಾಗಿದೆ".

ಲೆನಿನ್ ಅಭಿಪ್ರಾಯಪಡುವಂತೆ "ಟ್ರೇಡ್ ಯೂನಿಯನ್‌ಗಳು, ಆಡಳಿತ ಮತ್ತು ವ್ಯವಸ್ಥಾಪನೆಯ ಶಾಲೆಗಳು, ಕಮ್ಯುನಿಸಂ ಶಾಲೆಗಳು, ಪಾರ್ಟಿಯ ಮತ್ತು ಕಾರ್ಮಿಕ ಸಂಘಗಳ ಉದ್ದೇಶಗಳು ಒಂದೇ ಆಗಿರುತ್ತವೆ".

ಮಾಜಿ ಉಪರಾಷ್ಟ್ರಪತಿ ವಿ.ವಿ. ಗಿರಿ ಅವರ ಪ್ರಕಾರ "ಕಾರ್ಮಿಕ ಸಂಘವು ಕೆಲಸಗಾರರ ಐಚ್ಛಿಕ ಸಂಘಟನೆಯಾಗಿದ್ದು, ಕಾರ್ಮಿಕ ಹಿತಾಸಕ್ತಿಯನ್ನು ರಕ್ಷಿಸಲು ಸಾಮೂಹಿಕ ಶಕ್ತಿಯಿಂದ ಕೆಲಸ ಮಾಡುವ ಸಂಸ್ಥೆಯಾಗಿದೆ".

ಬಿ.ಎಲ್. ಗ್ರೋವರ್ ಮತ್ತು ಎಸ್. ಗ್ರೋವರ್ ಅವರ ವ್ಯಾಖ್ಯಾನದಂತೆ "ಕೂಲಿಕಾರರ ಜೀವನ ಹಾಗೂ ಅವರ ಪರಿಸ್ಥಿತಿಯನ್ನು ಸುಧಾರಿಸಲು ನಿರಂತರವಾಗಿ ಕೂಲಿಕಾರರಿಂದಲೇ ಸಂಘಟಿಸಲ್ಪಟ್ಟ ಸಂಘಟನೆಯೇ ಕಾರ್ಮಿಕ ಸಂಘ"[೩]. ಕಾರ್ಮಿಕ ಸಂಘಗಳು ಸಾಮಾನ್ಯವಾಗಿ ದುಡಿಯುವವರ ಸಂಘವಾಗಿದ್ದು, ಇಲ್ಲಿ ಅವರ ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಿ, ವೃದ್ಧಿಸಿ ಸಾಮಾಜಿಕ ಸ್ಥಾನಮಾನವನ್ನು ಸುಧಾರಿಸುವುದಾಗಿದೆ.

ಮೇಲಿನ ವ್ಯಾಖ್ಯಾನಗಳ ರೂಪದಲ್ಲಿ ವಸಾಹತುಪೂರ್ವದಲ್ಲಿ ಕಾರ್ಮಿಕ ಸಂಘಗಳು ಭಾರತದಲ್ಲಿ ಇದ್ದಿರಲು ಸಾಧ್ಯವಿಲ್ಲ. ಅಷ್ಟೇ ಏಕೆ ಕೈಗಾರಿಕಾ ಕ್ರಾಂತಿಗೂ ಪೂರ್ವದಲ್ಲಿ ಯುರೋಪ್‌ನಲ್ಲಿಯೂ ಸಹ ನೋಡಲು ಸಾಧ್ಯವಿಲ್ಲ. ಇಂಗ್ಲೆಂಡ್ ಕಾರ್ಮಿಕ ಚಳುವಳಿಯ ತಾಯ್ನಾಡಾಗಿದೆ. ಕೈಗಾರಿಕಾ ಕ್ರಾಂತಿಯ ಪ್ರಭಾವ ಆಧುನಿಕ ಕಾರ್ಮಿಕ ಸಂಘಗಳ ಸ್ಥಾಪನೆಗೆ

ಹಿನ್ನೆಲೆಯಾದರೂ ಕೈಗಾರಿಕಾ ಕ್ರಾಂತಿಪೂರ್ವದಲ್ಲಿ ಅವು ಅಸ್ತಿತ್ವದಲ್ಲಿರಲಿಲ್ಲ ಎಂದು ಹೇಳಲಾಗದು. ಇಂಗ್ಲೆಂಡಿನ ಲಂಕಾಶೈರ್ ಮುಂತಾದ ಕೈಗಾರಿಕಾ ನಗರಗಳಲ್ಲಿ ಕಾರ್ಮಿಕರು ಅಧಿಕವಾಗಿದ್ದರೂ ಶಕ್ತಿಯುತ, ಸ್ಥಿರವಾದ, ದೃಢವಾದ ನೆಲೆಗಟ್ಟಿನ ಮೇಲೆ ಕಾರ್ಮಿಕ ಸಂಘಗಳು ಅಸ್ತಿತ್ವಕ್ಕೆ ಬಂದಿರಲಿಲ್ಲ[೪]. ಕಾರ್ಮಿಕರ ಜೀವನ ದಬಾರಿಯಾಗಿ, ಕೈತುಂಬಾ ಕೆಲಸ ನಿರ್ವಹಿಸುತ್ತಾ, ಜೀವನ ನಿಭಾಯಿಸಲು ಹೆಣಗುತ್ತಿದ್ದರು. ಅಲ್ಲಿನ ಸರ್ಕಾರವೂ ಸಹ ೧೭೯೯ರ ಸಂದರ್ಭದಲ್ಲಿ ಇಂತಹ ಕಾರ್ಮಿಕ ಸಂಘಟನೆಗಳನ್ನು ಮುಟ್ಟುಗೋಲು ಹಾಕಲು ಪ್ರಯತ್ನಿಸಿತು. ಕೈಗಾರಿಕಾ ಕ್ರಾಂತಿಗೂ ಮೊದಲು ಕಾರ್ಮಿಕರು ಹಾಗೂ ಮಾಲೀಕರ ಸಹಭಾಗಿತ್ವದಲ್ಲಿ "ವೃತ್ತಿ ಅಥವಾ ವರ್ತಕ ಸಂಘಗಳು" ಅಸ್ತಿತ್ವದಲ್ಲಿದ್ದು ಕಾರ್ಯನಿರತವಾಗಿದ್ದವು[೫]. ಈ ಸಂಘಗಳು ಆಧುನಿಕ ಕಾರ್ಮಿಕ ಸಂಘಗಳ ಗುಣಲಕ್ಷಣಗಳನ್ನು ಹೊಂದಿದಂತೆ ಕಂಡುಬರುವುದಿಲ್ಲ. ಅಂತೆಯೇ ಭಾರತದಲ್ಲೂ ಸ್ಥಿರ ರೂಪದ, ಶಕ್ತಿಯುಳ್ಳ ಕಾರ್ಮಿಕ ಸಂಘಗಳು ಕೈಗಾರಿಕಾ ಕ್ರಾಂತಿಯವರೆಗೂ ಅಸ್ತಿತ್ವಕ್ಕೆ ಬರಲಿಲ್ಲ.

ಆಧುನಿಕ ಕಾರ್ಮಿಕ ಸಂಘಗಳ ಬೇರುಗಳನ್ನು ಕೈಗಾರಿಕಾ ಕ್ರಾಂತಿ ಮತ್ತು ಅದರ ಅಂಗವಾದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಣಬಹುದು. ಕೈಗಾರಿಕಾ ಕ್ರಾಂತಿಯಿಂದ ವಿಶ್ವದ ಹಲವು ಭಾಗಗಳಲ್ಲಿ ಬಂಡವಾಳಶಾಹಿಗಳು ಏಳಿಗೆ ಹೊಂದಿ ಕಾರ್ಮಿಕರನ್ನು ಅಸಡ್ಡೆಯಿಂದ ನೋಡಿಕೊಂಡಿದ್ದರಿಂದ ಕಾರ್ಮಿಕ ಸಂಘಟನೆ ಮತ್ತು ಸಂಘಗಳು ಹುಟ್ಟಿಕೊಂಡವು. ಬಂಡವಾಳಶಾಹಿ ಬೇರುಗಳು ವಿಷಫಲ ಉಣಿಸುತ್ತಿದ್ದರಿಂದ ಕಾರ್ಮಿಕರು ವ್ಯವಸ್ಥೆಯ ವಿರುದ್ಧ ಸಂಘಟಿತರಾಗುತ್ತಾ ಮುನ್ನಡೆದರು. ಭಾರತದಲ್ಲೂ ವಸಾಹತು ಪೂರ್ವದಲ್ಲಿ 'ವರ್ತಕ ಸಂಘಗಳು' (ಟ್ರೇಡ್ ಗಿಲ್ಡ್ಸ್) ಅಸ್ತಿತ್ವದಲ್ಲಿದ್ದವು. ಇವು ಆರ್ಥಿಕವಾಗಿ ಬಲಿಷ್ಠವಾಗಿದ್ದರಿಂದ ರಾಜಕೀಯದ ಮೇಲೆ ಪ್ರಭಾವ ಬೀರಿದ್ದವು. ಮೈಸೂರು ರಾಜ್ಯದಲ್ಲಿ ಇಂತಹ ವ್ಯಾಪಾರಿ ಸಂಘಗಳನ್ನು ಪ್ರಾಚೀನ ಕಾಲದಿಂದಲೂ ಕಾಣಬಹುದು. ಆದರೆ ಇವುಗಳಾವುವು ಆಧುನಿಕ ಮಾದರಿಯದ್ದಾಗಿರಲಿಲ್ಲ.

### ೫.೨. ವಸಾಹತು ಕಾಲಘಟ್ಟ

ಬ್ರಿಟಿಷರು ೧೯ನೇ ಶತಮಾನದಲ್ಲಿ ದೊಡ್ಡ ಮತ್ತು ಆಧುನಿಕ ಯಂತ್ರಗಳ ಕೈಗಾರಿಕೆಗಳನ್ನು ಭಾರತದಲ್ಲಿ ಸ್ಥಾಪಿಸಲು ಮುಂದಾದಂತೆಯೇ ಕಾರ್ಮಿಕ ಸಂಘಗಳ ಏಳಿಗೆಯೂ ಆರಂಭವಾಯಿತು. ಅಹಮದಾಬಾದ್‌ನಲ್ಲಿ ಮೊಟ್ಟಮೊದಲಬಾರಿಗೆ ಕಾರ್ಮಿಕ ಸಂಘ ಅಸ್ತಿತ್ವಕ್ಕೆ ಬಂದಿತು.

ಅಹಮದಾಬಾದಿನ ಹತ್ತಿ ಗಿರಣಿಯ ಏಜೆಂಟರ ಮಗಳಾದ 'ಅನುಸೂಯಾ ಬಿನ್ ಸಾರಾಬಾಯಿ' ಇಂಗ್ಲೆಂಡಿಗೆ ಭೇಟಿ ನೀಡಿ ಅಲ್ಲಿನ ಕಾರ್ಮಿಕ ಸಂಘಗಳು ನಿರ್ವಹಿಸುತ್ತಿದ್ದ ಕಾರ್ಯಗಳನ್ನು ವೀಕ್ಷಿಸಿ ತಾಯ್ನಾಡಿಗೆ ಹಿಂತಿರುಗಿದ್ದರು. ಅವರ ಮಾರ್ಗದರ್ಶನದಲ್ಲಿ ೦೪-೧೨-೧೯೧೨ರಲ್ಲಿ ಕಾರ್ಮಿಕ ಸಂಘ ಅಹಮದಾಬಾದಿನಲ್ಲಿ ಸ್ಥಾಪನೆಯಾಯಿತು. ಈ ಅಂಶವನ್ನು ಗಮನಿಸಿದಾಗ ಭಾರತದಲ್ಲಿ ಪ್ರಥಮ ಕಾರ್ಮಿಕ ಸಂಘಕ್ಕೆ ನಾಯಕತ್ವವನ್ನು ನಿಡಿದವರು ಮಹಿಳೆಯಾಗಿದ್ದಾರೆ. ನಂತರ ಮದ್ರಾಸಿನಲ್ಲಿ ಡಾ. ಅನಿಬೆಸೆಂಟರ ಮಾರ್ಗದರ್ಶನದಲ್ಲಿ ಬಿ.ಪಿ. ವಾಡಿಯಾ ಅವರು 'ಮದ್ರಾಸ್ ಕಾರ್ಮಿಕ ಸಂಘ'ವನ್ನು ಸ್ಥಾಪಿಸಿದರು[೬]. ಅಖಿಲ ಭಾರತ ಕಾರ್ಮಿಕ ಸಂಘಗಳ ಏಳಿಗೆಯ ಒಂದು ಭಾಗವಾಗಿ ಬೆಂಗಳೂರು ನಗರದ ಕಾರ್ಮಿಕ ಸಂಘಟನೆಗಳಿದ್ದವು. ಆರಂಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಇದು ಭಿನ್ನವಾಗಿಯೇ ಇತ್ತು. ಮೈಸೂರು ಸಂಸ್ಥಾನದ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್, ಎಂ. ವಿಶ್ವೇಶ್ವರಯ್ಯ ಅವರು ಕೈಗಾರಿಕೆಗಳ ಏಳಿಗೆಗೆ ಅವಕಾಶ ಕಲ್ಪಿಸಿದ್ದರಾದರೂ ಕಾರ್ಮಿಕರ ಸಂಘಟನೆಯನ್ನು ಸಕಾರಾತ್ಮಕವಾಗಿ ನೋಡಲಿಲ್ಲ. ೧೯೨೬ರ ಬಿನ್ನಿ ಮಿಲ್ ಮುಷ್ಕರಕ್ಕೆ ಸಂಬಂಧಪಟ್ಟಂತೆ ಮಿರ್ಜಾ ಇಸ್ಮಾಯಿಲ್ ಅವರ ನಡವಳಿಕೆಗೆ ಬೇಸತ್ತು ನಾರಿಮನ್ ಅವರು ಮಿರ್ಜಾರಿಗೆ 'ದಕ್ಷಿಣ ಭಾರತದ ಪುಟ್ಟ ಮೊಘಲ್' ಎಂಬ ಅನ್ವರ್ಥ ಬಿರುದನ್ನು ಕೊಟ್ಟರು[೭]. ಈ ಹಿನ್ನೆಲೆಯಲ್ಲಿ ಮೈಸೂರು ರಾಜ್ಯದ ಕಾರ್ಮಿಕ ಚಳವಳಿ ಮಹತ್ವ ಪಡೆದುಕೊಂಡಿದೆ.

೧೯೧೮ರ ವೇಳೆಗಾಗಲೇ ಶಕ್ತಿಯ ಉತ್ಪಾದನಾ ವೆಚ್ಚ ಕಾರ್ಮಿಕರಿಗಿಂತಲೂ ಬಹಳ ಮುಖ್ಯ ಎಂಬ ಭಾವನೆ ರಾಜ್ಯದಲ್ಲಿ ಬೇರೂರಿತ್ತು[೮]. ಕಾರಣ ಈ ವೇಳೆಗೆ ರಾಜ್ಯದ ಗಿರಣಿಗಳು ವಿದ್ಯುಚ್ಛಕ್ತಿಯ ಸೌಲಭ್ಯವನ್ನು ಪಡೆದುಕೊಂಡಿದ್ದವು. ದಾವಣಗೆರೆಯಲ್ಲಿ ಈ ಅವಧಿಯಲ್ಲಿ ಇದ್ದ ಒಟ್ಟಾರೆ ಜನಸಂಖ್ಯೆ ಕೇವಲ ಹತ್ತು ಸಾವಿರ (೧೦,೦೦೦)ದಷ್ಟು. ಹೀಗಾಗಿ ಒಂದು ವರ್ಷಕ್ಕೆ ಸುಮಾರು ೧೦೦೦ ದಿಂದ ೧೨೦೦ ಕಾರ್ಮಿಕರ ಅವಶ್ಯಕತೆ ಮಾತ್ರ ಇದ್ದಿತು. ಪರಿಣಾಮ ಇವರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸ್ಥಳಾಂತರಿಸುವ ಪ್ರಕ್ರಿಯೆ ಸಾಮಾನ್ಯ ಸಂಗತಿಯಾಗಿತ್ತು. ಅದರಲ್ಲೂ ಬೆಂಗಳೂರಿನಿಂದ ವಿದ್ಯುಚ್ಛಕ್ತಿಯನ್ನು ತರಿಸಿಕೊಳ್ಳುವ ಬಗ್ಗೆ ಯೋಚಿಸಿದಾಗಲಂತೂ ಕಾರ್ಮಿಕರು ಒಂದು 'ಸಂಗತಿ' ಎಂಬುದಾಗಿ ಯೋಚಿಸುವುದನ್ನೇ ಮರೆಯುವ ರೀತಿ ಮಾಲೀಕರು ವರ್ತಿಸಿದರು[೯]. ಇಂತಹ ಹಲವು ಸಂದರ್ಭಗಳು ಕಾರ್ಮಿಕರನ್ನು ಒಟ್ಟುಗೂಡಿಸಲು, ಸಂಘಟನೆ ಮಾಡಿಕೊಳ್ಳಲು ಪ್ರೇರೇಪಿಸಿದವು.

೧೯೨೩–೩೦ರ ವೇಳೆಗೆ ರಾಜ್ಯದಲ್ಲಿ ಕೆಲವು ಕಾರ್ಮಿಕ ಸಂಘಗಳು ನೋಂದಣಿಯಾದವು. ಮುಖ್ಯವಾಗಿ ಬೆಂಗಳೂರು ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್, ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಎಂಪ್ಲಾಯೀಸ್ ಯೂನಿಯನ್ ಹಾಗೂ ಮೈಸೂರು ಪ್ರಿಂಟಿಂಗ್ ಲೇಬರ್ ಯೂನಿಯನ್[೧೦]. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ಅವಧಿಯಲ್ಲಿ ತಲೆಯೆತ್ತಿದ ಮೇಲಿನ ಮೂರು ಕಾರ್ಮಿಕ ಸಂಘಗಳಲ್ಲಿ ಎರಡು ಬೆಂಗಳೂರಿನಲ್ಲಿ ನೋಂದಣಿಯಾದವುಗಳು; ಅಲ್ಲದೆ ಅವುಗಳು ಹತ್ತಿ ಗಿರಣಿಗಳ ಹಿನ್ನೆಲೆಯಲ್ಲಿ ತಮ್ಮ ಅಸ್ತಿತ್ವವನ್ನು ಕಂಡುಕೊಂಡವುಗಳಾಗಿದ್ದವು. ೧೯೨೩ರ ವೇಳೆಗೆ ಬಾಂಬೆ ಹತ್ತಿ ಗಿರಣಿಗಳಲ್ಲಿ ಶೇ. ೪೨.೫ಷ್ಟು ಕಾರ್ಮಿಕರು ಕಾರ್ಮಿಕ ಸಂಘಟನೆಯಲ್ಲಿ ನೋಂದಾಯಿಸಿಕೊಂಡಿದ್ದರೆ, ಅಹಮದಾಬಾದ್‌ನಲ್ಲಿ ಅದರ ಪ್ರಮಾಣ ಶೇ. ೨೯ರಷ್ಟು, ಆದರೆ ಸೊಲ್ಲಾಪುರದಲ್ಲಿ ಶೇ. ೫ರಷ್ಟು ಮಾತ್ರ ಎಂಬುದಾಗಿ ಬಿಷ್ಣುಪ್ರಿಯ ಗುಪ್ತ[೧೧] ಅವರು ವ್ಯಾಖ್ಯಾನಿಸುತ್ತಾರೆ.

ಅದೆಲ್ಲದಕ್ಕಿಂತ ೧೯೨೯ರಲ್ಲಿ ಪ್ರಾರಂಭವಾದ 'ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಎಂಪ್ಲಾಯೀಸ್ ಯೂನಿಯನ್' ಎಂಬ ಕಾರ್ಮಿಕ ಸಂಘಟನೆಯು ರಾಜ್ಯದ ಹತ್ತಿಗಿರಣಿಗಳಲ್ಲಿಯೇ ಅತಿ ದೊಡ್ಡ ಗಿರಣಿಯಾಗಿದ್ದು ಹೆಚ್ಚಿನ ಕಾರ್ಮಿಕರನ್ನು ಒಳಗೊಂಡ ಸಂಘವಾಗಿತ್ತು[೧೨]. ಅಲ್ಲದೆ ಈ ಸಂಘದ ಸ್ಥಾಪನೆಗೆ ಆಡಳಿತದ ನೆರವು ಇದ್ದಿತು. ಸಂಘದ ರಚನೆ, ಬೆಳವಣಿಗೆಯಲ್ಲಿ 'ಕೈಗಾರಿಕೆಗಳ ಇಲಾಖೆ' (ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರೀಸ್) ಯು ಹೆಚ್ಚಿನ ಆಸಕ್ತಿಯನ್ನು ತೋರಿತ್ತು. ಒಟ್ಟು ೩೯೫೦ ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದ ಈ ಗಿರಣಿಯಲ್ಲಿ (ಬಿನ್ನಿಮಿಲ್ ಅಥವಾ ದ ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್) ೨೫೪೪ ಸಂಖ್ಯೆಯ ಕಾರ್ಮಿಕರು ಈ ಸಂಘದಲ್ಲಿ ಸದಸ್ಯತ್ವವನ್ನು ಪಡೆದಿದ್ದರು. ಅಲ್ಲದೆ ೧೯೨೯–೩೦ರ ಅವಧಿಯಲ್ಲಿ ೧೭೮೫ ರೂ.ಗಳ ವಂತಿಗೆ ಅಥವಾ ಚಂದಾವನ್ನು ಸಂಗ್ರಹಿಸಿದ್ದರು[೧೩]. ಅಲ್ಲದೆ ಈ ಸಂಘದ ಹೆಗ್ಗಳಿಕೆಯೇನೆಂದರೆ ಗಿರಣಿಯ ಆಡಳಿತದೊಂದಿಗೆ ಹಿಂದೆಂದಿಗೂ ಮಾಡಿರದ ಮಾತುಕತೆಯನ್ನು ಈ ಅವಧಿಯಲ್ಲಿ ಯಶಸ್ವಿಯಾಗಿ ಮಾಡಿದ್ದಿದು. ಇದೇ ಅವಧಿಯಲ್ಲಿ ಮೈಸೂರು ನ್ಯಾಯವಿಧಾಯಕ ಸಭೆ (ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ)ಯಲ್ಲಿ ಕಾರ್ಮಿಕ ಹಿತಾಸಕ್ತಿಯನ್ನು ಪ್ರತಿನಿಧಿಸುವ ಸಲುವಾಗಿ ಈ 'ಸಂಘಟನೆ'ಗೆ ಅವಕಾಶವನ್ನು ಮಾಡಿಕೊಡುವುದಾಗಿ ಭರವಸೆಯನ್ನು ನೀಡಿತ್ತು[೧೪]. ಆದರೆ ಮೈಸೂರಿನಲ್ಲಿದ್ದ ಇತರೆ ಕಾರ್ಮಿಕ ಸಂಘಟನೆಗಳ ನಡುವಿನ ಸಂಬಂಧ ಉತ್ತಮವಾಗಿಲ್ಲದ ಕಾರಣ ಈ ಅವಕಾಶ ಕೈ ತಪ್ಪಿಹೋಯಿತು. ಇದಕ್ಕೆ ಕೊಟ್ಟ ಸಮಜಾಯಿಶಿ

ಏನೆಂದರೆ; ಅದರದ್ದೇ ಆದ ಮಾತಿನಲ್ಲಿ ಹೇಳುವುದಾದರೆ – "Labour is not in a position to present a united front to capital and collective bargaining is not sufficiently effective"[೧೫]. ಅಂದರೆ ಕಾರ್ಮಿಕರು ಬಂಡವಾಳ ಹಾಗೂ ಸಾಮೂಹಿಕ ಚೌಕಾಸಿಗೆ ಒಗ್ಗಟು ಅಥವಾ ಏಕತೆಯನ್ನು ಪ್ರದರ್ಶಿಸುವ ಸ್ಥಾನಮಾನವಾಗಲಿ ಹಾಗೂ ಪರಿಣಾಮಕಾರಿಯಾದ ದಕ್ಷತೆಯನ್ನಾಗಲಿ ಹೊಂದಿಲ್ಲ.

ಇಲ್ಲಿ ಇನ್ನೊಂದು ಕಡೆ ಆಕರಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾದರೆ ಬ್ರಿಟಿಷರು ಕಾರ್ಮಿಕ ಸಂಘಟನೆ ವಿಚಾರದಲ್ಲಿ ಈ ಮಟ್ಟದ ಔದಾರ್ಯವನ್ನು ತೋರಿಸಿದ್ದು ಕೇವಲ ಸಂಸ್ಥಾನ ರಾಜ್ಯಗಳಲ್ಲಿ ಮೈಸೂರಿಗೆ ಸ್ವಲ್ಪ ಜಾಸ್ತಿಯೇ ಅನಿಸುತ್ತದೆ. ಏಕೆಂದರೆ ಬಿನ್ನಿ ಗಿರಣಿಯ ಆಡಳಿತ ಮೂಲತಃ ಯುರೋಪಿನ ನಿಯಂತ್ರಣದಲ್ಲಿದ್ದು; ಮೈಸೂರು ಆಡಳಿತ ಪ್ರತ್ಯಕ್ಷವಾಗಿ ಒಡೆಯರ ನಿಯಂತ್ರಣದಲ್ಲಿತ್ತು. ಈ ಎರಡು ರೀತಿಯದಾದ ಆಡಳಿತದೊಳಗೆ ಬ್ರಿಟಿಷರು ಕಾರ್ಮಿಕರ ಪರವಾದ ನಿಲುವನ್ನು ತಾಳುವುದರ ಮೂಲಕ ವಸಾಹತುಶಾಹಿಯು ಪ್ರಜಾತಾಂತ್ರಿಕ, ಸಮಾಜವಾದದ ಪರವಾಗಿದೆ ಎಂದು ತೋರಿಸಿಕೊಳ್ಳುತ್ತಾ 'ಮೈಸೂರು ನ್ಯಾಯವಿದಾಯಕ ಸಭೆ'ಯಲ್ಲಿ ಸಂಘಟನೆಯ ಪ್ರಾತಿನಿಧ್ಯಕ್ಕೆ ಹಿನ್ನಡೆಯಾಗುವುದರ ಮೂಲಕ ಕಾರ್ಮಿಕರು ಒಡೆಯರ ಆಡಳಿತವನ್ನು ಅನುಮಾನಿಸುವ ವಾತಾವರಣ ನಿರ್ಮಾಣ ಮಾಡಿತ್ತು.

೧೯೨೧ರಲ್ಲಿ 'ದ ಬಿನ್ನಿಮಿಲ್ ವೆಲ್‌ಫೇರ್ ಕಮಿಟಿ' (ಬಿನ್ನಿಮಿಲ್ಲು ಕಲ್ಯಾಣ ಸಮಿತಿ) ಪ್ರಾರಂಭವಾಯಿತು[೧೬]. ಇದು ಕಾರ್ಮಿಕರಿಗೆ ಬೋನಸ್ ಕೊಡಿಸುವ ವಿಷಯವಾಗಿ, ಇತರೆ ಡಿವಿಡೆಂಟ್ ಭರಿಸುವ ವಿಷಯವಾಗಿ ತನ್ನ ಕಾರ್ಯ ಮಾಡುತ್ತಿತ್ತು. ಇದು ಕಾರ್ಮಿಕರನ್ನಲ್ಲದೇ ಇಡೀ ಗಿರಣಿಯ ಗುಮಾಸ್ತರು, ಮೇಸ್ತ್ರಿಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಳ್ಳಲು ಯಶಸ್ವಿಯಾಗಿತ್ತು. ಕಾರ್ಮಿಕ ಸಂಘಟನೆಗಳು ಮೊದಲಿನಿಂದಲೂ ಹೋರಾಟಕ್ಕೆ ಬದ್ಧರಾಗಿದ್ದರೂ, ಅವು ಹೆಚ್ಚು ಕ್ರಿಯಾಶೀಲವಾದದ್ದು ೧೯೩೦–೩೫ರ ಸಂದರ್ಭದಲ್ಲಿ. ಬಿನ್ನಿಮಿಲ್ ಕಾರ್ಮಿಕ ಸಂಘ ಅದಾಗಲೇ ಬಲಿತು ಬೆಳೆದಿತ್ತು. ಅದೇ ರೀತಿ ಇತರೆ ಕಾರ್ಖಾನೆ ಹಾಗೂ ಗಿರಣಿಗಳಲ್ಲಿ ಕಾರ್ಮಿಕ ಸಂಘಗಳು ಹುಟ್ಟಿ, ತಮ್ಮ ವರ್ಗದವರ ಹಕ್ಕು ಬಾಧ್ಯತೆಗಳ ಜೊತೆಗೆ ಸ್ವಾತಂತ್ರ್ಯ ಹೋರಾಟಕ್ಕಾಗಿಯೂ ಶ್ರಮಿಸಿದವು. ಗಿರಣಿಗಳ ಕಾರ್ಮಿಕರ ಹಿತಕ್ಕಾಗಿ ಎಂ.ಎ. ಪರಶುರಾಮ ಎಂಬ ಕಾರ್ಮಿಕ ಮುಂದಾಳು "ದರಿದ್ರನಾರಾಯಣ ಸೇವಾ ಸಂಘ"ವನ್ನು ಸ್ಥಾಪಿಸಿದರು[೧೭]. ಇದರ ಮೂಲಕ ಕಾಂಗ್ರೆಸ್‌ನ

ಧ್ಯೇಯಗಳನ್ನು ಹಾಗೂ ಸ್ವಾತಂತ್ರ್ಯ ಹೋರಾಟದ ವಿಚಾರಗಳನ್ನು ಕಾರ್ಮಿಕರಿಗೆ ತಿಳಿ ಹೇಳಲು ಹಾಗೂ ಇವರ ತೊಂದರೆಗಳನ್ನು ದೊಡ್ಡ ಪಟಲದ ಮೇಲೆ ಚಿತ್ರಿಸಲೂ ಅನುಕೂಲವಾಯಿತು. ಸರ್ಕಾರ ಇವನನ್ನು ೧೯೩೯, ೧೯೪೦, ೧೯೪೧ ಹಾಗೂ ೧೯೪೪ರಲ್ಲಿ ನಾಲ್ಕು ಬಾರಿ ಉಚ್ಚಾಟನೆ ಮಾಡಿದರೂ ಇವನ ಛಲವನ್ನು ಮಾತ್ರ ಹತ್ತಿಕ್ಕಲಾಗಲಿಲ್ಲ.

೧೯೨೬ರಲ್ಲಿ ಜರುಗಿದ ಬಿನ್ನಿಮಿಲ್‌ನ ಬೋನಸ್ ನೀಡಿಕೆಯ ಕುರಿತಾದ ಮುಷ್ಕರದ ಪರಿಣಾಮವಾಗಿ ಕಾರ್ಮಿಕರಿಗೆ ತಮ್ಮ ಬೇಡಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಅಭಿವ್ಯಕ್ತಿಸಲು ಒಂದು ಸಂಘದ ಅವಶ್ಯಕತೆ ಇದೆ ಎಂದು ಮನಗಂಡರು. ಮಾಲೀಕನಾಗಿದ್ದ ನೀಲಗಿರಿ ಸಂಜೀವಯ್ಯ, ಇವರು ಕಾರ್ಮಿಕರ ಹಂಬಲಕ್ಕೆ ಸಂವೇದಿಸಿ 'ಬೆಂಗಳೂರು ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್'ನ್ನು ಸ್ಥಾಪಿಸಿದರು[೧೮]. ಇದನ್ನು ಮೈಸೂರು ರಾಜ್ಯದ ಅಧಿಕಾರಿಗಳು ಸ್ವಾಗತಿಸಿದರು. ಈ ಕಾಲಾವಧಿಯಲ್ಲಿ ಟ್ರೇಡ್ ಯೂನಿಯನ್‌ನ್ನು ಒಂದು ಧಾರ್ಮಿಕ ಸಂಸ್ಥೆಯಾಗಿ ನೋಂದಾಯಿಸಲಾಗುತ್ತಿತ್ತು[೧೯].

೧೯೨೦ರ ಸಂದರ್ಭದಲ್ಲಿ ಕೆ.ಟಿ. ಭಾಷ್ಯಂ, ಪಿ.ಎಂ. ರಾಮಶರ್ಮ ಮತ್ತು ಕೆ.ಸಿ. ರೆಡ್ಡಿ ಇಂತಹ ನಾಯಕರು ಮುಂದೆ ಬಂದು ಮೈಸೂರಿನಲ್ಲಿ ಕಾರ್ಮಿಕರನ್ನು ಸಂಘಟಿಸುವುದರಲ್ಲಿ ರಾಷ್ಟ್ರೀಯ ಆಸಕ್ತಿ ಸ್ಪಷ್ಟವಾಗಿತ್ತು. ೧೯೨೭ರ ನಂತರ ಭಾಷ್ಯಂ ಮತ್ತು ರಾಮಶರ್ಮ 'ಬೆಂಗಳೂರು ಟೆಕ್ಸ್‌ಟೈಲ್ಸ್ ಲೇಬರ್ ಯೂನಿಯನ್' ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳಾಗಿ ಎಲ್ಲಾ ಟೆಕ್ಸ್‌ಟೈಲ್ಸ್ ಮಿಲ್ಲುಗಳ ಕಾರ್ಮಿಕರು ಈ ಯೂನಿಯನ್ನಿನ ಸದಸ್ಯರಾಗುವಂತೆ ಮಾಡಲು ಬಹಳ ಶ್ರಮಿಸಿದರು. ಕಾಂಗ್ರೆಸ್ ನಾಯಕರು ಬಿನ್ನಿಮಿಲ್, ಮಹಾರಾಜ ಮಿಲ್ಲು ಹಾಗೂ ಮಿನರ್ವ ಮಿಲ್ಲು ಇಂತಹ ದೊಡ್ಡ ಸ್ಥಾವರಗಳ ಪರವಾಗಿದ್ದರೆ ಹೊರತು ಸಣ್ಣ ಪ್ರಮಾಣದ ಗಿರಣಿಗಳ ಕಡೆಗೆ ಅಷ್ಟಾಗಿ ಒತ್ತು ನೀಡಲಿಲ್ಲ. ಅವುಗಳಲ್ಲಿ ಹಲವನ್ನು ಕಾಂಗ್ರೆಸ್ ಸದಸ್ಯರೇ ನಡೆಸುತ್ತಿದ್ದರು[೨೦]. ಈ ಮೇಲಿನ ಮೂರು ಹತ್ತಿಗಿರಣಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕಾರ್ಮಿಕರ ಒಟ್ಟು ಸಂಖ್ಯೆ ಆ ಕಾಲಕ್ಕೆ ೮೦೦೦ಕ್ಕೂ ಅಧಿಕವಾಗಿದ್ದಿತು. ಹೀಗಾಗಿ ಈ ದೊಡ್ಡ ಕಾರ್ಖಾನೆಗಳ ಕಡೆಗೆ ಕಾಂಗ್ರೆಸ್‌ನ ಗಮನ ಹರಿದದ್ದು ಸಾಮಾನ್ಯ; ಅಲ್ಲದೆ ಇವರನ್ನು ಸ್ವಾತಂತ್ರ್ಯ ಚಳವಳಿಗೆ ಬಳಸಿಕೊಂಡು ಅದನ್ನು ಪರಿಣಾಮಕಾರಿಯಾಗಿಸುವ ಉದ್ದೇಶ ಕಾಂಗ್ರೆಸ್ಸಿನದ್ದಾಗಿತ್ತು.

೧೯೨೦ರಲ್ಲಿ ಬೋನಸ್ ವಿಷಯವಾಗಿ ನಡೆದ ಮುಷ್ಕರದಲ್ಲಿ ದೊರೆತ ಜಯ ಕಾರ್ಮಿಕ ಸಂಘಗಳ ಬಗ್ಗೆ ಕಾರ್ಮಿಕರಲ್ಲಿ ನಂಬಿಕೆ ಹುಟ್ಟಿಸಿತು. ೧೯೨೦ರಲ್ಲಿ 'ಬಿನ್ನಿಮಿಲ್ ವರ್ಕರ್ಸ್ ಕೌನ್ಸಿಲ್'

ಪ್ರಾರಂಭವಾಯಿತು[೨೧]. ನಂತರ ಇದೇ ಮಾದರಿಯ ಸಂಘಟನೆಗಳು ಮಿನರ್ವ ಹಾಗೂ ಕೃಷ್ಣ ಮಿಲ್ಲುಗಳಲ್ಲಿ ಕೂಡ ಪ್ರಾರಂಭವಾದವು. ಒಟ್ಟಾರೆ ಎರಡು ಮಹಾಯುದ್ಧಗಳ ನಡುವೆ ನಡೆದ ಕಾರ್ಮಿಕ ಚಟುವಟಿಕೆಗಳು ಕಾರ್ಮಿಕ ಸಂಘಟನೆಗಳ ಹುಟ್ಟಿಗೆ ಕಾರಣವಾದವು.

ಕಾರ್ಮಿಕರು ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ಕಾರ್ಖಾನೆಗಳಲ್ಲಿ ಏನಾದರೂ ಅಪಘಾತ ಸಂಭವಿಸಿದರೆ ಅವರಿಗೆ ಪರಿಹಾರ ಕೊಡುವ ಕಾಯಿದೆಗಳು ೧೯೩೦ರ ವೇಳೆಗಾಗಲೇ ಮೈಸೂರು ರಾಜ್ಯದಲ್ಲಿ ಜಾರಿಯಾಗಿದ್ದವು. ಅದರಂತೆ ರಾಜ್ಯದಲ್ಲಿ ೧೯೩೦ರಲ್ಲಿ ಹತ್ತಿ ಗಿರಣಿಗಳಲ್ಲಿ ಅಪಘಾತಕ್ಕೆ ಒಳಗಾದವರ ಸಂಖ್ಯೆ ೧೮[೨೨]. ಈ ಕಾರ್ಮಿಕರು 'ನಿಯಮ ೧೧೪'ರ ಅಡಿಯಲ್ಲಿ ಪರಿಹಾರಕ್ಕಾಗಿ ಅರ್ಜಿಯನ್ನು ಸಲ್ಲಿಸಬೇಕಿತುದ್ದೀ ನಿಯಮವನ್ನು ಸೂಕ್ಷ್ಮವಾಗಿ ಗಮನಿಸಿದರೆ ಬಹಳ ಕಠಿಣದಂತೆ ಕಾಣುತ್ತದೆ. ಏಕೆಂದರೆ ಬೆಂಗಳೂರು, ಮೈಸೂರು ಹಾಗೂ ಕೋಲಾರ ಪ್ರದೇಶಗಳ ಕಾರ್ಮಿಕರನ್ನು ಹೊರತುಪಡಿಸಿ ಇನ್ನಿತರೆ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಇದರ ಅಂದರೆ ಕಾಯಿದೆಯ ಅಡಿಯಲ್ಲಿ ಬರುತ್ತಿದ್ದ ಹಕ್ಕುಗಳ ಬಗ್ಗೆ ಜ್ಞಾನವೇ ಇರಲಿಲ್ಲ[೨೩]. ಇದು ಬಹಳ ಮುಖ್ಯವಾದ ವಿಷಯವಾಗಿತ್ತು. ಅಲ್ಲದೆ ಮತ್ತೊಂದು ಗಮನಾರ್ಹ ಸಂಗತಿಯೆಂದರೆ ಅನೇಕ ಸಂದರ್ಭಗಳಲ್ಲಿ ಅಧಿಕಾರಿಗಳ ನಿರ್ಲಕ್ಷ್ಯದಿಂದಲೇ ಅಪಘಾತಗಳು ಸಂಭವಿಸುತ್ತಿದ್ದುದರ ಬಗ್ಗೆ ದಾಖಲೆಗಳು ಸ್ಪಷ್ಟಪಡಿಸುತ್ತವೆ[೨೪]. ಒಟ್ಟಿನಲ್ಲಿ ಎಲ್ಲಾ ಸಂದರ್ಭಗಳಲ್ಲಿಯೂ ಕಾರ್ಮಿಕರೇ ಬಲಿಪಶುಗಳಾಗುತ್ತಿದ್ದರು.

ವ್ಯಾಪಾರಿ ಸಂಘಟನಾ ಕಾಯಿದೆ ಅಥವಾ ಕಾನೂನನ್ನು ಜಾರಿ ಮಾಡುವ ವಿಷಯವಾಗಿ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಂಡರೂ ಅದರ ನಿರೀಕ್ಷೆಯಲ್ಲಿ ಕಾರ್ಮಿಕರ ರಾಯಲ್ ಕಮಿಷನ್ ಕಾಯುತ್ತಿತ್ತು. ಈ ವಿಷಯವಾಗಿ ಹೆಚ್ಚಿನ ಆಸಕ್ತಿ ತೋರಿದವರು ಬೆಂಗಳೂರು ಉಲನ್, ಕಾಟನ್ ಮತ್ತು ಸಿಲ್ಕ್ ಮಿಲ್ಲಿನಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು[೨೫]. ಇದಕ್ಕಾಗಿ ವ್ಯಾಪಾರಿ ಸಂಘಟನೆಯನ್ನು ಪ್ರತಿ ವರ್ಷ ಸಭೆ ನಡೆಸುವಂತೆಯೂ ಮನವಿ ಮಾಡಿಕೊಳ್ಳಲಾಯಿತು. ಇದರ ಮುಂದುವರಿದ ಭಾಗವೆಂಬಂತೆ ಮೂರು ಬಟ್ಟೆ ಗಿರಣಿಗಳು (ಬನ್ನಿ ಮಿಲ್ಲು, ಮಹಾರಾಜ ಮಿಲ್ಲು ಹಾಗೂ ಕೆ.ಆರ್. ಮಿಲ್ಲು) ಕೋಲಾರ ಚಿನ್ನದ ಗಣಿಯೊಂದಿಗೆ ಮೈತ್ರಿ ಮಾಡಿಕೊಂಡು ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಿಸುವುದರ ಕಡೆಗೆ ಗಮನಹರಿಸಿದವು. ಬಿನ್ನಿಮಿಲ್ಲು ಹಾಗೂ ಗಣಿ ಕಂಪನಿಯ ಕಲ್ಯಾಣ ಇಲಾಖೆಯು ಈ ನಿಟ್ಟಿನಲ್ಲಿ ಶ್ಲಾಘನಾರ್ಹ ಕಾರ್ಯವನ್ನು ಮಾಡಿತು. ಶ್ರೀ ಕೃಷ್ಣರಾಜೇಂದ್ರ

ಮಿಲ್ಲು ಗಿರಣಿಗಳಲ್ಲಿನ ಮಹಿಳಾ ಕಾರ್ಮಿಕರ ಶಿಶುಗಳನ್ನು ನೋಡಿಕೊಳ್ಳುವ ಸಲುವಾಗಿ ಶಿಶು ಕೇಂದ್ರ (Babies Creche)ವನ್ನು ತೆರೆಯಿತು[೨೬]. ಬಿನ್ನಿಮಿಲ್‌ನ ಕಲ್ಯಾಣ ಇಲಾಖೆಯು ಕಾರ್ಮಿಕರ ಕಲ್ಯಾಣಕ್ಕಾಗಿ ತನ್ನನ್ನು ತೊಡಗಿಸಿಕೊಂಡಿದ್ದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಲೇಬೇಕಾಗಿದೆ. ದೀನಾ ಸೇವಾ ಸಂಘ ಬೆಂಗಳೂರಿನ ಮಲ್ಲೇಶ್ವರಂನಲ್ಲಿ ಸ್ಥಾಪನೆಯಾಯಿತು[೨೭]. ಇದು ಬೆಂಗಳೂರು ನಗರದ ಕಾರ್ಮಿಕರ ಪರಿಸ್ಥಿತಿಯನ್ನು ಸುಧಾರಣೆ ಮಾಡುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿತ್ತು.

ಕಾರ್ಖಾನೆಗಳಲ್ಲಿನ ಕಾರ್ಮಿಕರನ್ನು ನಿಯಂತ್ರಿಸುವ ಹಿನ್ನೆಲೆಯಿಂದ ಮೈಸೂರಿನಲ್ಲಿ ೧೯೩೬ರಲ್ಲಿ ಒಂದು ಹೊಸ ಕಾಯಿದೆಯನ್ನು ಜಾರಿಗೆ ತರಲಾಯಿತು. ಅದು ಮೈಸೂರು ಫ್ಯಾಕ್ಟರೀಸ್ ರೆಗ್ಯುಲೇಶನ್ ಎಂಬ ಹೆಸರಿನಲ್ಲಿ ಜಾರಿಗೆ ಬಂದಿತು[೨೮]. ಇದು ೧೯೩೪ರ ಭಾರತದ ಕಾಯಿದೆಯ ಆಧಾರದ ಮೇಲೆ ವಿಸ್ತರಣೆಗೊಂಡಿತ್ತು. ಅಲ್ಲದೆ ಈ ೧೯೩೬ರ ಕಾಯಿದೆಯ ವಿಶೇಷವೇನೆಂದರೆ ೧೯೧೪ರ ಮೈಸೂರು ಫ್ಯಾಕ್ಟರಿ ರೆಗ್ಯುಲೇಶನ್‌ಗೆ ಕೆಲವು ತಿದ್ದುಪಡಿ ಹಾಗೂ ಮಾರ್ಪಾಡುಗಳನ್ನು ಮಾಡಿ ಜಾರಿಗೊಳಿಸಿದ್ದು, ಈ ೧೯೧೪ ಹಾಗೂ ೧೯೨೫ರ ಕಾಯಿದೆಗಳು ೧೯೧೧ ಹಾಗೂ ೧೯೨೨ರ ಭಾರತದ ಕಾಯಿದೆಗಳ ತಳಹದಿಯ ಮೇಲೆ ಜಾರಿಗೊಂಡಿದ್ದವು ಎಂಬುದು ಗಮನಾರ್ಹ. ಮೇಲ್ನೋಟಕ್ಕೆ ಈ ಕಾಯಿದೆಗಳೆಲ್ಲವೂ ಕಾರ್ಖಾನೆಗಳನ್ನು ನಿಯಂತ್ರಿಸುವ ಸಲುವಾಗಿ ಜಾರಿಯಾಗಿದ್ದರೂ ವಾಸ್ತವದಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ಇದು ಪ್ರತಿನಿಧಿಸುತ್ತಿರಲಿಲ್ಲ. ಒಟ್ಟಾರೆ ಈ ಎಲ್ಲಾ ಕಾರ್ಯತಂತ್ರವನ್ನು ಗಮನಿಸಿದರೆ ಮೈಸೂರು ರಾಜ್ಯದ ಕಾರ್ಮಿಕರನ್ನು ನಿಯಂತ್ರಿಸುವ ಉದ್ದೇಶದಿಂದ ಈ ಕಾಯಿದೆಗಳು ವ್ಯವಸ್ಥಿತವಾದ ಬಲೆಯನ್ನು ಎಣೆದಿದ್ದವು ಅಂದರೆ ತಪ್ಪಾಗಲಾರದು. ಏಕೆಂದರೆ ಜಾರಿಯಾದ ಯಾವುದೇ ಕಾಯಿದೆಗಳು ಮೂಲತಃ ಸ್ಥಳೀಯತೆಯನ್ನು ಪಡೆದುಕೊಂಡಿದ್ದವಲ್ಲ ಎಂಬುದು ಸ್ಪಷ್ಟವಾಗಿದೆ. ೧೯೩೬ರಲ್ಲಿ ಪಾಸಾಗಿ ಜಾರಿಯಾದ ಈ ಕಾಯಿದೆಯು : ಕಾರ್ಖಾನೆಗಳಲ್ಲಿನ ಕಾರ್ಮಿಕರ ಸುರಕ್ಷತೆ ಹಾಗೂ ಆರೋಗ್ಯವನ್ನು ಕಾಪಾಡುವುದು, ಕೆಲಸದ ಅವಧಿಯನ್ನು ನಿರ್ಬಂಧಿಸುವುದು ಹಾಗೂ ಮಹಿಳಾ ಮತ್ತು ಬಾಲ ಕಾರ್ಮಿಕರಿಗೆ ಕೆಲವು ನಿಶ್ಚಿತ ಸವಲತ್ತುಗಳನ್ನು ಒದಗಿಸುವುದು ಎಂಬ ಧ್ಯೇಯೋದ್ದೇಶಗಳನ್ನು ಒಳಗೊಂಡಿತ್ತು. ಆದರೆ ಇವು ಪರಿಣಾಮಕಾರಿಯಾಗಿ ಜಾರಿಯಾಗಿದ್ದರ ಬಗ್ಗೆ ಅನುಮಾನವಿದೆ.

೧೯೪೧ರವರೆಗೂ ಬೆಂಗಳೂರಿನಲ್ಲಿ ಕೇವಲ ಒಂದೇ ನಿಯಂತ್ರಣದಡಿಯಲ್ಲಿ ಕಾರ್ಮಿಕ ಸಂಘವು ಅಸ್ತಿತ್ವದಲ್ಲಿತ್ತು. ಹಾಗಾಗಿ ಇದರ ನಿಯಂತ್ರಣದಿಂದ ಹೊರಬರಲು ಹಾಗೂ ಪ್ರತ್ಯೇಕ

ಗಿರಣಿಗಳ ಹಿನ್ನೆಲೆಯಲ್ಲಿ ಪ್ರತಿ ಕಾರ್ಮಿಕ ಸಂಘಗಳು ಅಸ್ತಿತ್ವ ಕಂಡುಕೊಳ್ಳಲು ಪ್ರಯತ್ನಿಸಿದವು. ಇದರಲ್ಲಿ ಮುಂಚೂಣಿಯಲ್ಲಿದ್ದ ಗಿರಣಿಯೆಂದರೆ ಬಿನ್ನಿಮಿಲ್ಲು. ಈತರದೊಂದು ಪ್ರಯತ್ನ ೧೯೪೧ರಲ್ಲಿ ಕಂಡುಬಂದಾಗ ಪುಟ್ಟಸ್ವಾಮಿ ಹಾಗೂ ಕೆ.ಟಿ. ಭಾಷ್ಯಂ ಅವರ ನೇತೃತ್ವದಲ್ಲಿ ಕಾರ್ಮಿಕರ ಒಂದು ಸಭೆಯನ್ನು ೨೭-೦೭-೧೯೪೧ರಲ್ಲಿ ಕರೆದದ್ದುಂಟು. ಆಗ ಬೆಂಗಳೂರು ಕಾರ್ಮಿಕ ಸಂಘದ ಉಪಾಧ್ಯಕ್ಷರಾದ ಪುಟ್ಟಸ್ವಾಮಿಯವರು ನೆರೆದಿದ್ದ ಕಾರ್ಮಿಕರನ್ನುದ್ದೇಶಿಸಿ ಮಾತನಾಡುವಾಗ ಬಿನ್ನಿಮಿಲ್ಲು ಕಾರ್ಮಿಕರ ಕುರಿತು ತಮ್ಮ ಅಸಮಾಧಾನ ನೋವನ್ನು ಈ ರೀತಿ ಹೊರಹಾಕಿದರು. 'ಬಿನ್ನಿಮಿಲ್ಲು ಕಾರ್ಮಿಕರು ಏಕೈಕ ಕಾರ್ಮಿಕ ಸಂಘದಲ್ಲಿ ಆಸಕ್ತಿಯನ್ನು ತೋರಿಸುತ್ತಿಲ್ಲ ಹಾಗೂ ಸಂಘದ ಸದಸ್ಯತ್ವದ ಹಣವನ್ನು ಪ್ರತಿ ವರ್ಷ ನೀಡುತ್ತಿಲ್ಲ'[೨೯] ಎಂದು ಪ್ರಸ್ತಾಪ ಮಾಡುತ್ತಾ; ಸಂಘದ ಶಕ್ತಿಯನ್ನು ಹೆಚ್ಚಿಸಿ ಹಾಗೂ ಎಲ್ಲರೂ ಇದರಡಿಯಲ್ಲಿಯೇ ಬನ್ನಿ ಎಂದು ನೆರೆದಿದ್ದವರನ್ನು ಹುರಿದುಂಬಿಸಿದರು. ಇದೇ ಸಂದರ್ಭದಲ್ಲಿ ಕೆ.ಟಿ. ಭಾಷ್ಯಂ ಕನ್ನಡದಲ್ಲಿ ಮಾತನಾಡುತ್ತಾ, 'ಎಲ್ಲಾ ಕಾರ್ಮಿಕರಿಗೂ ಸಭೆಗೆ ಹಾಜರಾಗುವಂತೆ ಸೂಚನೆ ಕೊಟ್ಟಿದ್ದರೂ ಬಂದಿರುವವರ ಸಂಖ್ಯೆ ಬಹಳ ಕಡಿಮೆ'[೩೦] ಎಂಬುದಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಹೀಗಾಗಿ ಈ ಸಭೆಯನ್ನು ಮುಂದೂಡುವ ಬಗ್ಗೆ ಯೋಚಿಸಿ, ನಾನು ಏನು ಹೇಳಬೇಕೆಂದುಕೊಂಡಿದ್ದೇನೊ ಅದನ್ನು ಮುಂದಿನ ಸಭೆಯಲ್ಲಿ ಹೇಳುತ್ತೇನೆ ಎಂದರು. ಭಾಷ್ಯಂ ಅವರಿಗೂ ವಿವಿಧ ಕಾರ್ಮಿಕ ಸಂಘಗಳ ಸ್ಥಾಪನೆಯ ಬಗ್ಗೆ ಒಳಗೊಳಗೆ ಅಸಮಾಧಾನವಿದ್ದರೂ ಕೂಡ; ಪ್ರತಿಯೊಂದು ಮಿಲ್ಲುಗಳಲ್ಲಿ ಸಂಘಗಳು ಸ್ಥಾಪನೆಯಾದರೂ ನನಗೆ ಯಾವುದೇ ಅಭ್ಯಂತರವಿಲ್ಲ ಎಂಬುದಾಗಿ ಅಂದು ಪ್ರಸ್ತಾಪಿಸಿದ್ದರು[೩೧]. ಆದರೆ ಪರೋಕ್ಷವಾಗಿ ಅದಕ್ಕೆ ಅಡ್ಡಿಪಡಿಸಲು 'ಸಂಘದ ನಿಧಿಗಳ ಹಾಗೂ ಖರ್ಚುಗಳ ವಿಷಯವಾಗಿ ಸರ್ಕಾರ ಯಾವುದೇ ಕಾರಣಕ್ಕೂ ಮಧ್ಯ ಪ್ರವೇಶ ಮಾಡುವುದಿಲ್ಲ'[೩೨] ಎಂಬಂತಹ ಎಚ್ಚರಿಕೆಯ ಅಂಶವನ್ನು ಸಹ ಸ್ಪಷ್ಟಪಡಿಸಿದ್ದರು. ಬಿನ್ನಿಮಿಲ್ ಕಾರ್ಮಿಕರು ಶೇಕಡ ೧೦ಕ್ಕಿಂತಲೂ ಕಡಿಮೆ ಬೋನಸ್ಸನ್ನು ಒಪ್ಪಿಕೊಳ್ಳಬಾರದು ಎಂಬುದಾಗಿ ತಿಳಿಸಿದರು. ಈ ಕಾಲಾವಧಿಯಲ್ಲಿ ಎ.ವಿ.ರಾಮನಾಥನ್ ಅವರು ಕಾರ್ಮಿಕ ಮಂತ್ರಿಯಾಗಿ ನೇಮಕಗೊಂಡಿದ್ದರು[೩೩]. ಅವರನ್ನೂ ಸಹ ಈ ಸಂದರ್ಭದಲ್ಲಿ ಸ್ಮರಿಸಿದರು. ಇಲ್ಲಿ ಭಾಷ್ಯಂ ಅವರು ಕಾರ್ಮಿಕರ ವಿಚಾರವಾಗಿ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಿದ್ದರೆ? ಎಂಬುದಾಗಿ ಹೇಳುವುದು ಕಷ್ಟ. ಆದರೆ ಒಂದಂತೂ ಸ್ಪಷ್ಟ, ಅವರಿಗೆ ಗಿರಣಿಗಳಿಗೊಂದರಂತೆ ಕಾರ್ಮಿಕ ಸಂಘಗಳು ರಚನೆಯಾಗುವುದು ಇಷ್ಟವಿರಲಿಲ್ಲ. ಅಂದರೆ

ಸಂಘಟನೆಯಲ್ಲಿ ವಿಕೇಂದ್ರೀಕರಣವನ್ನು ಬಯಸುತ್ತಿರಲಿಲ್ಲ. ಈ ವಿಷಯವನ್ನು ಮತ್ತೊಂದು ದೃಷ್ಟಿಕೋನದಿಂದಲೂ ವಿಶ್ಲೇಷಿಸಬಹುದಾಗಿದೆ. ಹಲವು ಸಂಘಗಳು ಪ್ರಾರಂಭವಾದರೆ ಅವರನ್ನು ಒಗ್ಗೂಡಿಸುವುದು ಕಷ್ಟವಾಗುತ್ತದೆ. ಭಿನ್ನ ಅಭಿಪ್ರಾಯಗಳು ಮೂಡುವುದರಿಂದ ಕಾರ್ಮಿಕರನ್ನು ರಾಷ್ಟ್ರೀಯ ಚಳವಳಿಗೆ ಪ್ರೇರೇಪಿಸುವುದು ಅಸಾಧ್ಯವಾಗುತ್ತದೆ ಎಂಬ ಉದ್ದೇಶವನ್ನೂ ಅಲ್ಲಗಳೆಯುವಂತಿಲ್ಲ.

ಎರಡನೇ ಮಹಾಯುದ್ಧದ ಅವಧಿಯಲ್ಲಿ ಕಾರ್ಮಿಕರು ಹಾಗೂ ಮಾಲೀಕರ ನಡುವಣ ಸಂಬಂಧ ಉತ್ತಮಗೊಳ್ಳುವ ಅನಿವಾರ್ಯತೆ ಕಾರ್ಮಿಕರಿಗಿಂತಲೂ ಹೆಚ್ಚಾಗಿ ಮಾಲೀಕರಿಗೆ ಇದ್ದಂತೆ ಕಾಣುತ್ತದೆ. ಏಕೆಂದರೆ ವ್ಯಾಪಾರಿ ಸಂಘಟನೆಗಳ ಅಸ್ಮಿತೆಯಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಸಲುವಾಗಿ ಮಾಲೀಕರು ಉದಾರ ನೀತಿಯನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ಈ ಸಂದರ್ಭದಲ್ಲಿ ಹೆಚ್ಚಿನದಾಗಿ ಇದ್ದಿತು[೩೪]. ಹೀಗಾಗಿ ದೇಶಾದ್ಯಂತ ಮಾಲೀಕರು ಕಾರ್ಮಿಕರಿಗೆ ಇಲ್ಲದ ಸೌಲಭ್ಯಗಳನ್ನು ಹೆಚ್ಚಿನ ಪ್ರಮಾಣದಲ್ಲೇ ನೀಡುತ್ತಿದ್ದೇವೆ ಎಂಬ ಏರ್ಪಾಡುಗಳನ್ನು ಮಾಡಿಕೊಳ್ಳುವ ಪೈಪೋಟಿಯಲ್ಲಿ ಧುಮುಕಿದ್ದರು. ಇನ್ನೊಂದು ಇಲ್ಲಿ ಪ್ರಸ್ತಾಪಿಸಬೇಕಾದ ಬಹುಮುಖ್ಯ ಅಂಶವೆಂದರೆ ಈ ಸಂದರ್ಭದಲ್ಲಿ ಒಂದು ವೇಳೆ ತಮ್ಮ ಶತ್ರುಗಳಿಂದ (ಕಾರ್ಮಿಕರು) ಯಾವುದೇ ಅಪಾಯಗಳು ಹಾಗೂ ತೊಂದರೆಗಳು ಉಂಟಾದಲ್ಲಿ ಅದನ್ನು ಹೇಗೆ ಎದುರಿಸಬೇಕು ಎಂಬ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೂ ಉಂಟು[೩೫]. ಅಂದರೆ ವಿಶ್ವದಾದ್ಯಂತ ಬಂಡವಾಳಶಾಹಿಗಳದ್ದು ಒಂದೇ ಅಜೆಂಡಾ ಅದು ಕಾರ್ಮಿಕರ ಶೋಷಣೆ, ನಿಯಂತ್ರಣ, ತಮ್ಮ ಭದ್ರ ಅಸ್ತಿತ್ವ ಹಾಗೂ ಅಧಿಕ ಲಾಭ. ಹೀಗಾಗಿ ಇವೆಲ್ಲವುಗಳನ್ನು ಪಡೆದುಕೊಳ್ಳಲು ಯಾವ ದುಸ್ಸಾಹಸಕ್ಕೂ ಕೈ ಹಾಕಲು ಹಿಂಜರಿಯುತ್ತಿರಲಿಲ್ಲ.

ಇದು ಒಟ್ಟಾರೆ ದೇಶದ ಪರಿಸ್ಥಿತಿಯದ್ದಾದರೆ ಮೈಸೂರಿನಲ್ಲಿ ಮತ್ತೊಂದು ರೀತಿಯಾದ ಪರಿಸ್ಥಿತಿಯನ್ನೇ ಕಾಣಬಹುದು. ಇಲ್ಲಿ 'ಮೈಸೂರು ಕಾರ್ಮಿಕ ಕಾಯಿದೆ' (ಮೈಸೂರು ಲೇಬರ್ ಆಕ್ಟ್) ಸಕ್ರಿಯವಾಗಿದ್ದು, ಕೈಗಾರಿಕಾ ಕಾರ್ಮಿಕರ ಸಂಘಟನೆಯ ಅಸ್ಮಿತೆಯಲ್ಲಿ ಇದು ತನ್ನ ಪಾತ್ರವನ್ನು ನಿಭಾಯಿಸುತ್ತಿತ್ತು. ಕೈಗಾರಿಕಾ ಮಾಲೀಕರು ಹಾಗೂ ಕಾರ್ಮಿಕ ಸಂಘಟನೆಗಳ ನಡುವೆ ಹೊಂದಾಣಿಕೆ ಮಾಡಿಸುವ ಜವಾಬ್ದಾರಿ ಇದರ ಹೆಗಲ ಮೇಲೆ ಬಿದ್ದಿತ್ತು. ಹೀಗಾಗಿ ಸಾಧ್ಯವಿರುವ ಎಲ್ಲಾ ಮಾರ್ಗಗಳ ಮೂಲಕ ಈ ಪ್ರಯತ್ನಕ್ಕೆ ಮುಂದಾಗಿತ್ತು[೩೬]. ಮದ್ರಾಸಿನ ಹೈಕೋರ್ಟ್ ನ್ಯಾಯಾಧೀಶರೊಬ್ಬರು ಸರ್ಕಾರದ ಕೋರಿಕೆಯ ಮೇರೆಗೆ ಕಾರ್ಮಿಕರಿಗಾಗಿ ಶಾಸನಬದ್ಧ ವ್ಯವಸ್ಥೆ, ಕಾಯಿದೆಗಳನ್ನು

ಸೂಚಿಸಿದರು. ಈ ನ್ಯಾಯಾಧೀಶರು ನೀಡಿದ ವರದಿಯ ಆಧಾರದ ಮೇಲೆ ೧೯೪೧ರ ಸೆಪ್ಟೆಂಬರ್‌ನಲ್ಲಿ ಮೈಸೂರು ಕಾರ್ಮಿಕ ಕಾಯಿದೆಯನ್ನು ಒಂದು ಸುಗ್ರೀವಾಜ್ಞೆಯ ರೂಪದಲ್ಲಿ ಸರ್ಕಾರ ಜಾರಿಮಾಡಿತು[೩೭]. ಅದರ ಮುಖ್ಯ ಅಂಶಗಳೆಂದರೆ :

೧. ಕನಿಷ್ಠ ಪಕ್ಷ ೨೫ ಕಾರ್ಮಿಕರು ಕೆಲಸ ಮಾಡುವ ಸಂಸ್ಥೆಗಳ ಕಾರ್ಮಿಕರು ಸಂಘ ರಚಿಸಿ, ಆ ಕಾಯಿದೆಯ ಅನ್ವಯವಾಗಿ ನೋಂದಣಿ ಮಾಡಿಸಬಹುದು.

೨. ಒಂದು ಗಿರಣಿ ಅಥವಾ ಕಾರ್ಖಾನೆಯಲ್ಲಿ ಒಂದೇ ಸಂಘ ಇರತಕ್ಕದ್ದು. ಅದರಲ್ಲಿ ಇಬ್ಬರು ಕಾರ್ಮಿಕರಲ್ಲದವರು ಪದಾಧಿಕಾರಿಗಳಾಗಿರಬಹುದು.

೩. ಆ ಸಂಘ ಕಾರ್ಮಿಕರ ಬೇಡಿಕೆಗಳನ್ನು ಆಡಳಿತದ ಮುಂದೆ ಮಂಡಿಸಬಹುದು. ಸಂಘ ಮತ್ತು ಆಡಳಿತಗಳ ನಡುವೆ ಒಪ್ಪಂದ ಏರ್ಪಡದಿದ್ದರೆ, ಕಾರ್ಮಿಕ ಇಲಾಖೆ ನಡುವೆ ಪ್ರವೇಶಿಸಿ ವಿಚಾರಣೆ ನಡೆಸಿ ತೀರ್ಪು ನೀಡಲು 'ಆರ್ಬಿಟ್ರೇಷನ್ ಟ್ರಿಬ್ಯುನಲ್' (ವಿಚಾರಣಾ ನ್ಯಾಯಮಂಡಳಿ) ಅನ್ನು ನೇಮಿಸಬಹುದು.

ಆದರೆ ಈ ಕಾಯಿಉದೆಯೂ ಸಹ ಮುಷ್ಕರವನ್ನು ಕಾರ್ಮಿಕರ ಹಕ್ಕಾಗಿ ಮಾನ್ಯತೆ ಮಾಡಲಿಲ್ಲ.

ಯುದ್ಧದ ಸಂದರ್ಭದಲ್ಲಿ ಕಾರ್ಮಿಕರಿಗೆ ಅಗ್ಗದ ದವಸಧಾನ್ಯ ಒದಗಿಸುವ ಅಂಗಡಿಗಳನ್ನು ತೆರೆಯಲಾಗಿತ್ತು. ಗೃಹ ಸೌಲಭ್ಯಗಳು, ವೈದ್ಯಕೀಯ ನೆರವು ಹಾಗೂ ಇನ್ನಿತರೆ ಸೌಲಭ್ಯಗಳನ್ನು ಮೈಸೂರಿನ ಕೈಗಾರಿಕೆ ಹಾಗೂ ಗಿರಣಿಗಳಿಗೆ ಒದಗಿಸಲಾಗಿತ್ತು. ಅದರಲ್ಲೂ ಬಿನ್ನಿ ಮಿಲ್ಲು ಹಾಗೂ ಚಿನ್ನದ ಗಣಿ, ಮೈಸೂರು ಮಿಲ್ಲು, ಮಿನರ್ವ ಮಿಲ್ಲು, ಕೃಷ್ಣರಾಜೇಂದ್ರ ಮಿಲ್ಲು, ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್, ಮೈಸೂರು ಪೇಪರ್ ಮಿಲ್ ಇತ್ಯಾದಿ ಈ ಸೌಲಭ್ಯವನ್ನು ಪಡೆದುಕೊಂಡಿದ್ದವು[೩೮]. ಎಲ್ಲಾ ಕಾರ್ಮಿಕರು ಕಾರ್ಖಾನೆಗಳ ಅಕ್ಕಪಕ್ಕದಲ್ಲಿಯೇ ವಾಸಿಸುತ್ತಿದ್ದುದರಿಂದ ಊಟದ ಸೌಲಭ್ಯವನ್ನು ಒದಗಿಸುತ್ತಿರಲಿಲ್ಲ. ಇಲ್ಲಿ ಗಮನಿಬೇಕಾದ ಅಂಶವೆಂದರೆ ಮಾಲೀಕರಿಗೆ ಯುದ್ಧದ ಸಂದರ್ಭದಲ್ಲಿ ಈ ರೀತಿಯ ಸೌಲಭ್ಯಗಳನ್ನು ನೀಡುವ ಮತ್ತು ಹೆಚ್ಚಿಸುವ ನಿರ್ದೇಶನ ವಸಾಹತುಶಾಹಿ ಪ್ರಭುತ್ವದಿಂದ ಬಂದಿತ್ತು. ಕಾರಣವಿಷ್ಟೆ ಗಿರಣಿಗಳಲ್ಲಿ ಉತ್ಪಾದನೆ ಹೆಚ್ಚಿಸಿ ಯುದ್ಧಕ್ಕೆ ನೆರವಾಗುವ ಹುನ್ನಾರು ಇದರಲ್ಲಿದ್ದಿದ್ದು ಸ್ಪಷ್ಟವಾಗುತ್ತದೆ. ಯುದ್ಧದಲ್ಲಿ ಬ್ರಿಟನ್ ಮಿತ್ರಪಡೆಗಳಲ್ಲಿ ಪ್ರಮುಖ ರಾಷ್ಟ್ರವಾಗಿದ್ದುದರಿಂದ ಇದು ತನ್ನ ಪ್ರಾಧಾನ್ಯತೆ ಹಾಗೂ ಪ್ರಾಬಲ್ಯತೆಯನ್ನು ಗಟ್ಟಿಯಾಗಿ ಸ್ಥಾಪಿಸಬೇಕಾಗಿತ್ತು.

ಸಾಮಾನ್ಯವಾಗಿ ಕಾರ್ಮಿಕರು ಹುಲ್ಲಿನ ಛಾವಣಿ ಹಾಗೂ ಮಣ್ಣು ಗೋಡೆಯಿಂದ ನಿರ್ಮಾಣ ಮಾಡಿದ ಗುಡಿಸಲುಗಳಲ್ಲಿ ವಾಸಿಸುತ್ತಿದ್ದರು. ಅಂತಹ ೨೪೪೨ ಗುಡಿಸಲುಗಳು ಹತ್ತಿ ಗಿರಣಿಗಳ ಸುತ್ತಮುತ್ತಲಿನಲ್ಲಿಯೇ ನಿರ್ಮಾಣಗೊಂಡಿದ್ದವು[೩೯]. ಇದರ ಉದ್ದೇಶವನ್ನು ಬಹಳ ಸುಲಭವಾಗಿ ಅರಿಯಬಹುದು. ಗಿರಣಿಗಳಿಗೆ ಬೇಗೆ ತಲುಪಬೇಕು ಎನ್ನುವ ಉದ್ದೇಶದಿಂದ ಸ್ವತಃ ಕಾರ್ಮಿಕರೇ ನಿರ್ಮಿಸಿಕೊಂಡಿರಬಹುದು ಅಥವಾ ಗಿರಣಿಗಳ ಮಾಲೀಕರೇ ಇಂತಹ ಒತ್ತಡದ ಸನ್ನಿವೇಶವನ್ನು ಸೃಷ್ಟಿ ಮಾಡಿರಬಹುದು. ಏಕೆಂದರೆ ಬೆಂಗಳೂರಿನ ಎಲ್ಲಾ ಗಿರಣಿಗಳು ದಿನಕ್ಕೆ ನಾಲ್ಕು ಪಾಳಿ (ಶಿಫ್ಟ್)ಗಳ ಮೂಲಕ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿದ್ದರು. ಹೀಗಾಗಿ ಕಾರ್ಮಿಕರು ಅನಿವಾರ್ಯವಾಗಿ ಗಿರಣಿಗಳ ಸುತ್ತಮುತ್ತಲ ಪ್ರದೇಶದಲ್ಲಿಯೇ ವಾಸವಾಗಿರುತ್ತಿದ್ದರು. ಅಲ್ಲದೆ ಮಾಲೀಕರು ಬಿನ್ನಿಮಿಲ್ಲು ಹಾಗೂ ಮಿನರ್ವ ಮಿಲ್ಲಿನ ಆಜುಬಾಜಿನಲ್ಲಿಯೇ ನಿವೇಶನಗಳನ್ನು ಕಾರ್ಮಿಕರಿಗಾಗಿ ಕೊಂಡುಕೊಂಡಿದ್ದು ಇದೆ. ಆದರೆ ಇದು ಅವರ ಜೀವನ ಮಟ್ಟವನ್ನು ಸುಧಾರಿಸುವ ಉದ್ದೇಶದಿಂದಲ್ಲ ಎಂಬುದು ಸ್ಪಷ್ಟ. ಏಕೆಂದರೆ ಅವರು ಗುಡಿಸಲುಗಳಲ್ಲಿಯೇ ಕೊನೆಯವರೆಗೂ ವಾಸವಾಗಿರುವುದು ಕಂಡುಬಂದಿದೆ. ಒಂದು ವೇಳೆ ಕಾರ್ಮಿಕರು ಕೆಲಸ ಬಿಟ್ಟರೆ ಅಥವಾ ಕಳೆದುಕೊಂಡರೆ ಆ ನಿವೇಶನವನ್ನು ತಕ್ಷಣವೇ ಖಾಲಿ ಮಾಡಬೇಕಿತ್ತು. ಒಂದು ರೀತಿಯಲ್ಲಿ ಇಂದಿನ ಸರ್ಕಾರಿ ಕ್ವಾಟರ್ಸ್‌ಗಳಿದ್ದಂತೆ. ಆದರೆ ಇಂದಿನ ಕ್ಲೇಮು ಆಗಿರಲಿಲ್ಲ. ಇಲ್ಲಿ ಇನ್ನೊಂದು ಮುಖ್ಯವಾದ ವಿಷಯವೆಂದರೆ ಕಾರ್ಮಿಕರು ವಾಸಿಸುತ್ತಿದ್ದರು ಎಂಬ ಕಾರಣದಿಂದಲೇ ಎರಡು ಪೇಟೆಗಳು (ಬಿನ್ನಿ ಪೇಟೆ ಮತ್ತು ಕಾಟನ್ ಪೇಟೆ) ನಿರ್ಮಾಣಗೊಂಡಿರುವುದನ್ನು ಕಾಣಬಹುದು.

ಬೆಂಗಳೂರು ನಗರ ಪುರಸಭೆಯು ಸಹ ಗಿರಣಿಗಳ ಸುತ್ತಮುತ್ತಲ ಪ್ರದೇಶವಾದ ಶ್ರೀರಾಮಪುರಂನಲ್ಲಿ ಕಾರ್ಮಿಕರ ಕಾಲೋನಿಯನ್ನು ನಿರ್ಮಿಸಿಕೊಟ್ಟಿತು. ಈ ಕಾಲೋನಿಯು ೧೮ ಎಕರೆ ಪ್ರದೇಶದ ವಿಸ್ತೀರ್ಣದಲ್ಲಿ ೩೩೪ ನಿವೇಶನಗಳನ್ನು ಹೊಂದಿತ್ತು. ಅದರಲ್ಲಿನ ೨೫೦ ನಿವೇಶನಗಳಲ್ಲಿ ಪುರಸಭೆಯಿಂದಲೇ ಗೃಹಗಳನ್ನು ಕಟ್ಟಿಸಿಕೊಡಲಾಗಿತ್ತು. ಅಲ್ಲದೆ ಇವುಗಳು ಗಾಳಿ ಬೆಳಕು ಹಾಗೂ ನೈರ್ಮಲ್ಯ ಸೌಲಭ್ಯಗಳನ್ನು ಹೊಂದಿದ್ದವು[೪೦]. ವಸಾಹತುಶಾಹಿ ಒಡೆತನದಲ್ಲಿದ್ದ ಗಿರಣಿಗಳ ಮಾಲೀಕರು ಕಾರ್ಮಿಕರಿಗೆ ನೀಡಿದ್ದ ಸೌಲಭ್ಯಕ್ಕಿಂತ ಸ್ಥಳೀಯ ಸಂಸ್ಥಾನ ಆಡಳಿತ ಕಾರ್ಮಿಕರಿಗೆ ಈ ಹಿನ್ನೆಲೆಯಿಂದ ಹತ್ತಿರವಾಗಿತ್ತು.

೧೯೪೦ರ ವೇಳೆಗೆ ರಾಜ್ಯದಲ್ಲಿ ೫೭ ನೇಕಾರರ ಸಂಘಗಳು ಅಸ್ತಿತ್ವದಲ್ಲಿದ್ದವು[೪೧]. ಇವು ಗಿರಣಿಗಳಿಂದ ಹೊರತಾದ ಸಂಘಗಳಾಗಿದ್ದವು. ಮಂಡ್ಯ ಮತ್ತು ಮದ್ದೂರು ತಾಲ್ಲೂಕುಗಳಲ್ಲಿ ನಿಮ್ನ ವರ್ಗಗಳ ಸದಸ್ಯರುಗಳಿಗಾಗಿ ೧೬ ಸಂಘಗಳು ಸ್ಥಾಪನೆಯಾಗಿದ್ದವು[೪೨]. ಬೆಂಗಳೂರಿನ ಓಕಳಿಪುರಂ ಹತ್ತಿರವಿರುವ (ಇಂದಿಗೂ ಕಟ್ಟಡ ಹಾಗೂ ಸಂಘ ಜೀವಂತವಾಗಿದೆ) ನೇಕಾರರ ಸಂಘ ಈ ಹಿನ್ನೆಲೆಯಲ್ಲಿ ಹೆಸರಿಸಬಹುದಾದ ಸಂಘ. ರಾಜ್ಯದ ಈ ನೇಕಾರರ ಸಂಘಗಳು ದೊಡ್ಡ ಗಿರಣಿಗಳ ಸಂಘಗಳಿಗೆ ಪೈಪೋಟಿಯನ್ನೊಡ್ಡುವ ಸಾಮರ್ಥ್ಯವನ್ನು ಹೊಂದಿಲ್ಲದೇ ಹೋದರೂ; ಗಿರಣಿಗಳಲ್ಲಿನ ಸಂಘಗಳಿಗಿದ್ದ ನಿರ್ಬಂಧ ಹಾಗೂ ನಿಯಂತ್ರಣ ಇವುಗಳಿಗಿರಲಿಲ್ಲ ಎಂಬುದಂತೂ ಸ್ಪಷ್ಟ.

ಇದು ಒಂದು ಬಗೆಯ ಚಿತ್ರಣವಾದರೆ, ಮತ್ತೊಂದು ಕಡೆ ಈ ವೇಳೆಗಾಗಲೇ ಕರ್ನಾಟಕದಲ್ಲಿ ಕಾರ್ಮಿಕರು ಹಾಗೂ ಮಾಲೀಕರ ನಡುವೆ ವಿವಾದ, ಸಂಘರ್ಷಗಳು ಹೆಚ್ಚಾದ ಕಾರಣ ಇವರಿಬ್ಬರ ನಡುವೆ ಮೈತ್ರಿ, ಸಮನ್ವಯ ಹಾಗೂ ಅನ್ಯೋನ್ಯ ಸಂಬಂಧ ಮುಂದುವರೆಸಿಕೊಂಡು ಹೋಗುವ ಹಿನ್ನೆಲೆಯಲ್ಲಿ 'ಕಾರ್ಮಿಕ ಕಲ್ಯಾಣ ಮಂಡಳಿ' (ಲೇಬರ್ ವೆಲ್ಫೇರ್ ಬೋರ್ಡ್)ಯು ಸ್ಥಾಪನೆಯಾಯಿತು. ಇದು ಇಬ್ಬರು ಮಾಲೀಕರ ಪ್ರತಿನಿಧಿಗಳು, ನಾಲ್ಕು ಕಾರ್ಮಿಕ ಪ್ರತಿನಿಧಿಗಳು ಹಾಗೂ ಇಬ್ಬರು ಸಾಮಾನ್ಯ ಸಾರ್ವಜನಿಕ ಪ್ರತಿನಿಧಿಗಳನ್ನು ಒಳಗೊಂಡಿತ್ತು. ಇದು ಸ್ಥಾಪನೆಯಾದ ನಂತರ ಕಾರ್ಮಿಕ ಆಯುಕ್ತನನ್ನು ಈ ಮಂಡಳಿಯ ಅಧ್ಯಕ್ಷನನ್ನಾಗಿ ಮಾಡಿ ಮೂರು ಬಾರಿ ಸಭೆಯನ್ನು ನಡೆಸಲಾಯಿತು. ಇದರ ಫಲವಾಗಿ ಕಾರ್ಮಿಕ ಕಲ್ಯಾಣಕ್ಕೆ ಸಂಬಂಧಪಟ್ಟಂತೆ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಅವುಗಳು ಈ ಕೆಳಗಿನಂತಿವೆ:

೧. ಸಣ್ಣ ಕೈಗಾರಿಕೆಗಳಲ್ಲಿ ಬಾಲ ಕಾರ್ಮಿಕರ ಶೋಷಣೆ ಹಾಗೂ ಉದ್ಯೋಗ ನಿಷೇಧ.

೨. ಹತ್ತು ಜನರಿಗಿಂತ ಕಡಿಮೆ ಇರುವ ಸಣ್ಣ ಕಾರ್ಖಾನೆಗಳಲ್ಲಿ ವಿದ್ಯುತ್ ಬಳಕೆಗೆ ಮೈಸೂರು ಫ್ಯಾಕ್ಟರೀಸ್ ಆ್ಯಕ್ಟ್‌ನ ನಿಯಮಗಳ ವಿಸ್ತರಣೆ.

೩. ಸಂಬಳದೊಂದಿಗೆ ರಜೆಗಳ ಅನುಮತಿ.

೪. ಪ್ರಸ್ತುತ ಏಳು ದಿನಗಳ ನಿರೀಕ್ಷಣಾ ಅವಧಿಗಿಂತ ಅಲ್ಪಾವಧಿಯಲ್ಲಿಯೂ ಅಪಘಾತದಿಂದ ಗಾಯಗೊಂಡ ಕಾರ್ಮಿಕರಿಗೆ ನಷ್ಟ ಪರಿಹಾರ.

೫. ಕಾರ್ಮಿಕರ ಅನುಕೂಲಕ್ಕಾಗಿ ದೊಡ್ಡ ಕೈಗಾರಿಕೆಗಳಲ್ಲಿ ಭವಿಷ್ಯ ನಿಧಿ (ಪ್ರಾವಿಡೆಂಟ್ ಫಂಡ್) ಯೋಜನೆಯ ಜಾರಿ.

೬. ಮಳಿಗೆ ಹಾಗೂ ವಾಣಿಜ್ಯ ಕೇಂದ್ರಗಳಲ್ಲಿ 'ಕೆಲಸದ ವೇಳೆಯ ಕಾಯಿದೆ' ಜಾರಿ. ಹೀಗೆ ಕಾರ್ಮಿಕರ ಹಿತಾಸಕ್ತಿಯಿಂದ ಕೆಲವು ಸುಧಾರಣಾ ಮಾಪನಗಳನ್ನು ಮಂಡಳಿಯು ಅಳವಡಿಸಿಕೊಂಡಿತು. ಇದು ಮೈಸೂರು ರಾಜ್ಯದ ಎಲ್ಲಾ ಹತ್ತಿ ಗಿರಣಿಗಳಿಗೂ ಅನ್ವಯವಾಗುತ್ತಿತ್ತು.

೧೯೪೧ರ ಮೈಸೂರು (ಎಮರ್ಜೆನ್ಸಿ ಅಥವಾ ತುರ್ತು) ಕಾಯಿದೆ ಜಾರಿಯಾದಾಗಿನಿಂದ ೪೩ ಕಾರ್ಮಿಕ ಸಂಘಗಳು ಸ್ಥಾಪನೆಯಾದವು. ಇವುಗಳಲ್ಲಿ ೪೨ ಸಂಘಗಳು ಕೇವಲ ಒಂದು ವರ್ಷದ ಒಳಗಾಗಿಯೇ ಅಂದರೆ ಜೂನ್ ೧೯೪೨ರ ಒಳಗೇ ನೋಂದಣಿ ಮಾಡಿಸಿದ್ದವು. ಈ ವೇಳೆಗೆ ನೋಂದಾಯಿಸಿದ ಸದಸ್ಯತ್ವದ ಸಂಖ್ಯೆ ೩೫೫೨೭ಕ್ಕೆ ತಲುಪಿತ್ತು[೪೩]. ಒಂದು ಕಡೆ ಕಾರ್ಮಿಕರು ಸಂಘಟನೆಯ ಬಗ್ಗೆ ಅರಿವು ಮೂಡಿಸಿಕೊಳ್ಳುತ್ತಿದ್ದರೆ; ಇನ್ನೊಂದು ಕಡೆ ಮಾಲೀಕರು ತರಬೇತಿ ಹೊಂದಿದ ಕಾರ್ಮಿಕರನ್ನು ಕೆಲಸದಿಂದ ತೆಗೆಯುವ ನಿರ್ಧಾರಕ್ಕೆ ಬರುತ್ತಿದ್ದರು. ಇದಕ್ಕೆ ಅವರು ನೀಡುತ್ತಿದ್ದ ಸಬೂಬು ಹೆಚ್ಚುವರಿ (ಸರ್ಪ್ಲಸ್) ಕಾರ್ಮಿಕರಿದ್ದಾರೆ ಎಂಬುದು. ಈ ಸಂದರ್ಭದಲ್ಲಿ ಎರಡನೇ ಜಾಗತಿಕ ಯುದ್ಧವು ಆರಂಭಗೊಂಡಿದ್ದು, ಗಿರಣಿಗಳ ಬಟ್ಟೆಗಳಿಗೆ ಎಂದಿಲ್ಲದ ಬೇಡಿಕೆ ಇದ್ದಿತು. ಗಿರಣಿಗಳಲ್ಲಿ ಉತ್ಪಾದನೆಯಾಗುತ್ತಿದ್ದ ವಸ್ತುಗಳೆಲ್ಲವೂ ಕೇವಲ ಯುದ್ಧಕ್ಕೆ ಪೂರೈಕೆ ಮಾಡುವ ಉದ್ದೇಶವನ್ನು ಗಮನದಲ್ಲಿರಿಸಿಕೊಂಡೇ ಉತ್ಪಾದನೆಯಲ್ಲಿ ತೊಡಗಿದ್ದವು. ಅಷ್ಟೇ ಏಕೆ ರಾಜ್ಯದ ಜನರಿಗೆ ಈ ಸಮಯದಲ್ಲಿ ಬಟ್ಟೆಗಳನ್ನು ಪೂರೈಸದೆ (ಮಾರಾಟ ಮಾಡದೆ) ಇದ್ದುದರಿಂದ ಜನರು ಕೊರತೆಯನ್ನು ಎದುರಿಸಿದ್ದೂ ಉಂಟು. ಆದಕಾರಣ ಮಾಲೀಕರಿಗೆ ಈ ವೇಳೆಗೆ ಹೆಚ್ಚಿನ ತರಬೇತಿ ಹೊಂದಿದ ನುರಿತ ಕಾರ್ಮಿಕರ ಅವಶ್ಯಕತೆ ಎದ್ದು ಕಾಣುತ್ತಿತ್ತು. ಒಂದು ವೇಳೆ ಯುರೋಪಿನಿಂದ (ಯುದ್ಧವನ್ನು ಗಮನದಲ್ಲಿರಿಸಿಕೊಂಡು) ಬೇಡಿಕೆ ಬರದೇ ಇದ್ದ ಪಕ್ಷದಲ್ಲಿ ಈ ಕಾರ್ಮಿಕರೆಲ್ಲರೂ ಮಾಲೀಕರಿಗೆ ಹೆಚ್ಚುವರಿ (ಸರ್ಪ್ಲಸ್)ಯಾಗಿ ಸಮಸ್ಯೆ ಎನ್ನುವ ರೀತಿಯಲ್ಲಿ ಕಾಣಿಸುತ್ತಿದ್ದರು.

೧೯೪೪ರ ವೇಳೆಗೆ ಕಾರ್ಮಿಕರ ಸೌಲಭ್ಯಗಳು ಹಾಗೂ ಕಲ್ಯಾಣಗಳ ಕುರಿತು ಮಾಲೀಕರಿಗೆ ನಿರ್ದೇಶನಗಳನ್ನು ನೀಡಲಾಗಿತ್ತು[೪೪]. ಅವುಗಳು:

೧. ಗೃಹ

೨. ಭವಿಷ್ಯ ನಿಧಿ

೩. ಸೇವೆಗೆ ಹಣದ ರೂಪದ ಕೊಡುಗೆ

೪. ವೇತನದೊಂದಿಗೆ ರಜೆಗಳು

೫. ಬೋನಸ್

೬. ವೈದ್ಯಕೀಯ ನೆರವು

೭. ಮನರಂಜನಾ ಸೌಲಭ್ಯಗಳು.

೧೯೪೫ರಲ್ಲಿ ಈ ಮೇಲಿನ ಸೌಲಭ್ಯಗಳ ಜೊತೆಗೆ ಹೊಸದಾಗಿ ಕೆಲವೊಂದನ್ನು ಸೇರಿಸಲಾಯಿತು. ಅವುಗಳು ಆಹಾರ ಧಾನ್ಯಗಳ ಪೂರೈಕೆ, ಓದುವ ಕೊಠಡಿ ಹಾಗೂ ಗ್ರಂಥಾಲಯಗಳು, ಇತ್ಯಾದಿ. ಇದರ ಫಲವಾಗಿ ೧೯೪೬ರಲ್ಲಿ ಕಾರ್ಮಿಕ ಇಲಾಖೆಯ ಪ್ರಯತ್ನದಿಂದ ಬೆಂಗಳೂರಿನಲ್ಲಿ ಎರಡು ಮನರಂಜನಾ ಕೇಂದ್ರಗಳು ಕಾರ್ಯನಿರ್ವಹಿಸಲು ಪ್ರಾರಂಭಿಸಿದವು[೪೫]. ಅದು ಮುಖ್ಯವಾಗಿ ಒಳಾಂಗಣ ಕ್ರೀಡೆಗಳು, ಭಜನಾ ಕೂಟಗಳು ಇತ್ಯಾದಿ ಕಾರ್ಯಕ್ರಮಗಳನ್ನು ಕಾರ್ಮಿಕರಿಗೆ ಏರ್ಪಡಿಸಲಾಗುತ್ತಿತ್ತು. ೧೯೪೫ರ ಅಂಕಿ-ಅಂಶಗಳನ್ನು ಗಮನಿಸಿದರೆ ಬೆಂಗಳೂರಿನಲ್ಲಿದ್ದ ೪೦೦೦೦ ಕಾರ್ಮಿಕರಲ್ಲಿ ೧೨೦೦೦ ಕಾರ್ಮಿಕರು ಮೂರು ಹತ್ತಿ ಗಿರಣಿಗಳಲ್ಲಿ (ಬಿನ್ನಿ, ಮೈಸೂರು ಹಾಗೂ ಮಿನರ್ವ ಮಿಲ್ಲು) ಕೆಲಸ ಮಾಡುವವರಾಗಿದ್ದರು[೪೬]. ಇವರೆಲ್ಲರಿಗೂ ಈ ಸೌಲಭ್ಯವನ್ನು ಕಲ್ಪಿಸಲಾಗಿತ್ತೇ? ಎಂಬುದು ಪ್ರಶ್ನೆ.

## ೫.೩. ಸ್ವಾತಂತ್ರ್ಯ ನಂತರ

೧೯೪೮ರಲ್ಲಿ ಜಾರಿಯಾದ 'ಫ್ಯಾಕ್ಟರಿ ಕಾಯಿದೆ'ಯ ಪ್ರಕಾರ ಎಲ್ಲಾ ಕಾರ್ಖಾನೆಗಳು ವಿದ್ಯುತ್‌ನ್ನು ಉಪಯೋಗಿಸಿದರೆ ೧೦ ಜನ ಕಾರ್ಮಿಕರನ್ನು ಹಾಗೂ ವಿದ್ಯುತ್ ಬಳಸಿಕೊಳ್ಳದಿದ್ದರೆ ೨೦ ಅಥವಾ ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ಬಳಸಿಕೊಳ್ಳಬೇಕು[೪೭] ಎಂಬ ಅಂಶಗಳನ್ನು ಒಳಗೊಂಡಿತ್ತು (ಸ್ವತಂತ್ರ ಪೂರ್ವ ಹಾಗೂ ಸ್ವತಂತ್ರ ನಂತರದ ಕಾರ್ಖಾನೆಗಳ ಕಾಯಿದೆಗಳ ಬಗ್ಗೆ ವಿವರವಾಗಿ ಈ ಕಿರು ಅಧ್ಯಾಯದ ನಂತರದಲ್ಲಿ ಚರ್ಚಿಸಲಾಗಿದೆ). ಇದೇ ಅವಧಿಯಲ್ಲಿ ಮೈಸೂರು

ರಾಜ್ಯದಲ್ಲಿ ಪ್ರತಿ ದಿನ ಕಾರ್ಖಾನೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರ ಸರಾಸರಿ ಸಂಖ್ಯೆ ಸುಮಾರು ೪೪೪೨೩ ರಿಂದ ೬೯೦೦೫ ಆಗಿದ್ದಿತು[೪೮]. 'ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯಿದೆ' (ಕರ್ನಾಟಕ ಲೇಬರ್ ವೆಲ್ಫೇರ್ ಆಕ್ಟ್) ರಾಜ್ಯದ ಒಟ್ಟು ೪,೧೧೦ ಕಾರ್ಖಾನೆಗಳು, ೧,೧೮೦ ಉದ್ಯಮಗಳು ಹಾಗೂ ೨೭೫ ಮೋಟಾರು ಸಾರಿಗೆ ಕಂಪನಿಗಳಿಗೆ ಅನ್ವಯವಾಗುತ್ತಿದ್ದು, ಒಟ್ಟು ೫,೨೩,೦೦೭ ಕಾರ್ಮಿಕರು ಇದರ ಉಪಯೋಗವನ್ನು ಪಡೆದುಕೊಂಡಿದ್ದರು[೪೯]. ವಸಾಹತು ಕಾಲದಲ್ಲಿ ಬೆಂಗಳೂರಿನ ಹತ್ತಿಗಿರಣಿಗಳ ಕಾರ್ಮಿಕ ಸಂಘಗಳು ಬಲಿಷ್ಠ ಅಸ್ತಿತ್ವವನ್ನು ಪಡೆದುಕೊಂಡಿದ್ದು, ಕೆಲವು ಸಲ ಮಾಲೀಕರೊಂದಿಗೆ ಸಂಘರ್ಷಕ್ಕೆ ಇಳಿಯುವ ಮೂಲಕ ಮತ್ತೆ ಕೆಲವು ಬಾರಿ ಹೊಂದಾಣಿಕೆಯ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಪ್ರಯತ್ನ ಮಾಡಿದ್ದುಂಟು. ಆದರೆ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಅವುಗಳು ತಮ್ಮ ಹಿಂದಿನ ಮೊನಚನ್ನು ಕಳೆದುಕೊಂಡು ಸಮಗ್ರ ಕಾಯಿದೆಯಡಿಯಲ್ಲಿ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಎಣಗಾಡುತ್ತಿದ್ದುದು ದಾಖಲೆಗಳು ಸ್ಪಷ್ಟಪಡಿಸುತ್ತವೆ.

ಒಟ್ಟಾರೆ ದೇಶದ ಸ್ವಾತಂತ್ರ್ಯದ ಜೊತೆಗೆ ಕಾರ್ಮಿಕರಿಗೂ ತಮ್ಮ ಸ್ವಾತಂತ್ರ್ಯದ ಅರಿವು ಹಿಂದಿಗಿಂತ ಸ್ವಲ್ಪ ಮಟ್ಟಿಗೆ ಹೆಚ್ಚಾಯಿತು. ಹೀಗಾಗಿ ಕಾರ್ಮಿಕರ ಮುಷ್ಕರಗಳು ಹಾಗೂ ವಿವಾದಗಳು ಹೆಚ್ಚಾಗಿಯೇ ಕಾಣಿಸಿಕೊಳ್ಳಲಾರಂಭಿಸಿತು. ನಗರದ ಕಾರ್ಮಿಕ ಸಂಘಗಳ ನಡುವೆಯೇ ವಿವಾದಗಳು ಕಂಡುಬಂದಿತು. ಮಿನರ್ವ ಮಿಲ್ಲು, ಮೈಸೂರು ಮಿಲ್ಲು ಹಾಗೂ ದಾವಣಗೆರೆಯ ಹತ್ತಿ ಗಿರಣಿಗಳಲ್ಲಿ ಕಾರ್ಮಿಕರು ಮತ್ತು ಗಿರಣಿಗಳ ಆಡಳಿತದ ನಡುವೆ ವಿವಾದಗಳು ಏರ್ಪಟ್ಟಿತು[೫೦]. ಇಲ್ಲಿ ಗಮನಿಸಬೇಕಾದ ಮತ್ತೊಂದು ಬೆಳವಣಿಗೆಯೆಂದರೆ ರಾಜ್ಯ ಸರ್ಕಾರವು ಇವುಗಳನ್ನು ಬಗೆಹರಿಸುವ ಸಲುವಾಗಿ ನ್ಯಾಯಾಲಯಕ್ಕೆ ಶಿಫಾರಸ್ಸು ಮಾಡಿ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿತು ಅಥವಾ ಇದನ್ನು ಹೀಗೂ ಹೇಳಬಹುದು, 'ಸ್ವತಂತ್ರ ಭಾರತ, ಸ್ವತಂತ್ರ ನಿರ್ಧಾರ' ಎಂದು.

ಸ್ವತಂತ್ರಗೊಂಡಾಗ ರಾಜ್ಯದಲ್ಲಿ ಒಟ್ಟಾರೆ ೭೦ ಕಾರ್ಮಿಕ ಸಂಘಗಳಿದ್ದು, ಅವುಗಳು ೧೯೪೨ರ 'ಮೈಸೂರು ಕಾರ್ಮಿಕ ಕಾಯ್ದೆ' ಅನ್ವಯ ನೊಂದಾಯಿಸಿಕೊಂಡಿದ್ದವು. ೧೯೪೭ರ ಕೊನೆಯ ವೇಳೆಗೆ ಒಟ್ಟಾರೆ ಸಂಘಗಳಲ್ಲಿದ್ದ ಸದಸ್ಯತ್ವದ ಸಂಖ್ಯೆ ೫೨,೮೨೨[೫೧]. ಕಾರ್ಮಿಕ ಸಂಘಗಳು ಮತ್ತು ಆಡಳಿತ ಮಂಡಳಿ (ಮಿನರ್ವ ಹಾಗೂ ಮೈಸೂರು ಮಿಲ್ಲು)ಯ ನಡುವೆ ಏರ್ಪಟ್ಟಿದ್ದ ವಿವಾದಗಳನ್ನು ಬಗೆಹರಿಸುವ ಸಲುವಾಗಿ ನ್ಯಾಯಾಲಯವು ಮಧ್ಯಸ್ಥಿಕೆಯನ್ನು ವಹಿಸಿಕೊಂಡಿದ್ದು ಒಂದು ರೀತಿಯಲ್ಲಿ ಆಡಳಿತ ಮಂಡಳಿಯ ನಿರ್ಧಾರಗಳಿಗೆ ಹಿನ್ನೆಡೆ ಅಂತಲೇ ಹೇಳಬಹುದು. ಅಲ್ಲದೆ ಸ್ವತಂತ್ರ

ಭಾರತಕ್ಕಿಂತ ವಸಾಹತು ಭಾರತದ ಕಾನೂನು, ನಿಯಮಗಳು ಮಾಲೀಕರಿಗೆ ಪೂರಕವಾಗಿದ್ದವು. ಏಕೆಂದರೆ ಈ ಸಂದರ್ಭದಲ್ಲಿ ಕಾರ್ಮಿಕ ಮತ್ತು ಮಾಲೀಕರ ನಡುವೆ ತಲೆದೋರಿದ್ದ ವಿವಾದವನ್ನು ಕೇವಲ ಒಂದು ವರ್ಷದಲ್ಲಿಯೇ ಬಗೆಹರಿಸಿ; ಕನಿಷ್ಠ ಕೂಲಿ, ಭತ್ಯೆ, ಬೋನಸ್ ವಿಚಾರಗಳಿಗೆ ಸಂಬಂಧಪಟ್ಟಂತೆ ಕಾರ್ಮಿಕರ ಪರವಾಗಿ ತೀರ್ಪು ನೀಡಿತು[೫೨]. ಇದು ಹತ್ತಿ ಗಿರಣಿಗಳ ವಿಷಯದಲ್ಲಿ ಸ್ವತಂತ್ರ ಭಾರತದಲ್ಲಿ ನ್ಯಾಯಾಲಯದ ಮೆಟ್ಟಿಲೇರಿ ಬಹಳ ಬೇಗನೆ ಬಗೆಹರಿದ ವಿವಾದಗಳಲ್ಲಿ ಬಹಳ ಮುಖ್ಯವಾದುದು ಅಂದರೆ ತಪ್ಪಾಗಲಾರದು. ೧೯೪೮೮ರ ವೇಳೆಗೆ ರಾಜ್ಯದಲ್ಲಿ ೮೯ ಕಾರ್ಮಿಕ ಸಂಘಗಳು ನೋಂದಣಿ ಮಾಡಿಸಿದ್ದವು. ೧೯೪೭ರಲ್ಲಿ ೭೦ ಇದ್ದಿದು ಒಂದೇ ವರ್ಷದಲ್ಲಿ ೧೯ ಸಂಘಗಳು ಏರಿಕೆಯಾದವು ಅಲ್ಲದೆ ಸದಸ್ಯತ್ವದ ಸಂಖ್ಯೆ ೫೨೮೨೨ ಇದ್ದಿದು ೫೪೭೪೬ಕ್ಕೆ ಏರಿಕೆಯಾಯಿತು[೫೩].

ರಾಷ್ಟ್ರಮಟ್ಟದಲ್ಲಿ ಕಾರ್ಮಿಕ ಸಂಘಟನೆಯಲ್ಲಿ ಕಂಡುಬಂದ ಬಿರುಕು ರಾಜ್ಯದ ಸಂಘಟನೆಯಲ್ಲೂ ಕೆಲಮಟ್ಟಿಗೆ ಪ್ರತಿಫಲನಗೊಂಡಿತು. ೫೦ರ ದಶಕದಲ್ಲಿ ಕೈಗಾರಿಕೋದ್ಯಮಗಳಲ್ಲಿ ಬಹುಮಟ್ಟಿಗೆ ಶಾಂತಿ ನೆಲೆಸಿತ್ತು. ಆಗೀಗ ತಲೆದೋರುವ ತಗಾದೆಗಳನ್ನು ಕೈಗಾರಿಕಾ ನ್ಯಾಯಾಲಯಗಳು ಪರಿಹರಿಸುತ್ತಿದ್ದವು. ೧೯೫೧ರಲ್ಲಿ ಮೈಸೂರು ರಾಜ್ಯದಲ್ಲಿ ೧೬ ಕಾರ್ಮಿಕ ಶಾಸನಗಳು ಜಾರಿಗೆ ಬಂದವು. ಕೇಂದ್ರದ ಕಾಯಿದೆಯಾದ 'ಕೈಗಾರಿಕಾ ವಿವಾದ ಕಾಯ್ದೆ' (೧೯೪೭)ಯನ್ನು ರಾಜ್ಯಕ್ಕೆ ಇದೇ ಅವಧಿಯಲ್ಲಿ ವಿಸ್ತರಿಸಲಾಯಿತು[೫೪]. ಸ್ವತಂತ್ರ ನಂತರ ರಾಜ್ಯದಲ್ಲಿ ಬೆಂಗಳೂರು ದೊಡ್ಡ ಕೈಗಾರಿಕಾ ಪ್ರದೇಶ ಎಂದು ಗುರುತಿಸಿಕೊಂಡರೂ ಕಾರ್ಮಿಕರು ದಾರಿದ್ರ್ಯದ ಸ್ಥಿತಿಯಲ್ಲಿಯೇ ಇದ್ದರು. ಸರ್ಕಾರಿ ಇಲಾಖೆಗಳು, ದೊಡ್ಡ ಕಾರ್ಖಾನೆಗಳು, ಗಿರಣಿಗಳು ಹಾಗೂ ಖಾಸಗಿ ಸಂಸ್ಥೆಗಳು ಕಾರ್ಮಿಕರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ ಮೂಲಕ ಭರ್ತಿ ಮಾಡಿಕೊಳ್ಳಲು ಪ್ರಾರಂಭಿಸಿದ್ದರಿಂದ ಇದು ಕಾರ್ಮಿಕರಿಗೆ ಅಭದ್ರತೆ, ಆತಂಕವನ್ನು ತಂದೊಡ್ಡಿತು[೫೫]. ಬಿನ್ನಿಮಿಲ್ಲು ಮಾಲೀಕರು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ ಪ್ರಯೋಗವನ್ನು ಮಾಡಲು ಮುಂದಾದಾಗ ಕಾರ್ಮಿಕರು ಅಸಮಾಧಾನಗೊಂಡರು.

ಭಾರತ–ಚೈನಾ ಯುದ್ಧದ ನಂತರ ಕಾರ್ಮಿಕ ಸಂಘಟನೆ ಎರಡು ಹೋಳಾಯಿತು. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ನಿಂದ ಹೊರಬಂದವರು ಸೆಂಟರ್ ಫಾರ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಸಿಟಿಯುಸಿ) ಸ್ಥಾಪಿಸಿದರು[೫೬]. ಅಷ್ಟರಲ್ಲಿ ಎರಡನೇ

ತಲೆಮಾರಿನ ಕಾರ್ಮಿಕ ಮುಖಂಡರೂ ತಯಾರಾಗಿದ್ದರು. ಇದೇ ಸಮಯದಲ್ಲಿ ಭಾಷೆಯ ಆಧಾರದ ಮೇಲೆ ಸಂಘಟನೆಗಳಲ್ಲಿ ಒಡಕುಗಳು ಕಂಡುಬರತೊಡಗಿದವು. ಹಣದುಬ್ಬರದಿಂದ ಕಾರ್ಮಿಕ ವರ್ಗಗಳ ನೈಜ-ಕೂಲಿ ದರದಲ್ಲಿ ಬಹಳಷ್ಟು ಕಡಿತ ಉಂಟಾಗಿ ಕೆಲವು ಕಾರ್ಮಿಕ ಚಳವಳಿಗಳು ಉಗ್ರ ರೂಪ ತಾಳಿದವು. ಮುಷ್ಕರಗಳು ಹೆಚ್ಚಾದವು, ಅವುಗಳಲ್ಲಿ ಅನೇಕವು ಹೊಡೆದು ಹಿಂದೋಡುವ ತಂತ್ರವನ್ನು ಬಳಸಿದವು. ಈ ಪರಿಸ್ಥಿತಿಯನ್ನು ಹೇಗೆ ನಿರ್ವಹಿಸಬೇಕೆಂಬುದು ಆಡಳಿತದ ವರ್ಗಗಳಿಗೂ ತಿಳಿದಿರಲಿಲ್ಲ. ಕೈಗಾರಿಕಾ ವಾತಾವರಣ ಬಹಳಷ್ಟು ಬಿಗಡಾಯಿಸಿತು. ಆದರೆ ಕೆಲವೇ ಸಮಯದಲ್ಲಿ ಒಪ್ಪಂದಗಳು ಏರ್ಪಟ್ಟು ಪ್ರಬುದ್ಧ ಕೈಗಾರಿಕಾ ವಾತಾವರಣ ಏರ್ಪಟ್ಟಿತು.

ಆದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಮತ್ತೆ ಪರಿಸ್ಥಿತಿ ಹದಗೆಟ್ಟಿತು. ಕೇಂದ್ರ ಸರ್ಕಾರ ಹಣದುಬ್ಬರ ತಡೆಹಿಡಿಯಲಿಕ್ಕೆ ಹೇರಿದ ಕಡ್ಡಾಯ ಠೇವಣಿ ಯೋಜನೆ, "ಮೇಲ್ದರ್ಜೆ ವೇತನ ದ್ವೀಪ"ಗಳೆಂದು ಕರೆಯಲಾದ ಕೇಂದ್ರ ಸರ್ಕಾರಿ ಸಾರ್ವಜನಿಕ ಉದ್ದಿಮೆಗಳ ಮೇಲೆ ನೀಡಲಾದ ಹೆಚ್ಚುವರಿ ಒತ್ತು ಹಾಗೂ ವೇತನದ ವಿಷಯದಲ್ಲಿ ಭೂತ ಲಿಂಗಂ ಸಮಿತಿ ನೀಡಿದ ಸಲಹೆಗಳು ಬಹಳಷ್ಟು ವಿವಾದಗಳಿಗೆ ಎಡೆಮಾಡಿಕೊಟ್ಟವು[೫೭]. ಕಾರ್ಮಿಕರ ಮೇಲಿನ ಈ ಎಲ್ಲಾ "ಸರ್ಕಾರಿ-ನಿಯೋಜಿತ" ದಬ್ಬಾಳಿಕೆಯ ವಿರುದ್ಧ ಹೋರಾಡಲು ದುಡಿಯುವ ವರ್ಗಗಳು ಕಾರ್ಮಿಕ ಐಕ್ಯತೆಗಾಗಿ ಶ್ರಮಿಸಿದವು. ಎಐಟಿಯುಸಿ ಮತ್ತು ಸಿಟಿಯುಸಿ ಜೊತೆಗೂಡಿ ಕಾರ್ಮಿಕ ಐಕ್ಯತಾ ಒಕ್ಕೂಟವೊಂದನ್ನು ಸ್ಥಾಪಿಸಿದವು.

ಕಾರ್ಮಿಕರ ಒಗ್ಗಟ್ಟನ್ನು ಮತ್ತಷ್ಟು ಬಲಗೊಳಿಸಿದ ಇನ್ನೊಂದು ಘಟನೆ, ಬೆಂಗಳೂರಿನ ಸಾರ್ವಜನಿಕ ಉದ್ದಿಮೆಯೊಂದರಲ್ಲಿ ವೇತನ ಸಮಾನತೆ ಕುರಿತು ನಡೆದ ಚಳವಳಿ. ಬೆಂಗಳೂರಿನ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಸುಮಾರು ೮೦,೦೦೦ ಕಾರ್ಮಿಕರು ಒಂದೇ ಸಂಘಟನೆಯ ಅಡಿಯಲ್ಲಿ ಒಗ್ಗಟ್ಟಾಗಿ ನಿಂತು ವೇತನ ತಾರತಮ್ಯಗಳನ್ನು ನಿವಾರಿಸುವಂತೆ ಆಡಳಿತ ವರ್ಗಗಳ ಮೇಲೆ ಒತ್ತಾಯ ತರಬೇಕೆಂದು ಕೋರಿ ಪ್ರಧಾನ ಮಂತ್ರಿ ಇಂದಿರಾಗಾಂಧಿಗೆ ವೈಯಕ್ತಿಕ ಪತ್ರಗಳನ್ನು ಬರೆದರು[೫೮]. ಈ ತಂತ್ರ ಫಲನೀಡದೆ ಹೋದಾಗ ಮೂರು ತಿಂಗಳುಗಳ ಮುಷ್ಕರ ನಡೆಯಿತು. ಕೊನೆಯ ಹಂತದಲ್ಲಿ ಈ ಮುಷ್ಕರ ಹಿಂಸಾತ್ಮಕ ರೂಪ ತಾಳಿ ಜೀವಹಾನಿ ಹಾಗೂ ಆಸ್ತಿಪಾಸ್ತಿ ಹಾನಿಗೆ ಕಾರಣವಾಯಿತು. ಅಷ್ಟೊಂದು ಮಂದಿ ಕಾರ್ಮಿಕರನ್ನು ಒಂದು ವೇದಿಕೆಯಡಿ ಒಗ್ಗೂಡಿಸುವುದರಲ್ಲಿ ಸಫಲರಾಗಿದ್ದ ಮುಖಂಡರು ಈ ಬೃಹತ್ ಕಾರ್ಮಿಕ ಸಮೂಹದ ಮುಂದಾಳತ್ವ ವಹಿಸುವುದರಲ್ಲಿ

ವಿಫಲರಾಗಿದ್ದರು. ಹೀಗಾಗಿ ಮುಷ್ಕರ ವಿಫಲವಾಯಿತು. ಐಎನ್‌ಟಿಯುಸಿ ಕಾರ್ಮಿಕ ಸಂಘಟನೆಯ ಅಸಹಕಾರ, ಜನ ಸಾಮಾನ್ಯರ ಅಸಹಾನುಭೂತಿ, ಸರ್ಕಾರದ ಕಠೋರ ನಿಲುವು ಇತ್ಯಾದಿ ಅಂಶಗಳು ಈ ವಿಫಲತೆಗೆ ಕಾರಣಗಳಿರಬಹುದು.

ಈ ಕೆಳಗೆ ಸ್ವಾತಂತ್ರ್ಯಪೂರ್ವ ಹಾಗೂ ಸ್ವತಂತ್ರ ನಂತರದ ಕೆಲವು ಕಾರ್ಮಿಕ ಕಾಯಿದೆಗಳ ಕುರಿತು ಚರ್ಚಾತ್ಮಕ ಮಾಹಿತಿಯನ್ನು ನೀಡಲಾಗಿದೆ. ಭಾರತದಲ್ಲಿ ಕಾರ್ಮಿಕ ಕಾಯಿದೆಗೆ ಸುಮಾರು ೧೨೦ ವರ್ಷಗಳ ಚರಿತ್ರೆ ಇದೆ. ಬ್ರಿಟಿಷ್ ಆಳ್ವಿಕೆಯಲ್ಲಿ ಕಾರ್ಖಾನೆಯ ನೌಕರರ ಹಿತರಕ್ಷಣೆಗಾಗಿ ಹಲವು ಕಾಯಿದೆಗಳನ್ನು ಜಾರಿಗೆ ತರಲಾಯಿತು. ೧೮೮೧ರಲ್ಲಿ ಮೊದಲ ಕಾಯಿದೆ, ನಂತರ ಪುನಃ ೧೮೯೧, ೧೯೧೧, ೧೯೨೨ ಹಾಗೂ ೧೯೩೪ರಲ್ಲಿ ಸರ್ಕಾರ ಅಗತ್ಯವಾದ ಕಾಯಿದೆಗಳನ್ನು ಜಾರಿಗೆ ತಂದಿತು. ನಂತರ ಸ್ವತಂತ್ರ ಭಾರತ ಸರ್ಕಾರ ಹಿಂದಿನ ಕಾಯಿದೆಗಳಲ್ಲಿನ ತೊಡಕುಗಳನ್ನು ನಿವಾರಿಸಿ ೧೯೪೮ರಲ್ಲಿ ಹೊಸ ಒಂದು ಕಾಯಿದೆಯನ್ನು ಜಾರಿಗೆ ತಂದಿತು. ಇದು ಸ್ವತಂತ್ರ ಭಾರತದ ಪ್ರಪ್ರಥಮ ಕಾರ್ಖಾನೆಗಳ ಕಾಯಿದೆಯಾಗಿದೆ. ಈ ಕಾಯಿದೆ ಸಮಗ್ರ ಭಾರತದಲ್ಲಿ ಬರುವ ಎಲ್ಲಾ ಕಾರ್ಖಾನೆಗಳಿಗೂ ಅನ್ವಯವಾಗುತ್ತದೆ. ನಂತರ ೧೯೬೧ರಲ್ಲಿ ಜಾರಿಗೆ ಬಂದ ಪ್ರಸೂತಿ ಅನುಕೂಲ್ಯ ಕಾಯಿದೆಯ ೫೩ನೇ ಕಾಯಿದೆಯಾಗಿದೆ.

**ಕೆಲಸಗಾರರ ಪರಿಹಾರ ಕಾಯಿದೆ–೧೯೨೩**

ಕೆಲವು ವಿಧವಾದ ಕೆಲಸಗಳು ಅದರಲ್ಲೇ ಸತತವಾಗಿ ನಿರತರಾದ ಕೆಲಸಗಾರರಿಗೆ, ಆಯಾ ಕೆಲಸಕ್ಕೆ ಸಂಬಂಧಪಟ್ಟಂಥ ರೋಗಗಳನ್ನು ತರುತ್ತವೆ. ಹತ್ತಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ 'ಅರಳೆ ಬೇನೆ' ರೋಗ ಸಾಮಾನ್ಯ. ಇಂಥ ಪರಿಸ್ಥಿತಿಯಿಂದ ಕೆಲಸಗಾರರನ್ನು ಸಂರಕ್ಷಿಸಲು ಕೆಲಸಗಾರರ ನಷ್ಟ ಪರಿಹಾರ ಕಾಯಿದೆಯನ್ನು (೧೯೨೩) ಜಾರಿಗೆ ತರಲಾಗಿದೆ. ೧೯೨೪ರ ಜುಲೈ ಮೊದಲನೇ ದಿನಾಂಕದಿಂದ ಕಾರ್ಯರೂಪಕ್ಕೆ ಬಂದಿತು (ವಿಧಿ–೧).

ಈ ಕಾಯಿದೆಯ ಪ್ರಕಾರ ಆದ ಅಪಘಾತಗಳಿಗೆ ನೌಕರಿದಾತನ ಅಲಕ್ಷತೆ ಇತ್ತೋ, ಇಲ್ಲವೋ ಆದರೂ ಅವನು ಕೆಲಸಗಾರರಿಗೆ ಅಪಘಾತದಿಂದ ಆದ ನಷ್ಟಕ್ಕೆ ಹಣದ ರೂಪದಲ್ಲಿ ಪರಿಹಾರ ಕೊಡಲೇಬೇಕಾಗುತ್ತದೆ. ಅಂದರೆ ಕಾರ್ಮಿಕನಿಗೆ ಆದ ನಷ್ಟಕ್ಕೆ ಪರಿಹಾರ ದೊರಕಿಸಿಕೊಳ್ಳಲು ಈ ಕಾಯಿದೆಯ ಮೂಲಕ ಕ್ರಮ ಕೈಗೊಳ್ಳುವುದೇ ಸುಲಭ ಮತ್ತು ಸಾಕಷ್ಟು ಸರಳವಾದ ಮಾರ್ಗ. ವಿಧಿ–೩.೧ರ ಕಟ್ಟಳೆ ಪ್ರಕಾರ ಕೆಲವು ಪ್ರಕರಣಗಳಲ್ಲಿ ನೌಕರಿದಾತ ಪರಿಹಾರ ಕೊಡುವ ಹೊಣೆಗಾರಿಕೆ ಇಲ್ಲ.

೧. ಕೆಲಸಗಾರ ಮದ್ಯ ಅಥವಾ ಮದ್ದಿನಿಂದ ಪ್ರಭಾವಿತನಾಗಿರುವ ಕಾಲದಲ್ಲಿ.

೨. ಕೆಲಸಗಾರ ತನಗೆ ಕೊಟ್ಟ ಸ್ಪಷ್ಟ ಆದೇಶಗಳನ್ನು ಉದ್ದೇಶಪೂರ್ವಕವಾಗಿ ಉಲ್ಲಂಘನೆ ಮಾಡಿದಾಗ.

೩. ಕೆಲಸಗಾರರ ಸುರಕ್ಷತೆಗಾಗೇ ಅಳವಡಿಸಲಾಗಿದೆ ಎಂದು ಅವನು ತಿಳಿದೇ ಇರುವಂತ ರಕ್ಷಣಾ ಕವಚ ಅಥವಾ ಇತರೆ ಸಲಕರಣಗಳನ್ನು ಉದ್ದೇಶಪೂರ್ವಕವಾಗಿ ಕೆಲಸಗಾರ ತೆಗೆದುಹಾಕಿದರೆ ಅಥವಾ ಅಲಕ್ಷಿಸಿದರೆ.

ವಿಧಿ–೪ರ ಪ್ರಕಾರ ಕೆಲಸಗಾರರಿಗೆ ಪರಿಹಾರದ ಮೊಬಲಗನ್ನು ನಿಗದಿ ಮಾಡಲು ಕೆಳಕಂಡ ನಾಲ್ಕು ನಿಯಮಗಳನ್ನು ರೂಪಿಸಲಾಗಿದೆ.

೧. ಮರಣ ಉಂಟಾದಾಗ

೨. ಶಾಶ್ವತವಾದ ಪೂರ್ಣ ಅಸಮರ್ಥತೆ ಉಂಟಾದಾಗ

೩. ಶಾಶ್ವತವಾದ ಭಾಗಶಃ ಅಸಮರ್ಥತೆ ಉಂಟಾದಾಗ

೪. ತಾತ್ಕಾಲಿಕ ಅಸಮರ್ಥತೆ ಉಂಟಾದಾಗ.

ಹಾಗೆಯೇ ಪರಿಹಾರ ಸಕಾಲಕ್ಕೆ ಸಲ್ಲಿಕೆ ಆಗದಿದ್ದಲ್ಲಿ (ವಿಧಿ–೪ಎ) ದಂಡವನ್ನು ಒಳಗೊಂಡಿತ್ತು. ಕರ್ನಾಟಕ ಕೆಲಸಗಾರರ ಪರಿಹಾರ ನಿಬಂಧನೆ ೭೮ರ ಪ್ರಕಾರ ಸಾವಿರ ನೌಕರರಿಗೂ ಮೀರಿದ ನೌಕರರು ಕೆಲಸ ಮಾಡುತ್ತಿರುವಂಥ ಸಂಸ್ಥೆಗಳಲ್ಲಿ (ಅಪಘಾತ) ತಿಳುವಳಿಕೆ ಪತ್ರದ ಪುಸ್ತಕವನ್ನು ಇಟ್ಟಿರಬೇಕು. ಅದರಲ್ಲಿ ಬಟ್ಟೆ ಗಿರಣಿಗಳು ಪ್ರಮುಖವಾದುದು. ಈ ಕಾಯ್ದೆಯ ಪ್ರಕಾರ ನೌಕರರಿಗೆ ಆಗುವ ಅಪಘಾತಕ್ಕೆ ನಷ್ಟ ಪರಿಹಾರಗಳೆಲ್ಲವೂ ಕಮಿಷನ್ನರ ವ್ಯಾಪ್ತಿಗೆ ಬರುತ್ತದೆ. ವಿಧಿ–೧೧ರ ಪ್ರಕಾರ ನೌಕರರಿಗೆ ಉಚಿತ ವೈದ್ಯಕೀಯ ಪರೀಕ್ಷೆಯನ್ನು ನಡೆಸಬೇಕು ಎಂಬುದಾಗಿ ಈ ಕಾಯಿದೆ ತಿಳಿಸುತ್ತದೆ. ವಿಧಿ–೧೨(೧) ಹೇಳುವಂತೆ ಕೆಲಸಗಾರ ಯಜಮಾನನಿಂದಲೇ ಪರಿಹಾರವನ್ನು ಪಡೆಯಬೇಕು ಎಂದೇನೂ ಇಲ್ಲ. ಬೇಕಿದ್ದಲ್ಲಿ ಕೆಲಸಗಾರ ಗುತ್ತದಾರನಿಂದ ಪರಿಹಾರ ಪಡೆಯಲು ಯಾವ ಅಡ್ಡಿಯೂ ಇಲ್ಲ. ಅಂದರೆ ಈ ವಿಧಿಯ ಪ್ರಕಾರ ನೇರವಾಗಿ ಪರಿಹಾರ ಕೊಡುವ ಹೊಣೆಗಾರಿಕೆ ಇರುವ ವ್ಯಕ್ತಿ (ಗುತ್ತದಾರ) ಅಪ್ಪಣೆ ಕೊಟ್ಟಿದ್ದಾಗ, ಪರಿಹಾರ ಕೊಟ್ಟು ಆಗುವ ನಷ್ಟವನ್ನು

ಭರ್ತಿ ಮಾಡಿಕೊಡು ಎಂದು ಯಜಮಾನ ತನ್ನ ಗುತ್ತದಾರನಿಂದ ವಾಗ್ದಾನ ಪಡೆಯಬಹುದು. ಒಟ್ಟಿನಲ್ಲಿ ಯಜಮಾನ ಮತ್ತು ಗುತ್ತದಾರನ ನಡುವೆ ಸಂಬಂಧ ಇದ್ದಿರಲೇಬೇಕು. ಈ ಕಾಯಿದೆಯ ವಿಧಿ-೨೦ರ ಪ್ರಕಾರ ರಾಜ್ಯ ಸರ್ಕಾರ ತನ್ನ ಅಧಿಕೃತ ಗೆಜೆಟ್ ಮೂಲಕ ಪ್ರಕಟಿಸಿ ಕೆಲಸಗಾರರ ಪರಿಹಾರ ಕಮಿಷನರನ್ನು ನೇಮಿಸಬಹುದು. ಒಬ್ಬರಿಗಿಂತಲೂ ಹೆಚ್ಚು ಸಂಖ್ಯೆಯ ಕಮಿಷನರುಗಳನ್ನು ನೇಮಿಸಲು ಅವಕಾಶ ಇದ್ದಿತು.

**ವೇತನ ಪಾವತಿ ಕಾಯಿದೆ-೧೯೩೬**

**೧೯೩೬ರ ನಾಲ್ಕನೇ ಕಾಯಿದೆ**

ಕೈಗಾರಿಕಾ ಸಂಸ್ಥೆಗಳಲ್ಲಿ ನೌಕರಿಯಲ್ಲಿ ಇರುವಂತಹ ಕೆಲವು ವರ್ಗದ ಕೆಲಸಗಾರರಿಗೆ ಮಾಡುವ ಪಾವತಿಯನ್ನು ನಿಯತಗೊಳಿಸುವುದಕ್ಕಾಗಿ ೧೯೩೬ರಲ್ಲಿ ಈ ಕಾಯಿದೆಯನ್ನು ಮಾಡಲಾಯಿತು. ಈ ಕಾಯಿದೆಗೆ ೧೯೮೨ರಲ್ಲಿ ಅನೇಕ ತಿದ್ದುಪಡಿಗಳನ್ನು ಮಾಡಲಾಗಿದೆ. ಅವುಗಳಲ್ಲಿ ಮುಖ್ಯವಾದವು', ಮೊದಲು, ಈ ಕಾಯಿದೆ ಸಾವಿರ ರೂಪಾಯಿಗಳವರೆಗೆ ವೇತನ ಬರುವವರಿಗೆ ಮಾತ್ರ ಅನ್ವಯವಾಗುತ್ತದೆ. ಅಥವಾ ೧,೬೦೦ ರೂ.ಗಳಿಗಿಂತಲೂ ಕಡಿಮೆ ಮಾಸಿಕ ವೇತನ ಪಡೆಯುವವರೆಲ್ಲಾ ಈ ಕಾಯಿದೆಯ ವ್ಯಾಪ್ತಿಯೊಳಗೆ ಇರುತ್ತಾರೆ. ಅಲ್ಲದೆ ಕೈಗಾರಿಕಾ ಸಂಸ್ಥೆ ಎಂದು ಹೇಳುತ್ತಿದ್ದನ್ನು ಕೈಗಾರಿಕಾ ಅಥವಾ ಇತರೆ ಸಂಸ್ಥೆಗಳು ಎಂದು ತಿದ್ದುಪಡಿ ಮಾಡಲಾಗಿದೆ. ಇದರಿಂದಾಗಿ ಇತರೆ ಸಂಸ್ಥೆಗಳಿಗೂ ಈ ಕಾಯಿದೆ ಅನ್ವಯವಾಗುವಂತೆ ಮಾಡಲು ಯಾವಾಗಬೇಕಾದರೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಅಧಿಕೃತ ಗೆಜೆಟ್ಟಿನಲ್ಲಿ ಈ ಬಗ್ಗೆ ಪ್ರಕಟಣೆ ಮಾಡಿ ಅನ್ವಯ ಮಾಡುವ ಅಧಿಕಾರ ಪಡೆದಿವೆ.

ಈ ಕಾಯಿದೆ ಮೇರೆಗೆ ತನ್ನ ನೌಕರರಿಗೆ ಪಾವತಿ ಮಾಡಬೇಕಾದ ಎಲ್ಲಾ ವೇತನ ಪಾವತಿಗೂ ನೌಕರಿದಾತನೇ ಜವಬ್ದಾರನಾಗಿರುತ್ತಾನೆ. ಈ ಕಾಯಿದೆಯ ಮೇರೆಗೆ ವಿಧಿ-೪ರ ಪ್ರಕಾರ ವೇತನ ಪಾವತಿಗೆ ಹೊಣೆಗಾರನಾಗಿರುವ ಪ್ರತಿಯೊಬ್ಬ ವ್ಯಕ್ತಿಯೂ ವೇತನ ಪಾವತಿ ಮಾಡಬೇಕಾದ ಕಾಲವನ್ನು ನಿಗದಿ ಮಾಡಬೇಕು. ಅಂಥ ಕಾಲವನ್ನು ಈ ಕಾಯಿದೆಯಲ್ಲಿ 'ವೇತನ ಕಾಲ' ಎಂದೇ ಹೇಳಲಾಗುತ್ತದೆ. ಯಾವುದೇ ವೇತನ ಕಾಲವೂ ಒಂದು ತಿಂಗಳಿಗಿಂತಲೂ ಮೀರಿದ ಕಾಲ ಆಗಿರಕೂಡದು.

**ಕಾರ್ಖಾನೆಗಳ ಕಾಯಿದೆ-೧೯೪೮**

ಈ ಕಾಯಿದೆಯಲ್ಲಿ ಕಾರ್ಖಾನೆ ಹಾಗೂ ಕಾರ್ಮಿಕನಿಗೆ ವಿಶಾಲಾರ್ಥವನ್ನು ನೀಡಲು ಪ್ರಯತ್ನಿಸಲಾಗಿದೆ. ಕಾರ್ಖಾನೆ ಎಂಬುದರ ಅರ್ಥ ಬಹಳ ವಿಶಾಲವಾದುದು, ಅದನ್ನು ಒಂದೇ ನಿರೂಪಣೆಯೊಳಗೆ ಹಿಡಿದಿಡುವುದು ಕಷ್ಟ. ಒಟ್ಟಿನಲ್ಲಿ ಅಲ್ಲಿ ತಯಾರಿಕಾ ಪ್ರಕ್ರಿಯೆ ಇರಬೇಕು. ತಯಾರಿಕಾ ಪ್ರಕ್ರಿಯೆ ಎನಿಸಿಕೊಳ್ಳಬೇಕಾದರೆ ತಯಾರಿಕೆಗೆ ಬಳಸಿದ ವಸ್ತುಗಳು ಪರಿವರ್ತನೆ ಹೊಂದಬೇಕು. ಯಾವುದೇ ವಸ್ತುವಿನ ಮೇಲೆ ಬರೀ ಮಾನವ ಅಥವಾ ಯಾಂತ್ರಿಕ ಶ್ರಮವನ್ನು ಬಳಸಿದ ಮಾತ್ರಕ್ಕೆ ಅದು ಒಂದು ತಯಾರಿಕಾ ಪ್ರಕ್ರಿಯೆ ಆಗುವುದಿಲ್ಲ. ಹಾಗೆ ಶ್ರಮ ಬಳಸಿದ ವಸ್ತು ಪರಿವರ್ತನೆ ಹೊಂದಿ ಇನ್ನೊಂದು ವಾಣಿಜ್ಯ ಅಥವಾ ವ್ಯಾಪಾರದ ವಸ್ತು ಆಗಿ, ಒಂದು ಪ್ರತ್ಯೇಕ ಅಸ್ತಿತ್ವವನ್ನು ಪಡೆದರೆ ಮಾತ್ರ ಆಗ ತಯಾರಿಕಾ ಪ್ರಕ್ರಿಯೆ ನಡೆಯಿತು ಎನ್ನಬಹುದು. ಉದಾಹರಣೆಗೆ, ಹತ್ತಿಯನ್ನು ಬೀಜದಿಂದ ಬೇರ್ಪಡಿಸುವುದೂ ಒಂದು ತಯಾರಿಕಾ ಪ್ರಕ್ರಿಯೆ.

ಅದೇ ರೀತಿ ಕಾರ್ಮಿಕ ಅಥವಾ ನೌಕರ ಎಂಬ ಪದದ ನಿರೂಪಣೆಯನ್ನು ಗಮನಿಸುವುದಾದರೆ ಅದೂ ಸಹ ವಿಶಾಲಾರ್ಥವನ್ನು ಹೊಂದಿದೆ. ಈ ಕಾಯಿದೆಯ ವಿಧಿ-೨(L) ಪ್ರಕಾರ, ಒಬ್ಬ ವ್ಯಕ್ತಿ ಸಂಭಾವನೆಗೇ ಆಗಲಿ ಅಥವಾ ಇಲ್ಲದೆಯೆ ನೇರವಾಗೇ ಆಗಲಿ ಅಥವಾ ಪ್ರಧಾನ ನೌಕರಿದಾತನಿಗೆ ತಿಳಿದೋ ಅಥವಾ ತಿಳಿಯದಂತೋ ಯಾವುದೇ ನಿಯೋಗದಿಂದಲೇ ಆಗಲಿ ಅಥವಾ ಗುತ್ತದಾರರುಗಳೂ ಸೇರಿದಂತೆ, ಯಾವುದೇ ನಿಯೋಗದ ಮೂಲಕವೇ ಆಗಲಿ ನೇಮಕಗೊಂಡಿದ್ದು, ಯಾವುದೇ ತಯಾರಿಕಾ ಪ್ರಕ್ರಿಯೆಯಲ್ಲಿ ಅಥವಾ ಯಂತ್ರದ ಯಾವುದೇ ಭಾಗವನ್ನು ಅಥವಾ ಒಂದು ತಯಾರಿಕಾ ಪ್ರಕ್ರಿಯೆಗಾಗಿ ಬಳಸುವ ಕಟ್ಟಡವನ್ನು ಸ್ವಚ್ಛಗೊಳಿಸುವುದರಲ್ಲಿ ಅಥವಾ ತಯಾರಿಕಾ ಪ್ರಕ್ರಿಯೆಗೆ ಪ್ರಾಸಂಗಿಕ ಆದ ಅಥವಾ ಸಂಬಂಧಪಟ್ಟಂಥ ಯಾವುದೇ ವಿಧವಾದ ಕೆಲಸದಲ್ಲಿ ಅಥವಾ ತಯಾರಿಕಾ ಪ್ರಕ್ರಿಯೆಯ ವಿಷಯದಲ್ಲಿ ನಿರತನಾಗಿದ್ದರೆ ಅವನು ಒಬ್ಬ ಕೆಲಸಗಾರ ಅಥವಾ ನೌಕರ ಅಥವಾ ಕಾರ್ಮಿಕ.

**ಉದ್ದೇಶ**

ಕಾರ್ಖಾನೆ ಕೆಲಸಗಾರರಿಗೆ ಆರೋಗ್ಯ, ಸುರಕ್ಷತೆ, ಕಲ್ಯಾಣ, ನಿಗದಿಯಾದ ಕೆಲಸದ ವೇಳೆ ಮತ್ತು ರಜಾ ದಿನ ಸೌಲಭ್ಯಗಳನ್ನು ಒದಗಿಸಿಕೊಡುವುದೇ ಆಗಿದೆ. ಜೊತೆಗೆ ಹೆಂಗಸರು ಮತ್ತು

ಮಕ್ಕಳನ್ನು ಕಾರ್ಖಾನೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದರ ಬಗ್ಗೆಯೂ ಅವಶ್ಯಕವಾದ ನಿಯಮಗಳನ್ನು ಈ ಕಾಯಿದೆಯಲ್ಲಿ ಮಾಡಲಾಗಿದೆ. ಇದು ೧೯೪೮ರ ಏಪ್ರಿಲ್ ಒಂದರಂದು ಜಾರಿಗೆ ಬಂದಿತು. ಇದನ್ನು 'ಕಾರ್ಖಾನೆಗಳ ಕಾಯಿದೆ-೧೯೪೮' ಎಂದು ಕರೆಯಲಾಗಿದೆ.

ಕಾಯಿದೆಯ ೮೫ನೇ ವಿಧಿಯನ್ನು ಬಳಸಿ ಕನಿಷ್ಠ ಮಂದಿ ಕೆಲಸಗಾರರಿಗೂ ಕಡಿಮೆ ಸಂಖ್ಯೆಯಲ್ಲಿ ಕೆಲಸಗಾರರು ಕೆಲಸದಲ್ಲಿ ತೊಡಗಿರುವ ಯಾವುದೇ ಒಂದು ತಯಾರಿಕಾ ಪ್ರಕ್ರಿಯೆಯನ್ನು ಬೇಕಾದರೂ ಆಯಾ ರಾಜ್ಯ ಸರ್ಕಾರಗಳು ಒಂದು ಕಾರ್ಖಾನೆ ಎಂದು ಪ್ರತ್ಯೇಕವಾಗಿ ಘೋಷಿಸಬಹುದಾಗಿದೆ. ಇದರ ನಿಯಮ ಆಯಾ ರಾಜ್ಯ ಸರ್ಕಾರಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಪ್ರಬಂಧದ ಅಧ್ಯಯನಕ್ಕೆ ಸಂಬಂಧಿಸಿದ ಅಂತಹ ಒಂದು ಕೈಗಾರಿಕೆ ಎಂದರೆ ಶಕ್ತಿಯನ್ನು ಬಳಸಿ ಹತ್ತಿ, ರೇಷ್ಮೆ ಅಥವಾ ಕೃತಕ ನೂಲುಗಳಿಂದ ನೇಯ್ಗೆ ಮಾಡುವುದು. ಜೊತೆಗೆ ಅದಕ್ಕೆ ಅವಶ್ಯಕವಾದ ಇತರೆ ಪ್ರಕ್ರಿಯೆಗಳಾದ ನೂಲುವುದು, ಹೆಣೆಯುವುದು, ದಾರ ತೆಗೆಯುವುದು, ಸುತ್ತುವುದು, ಹುರಿ ಮಾಡುವುದು, ಬಣ್ಣ ಹಾಕುವುದು ಅಥವಾ ಯಾವುದೇ ಬಟ್ಟೆ ಪದಾರ್ಥಗಳನ್ನು ಒಪ್ಪ ಮಾಡುವುದು.

ಹೆಂಗಸರು ಮತ್ತು ಹಸುಗಳೆಗಳನ್ನು ಹತ್ತಿಯನ್ನು ಅದುಮಿಟ್ಟು ಪಿಂಡಿ ಕಟ್ಟುವ ಹಾಗೂ ಕಾಟನ್ ಒಪನರ್ ಯಂತ್ರಗಳನ್ನು ಬಳಸುವ ಕಾರ್ಖಾನೆಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವಂತಿಲ್ಲ. ಆದರೆ ಕಾಟನ್ ಒಪನರ್ ಯಂತ್ರದ ಹತ್ತಿ ತುರುಕುವ ಭಾಗ, ಹತ್ತಿ ಬರುವ ಭಾಗದಿಂದ ಪ್ರತ್ಯೇಕಿಸಲ್ಪಟ್ಟಿದ್ದಲ್ಲಿ ಹಾಗೂ ಅಂಥ ಪ್ರತ್ಯೇಕಿಸುವ ಅಡ್ಡ ಗೋಡೆ ಸೂಕ್ತ ಎತ್ತರದಲ್ಲಿ ಇದ್ದರೆ, ಪರಿಶೀಲಕನ ಲಿಖಿತ ಅಪ್ಪಣೆಯ ಮೇರೆಗೆ ಮಾತ್ರ ಹೆಂಗಸರು ಮತ್ತು ಹಸುಳೆಗಳನ್ನು ಕೆಲಸ ಮಾಡಲು ನೇಮಿಸಿಕೊಳ್ಳಬಹುದು (ವಿಧಿ-೨೭). ಯಾವ ಕಾರ್ಖಾನೆಯಲ್ಲೇ ಆದರೂ ಮಹಿಳಾ ಕೆಲಸಗಾರರನ್ನು ಬೆಳಗ್ಗೆ ಆರು ಗಂಟೆಯಿಂದ ಸಂಜೆ ಏಳು ಗಂಟೆಯವರೆಗಿನ ಕಾಲದಲ್ಲಿ ಮಾತ್ರ ಕೆಲಸ ಮಾಡಲು ಹೇಳುವಂತೆಯೂ ಇಲ್ಲ. ಅವರು ಹಾಗೆ ಕೆಲಸ ಮಾಡುವುದಕ್ಕೆ ಆಸ್ಪದವೂ ಇಲ್ಲ. ಯಾವ ಕಾರ್ಖಾನೆಯಲ್ಲೇ ಆದರೂ ಹದಿನಾಲ್ಕು ವರ್ಷ ವಯಸ್ಸು ಆಗಿರದೇ ಇರುವಂತಹ ಹಸುಳೆಯನ್ನು ಕೆಲಸಕ್ಕೆ ನೇಮಿಸಕೂಡದು (ವಿಧಿ-೬೭).

**ಪ್ರಸೂತಿ ಅನುಕೂಲ್ಯ ಕಾಯಿದೆ-೧೯೬೧**

**೧೯೬೧ರ ೫೩ನೇ ಕಾಯಿದೆ**

ನೌಕರಿದಾತರು ಮಹಿಳಾ ಕೆಲಸಗಾರರಿಗೆ ಅವರ ಪ್ರಸೂತಿ ಕಾಲದಲ್ಲಿ ರಜೆಯನ್ನೇನೊ ಕೊಡಬಹುದು. ಆದರೆ ಆ ಕಾಲದಲ್ಲಿ ವೇತನ ರಹಿತ ರಜೆಯನ್ನು ಕೊಟ್ಟಲ್ಲಿ ಅವರಿಗೆ ಆರ್ಥಿಕ ಅನ್ಯಾಯ ಮಾಡಿದಂತೆ ಆಗುತ್ತದೆ. ಆದ್ದರಿಂದಲೇ ಪ್ರಸೂತಿ ಅನುಕೂಲ್ಯ ಕಾಯಿದೆಯಲ್ಲಿ ವೇತನ ಸಹಿತ ಪ್ರಸೂತಿ ಕಾಲದ ರಜೆಯನ್ನು (೧೨ ವಾರಗಳು) ಕೊಡಲು ಹಾಗೂ ಅದಕ್ಕೆ ಸಂಬಂಧಪಟ್ಟಂತೆ ಅಗತ್ಯವಾದ ನಿಯಮಗಳನ್ನು ರೂಪಿಸಲಾಗಿದೆ. ಈ ಕಾಯಿದೆಯ ವಿಧಿ-೯ರ ಪ್ರಕಾರ ಗರ್ಭಪಾತವಾದ ಹೆಂಗಸು ಗರ್ಭಪಾತವಾದ ದಿನಾಂಕದ ನಂತರದ ಆರು ವಾರಗಳ ಕಾಲ ಪ್ರಸೂತಿ ಅನುಕೂಲ್ಯದ ದರದಲ್ಲಿ ವೇತನ ಸಹಿತ ರಜೆ ಪಡೆಯಲು ಆ ಬಗ್ಗೆ ಅಗತ್ಯವಾಧ ಪುರಾವೆಯನ್ನು ಒದಗಿಸಿದ್ದಲ್ಲಿ, ಅರ್ಹಳಾಗುತ್ತಾಳೆ.

ಶಿಶು ಪೋಷಣಾರ್ಥ ವಿರಾಮ (ವಿಧಿ-೧೧)ದ ಬಗ್ಗೆಯೂ ಈ ಕಾಯಿದೆಯು ಒಳಗೊಂಡಿದೆ. ಆಕೆ ಕೆಲಸಕ್ಕೆ ಹಾಜರಾದಾಗ ಅವಳ ವಿಶ್ರಾಂತಿಯಾಗಿ ಕೊಡುವ ವಿರಾಮ ಕಾಲದ ಜೊತೆಗೆ ಅವಳ ಪ್ರತಿದಿನದ ಕೆಲಸದ ಕಾಲದಲ್ಲೂ ಶಿಶುವಿಗೆ ಪೋಷಣೆ ಮಾಡಲು ಗೊತ್ತುಪಡಿಸಿದ ಕಾಲದ ಅವಧಿಯ ಮಿತಿಯಲ್ಲಿ ಎರಡು ಬಾರಿ ವಿರಾಮ ಅವಕಾಶ ಕೊಡಬೇಕು. ಇಂಥ ವಿರಾಮವನ್ನು ಶಿಶುವಿಗೆ ಹದಿನೈದು ತಿಂಗಳು ವಯಸ್ಸು ಆಗುವವರೆಗೂ ಕೊಡಬೇಕು. ವಿರಾಮ ಕಾಲ ಪ್ರತಿಸಲವೂ ಹದಿನೈದು ನಿಮಿಷಗಳು ಇರುವಂತೆ ಇರಬೇಕು. ಈ ಕಾಯಿದೆಯನ್ನು ನೌಕರಿದಾತ ಉಲ್ಲಂಘಿಸಿದರೆ ನೀಡುವ ದಂಡನೆ ಬಗ್ಗೆ ವಿಧಿ-೨೧ ಒಳಗೊಂಡಿದೆ[೫೯].

ತಮ್ಮ ದುಡಿಮೆಗೆ ನಿಗದಿತ ವೇತನ ಪಡೆಯದೆ ಮೂಖ ಪ್ರಾಣಿಗಳಂತಿದ್ದ ಕಾರ್ಮಿಕರಲ್ಲಿ ಈ ಕಾನೂನು, ಕಾಯಿದೆಗಳು ಸ್ವಲ್ಪಮಟ್ಟಿನ ಆಶಾಕಿರಣವನ್ನು ಮೂಡಿಸಿರುವುದು ಸುಳ್ಳಲ್ಲ. ಅದು ೧೯೨೩ರ ಕೆಲಸಗಾರರ ಪರಿಹಾರ ಕಾಯಿದೆ ಆಗಿರಬಹುದು ಅಥವಾ ೧೯೩೬ರ ವೇತನ ಪಾವತಿ ಕಾಯಿದೆಯಾಗಿರಬಹುದು ಅಥವಾ ೧೯೪೮ರ ಕಾರ್ಖಾನೆಗಳ ಕಾಯಿದೆಯಾಗಿರಬಹುದು ಅಥವಾ ೧೯೬೧ರ ಪ್ರಸೂತಿ ಕಲ್ಯಾಣವನ್ನು ಬಯಸುವ ದೃಷ್ಟಿಕೋನದಿಂದಲೇ ಜಾರಿಗೆ ಬಂದಿವೆ ಅಂತಲೇ ಹೇಳಬಹುದು. ಅಲ್ಲದೆ ಇಲ್ಲಿ ನೇರವಾಗಿ ಹತ್ತಿ ಗಿರಣಿಗಳ ಕಾರ್ಮಿಕರನ್ನು ದೃಷ್ಟಿಯಲ್ಲಿಟ್ಟುಕೊಂಡು

ಯಾವುದೇ ಕಾಯಿದೆ ರಚನೆಗೊಂಡಿಲ್ಲವಾದರೂ ಒಟ್ಟಾರೆ ಕಾಯಿದೆಯ ವಿಧಿಗಳಲ್ಲಿ ಇದೂ ಒಂದು ಭಾಗವಾಗಿ ಗೋಚರವಾಗಿದೆ. ಆದರೆ ಇಲ್ಲಿ ಚರ್ಚಿಸಲೊರಟಿರುವ ವಿಚಾರ ಅದಲ್ಲ. ಈ ಜಾರಿಯಾದ ಕಾಯಿದೆಗಳು ಎಷ್ಟರಮಟ್ಟಿಗೆ ಕಾರ್ಯಾಚರಣೆಯಲ್ಲಿದ್ದವು ಅಥವಾ ಇವೆ ಎಂಬುದು.

ಮುಂದುವರೆದು, ಈ ಪ್ರಬಂಧವು ಪ್ರತಿಪಾದಿಸಲು ಹೊರಟಿರುವ ಮುಖ್ಯ ವಿಷಯ ವಸಾಹತು ಕಾಲಘಟ್ಟದ ಸಂದರ್ಭದ್ದು. ಹೀಗಾಗಿ ಇಲ್ಲಿ ೧೮೮೧, ೧೮೯೧, ೧೯೧೧, ೧೯೨೨ ಹಾಗೂ ೧೯೩೪ರ ಕೈಗಾರಿಕಾ ಕಾರ್ಮಿಕ ಕಾಯಿದೆಯ ಚಾರಿತ್ರಿಕ ರೂಪುರೇಷೆಗಳು ಅತ್ಯಗತ್ಯವಾಗಿ ಬೇಕಾಗಿದೆ. ಆದರೆ ಸಂಶೋಧಕರ ಬಳಿ ಲಭ್ಯವಿದ್ದ ದಾಖಲೆಗಳಲ್ಲಿ ಇವುಗಳ ಕುರಿತಂತೆ ಮಾಹಿತಿ ಲಭ್ಯವಿಲ್ಲ. ಆದರೆ ಒಂದಂತೂ ಸ್ಪಷ್ಟ, ಅದು ವಸಾಹತು ಕಾಲದ ಬಿಗಿ ಹಿಡಿತ ಇದ್ದಿದ್ದು ಈ ಕಾಲಾವಧಿಗಳ ಆಸುಪಾಸಿನಲ್ಲಿಯೇ. ಆದ್ದರಿಂದ ಮುಂದಿನ ದಿನಗಳಲ್ಲಾದರೂ ಈ ಮೇಲ್ಕಂಡ ಅಷ್ಟೂ ಕಾಯಿದೆಗಳ ಅಧ್ಯಯನ ಮಾಡಲಾಗುವುದು. ಹಾಗೆ ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಜಾರಿಯಾದ ಯಾವುದೇ ಕಾರ್ಮಿಕ ಕಾಯಿದೆಗಳನ್ನು ಚಾರಿತ್ರಿಕ ವಿಶ್ಲೇಷಣೆಗೆ ಒಳಪಡಿಸುವಾಗ ಆ ಸಂದರ್ಭದಲ್ಲಿ ಯುರೋಪ್ ಮತ್ತು ಬ್ರಿಟನ್‌ನಲ್ಲಾಗುತ್ತಿದ್ದ ವಿದ್ಯಮಾನಗಳು ಹಾಗೂ ಸ್ಥಿತ್ಯಂತರಗಳನ್ನು ಅವಲೋಕಿಸುವುದು ಅತ್ಯಾವಶ್ಯಕ. ಏಕೆಂದರೆ ಭಾರತ ಉಪಖಂಡವು ಯುರೋಪಿನ ನಿಯಂತ್ರಣದಲ್ಲಿದ್ದಿತು. ಹೀಗಾಗಿ ಅಲ್ಲಿ ನಡೆಯುವ ಯಾವುದೇ ಬದಲಾವಣೆಗೆ ಇಲ್ಲಿ ನೇರವಾದ ಹಾಗೂ ಪರೋಕ್ಷವಾದ ಪ್ರತಿಕ್ರಿಯೆಗಳು ಇದ್ದಿಯೇ ಇರುತ್ತಿತ್ತು. ಇದೆಲ್ಲವನ್ನು ಹೇಳುತ್ತಿರುವ ಉದ್ದೇಶ ಇಂಗ್ಲೆಂಡಿನ ಮ್ಯಾಂಚೆಸ್ಟರ್ ಮತ್ತು ಲಂಕಾಶೈರ್ ಹತ್ತಿ ಬಟ್ಟೆ ಕೈಗಾರಿಕೆಗಳ ಕಾರ್ಮಿಕರ ಕಾಯಿದೆಗಳಿಗೂ ಭಾರತದ (ಅದು ಬೆಂಗಳೂರು ಸೇರಿಕೊಂಡಂತೆ) ಹತ್ತಿ ಬಟ್ಟೆ ಗಿರಣಿಗಳ ಕಾರ್ಮಿಕರ ಕಾಯಿದೆಗಳಿಗೂ ಸಾಮ್ಯತೆಯನ್ನು ಕಾಣಬಹುದಿತ್ತು. ಹೀಗಾಗಿ ಅಲ್ಲಿ ನಡೆದ ಯಾವುದೇ ವಿದ್ಯಮಾನಗಳಿಗೂ ಇಲ್ಲಿ ಪ್ರತಿಕ್ರಿಯಿಸಲೇಬೇಕಾಗಿತ್ತು. ಅಲ್ಲದೆ ಬ್ರಿಟಿಷರು ಯಾವುದೇ ಕಾಯಿದೆಯನ್ನು ಜಾರಿ ಮಾಡುವಾಗ ಇಲ್ಲಿನ ಜನರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಮಾಡುತ್ತಿದ್ದುದರ ಉದಾಹರಣೆಯೇ ಅಪುರೂಪ. ಅದು ಕೇವಲ ತಮ್ಮ ಆಡಳಿತ ಸುಗಮವಾಗಿ ನಡೆಸಿಕೊಂಡು ಹೋಗುವುದರ ತಂತ್ರಗಾರಿಕೆ ಹೆಚ್ಚಾಗಿ ಅವರ ಸುಧಾರಣೆಯ ಮಂತ್ರದಲ್ಲಿ ಅಡಗಿತ್ತು. ಕಾರ್ಮಿಕರ ಕಾಯಿದೆಗಳೂ ಸಹ ಇದರಿಂದ ಹೊರತಾಗಿರಲಿಲ್ಲ.

## ೫.೪. ಸಮಕಾಲೀನ ಸಂದರ್ಭದಲ್ಲಿ ಕಾರ್ಮಿಕ ಸಂಘಗಳು ಹಾಗೂ ಅಸಂಘಟಿತ ಕಾರ್ಮಿಕರು

ಮಂಗಳವಾರ ೨೧ನೇ ಸೆಪ್ಟಂಬರ್ ೨೦೧೦ರಂದು ಪ್ರಜಾವಾಣಿ ದಿನಪತ್ರಿಕೆಯ 'ಅಭಿಮತ'ದ ಕಾಲಂನಲ್ಲಿ ಡಾ. ಅಶೋಕ ಹೆಗಡೆ ಅವರು 'ಕುರುಡು ಕಾಂಚಾಣ' ಎಂಬ ಸರಣಿಯಲ್ಲಿ ಬರೆದ; 'ಕಾರ್ಮಿಕ ಸಂಘಟನೆಗಳ ಸಂಕಟದ ಕಥೆಗಳು' ಎಂಬ ತಲೆಬರಹದಲ್ಲಿ ಪ್ರಕಟವಾದ ವಿಚಾರವನ್ನು ಯಥಾವತ್ತಾಗಿ ಬಳಸಿಕೊಂಡು ಈ ಅಧ್ಯಾಯಕ್ಕೆ ಸಂಬಂಧಿಸಿದ ಕೆಲವು ಚರ್ಚೆಗಳನ್ನು ಎತ್ತಲಾಗಿದೆ.

ಜಾಗತಿಕ ಮಾರುಕಟ್ಟೆ ೧೯೯೧ರಲ್ಲಿ ಪ್ರಾರಂಭಗೊಂಡು ಅದನ್ನು ಅವಲಂಬಿಸಿದ ಆರ್ಥಿಕ ನೀತಿಗಳು ಇಂದು ಮೂರನೆಯ ಮತ್ತು ನಿರ್ಣಾಯಕ ಹಂತವನ್ನು ತಲುಪುತ್ತಿದೆ. ಈಗ ನಮ್ಮ ಮುಂದೆ ಪ್ರಸ್ತುತಪಡಿಸುತ್ತಿರುವ ಆಧುನಿಕೋತ್ತರ ಭಾರತದ ಕೈಗಾರಿಕಾ ನೀತಿಗಳು ಸೃಷ್ಟಿಸುತ್ತಿರುವ ಮಧ್ಯಮ ವರ್ಗದ ಹಿತಾನು ಕಂಪಿತ ಮೃದು ಭಾವನೆಗಳ ವಾರಸುದಾರರಾಗಲು ದೇಶದ ಪ್ರಮುಖ ಪಕ್ಷಗಳಾದ ಬಿ.ಜೆ.ಪಿ. ಮತ್ತು ಕಾಂಗ್ರೆಸ್ ತಮ್ಮ ತಮ್ಮನ್ನು ಬಿಂಬಿಸಿಕೊಳ್ಳುವ ಪ್ರಯತ್ನದಲ್ಲಿದ್ದರೂ, ವಾಸ್ತವದಲ್ಲಿ ಹೆಚ್ಚುತ್ತಿರುವ ಬಡತನ, ಸಾಲದ ಆಧಾರದ ಮೇಲೆ ಪ್ರಶಂಸಿಸುತ್ತಿರುವ ಮಧ್ಯಮ ವರ್ಗ, ಹೆಚ್ಚುತ್ತಿರುವ ಉಳ್ಳವ ಮತ್ತು ಬಡವರ ನಡುವಿನ ಅಂತರ ಮತ್ತು ದುಡಿಯುವವರಲ್ಲಿ ಸೃಷ್ಟಿಯಾಗುತ್ತಿರುವ ಅಭದ್ರತಾ ಭಾವನೆ ಬೇರೆಯದೇ ಚಿತ್ರವನ್ನು ಕಟ್ಟಿಕೊಡುತ್ತದೆ. ನಲುಗುತ್ತಿರುವ ಸಮಾಜಕ್ಕೆ ಸಾಮಾನ್ಯರೇ ವಾರಸುದಾರರು, ಹಿತಾನುಕಂಪಿತ ಯಶಸ್ಸಿಗೆ ಮಾತ್ರ ಹಲವು ಗಂಡಂದಿರು.

ನಮ್ಮ ಎಲ್ಲ ಸರ್ಕಾರಗಳು ತಮ್ಮ ಯೋಜನೆಯಲ್ಲಿ ಭಾರತವನ್ನು ಮುಕ್ತ ಮಾರುಕಟ್ಟೆಯನ್ನಾಗಿ ಬದಲಾಯಿಸುವತ್ತ ಮತ್ತು ಈ ಮೂಲಕ ಅಭಿವೃದ್ಧಿಯ ಸಾಧ್ಯತೆಯ ಬಗ್ಗೆ ಯೋಜನೆಗಳ ಚಿಂತನೆಗಳಿದ್ದವು. ಸಂಘಟಿತ ಉದ್ಯಮಗಳನ್ನು, ಅವರ ಹಿಡಿತದಲ್ಲಿರುವ ಬೃಹತ್ ಕೈಗಾರಿಕೆಗಳನ್ನು ತನ್ನ ಯೋಜನೆಗಳ ಕೇಂದ್ರವನ್ನಾಗಿಸಿಕೊಂಡ ಸರ್ಕಾರ ಕಾರ್ಮಿಕರ ಹಿತ ಕಾಯುವ ನಿಟ್ಟಿನಲ್ಲಿ ಯೋಚಿಸಿದ್ದು ಕಡಿಮೆ. ಇಲ್ಲಿಯವರೆಗೆ ಕಾರ್ಮಿಕ ಕಾನೂನುಗಳನ್ನು ಸಡಿಲಿಸುವುದು ಹೇಗೆ ಎನ್ನುವುದನ್ನೇ ಚಿಂತಿಸಲಾಯಿತು. ಭಾರತೀಯ ಸಂಘಟಿತ ಉದ್ಯಮಗಳು ನಡೆಸುವ ಹೊರಗುತ್ತಿಗೆಗಳನ್ನು, ಅವುಗಳ ಹಿತ ಕಾಯುವಂತೆ ಮತ್ತಷ್ಟು ಸಡಿಲಗೊಳಿಸಲಾಯಿತು. ಅದೇ ರೀತಿ ಉದ್ಯಮಗಳು; ಉದ್ಯೋಗವನ್ನು ಸೃಷ್ಟಿಸುವುದರ ಬದಲು ಗುತ್ತಿಗೆಯ ಆಧಾರದ ಮೇಲೆ ಕಾರ್ಮಿಕರನ್ನು ನೇಮಿಸಿಕೊಳ್ಳುವ, ಆ ಮೂಲಕ ಉದ್ಯೋಗಿಯೊಬ್ಬನಿಗೆ ಕಾನೂನು ಪ್ರಕಾರ ಸಿಗಬೇಕಾದ ಸೌಲಭ್ಯಗಳಿಂದ ವಂಚಿತವಾಗುವಂತೆ ಹಲವು ಒಳದಾರಿಗಳನ್ನು ತೆರೆಯಲಾಯಿತು. ಈ

ಇಪ್ಪತ್ತು ವರ್ಷಗಳಲ್ಲಿ ಕೈಗಾರಿಕೋದ್ಯಮವೊಂದರ ಹಿತ ಕಾಯುವುದೊಂದೇ ಸರ್ಕಾರದ ಮುಖ್ಯ ಕರ್ತವ್ಯವೆನ್ನುವಂತೆ ಬಿಂಬಿಸಲಾಯಿತು. ಇಂತಹದನ್ನೇ ಸಾಧನೆ ಎನ್ನುವಂತೆ ಬಿಂಬಿಸುವ ಮಾಧ್ಯಮಗಳಲ್ಲಿ ನಮ್ಮ ಯೋಜನೆಗಳ ಸಾರ್ಥಕತೆಯನ್ನು ಕಾಣಲಾಯಿತು. ಈ ಯೋಜನೆಗಳು ನಮ್ಮ ಅಧಿಕಾರಿ ವರ್ಗದಲ್ಲಿರುವ, ರಾಜಕಾರಣಿಗಳಲ್ಲಿರುವ ಹಣದ ಅದಮ್ಯ ವಾಂಛಲ್ಯವನ್ನು ಪೂರೈಸುವ ಭೂಮಿಕೆಯಾದವು. ಇಂತಹ ಯೋಜನೆಗಳೇ ಇಂದು ಭಾರತದ ಭೂಪಟದ ರಾಚನಿಕ ಸ್ವರೂಪವನ್ನು ಹೊಸದಾಗಿ ಬರೆಯುತ್ತಿವೆ.

ಬಡತನ, ಕೃಷಿಯ ಸಂಕಟ, ನಗಣ್ಯವಾಗುತ್ತಿರುವ ಭಾರತದ ಗ್ರಾಮೀಣ ಭಾಗಗಳ ಜೊತೆಗೆ ಸಂಘಟಿತ ಮತ್ತು ಅಸಂಘಟಿತ ಉದ್ಯಮದಲ್ಲಿ ದುಡಿಯುವ ಬಹುಪಾಲು ಕಾರ್ಮಿಕರು, ಈ ಆಧುನಿಕೋತ್ತರ ಜಾಗತೀಕರಣದ ಮೂರನೆಯ ಆಯಾಮದ ಯೋಜನೆಗಳಿಗೆ ಕಾರಣವಾಗಿ ಸೇರಿಕೊಳ್ಳುತ್ತಿದ್ದಾರೆ. ಸರ್ಕಾರಿ ಲೆಕ್ಕಾಚಾರದಂತೆ ಅಥವಾ ದೆಹಲಿ ಸರ್ಕಾರದ ಆರ್ಥಿಕ ಯೋಜನೆಯನ್ನು ರೂಪಿಸುವ ಆರ್ಥಿಕ ಪಂಡಿತರ ಲೆಕ್ಕಾಚಾರದಂತೆ, ಹೀಗೆ ಬೆಳೆಯುತ್ತಿರುವ ಉದ್ಯಮಗಳು ಹೆಚ್ಚು ಹೆಚ್ಚು ಉದ್ಯೋಗದ ಸೃಷ್ಟಿಗೆ (ಗುತ್ತಿಗೆಯಲ್ಲ) ಕಾರಣವಾಗಬೇಕಿತ್ತು. ಹಳ್ಳಿಗಳ ಮೂಲ ಸೌಕರ್ಯವನ್ನು ಹೆಚ್ಚಿಸಬೇಕಿತ್ತು. ನಮ್ಮ ಕೃಷಿಕರ ಭೂಮಿಯನ್ನು ಹೆಚ್ಚು ಫಲವತ್ತಾಗಿಸಬೇಕಿತ್ತು. ಕೊನೆಗೆ ಉದ್ಯಮವನ್ನು ಅವಲಂಬಿಸಿದ ಕಾರ್ಮಿಕರ ಬದುಕನ್ನು ಹಸನುಗೊಳಿಸಬೇಕಿತ್ತು. ಒಟ್ಟಾರೆ ಅಸಮಾನತೆಯನ್ನು ಆಧರಿಸಿದ ಎಲ್ಲರನ್ನೂ ಒಳಗೊಂಡ ಒಂದು ಅಭಿವೃದ್ಧಿಯ ನಕ್ಷೆಯನ್ನು ಇವು ಕಟ್ಟಿಕೊಡಬೇಕಿತ್ತು.

ಆದರೆ ನಮ್ಮೆದುರಿನ ಸದ್ಯದ ಚಿತ್ರ ಬೇರೆಯದೇ ಕತೆಯನ್ನು ಹೇಳುತ್ತಿದೆ. ನಮ್ಮಲ್ಲಿ ಇಂದು ನಿರುದ್ಯೋಗದ ಪ್ರಮಾಣ ದಶಕದ ಹಿಂದಿಗಿಂತಲೂ ಹೆಚ್ಚಾಗಿದೆ. ಸಣ್ಣಮಟ್ಟ ಪಟ್ಟಣಗಳಲ್ಲಿ, ನಗರಗಳಲ್ಲಿ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುತ್ತಿದ್ದ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಮೂಲಭೂತ ಸೌಕರ್ಯಗಳ ಕೊರತೆಯಿಂದಾಗಿ ನೆಲ ಕಚ್ಚಿವೆ, ಹೊರಗುತ್ತಿಗೆ ಮತ್ತು ನೇರ ಗುತ್ತಿಗೆ ಆಧಾರದ ಮೇಲೆಯೇ ಬೆಳೆಯುತ್ತಿರುವ ಬೃಹತ್ ಕೈಗಾರಿಕೆಗಳು ಕಾರ್ಮಿಕರನ್ನು ಒಂದು ಕಚ್ಚಾವಸ್ತುವಾಗಿ ಮಾತ್ರ ಪರಿಗಣಿಸುವ (ಬೇಡಿಕೆ ಇದ್ದಾಗ ದುಡಿಸುವ, ಇಲ್ಲದಿದ್ದಾಗ ತೆಗೆದುಹಾಕುವ) ಒಂದು ವಿಕೃತಿಯನ್ನು ಹುಟ್ಟಿಸುತ್ತಿವೆ. ಹಾಗಾಗಿ ಗುತ್ತಿಗೆ ಆಧಾರದ ಕೆಲಸವನ್ನು ನಂಬಿ ದೂರದೃಷ್ಟಿಯನ್ನು ಹೊಂದಲು ಇಂದು ಯಾವ ಕಾರ್ಮಿಕರಿಗೂ ಸಾಧ್ಯವಿಲ್ಲದಂತಹ ಪರಿಸ್ಥಿತಿ ನಮ್ಮೊಳಗೆ ನಿರ್ಮಾಣವಾಗಿದೆ. ಒಂದು ರೀತಿಯಿಂದ ಅಭದ್ರತೆಯನ್ನೇ ಆಧರಿಸಿದ ಜೀವನಕ್ರಮಕ್ಕೆ ಒಗ್ಗಿಕೊಳ್ಳುವ ಅನಿವಾರ್ಯತೆ ಸಮಾಜದೊಳಗೆ ಉದ್ಭವವಾಗುತ್ತಿದೆ.

ದೇಶದಲ್ಲಿ ದಿನೇ ದಿನೇ ಬೆಳೆಯುತ್ತಿರುವ ನಿರುದ್ಯೋಗ, ಬಡತನ, ಅಭದ್ರತೆ ಉಂಟುಮಾಡುತ್ತಿರುವ ವಿಷಮ ಸ್ಥಿತಿಗಳ ದೂರ ಪರಿಣಾಮದ ಬಗ್ಗೆ ಒಂದು ಸ್ಪಷ್ಟ ಕಲ್ಪನೆಯನ್ನು ಹೊಂದಲು ನಾವು ಹಾಗೂ ನಮ್ಮನ್ನು ಆಳುತ್ತಿರುವವರು ವಿಫಲರಾಗುತ್ತಿದ್ದೇವೆ. ಹಾಗಾಗಿಯೇ ದೇಶದ ಭವಿಷ್ಯವನ್ನು ಬರೆಯುತ್ತಿರುವ ಕೇಂದ್ರ ಸರ್ಕಾರದ ಪಕ್ಷದ ನಾಯಕಿಗೆ, ಕಾಶ್ಮೀರದ ಜನತೆ ಯಾಕಿಷ್ಟು ಸಿಟ್ಟಾಗಿದ್ದಾರೆ ಎಂದು ಆಶ್ಚರ್ಯವಾಗುತ್ತದೆ. ಇಂತಹ ಸಿಟ್ಟು ಕೇವಲ ಕಾಶ್ಮೀರದವರಿಗಷ್ಟೇ ಸಂಬಂಧಿಸಿದ್ದಲ್ಲ. ಬಡತನ, ನಿರುದ್ಯೋಗ ಮತ್ತು ಗುತ್ತಿಗೆ ಆಧಾರದ ಮೇಲೆ ಶೋಷಣೆಗೆ ಒಳಗಾಗುತ್ತಿರುವ ಭಾರತದ ಪ್ರತಿ ಯುವಕರಲ್ಲಿದೆ ಎನ್ನುವುದು ದೆಹಲಿಯ ಗದ್ದುಗೆಯನ್ನು, ಬೆಂಗಳೂರಿನ ಗದ್ದುಗೆಯನ್ನು ಏರಿ ಕುಳಿತ ನಮ್ಮ ಹತಾಶ ಸ್ಥಿತಿ ಯುವ ಜನತೆಯನ್ನು ಹಿಂಸೆಗೆ ಇಳಿಯಲು ಪ್ರೇರೇಪಿಸುತ್ತದೆ ಎನ್ನುವುದನ್ನು ಅರಿಯಲು ಎಲ್ಲ ರಾಜಕೀಯ ಪಕ್ಷಗಳ ಸಭೆ ಕರೆದು ಚರ್ಚಿಸುವ ಅಗತ್ಯವಿಲ್ಲ. ನಾವೆಲ್ಲ ಇತಿಹಾಸದಲ್ಲಿನ ಹಲವು ರಕ್ತಕ್ರಾಂತಿಗಳಿಗೆ ಕಾರಣವಾದ ಇಂತಹ ಸಂದರ್ಭಗಳ ಕತೆಗಳನ್ನು ಓದುತ್ತಲೇ ಬೆಳೆದಿದ್ದೇವೆ. ಈಗ ಕಣ್ಣಾರೆ ಕಾಣುವ ಅವಕಾಶ ನಮ್ಮ ಸಮಾಜಕ್ಕೆ ಸಿಕ್ಕಿದೆ. ಕಾಶ್ಮೀರ ಇಂತಹ ಆಧುನಿಕ ಇತಿಹಾಸದ ಒಂದು ಅಧ್ಯಾಯ ಮಾತ್ರ.

ಭಾರತದ ಕಾರ್ಮಿಕರ ಹಿತರಕ್ಷಣೆಗಾಗಿ ಇರುವ ಕಾನೂನುಗಳನ್ನು ಎರಡು ರೀತಿಯಿಂದ ನಾವು ಗಮನಿಸಬೇಕಾಗುತ್ತದೆ. ಮೊದಲನೆಯದು, ಸಂಘಟಿತ ಉದ್ಯಮದಲ್ಲಿ ಕೆಲಸ ಮಾಡುವವರ ಹಿತವನ್ನು ರಕ್ಷಿಸುವ ಕಾನೂನುಗಳು, ಭಾರತದ ಒಟ್ಟಾರೆ ಕಾರ್ಮಿಕರಲ್ಲಿ ಇವರ ಪ್ರಮಾಣ ಶೇಕಡ ೮ರಷ್ಟು, ಅವರಲ್ಲಿಯೂ ಶೇಕಡ ೪ರಷ್ಟು ಕಾರ್ಮಿಕರು ಸರ್ಕಾರಿ ಸ್ವಾಮ್ಯದ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವವರು, ಅವರ ಹಿತರಕ್ಷಣೆಗೆ ಹಲವು ಕಾನೂನುಗಳು, ಕಾರ್ಮಿಕ ಸಂಘಟನೆಗಳು ಇವೆ. ಆದರೆ ಶೇಕಡ ೯೨ರಷ್ಟು ಕಾರ್ಮಿಕರು ಅಸಂಘಟಿತ ವಲಯದ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವವರು. ಹೆಚ್ಚುತ್ತಿರುವ ಗುತ್ತಿಗೆ ಆಧಾರದ ಮೇಲಿನ ನೇಮಕ ಮತ್ತು ಹೊರಗುತ್ತಿಗೆಗಳು ಇವರ ಸಂಖ್ಯೆಯನ್ನು ಮುಂಬರುವ ದಿನಗಳಲ್ಲಿ ಇನ್ನಷ್ಟು ಹೆಚ್ಚಿಸುತ್ತವೆ. ಇಂದು ನಿರಂತರವಾಗಿ ದುಡಿಯುತ್ತಿರುವ ಈ ಕಾರ್ಮಿಕರ ಕನಿಷ್ಠ ಹಿತವನ್ನು ಕಾಯಲು ಸರ್ಕಾರವಾಗಲಿ, ಕಾರ್ಮಿಕ ಸಂಘಟನೆಗಳಾಗಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ ಉದಾಹರಣೆ ನಮ್ಮಲ್ಲಿಲ್ಲ. ಇಂತಹ ಸ್ಥಿತಿ ಸೃಷ್ಟಿಸುವ ಅತಿ ಲಾಭದ ದೃಷ್ಟಿಕೋನದಿಂದಲೇ ಸಂಘಟಿತ ಉದ್ಯಮಗಳು ಕೂಡ ಅಸಂಘಟಿತ ಗುತ್ತಿಗೆ ಆಧಾರದ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುತ್ತಿರುವುದು.

ಸರ್ಕಾರ ಇಲ್ಲಿಯವರೆಗೆ ಇಂಥದನ್ನು ನಿಗ್ರಹಿಸುವ ನಿಟ್ಟಿನಲ್ಲಿ ಯಾವ ಯೋಜನೆಗಳನ್ನೂ ರೂಪಿಸಿಲ್ಲ. ಯೋಜನೆಗಳನ್ನು ರೂಪಿಸುವುದಿರಲಿ, ಅಲ್ಲಿ ದುಡಿಯುವ ಕೈಗಳು ಕೂಡಾ ಈ ನೆಲಕ್ಕೆ ಸಂಬಂಧಿಸಿವೆ ಎನ್ನುವ ಒಂದು ಮಾನವೀಯ ಕಳಕಳಿಯನ್ನೂ ಹೊಂದಿಲ್ಲ. ಭಾರತದ ಈ ವರ್ಗವೇ ಚುನಾವಣೆಯಂತಹ ಪ್ರಜಾಪ್ರಭುತ್ವದ ಮುಖ್ಯ ಪ್ರಕ್ರಿಯೆಗಳಲ್ಲಿ ಹೆಚ್ಚಾಗಿ ಪಾಲ್ಗೊಳ್ಳುತ್ತವೆ ಎಂದರೆ ಎಂಥ ವ್ಯಂಗ್ಯವಲ್ಲವೇ? ಕಾರ್ಮಿಕರ ಹಿತ ರಕ್ಷಿಸಬೇಕಾದ ಭಾರತದ ಕಾರ್ಮಿಕ ಸಂಘಟನೆಗಳ ಒಕ್ಕೂಟ, ಸರಿಸುಮಾರು ನೂರಾಹತ್ತು ವರುಷಗಳ ಇತಿಹಾಸ ಹೊಂದಿದ್ದರೂ ಅವುಗಳ ಇತಿಹಾಸದ ಪುಟಗಳು; ಇಂತಹ ಕಾರ್ಮಿಕ ಸಂಘಟನೆಗಳನ್ನು ಸಲಹಿದ ರಾಜಕೀಯ ಪಕ್ಷಗಳ ಮತ್ತು ಕಾರ್ಮಿಕರಿಂದಲೇ ಸಂಗ್ರಹಿಸಿದ ಹಣದ ದುರುಪಯೋಗ, ದುಂದುವೆಚ್ಚ, ನೈತಿಕ, ವೈಚಾರಿಕತೆಯ ದಿವಾಳಿತನದಿಂದ ತುಂಬಿವೆ. ಕಾರ್ಮಿಕ ಸಂಘಟನೆಗಳಿಂದ ನಡೆದ ಹಲವು ಚಳವಳಿಗಳು, ಅವುಗಳ ಮುಂದಾಳುಗಳ ವ್ಯಕ್ತಿಗತ ಕಾರಣಕ್ಕಾಗಿ ಕಾರ್ಮಿಕರನ್ನು, ಉದ್ಯಮಿಗಳನ್ನು ಏಕ ಕಾಲಕ್ಕೆ ನಡು ಬೀದಿಯಲ್ಲಿ ತಂದು ನಿಲ್ಲಿಸಿದ ವೈರುಧ್ಯದ ಕಥನಗಳಿಂದಲೂ ತುಂಬಿವೆ.

ಕಾರ್ಮಿಕರ ಹಿತರಕ್ಷಣೆಗಾಗಿ ನಡೆದ ಚಳವಳಿಗಳು ಕೂಡ ಸಂಘಟಿತ ಉದ್ಯಮದ ಕುರಿತಾಗಿ, ಅಲ್ಲಿ ದುಡಿಯುವ ಕಾರ್ಮಿಕರ ಹಿತರಕ್ಷಣೆಗಾಗಿ ಮಾತ್ರ ನಡೆದಿವೆ. ಅಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವ ಬಹುಸಂಖ್ಯಾತ ಕಾರ್ಮಿಕರ ಹಿತರಕ್ಷಣೆಗಾಗಿ ನಡೆದ ಹೋರಾಟದ ಕಥನಗಳು ನಮ್ಮೊಳಗೆ ಅಷ್ಟಾಗಿ ಕಾಣಿಸುವುದಿಲ್ಲ. ಈ ಹತಭಾಗ್ಯರಿಗಾಗಿ ಧ್ವನಿ ಎತ್ತಿದ, ಸರ್ಕಾರದ ನೀತಿಗಳನ್ನು ಪ್ರಶ್ನಿಸಿದ ಉದಾಹರಣೆಗಳು ಹೆಚ್ಚು ಇಲ್ಲ. ಹಾಗಾಗಿಯೇ ಇಂದಿಗೂ ಕೂಡ ಈ ಕಾರ್ಮಿಕ ವರ್ಗ, ನಿರಂತರ ದುಡಿಮೆ, ಕಡಿಮೆ ವೇತನ, ಲೈಂಗಿಕ ಮತ್ತು ದೈಹಿಕ ಕಿರುಕುಳ ಎಲ್ಲವನ್ನೂ ಸಹಿಸುತ್ತಲೇ ಶೋಷಣೆಯ ಈ ಕರ್ಮಕಾಂಡಕ್ಕೆ ತಮ್ಮ ಜೀವನವನ್ನು ಅರ್ಪಿಸುತ್ತಿವೆ.

ಭಾರತದ ಸಂವಿಧಾನ, ಕಾರ್ಮಿಕರ ಹಿತರಕ್ಷಣೆಯ ಕುರಿತು ಕೆಲವು ನಿಬಂಧನೆಗಳನ್ನು ದಾಖಲಿಸಿದೆ. ಇವುಗಳಲ್ಲಿ ಮುಖ್ಯವಾದುದು ಸಮಾನ ಅವಕಾಶ (ವಿಧಿ–೧೬) ಮತ್ತು ತಮ್ಮ ಸಂಘಟನೆಯ ಆಯ್ಕೆಯ ಕುರಿತು ಇರುವ ಸ್ವಾತಂತ್ರ್ಯ (ವಿಧಿ–೧೯) ಮತ್ತು ಬಾಲ ಕಾರ್ಮಿಕರ ನಿಷೇಧ (ವಿಧಿ–೨೬). ಇಂತಹ ನಿಬಂಧನೆಗಳು ಸಂಘಟಿತ ಮತ್ತು ಅಸಂಘಟಿತ ಎರಡಕ್ಕೂ ಸಮಾನವಾಗಿ ಅನ್ವಯವಾಗುವಂತಿದ್ದರೂ, ನಮ್ಮ ಸರ್ಕಾರಗಳು ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವವರ ಹಿತರಕ್ಷಣೆಯನ್ನು ಗುರಿಯಾಗಿಟ್ಟುಕೊಂಡು ಯೋಚಿಸಿದ್ದು ಕಡಿಮೆ. ಸಂಘಟಿತ

ಉದ್ಯಮವನ್ನು, ಕೈಗಾರಿಕೆಯನ್ನು ಗುರಿಯಾಗಿಟ್ಟುಕೊಂಡ ನಮ್ಮ ಕೈಗಾರಿಕಾ ನೀತಿಗಳು ಇಲ್ಲಿನ ಕಾರ್ಮಿಕರನ್ನು ವಂಚಿಸುತ್ತಲೇ ಬಂದಿವೆ.

ಸಂಘಟಿತ ಮತ್ತು ಅಸಂಘಟಿತ ಎರಡು ವರ್ಗಗಳು ಪರಿಧಿಯ ಆಚೆ ನೂಕಲ್ಪಡುವ ಸಂದರ್ಭದಲ್ಲಿ ನಮ್ಮ ಸರ್ಕಾರ ಅವರ ಹಿತವನ್ನು ಕಾಯುವ ನಿಟ್ಟಿನಲ್ಲಿ ಕೆಲವು ಚರ್ಚೆಗಳನ್ನಾದರೂ ಎತ್ತಿಕೊಳ್ಳಬೇಕು. ತನ್ನ ಎಲ್ಲ ಯೋಜನೆಗಳ ಕೇಂದ್ರದಲ್ಲಿ ಕಾರ್ಮಿಕರ ಹಿತ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡ ಜರ್ಮನಿ ಇಂದು ಅಭಿವೃದ್ಧಿ ಹೊಂದಿದ ದೇಶಗಳಲ್ಲಿಯೇ ಅತಿ ಹೆಚ್ಚಿನ ಬೆಳವಣಿಗೆಯನ್ನು ಕಾಣುತ್ತಿದೆ ಮತ್ತು ಈ ಅಭಿವೃದ್ಧಿಯ ಬೆಳವಣಿಗೆಯ ವೇಗ ದಶಕವನ್ನು ಮೀರಿದೆ ಎನ್ನುವ ವಾಸ್ತವ ಕೂಡಾ ನಮ್ಮ ಅರಿವಿಗೆ ದಕ್ಕಬೇಕು.

ಬೆಳೆಯುವ ಮಾಲ್, ಅಂಗಡಿಗಳೇ ಅಭಿವೃದ್ಧಿಯ ಸಂಕೇತ ಎಂದು ನಂಬತೊಡಗಿದ ಬಹುಮುಖಿ ಸಮಾಜ ಈ ಪ್ರಕ್ರಿಯೆಯಲ್ಲಿ ನಾವು ಏನನ್ನು ಕಳೆದುಕೊಳ್ಳುತ್ತಿದ್ದೇವೆ ಎನ್ನುವುದರ ಬಗ್ಗೆ ಚಿಂತಿಸಬೇಕು. ಇಂತಹ ಚಿಂತನೆಗಳು, ನಮಗೆ ಎಂತಹ ಹಳ್ಳಿ, ಜಿಲ್ಲೆ, ರಾಜ್ಯ ಮತ್ತು ದೇಶ ಬೇಕು ಎನ್ನುವುದರ ಕುರಿತು ಒಂದು ಸ್ಪಷ್ಟ ಅರಿವನ್ನು, ಚಿತ್ರವನ್ನು ನಮ್ಮೊಳಗೆ ಬೆಳೆಸಬೇಕು. ನಮ್ಮ ಘನ ಸರ್ಕಾರ, ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕರ ಹಿತರಕ್ಷಣೆಯ ಕುರಿತು ತನಗಿರುವ ನಿಲುವನ್ನು ಸ್ಪಷ್ಟಪಡಿಸಬೇಕು[೬೦].

ಭಾರತವು ಜುಲೈ ೧೯೯೧ರಲ್ಲಿ ಹೊಸ ಆರ್ಥಿಕ ನೀತಿಯನ್ನು ಒಪ್ಪಿಕೊಂಡ ನಂತರ ಕಾರ್ಮಿಕ ಚಳವಳಿಗಳು ಹೊಸ ಸ್ವರೂಪವನ್ನು ಪಡೆದಿವೆ. ಉದಾರೀಕರಣ, ಜಾಗತೀಕರಣ, ಖಾಸಗೀಕರಣದ ಮೇಲೆ ಒತ್ತು ನೀಡುವ ಹೊಸ ಆರ್ಥಿಕ ನೀತಿ ಸಂಪೂರ್ಣ ಮಾರುಕಟ್ಟೆ ಪರ ನಿಲುವುಗಳನ್ನು ಅಳವಡಿಸಿಕೊಳ್ಳುವ ಮೂಲಕ ಸ್ಪರ್ಧಾತ್ಮಕವನ್ನು, ಕಾರ್ಯ ಸಮರ್ಥತೆಯನ್ನು ಸಾಧಿಸಲು ಪ್ರಯತ್ನಿಸುತ್ತದೆ. ಈ ಎಲ್ಲ ನಿಲುವುಗಳ ಬಗ್ಗೆ ಅದರಲ್ಲೂ ವಿಶೇಷವಾಗಿ ಕಾರ್ಮಿಕರನ್ನು ಕೆಲಸದಿಂದ ಹೊರತೆಗೆಯುವ ನೀತಿಯ ಬಗ್ಗೆ ಕಾರ್ಮಿಕ ವರ್ಗಕ್ಕೆ ಅತ್ಯಂತ ಅಸಮಾಧಾನವಿದೆ. ಖಾಸಗೀಕರಣ ಹಾಗೂ ಮಾರುಕಟ್ಟೆಪರ ಧೋರಣೆಗಳಿಂದ ಉಂಟಾಗುವ ಉದ್ಯೋಗ ಅವಕಾಶಗಳಲ್ಲಿನ ಕಡಿತ ಹಾಗೂ ಉದ್ಯೋಗದ ಅಭದ್ರತೆ ಕಾರ್ಮಿಕರಲ್ಲಿ ಭೀತಿ ಹುಟ್ಟಿಸಿದೆ[೬೧]. ಈ ಕಾಲಘಟ್ಟದಲ್ಲಿ ಕಾರ್ಮಿಕ ಐಕ್ಯತೆಯ ತುರ್ತು ಅಗತ್ಯವನ್ನು ಕಾರ್ಮಿಕ ಸಂಘಟನೆಗಳು ಮನಗಂಡಿವೆ. ಈಗ ಕಾರ್ಮಿಕ ಸಂಘಟನೆಗಳು ಬಹಳಷ್ಟು ಭಿನ್ನಾಭಿಪ್ರಾಯಗಳನ್ನು ತೋರೆದಿವೆ. ಸಂಘಟನೆಗಳ

ನಡುವೆ ಇದ್ದ ಸ್ಪರ್ಧಾತ್ಮಕ ಮನೋಭಾವ ದೂರವಾಗಿ ಒಟ್ಟುಗೂಡಿ ಕೆಲಸ ಮಾಡುವ ವಾತಾವರಣ ಸೃಷ್ಟಿಯಾಗುತ್ತಿದೆ. ಹೊಸ ಆರ್ಥಿಕ ನೀತಿಯನ್ನು ಪೂರ್ತಿಯಾಗಿ ಹಿಂತೆಗೆದುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ತರುವುದು ಅಸಾಧ್ಯವೆಂಬುದನ್ನು ಕಾರ್ಮಿಕ ಸಂಘಟನೆಗಳು ಮನಗಂಡಿವೆ. ಆದ್ದರಿಂದ ಈ ನೀತಿಯನ್ನು ಸಾರಾಸಗಟಾಗಿ ವಿರೋಧಿಸುವ ಬದಲು ಈ ನೀತಿಯಿಂದ ಕಾರ್ಮಿಕರ ಮೇಲಾಗುವ ದುಷ್ಪರಿಣಾಮಗಳನ್ನು ಒಂದಷ್ಟು ಕಡಿಮೆ ಮಾಡುವತ್ತ ಪ್ರಯತ್ನಗಳನ್ನು ಸಂಘಟನೆಗಳು ಮಾಡುತ್ತಿವೆ. ಸ್ವಾತಂತ್ರ್ಯ ನಂತರ ಇಷ್ಟೆಲ್ಲಾ ಸುಧಾರಣೆಗಳತ್ತ ದಾಪುಗಾಲು ಹಾಕುತ್ತಿರುವ ಕಾರ್ಮಿಕ ಸಂಘಟನೆಗಳಿಗೆ ೧೯೯೮ರ ವೇಳೆಗೆ ಬಿನ್ನಿಮಿಲ್ಲು ಕಾರ್ಖಾನೆ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿ, ಕಂಪನಿ ಮುಚ್ಚಲ್ಪಟ್ಟಾಗ, ಅದೇ ರೀತಿ ಮಿನರ್ವ ಮಿಲ್ಲು ಹಾಗೂ ಮೈಸೂರು ಮಿಲ್ಲು ನಿಂತು ಹೋದಾಗ ಅದನ್ನು ತಡೆಯುವ ಸಾಹಸವಾಗಲೀ ಅಥವಾ ಸಾವಿರಾರು ಕಾರ್ಮಿಕರು ಕೆಲಸವಿಲ್ಲದೆ ಬೀದಿಗಿಳಿದಾಗ ಅವರಿಗೆ ಬದಲಿ ಉದ್ಯೋಗ ಕಲ್ಪಿಸುವುದಾಗಲಿ ಮಾಡಲು ಸಾಧ್ಯವಾಗದೆ ಮೂಖ ಪ್ರೇಕ್ಷಕನಂತೆ ಕೈಕಟ್ಟಿ ಕುಳಿತುಕೊಂಡವು.

೨೦೧೬ರ ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರ ಜಾರಿಗೆ ತರಲು ಪ್ರಯತ್ನಿಸಿದ 'ಹೊಸ ಭವಿಷ್ಯ ನಿಧಿ ನೀತಿ'ಯು ದಿನಗೂಲಿ ಕಾರ್ಮಿಕರು ಹಾಗೂ ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಭವಿಷ್ಯಕ್ಕೆ ಮಾರಕವಾಗಿತ್ತು. ಇದರ ವಿರುದ್ಧವಾಗಿ (ಏಪ್ರಿಲ್ ೧೯, ಮಂಗಳವಾರ ೨೦೧೬) ೫೦ ಸಾವಿರಕ್ಕಿಂತ ಅಧಿಕ ನೌಕರರು ರಸ್ತೆಗಿಳಿದು ಉಗ್ರವಾದ ಪ್ರತಿಭಟನೆ ಕೈಗೊಂಡರು. ಸರ್ಕಾರ ಈ ಹೋರಾಟಕ್ಕೆ ಮಣಿದು ಹೊಸ ನೀತಿಯನ್ನು (ಪಿ.ಎಫ್. ನೀತಿ) ಹಿಂತೆಗೆದುಕೊಂಡಿತ್ತಾದರೂ ಅದರ ಮನಃಸ್ಥಿತಿ ಮಾತ್ರ ಬಂಡವಾಳಶಾಹಿ ಪರ ಎಂಬುದನ್ನು ಈ ಬದಲಾವಣೆಯ ವಿಫಲ ಪ್ರಯತ್ನ ಸಾಬೀತುಪಡಿಸಿತ್ತು. ಆದರೆ ಕೆಲವು ಅಧಿಕೃತ ಕಾರ್ಮಿಕ ಸಂಘಟನೆಗಳು ಸ್ವಾರ್ಥ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುವ ಭರದಲ್ಲಿ ಹೊಸ ನಿಯಮಗಳ ಜಾರಿಗೆ (ಬಹುಸಂಖ್ಯಾತ ಅಸಂಘಟಿತ ಹಾಗೂ ದಿನಗೂಲಿ ಕಾರ್ಮಿಕರ ಭವಿಷ್ಯಕ್ಕೆ ಮಾರಕವಾಗಿರುವ) ಕೈ ಜೋಡಿಸಲು ಮುಂದಾಗಿದ್ದವು. ಅಲ್ಲದೆ 'ಕಾರ್ಮಿಕ ಸಂಘಟನೆಗಳ ಕೋರಿಕೆ ಮೇರೆಗೆ ಈ ಬದಲಾವಣೆ ಮಾಡಹೊರಟಿದ್ದವು' ಎಂಬುದಾಗಿ ಬಂಡಾರು ದತ್ತಾತ್ರೇಯ (ಕೇಂದ್ರ ಕಾರ್ಮಿಕ ಸಚಿವ) ಅವರು ಸಮಜಾಯಿಷಿ ನೀಡಿದ್ದು ಇತಿಹಾಸ[೬]. ಇವೇನೇ ಇದ್ದರೂ ಇಲ್ಲಿ ಬಲಿಪಶುಗಳಾಗುತ್ತಿದ್ದುದು ದಿನಗೂಲಿ, ಅಸಂಘಟಿತ ಕಾರ್ಮಿಕರು ಮಾತ್ರ ಎಂಬುದನ್ನು ನಾವು ಮನಗಾಣಬೇಕು.

## ೫.೫. ಮಹಿಳಾ ಕಾರ್ಮಿಕರು ಹಾಗೂ ಸಮಸ್ಯೆಗಳು

ಹತ್ತಿ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಒಂದಲ್ಲಾ ಒಂದು ಸಮಸ್ಯೆಗೆ ಗುರಿಯಾಗುತ್ತಿದ್ದರು. ಅದು ಮಾಲೀಕರಿಂದಿರಬಹುದು ಅಥವಾ ಯಂತ್ರಗಳಿಂದಿರಬಹುದು. ೧೯೨೫ರಲ್ಲಿ ನಡೆದ ಶಾಸನ ಸಭೆಯ ಚರ್ಚೆಯಲ್ಲಿ ಬ್ರಿಟಿಷ್ ಭಾರತದಲ್ಲಿ ಉದ್ಯೋಗ ಮಾಡುವ ಕನಿಷ್ಠ ವಯೋಮಿತಿಯನ್ನು ೧೦ರಿಂದ ೧೨ ವರ್ಷಕ್ಕೆ ಏರಿಸಲಾಯಿತು. ಆದರೆ ಬಿನ್ನಿ ಮಿಲ್ಲಿನಲ್ಲಿ ಕೆಲಸ ಮಾಡಲು ಕನಿಷ್ಠ ವಯಸ್ಸು ೧೧ ಇದ್ದರೆ ಸಾಕಾಗಿತ್ತು[೬೩]. ಇದು ಬಾಲ ಕಾರ್ಮಿಕರ ಸಮಸ್ಯೆಯಾಗಿದ್ದು, ಮಕ್ಕಳು ಪ್ರತಿದಿನ ಏಳು ಘಂಟೆಗಿಂತ ಅಧಿಕವಾಗಿ ಕೆಲಸವನ್ನು ಮಾಡಬೇಕಾಗಿತ್ತು. ಮಹಿಳೆಯರಿಗೂ ಕೂಡ ಒಂದೂವರೆ ಘಂಟೆಗಳ ಕಾಲ ವಿಶ್ರಾಂತಿಯನ್ನು ನೀಡುತ್ತಿರಲಿಲ್ಲ. ಕೆಲವು ಗಿರಣಿಗಳು, ಕಾರ್ಮಿಕರು ಹಾಗೂ ಕೆಲಸದ ವೇಳೆಗೆ ಸಂಬಂಧಪಟ್ಟ ದಾಖಲೆ ಪುಸ್ತಕಗಳನ್ನು ಸವಿಸ್ತಾರವಾಗಿ ರಚನೆ ಮಾಡಿಕೊಂಡಿದ್ದರು[೬೪].

೧೯೩೫ರಲ್ಲಿ ಬಿನ್ನಿ ಮಿಲ್ಲು ತನ್ನ ಗಿರಣಿಗಳಲ್ಲಿ ಕೆಲಸ ಮಾಡುವ ಮಹಿಳಾ ಕಾರ್ಮಿಕರ ಶಿಶುಗಳಿಗಾಗಿ ಪ್ರಥಮ ಭಾರಿಗೆ ಶಿಶು ಕೇಂದ್ರಗಳನ್ನು ತೆರೆಯಿತು[೬೫]. ಆದರೆ ಇದಕ್ಕಿಂತ ಪ್ರಮುಖವಾದ ಬೆಳವಣಿಗೆ ೧೯೩೩–೩೪ರ ಸಂದರ್ಭದಲ್ಲಿ ಆಯಿತು. ಅದು 'ದ ಲೇಡಿ ವೀವಿಂಗ್ ಡೆಮಾನ್ಸ್ಟ್ರೇಟರ್' ಎಂಬ ಸಂಸ್ಥೆಯು ಬೆಂಗಳೂರಿನಲ್ಲಿ ಗೃಹ ಕೈಗಾರಿಕೆಗಳ ತರಗತಿಗಳಲ್ಲಿ ಮಹಿಳೆಯರಿಗೆ ನೂಲುವ ಬಗ್ಗೆ ತರಬೇತಿಯನ್ನು ನೀಡುವುದರ ಬಗ್ಗೆ ವಿಶೇಷ ಗಮನವನ್ನು ನೀಡಿತ್ತು[೬೬]. ಇದರಿಂದಲೇ ಕಸೂತಿ ಮಾಡುವ ಬಗ್ಗೆಯೂ ನುರಿತ ಮಾರ್ಗದರ್ಶಕರಿಂದ ಸಲಹೆಗಳನ್ನು ಕೊಡಿಸಲಾಗುತ್ತಿತ್ತು. ಈ ಬೆಳವಣಿಗೆಯು ಬೆಂಗಳೂರಿನಲ್ಲಲ್ಲದೇ ಇಡೀ ರಾಜ್ಯದಲ್ಲಿಯೇ ದೊಡ್ಡ ಗಿರಣಿಗಳು ಎಂಬ ಖ್ಯಾತಿ ಹೊಂದಿದ್ದ ಬಿನ್ನಿ ಮಿಲ್ಲು, ಮಹಾರಾಜಾ ಮಿಲ್ಲು, ಮಿನರ್ವ ಮಿಲ್ಲು ಹಾಗೂ ಕೃಷ್ಣರಾಜೇಂದ್ರ ಮಿಲ್ಲು ಅಥವಾ ರಾಜ್ಯದ ಇನ್ನಾವುದೇ ದೊಡ್ಡ ಕೈಗಾರಿಕೆಗಳು ಆ ಸಂದರ್ಭಕ್ಕೆ ಮಾಡಿರದ ಉತ್ತಮವಾದ ಸಾಧನೆ ಸಣ್ಣ ಪುಟ್ಟ ಗೃಹ ಕೈಗಾರಿಕೆಗಳಿಂದ ಅದರಲ್ಲೂ 'ದ ಲೇಡಿ ವೀವಿಂಗ್ ಡೆಮಾನ್ಸ್ಟ್ರೇಟರ್'ನಿಂದ ಆಗಿತ್ತು. ಇದು ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವ ಪ್ರಯತ್ನವಾಗಿದ್ದಿತ್ತು.

೧೯೩೬ರಲ್ಲಿ ವಾರದಲ್ಲಿ ೫೪ ಗಂಟೆಗಳ ಕಾಲ ಕೆಲಸ ಮಾಡುವ ಸಮಸ್ಯೆಯಿಂದ ಹೊರ ಬರಲು ಬಿನ್ನಿ ಮಿಲ್ಲಿನ ಕಾರ್ಮಿಕರಾದ ರಾಮಸ್ವಾಮಿ ಮತ್ತು ತಿಂಗರಂ ಅಧಿಕಾರಿ ವರ್ಗಕ್ಕೆ ದೂರು

ನೀಡಿದರು[೬೭]. ಗಿರಣಿಯ ಅಧಿಕಾರಿಗಳು ಕಾರ್ಮಿಕರಿಗೆ ಯಾವುದೇ ರೀತಿಯ ವಂತಿಗೆಯನ್ನು ನೀಡದೇ ಹೆಚ್ಚುವರಿ ಗಂಟೆಗಳ ಕಾಲ ಕೆಲಸ ಮಾಡಲು ಒತ್ತಾಯ ಮಾಡುತ್ತಿದ್ದರು. ರಜೆಯನ್ನು ತೆಗೆದುಕೊಳ್ಳುವುದೂ ಸಹ ದುಸ್ತರವಾಗಿತ್ತು. ಮಹಿಳಾ ಕಾರ್ಮಿಕರು ತಮ್ಮದೇ ಆದ ಸಮಸ್ಯೆಗಳನ್ನು ಹೊಂದಿದ್ದರು. ಯಂತ್ರಗಳ ಹತ್ತಿರ ಹೋಗುವಾಗ ರಕ್ಷಾ ಕವಚಗಳೂ ಇರುತ್ತಿರಲಿಲ್ಲ. ಬೆಟ್ಟಮ್ಮ, ವಾಳಿಯಮ್ಮ ಮುಂತಾದವರು ಮಹಿಳಾ ಕಾರ್ಮಿಕರಾಗಿದ್ದರು[೬೮]. ಕಳ್ಳತನವೂ ಗಿರಣಿಗಳಲ್ಲಿ ಸರ್ವೆ ಸಾಮಾನ್ಯವಾಗಿತ್ತು. ೧೯೩೩ರಲ್ಲಿ ಒಂದು ಬೇಲ್ ಬಟ್ಟೆಯು ಕಳುವಾದ ಆರೋಪಕ್ಕಾಗಿ ಗುಮಾಸ್ತನನ್ನು ಒಳಗೊಂಡಂತೆ ಮೂವರು ಬಿನ್ನಿ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಲಾಗಿತ್ತು[೬೯].

ಸಾಮಾನ್ಯವಾಗಿ ಬಟ್ಟೆ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಕೆಳ ಜಾತಿಗೆ ಸೇರಿದ ಹಿಂದೂಗಳಾಗಿದ್ದರು. ಗಿರಣಿ ಮತ್ತು ಕಾರ್ಖಾನೆಗಳಲ್ಲಿ ನೈಪುಣ್ಯತೆಯಿಲ್ಲದೇ ಕೆಲಸ ಮಾಡುವ ಕಾರ್ಮಿಕರೆಂದರೆ ಸಾಮಾನ್ಯವಾಗಿ ಆದಿಕರ್ನಾಟಕ ಹಾಗೂ ಆದಿದ್ರಾವಿಡರಾಗಿದ್ದರು[೭೦]. ಬಿನ್ನಿ ಮಿಲ್ಲಿನ ಶೇಕಡಾ ೯೮ರಷ್ಟು ಕಾರ್ಮಿಕರು ಪಠಾಣ್, ಮಾರ್ವಾರಿ ಹಾಗೂ ಮುಲ್ತಾನಿ ಲೇವಾದೇವಿಗಾರರ ಋಣಭಾರಕ್ಕೆ ಒಳಗಾಗಿದ್ದರು[೭೧]. ಸಂಬಳ ಆದ ನಂತರ ನಾಲ್ಕು ದಿನಗಳವರೆಗೆ ಗಿರಣಿ ಗೇಟಿನ ಬಳಿ ಕಾರ್ಮಿಕರಿಗಾಗಿ ಪೋಲೀಸ್ ರಕ್ಷಣೆಯನ್ನು ನೀಡಬೇಕಾಗಿತ್ತು. ಏಕೆಂದರೆ ಲೇವಾದೇವಿಗಾರರು ಸಂಬಳವನ್ನು ಸಾಲದ ರೂಪದಲ್ಲಿ ಕಸಿದುಕೊಳ್ಳುವ ಆತಂಕ ಕಾರ್ಮಿಕರಲ್ಲಿ ಕಾಡುತ್ತಿತ್ತು.

೧೯೪೦ರ ವೇಳೆಗೆ ರಾಜ್ಯದಲ್ಲಿ ಒಟ್ಟಾರೆ ಎಲ್ಲಾ ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಮಹಿಳೆಯರ ಸಂಖ್ಯೆ ೪,೪೨೯. ಇದರಲ್ಲಿ ೨೦೭ ಮಹಿಳೆಯರು ಪ್ರಸೂತಿ ಅನುಕೂಲ ಕಾಯ್ದೆ (ಮೆಟರ್ನಿಟಿ ಬೆನಿಫಿಟ್ ಆಕ್ಟ್)ಯ ವಿಭಾಗ ೦೬ (೦೧)ರ ಅಡಿಯಲ್ಲಿ ಪ್ರಸೂತಿಯ ಲಾಭ ಪಡೆಯಲು ಹಕ್ಕನ್ನು ಚಲಾಯಿಸಿದ್ದರು. ಇದರಂತೆ ಒಟ್ಟಾರೆ ೩,೧೦೮ ರೂಪಾಯಿಗಳ ಮೊತ್ತವನ್ನು ಇದಕ್ಕಾಗಿ ನೀಡಲಾಯಿತು[೭೨]. ಆದರೆ ಎಲ್ಲಾ ಮಹಿಳಾ ಕಾರ್ಮಿಕರಿಗೆ ಈ ಪ್ರಜ್ಞೆ ಬಂದಿರಲಿಲ್ಲ. ಬಿನ್ನಿ ಮಿಲ್ಲಿನ ಮಹಿಳಾ ಕಾರ್ಮಿಕರು ಇದರ ಪ್ರಯೋಜನ ಪಡೆಯಲು ಮುಂದಾಗಿದ್ದರು. ಇದೇ ಅವಧಿಯಲ್ಲಿ 'ಮೈಸೂರು ಕಾರ್ಖಾನೆ ಕಾಯಿದೆ'ಯ ಮೂಲಕ ಮಹಿಳೆಯರು ಮತ್ತು ಮಕ್ಕಳಿಗೆ ಸಂಬಂಧಪಟ್ಟಂತೆ ಕಾರ್ಮಿಕರ ಕೆಲಸದ ಅವಧಿಯನ್ನು ನಿಗದಿಪಡಿಸಲಾಗಿತ್ತು. ವಿಭಾಗ ೩೪, ೩೫, ೪೫ ಹಾಗೂ ೫೪ರ ಅಡಿಯಲ್ಲಿ ಇದಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ರಚಿಸಲಾಗಿತ್ತು[೭೩].

೧೯೬೩ರ ವೇಳೆಗೆ ಈ ಕಾಯ್ದೆಯ ಪ್ರಕಾರ ಕಾರ್ಖಾನೆಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ಮಹಿಳಾ ತನಿಖಾಧಿಕಾರಿಗಳನ್ನು ನೇಮಿಸಲಾಗಿತ್ತು. ಅಲ್ಲದೇ ಮೈಸೂರು ಪ್ರಸೂತಿ ಕಾಯ್ದೆಯ ಅಡಿಯಲ್ಲಿ ೧೪೧೭ ಕಾರ್ಖಾನೆಗಳು ಬರುತ್ತಿದ್ದು, ಉಳಿದ ಇತರೆ ಕಾರ್ಖಾನೆಗಳು 'ರಾಜ್ಯ ಉದ್ಯೋಗಿಗಳ ವಿಮಾ ಕಾಯ್ದೆ' (ಎಂಪ್ಲಾಯೀಸ್ ಸ್ಟೇಟ್ ಇನ್ಶೂರೆನ್ಸ್ ಆಕ್ಟ್)ಯ ಅಡಿಯಲ್ಲಿ ಬರುತ್ತಿದ್ದವು[೭೪]. ಇದರನ್ವಯ ಮಹಿಳೆಯರಿಗೆ ೧೨೯೭೯.೫೮ ರೂಪಾಯಿಗಳ ವೈದ್ಯಕೀಯ ಬೋನಸ್ ಅನ್ನು ನೀಡಲಾಗುತ್ತಿದ್ದು, ೧೧೬೮ ಮಹಿಳಾ ಕಾರ್ಮಿಕರು ಇದರ ಪ್ರಯೋಜನವನ್ನು ಪಡೆದಿದ್ದರು.

ಬೆಂಗಳೂರಿನಲ್ಲಿ ಸ್ಥಾಪನೆಯಾಗಿದ್ದ 'ಕೇಂದ್ರ ಕಾರ್ಮಿಕ ಪೂರೈಕೆ ಸಮಿತಿ' (ಸೆಂಟ್ರಲ್ ಲೇಬರ್ ಸಪ್ಲೈ ಕಮಿಟಿ) ಹಾಗೂ ಕೋಲಾರ ಚಿನ್ನದ ಗಣಿಯಲ್ಲಿದ್ದ 'ಜಿಲ್ಲಾ ಸಮಿತಿ' (ಡಿಸ್ಟ್ರಿಕ್ಟ್ ಕಮಿಟಿ) ಹಾಗೂ ಊರಗೌಮ್‌ನಲ್ಲಿ ಸ್ಥಾಪನೆಯಾಗಿದ್ದ 'ಕಾರ್ಮಿಕ ಪೂರೈಕೆ ಸಂಗ್ರಹಾಲಯ (ಲೇಬರ್ ಸಪ್ಲೈ ಡಿಪೋ)[೭೫]. ಇವುಗಳು ಕೈಗಾರಿಕೆ, ಗಿರಣಿಗಳು ಹಾಗೂ ಗಣಿಗಳಲ್ಲಿ ಕಾರ್ಮಿಕರ ಕೊರತೆ ಕಂಡುಬಂದ ಪಕ್ಷದಲ್ಲಿ ಕೌಶಲ್ಯರಹಿತ ದಿನಗೂಲಿ ಕಾರ್ಮಿಕರನ್ನು ಪೂರೈಸುವ ಸಂಸ್ಥೆಗಳಾಗಿದ್ದವು. ದಿನಗೂಲಿ ಕೌಶಲ್ಯ ಹಾಗೂ ಕೌಶಲ್ಯರಹಿತ ಕಾರ್ಮಿಕರ ಕೂಲಿಯನ್ನು ನಿಗದಿಪಡಿಸುತ್ತಿದ್ದುದು ಇದೇ ಸಂಸ್ಥೆಗಳೇ ಆಗಿದ್ದವು. ೧೯೪೪ರಲ್ಲಿ ನುರಿತ ದಿನಗೂಲಿ ಕಾರ್ಮಿಕರ ಕೂಲಿ ೧೦ ಆಣೆ ಯಿಂದ ೦೩ ರೂಪಾಯಿಗಳಿದ್ದರೆ ಕೌಶಲ್ಯರಹಿತ ಕಾರ್ಮಿಕರ ಕೂಲಿ ೦೬ ಆಣೆಯಿಂದ ೧.೮ ರೂಪಾಯಿಗಳವರೆಗೆ ಇದ್ದಿತು[೭೬].

೨೦೦೮ರ ಸೆಪ್ಟೆಂಬರ್‌ನಲ್ಲಿ ಬೆಂಗಳೂರಿನಲ್ಲಿ ಶುಕ್ರವಾರ ಬಿನ್ನಿ ಮಿಲ್ಲು ಕಾರ್ಮಿಕರಿಗಾಗಿ ಪರಿಹಾರ ಧನ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅಲ್ಲಿ ಅವರಿಗೆ ಬಟವಾಡೆ ಮಾಡಿದರು. ಈ ಕಾರ್ಯಕ್ರಮಕ್ಕೆ ಕೇಂದ್ರ ಜವಳಿ ಮಂತ್ರಿಯಾಗಿದ್ದ ಶಂಕರ್‌ಸಿಂಗ್ ವಾಘೇಲ ಭಾಗವಹಿಸಿದ್ದು, ೨೦೬ ಕಾರ್ಮಿಕರಿಗೆ ೭೬ ಲಕ್ಷ ರೂಪಾಯಿಗಳನ್ನು ಮೊದಲನೇ ಕಂತಿನಲ್ಲಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಬಿನ್ನಿ ಮಿಲ್ ಕಾರ್ಮಿಕನಾಗಿದ್ದ ನಟರಾಜ್ (೫೫) ಹಾಜರಿದ್ದು ಅವನು ೨೪ ವರ್ಷದ ಸೇವೆಯ ನಂತರ ೧೯೯೩ರಲ್ಲಿ ತನ್ನ ಕೆಲಸಕ್ಕೆ ರಾಜಿನಾಮೆ ನೀಡಿದ್ದನು. ರಾಜಿನಾಮೆ ನೀಡಿದ್ದರ ಬಗ್ಗೆ ಅವನು ಈ ರೀತಿ ಪ್ರತಿಕ್ರಿಯಿಸುತ್ತಾನೆ "ನಾವು ಆ ವೇಳೆಗೆ ರಾಜಿನಾಮೆಯನ್ನು ನೀಡಬೇಕಾಗಿತ್ತು. ಏಕೆಂದರೆ ಅವರು ಮಿಲ್ಲನ್ನು ಇಲ್ಲಿ ಮುಚ್ಚಿ ಬೇರೆ ಕಡೆ ತೆರೆಯುವ ಯೋಚನೆಯಲ್ಲಿದ್ದರು"[೭೭]. ಬೆಂಗಳೂರಿನ ಗಿರಣಿಗಳು, ಕಾರ್ಖಾನೆಗಳಲ್ಲಿ ಕೆಲಸ

ಮಾಡುತ್ತಿದ್ದ ಕಾರ್ಮಿಕರು, ಮಹಿಳಾ ಕಾರ್ಮಿಕರು, ಕೌಶಲ್ಯ-ಕೌಶಲ್ಯರಹಿತ ದಿನಗೂಲಿ ಕಾರ್ಮಿಕರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ಅದು ವಸಾಹತು ಕಾಲದಿಂದ ಸಮಕಾಲೀನ ಸಂದರ್ಭದವರೆಗೆ ವಿವಿಧ ಮುಖಗಳಲ್ಲಿ ಕಾಣಿಸಿಕೊಳ್ಳುತ್ತಲೇ ಬಂದಿದೆ. ಕಾರ್ಮಿಕರೆಲ್ಲರಿಗೂ (ಲಿಂಗ ಬೇಧ ಮರೆತು), ವರ್ಗಪ್ರಜ್ಞೆ ಬಂದಾಗ ಅವರು ತಮ್ಮ ಸಮಸ್ಯೆಗಳ ವಿರುದ್ಧ ಹೋರಾಟ ಮಾಡಿ ಹೊರಬರಲು ಸಾಧ್ಯವಾಗುತ್ತದೆ. ಆದರೆ ಕಾಲಕಾಲಕ್ಕೆ ಕಾರ್ಮಿಕರನ್ನು ಹೊಡೆಯುವ ಷಡ್ಯಂತರಗಳು ನಡೆಯುತ್ತಲೇ ಬಂದಿವೆ. ಅದು ಕೇವಲ ಸಂಘಟಿತ ಹಾಗೂ ಅಸಂಘಟಿತ ರೂಪದಲ್ಲಿ ಮಾತ್ರ ಕಾಣಿಸುತ್ತಿದ್ದು ; ಇನ್ನೂ ಅಗೋಚರ ಸ್ವರೂಪಗಳನ್ನು ನಮ್ಮಿಂದ ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ.

## ಕೊನೆ ಟಿಪ್ಪಣಿ

೧. ಕಾರ್ಲ್ ಮಾರ್ಕ್ಸ್, *ದ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಆಫ್ ೧೮೪೮.*

೨. ಬಾಲಕೃಷ್ಣ ಆರ್., *ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು,* ಪು. ೧೦೨ ಮತ್ತು ೧೦೩.

೩. ಕುಮಾರ್ ಬಿ.ಪಿ., *ದಾವಣಗೆರೆ ಹತ್ತಿಗಿರಣಿ ಕಾರ್ಮಿಕರ ಚಳವಳಿಗಳು,* ಅಪ್ರಕಟಿತ ಪಿಎಚ್.ಡಿ. ಪ್ರಬಂಧ, ಪು. ೫೪.

೪. ಅದೇ.

೫. ಅದೇ.

೬. ಅದೇ.

೭. ಚಂದ್ರಮೌಳಿ ಕೆ., *ಬೆಂಗಳೂರಿನ ನೋಟಗಳು,* ಪು. ೫೬.

೮. *ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್,* ೩೩ ಆಫ್ ೧೯೧೭.

೯. ಅದೇ.

೧೦. *ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದ ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ೧೯೨೯–೩೦,* ಪು. ೨೧.

೧೧. ಬಿಷ್ಣುಪ್ರಿಯ ಗುಪ್ತ, *ವೇಜಸ್, ಯೂನಿಯನ್ಸ್ ಅಂಡ್ ಲೇಬರ್ ಪ್ರೊಡಕ್ಟಿವಿಟಿ : ಎವಿಡೆನ್ಸ್ ಫ್ರಮ್ ಇಂಡಿಯನ್ ಕಾಟನ್ ಮಿಲ್ಸ್,* ಪು. ೧೭.

೧೨. *ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್ ದ ಡಿಪಾರ್ಟ್‌ಮೆಂಟ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ೧೯೨೯–೩೦,* ಪು. ೨೧.

೧೩. ಅದೇ.

೧೪. ಅದೇ.

೧೫. ಅದೇ.

೧೬. ಜಾನಕಿ ನಾಯರ್, *ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್,* ಪು. ೫೨೭.

೧೭. ಚಂದ್ರಮೌಳಿ ಕೆ., *ಬೆಂಗಳೂರಿನ ನೋಟಗಳು,* ಪು. ೬೫.

೧೮. ತಂಬಂಡ ವಿಜಯ್ ಪೂಣಚ್ಚ (ಸಂ.), *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ: ಚರಿತ್ರೆ,* ಪು. ೮೩೮.

೧೯. ಅದೇ.

೨೦. ಅದೇ, ಪು. ೮೪೦.

೨೧. ಅದೇ, ಪು. ೮೪೨.

೨೨. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ೧೯೩೦*, ಪು. ೨೪.

೨೩. ಅದೇ.

೨೪. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ೧೯೨೯*, ಪು. ೧೯.

೨೫. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ೧೯೩೦*, ಪು. ೨೧.

೨೬. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್, ೧೯೩೩*, ಪು. ೧೫.

೨೭. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೩–೩೪*, ಪು. ೭೬.

೨೮. ಬಾಲಕೃಷ್ಣ ಆರ್., *ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು*, ಪು. ೨೮೪.

೨೯. *ಕಾನ್ಫಿಡೆನ್ಸಿಯಲ್ ಫೈಲ್, ಸಿ.ಸಿ. ನಂ. ೩/೪೧–೪೨*, ದಿನಾಂಕ ಜುಲೈ ೨೮, ೧೯೪೧.

೩೦. ಅದೇ.

೩೧. ಅದೇ.

೩೨. ಅದೇ.

೩೩. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್, ನಂ. ೪೪೬, ೧೯೪೨.*

೩೪. ಅದೇ.

೩೫. ಅದೇ.

೩೬. ಶಂಕರನಾರಾಯಣರಾವ್, ಎನ್.ಪಿ., *ಮೈಸೂರು ಸಂಸ್ಥಾನದ ಮೊದಲ ಕಮ್ಯುನಿಸ್ಟರು*, ಪು. ೩೦.

೩೭. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್, ನಂ. ೪೪೬, ೧೯೪೨.*

೩೮. ಅದೇ.

೩೯. ಬಾಲಕೃಷ್ಣ ಆರ್., *ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಫ್ ಮೈಸೂರು*, ಪು. ೨೭೬.

೪೦. ಅದೇ, ಪು. ೨೭೮.

೪೧. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೯–೪೦*, ಪು. ೧೧೭.

೪೨. ಅದೇ.

೪೩. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೧–೪೨*, ಪು. ೭೩.

೪೪. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೩–೪೪*, ಪು. ೧೨೮.

೪೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೫–೪೬*, ಪು. ೧೧೪.

೪೬. ನಾಯರ್ ಜಾನಕಿ, *ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್: ವರ್ಕ್, ಕಲ್ಚರ್ ಅಂಡ್ ಪಾಲಿಟಿಕ್ಸ್ ಇನ್ ಪ್ರಿನ್ಸ್‌ಲಿ ಮೈಸೂರು*, ಪು. ೧೯.

೪೭. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೬೩–೬೪*, ಪು. ೧೩೮.

೪೮. ಅದೇ.

೪೯. *ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ಕರ್ನಾಟಕ, ೧೯೭೭–೭೮*, ಪು. ೧೫೦.

೫೦. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೭–೪೮*, ಪು. ೧೧೯.

೫೧. ಅದೇ.

೫೨. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೮–೪೯*, ಪು. ೧೪೫.

೫೩. ಅದೇ.

೫೪. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೦–೫೧*, ಪು. ೧೧೪.

೫೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೧–೫೨*, ಪು. ೧೧೬.

೫೬. ತಂಬಂಡ ವಿಜಯ್ ಪೂಣಚ್ಚ (ಸಂ.), *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ಚರಿತ್ರೆ*, ಪು. ೮೪೪.

೫೭. ಅದೇ.

೫೮. ಅದೇ.

೫೯. ಕಾರ್ಮಿಕ ಕಾಯಿದೆಗಳ ಕುರಿತಂತೆ ಮಾಹಿತಿಯನ್ನು ಎಂ.ವಿ.ಆರ್. ರಾವ್ ಅವರ ಕಾರ್ಮಿಕ ಕಾನೂನು ಎಂಬ ಗ್ರಂಥದಿಂದ ಪಡೆದುಕೊಳ್ಳಲಾಗಿದೆ. ಇದು ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯದಿಂದ ೧೯೭೨ರಲ್ಲಿ ಪ್ರಕಟಗೊಂಡಿತು.

೬೦. *ಪ್ರಜಾವಾಣಿ ದಿನಪತ್ರಿಕೆ*, ಮಂಗಳವಾರ ೨೧ನೇ ಸೆಪ್ಟಂಬರ್ ೨೦೧೦, ಲೇಖಕ : ಅಶೋಕ ಹೆಗಡೆ, ಲೇಖನ : ಕುರುಡು ಕಾಂಚಾಣ.

೬೧. ತಂಬಂಡ ವಿಜಯ್ ಪೂಣಚ್ಚ (ಸಂ.), *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ಚರಿತ್ರೆ*, ಪು. ೮೪೫.

೬೨. *ವಿಜಯ ಕರ್ನಾಟಕ ದಿನಪತ್ರಿಕೆ*, ಬುಧವಾರ ೨೦ ಏಪ್ರಿಲ್ ೨೦೧೬.

೬೩. ಜಾನಕಿ ನಾಯರ್, *ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್*, ಪು. ೧೯೫.

೬೪. ಅದೇ.

೬೫. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೨–೩೩, ಪು. ೭೨.

೬೬. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೩–೩೪, ಪು. ೭೨.

೬೭. ಜಾನಕಿ ನಾಯರ್, ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್, ಪು. ೧೯೭.

೬೮. ಅದೇ, ಪು. ೨೦೧.

೬೯. ಅದೇ, ಪು. ೨೦೩.

೭೦. ಅದೇ, ಪು. ೨೦೫.

೭೧. ಅದೇ, ಪು. ೨೨೬.

೭೨. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೩೯–೪೦, ಪು. ೧೩೩.

೭೩. ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ೧೯೩೯–೪೦, ಪು. ೪೯.

೭೪. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೬೩–೬೪, ಪು. ೧೪೦.

೭೫. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೩–೪೪, ಪು. ೭೨.

೭೬. ಅದೇ.

೭೭. ದ ಹಿಂದೂ ಪತ್ರಿಕೆ, ಶನಿವಾರ, ಸೆಪ್ಟಂಬರ್ ೧೩, ೨೦೦೮.

# ಅಧ್ಯಾಯ – ೬

# ಕಾರ್ಮಿಕ ಹೋರಾಟದ ಚರಿತ್ರೆ

---

೬.೧. ಕಾರ್ಮಿಕ ಚಳವಳಿಗಳು ಹಾಗೂ ಮುಷ್ಕರಗಳು

೬.೨. ಅಂಬೇಡ್ಕರ್ ಪ್ರಭಾವ ಹಾಗೂ ಕಾರ್ಮಿಕ ಚಳವಳಿಯ ಅಸ್ಮಿತೆ

೬.೩. ರಾಷ್ಟ್ರೀಯ ಚಳವಳಿಯಲ್ಲಿ ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕರ ಪಾತ್ರ

೬.೪. ಮೈಸೂರು ಚಲೋ ಹಾಗೂ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಹತ್ತಿ ಗಿರಣಿಗಳ ಕಾರ್ಮಿಕರ ಪಾತ್ರ

---

# ಅಧ್ಯಾಯ – ೬

## ಕಾರ್ಮಿಕ ಹೋರಾಟದ ಚರಿತ್ರೆ

ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಂದಾದಾಗ ಹಾಗೂ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮತ್ತು ಮೇಲಾಗುವ ಶೋಷಣೆ, ದೌರ್ಜನ್ಯವನ್ನು ತಡೆಗಟ್ಟಲು ಹೇಗೆ ಪ್ರತಿಭಟಿಸಿದರು ಹಾಗೂ ಮುಷ್ಕರಗಳಲ್ಲಿ ತೊಡಗಿದರು ಎಂಬುದನ್ನು ಈ ಕಿರು ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಮೈಸೂರು ರಾಜ್ಯದ ಕಾರ್ಮಿಕ ಚಳವಳಿ ಹಾಗೂ ಮುಷ್ಕರಗಳ ಕುರಿತು ಚರ್ಚಿಸುವುದಕ್ಕೂ ಮುನ್ನ ಭಾರತದಲ್ಲಿ ಅದರ ನೆಲೆ ಹಾಗೂ ಬೆಳವಣಿಗೆಯ ಕುರಿತು ಸಂಕ್ಷಿಪ್ತವಾಗಿ ಚರ್ಚಿಸೋಣ. ೨೦ನೇ ಶತಮಾನದ ಮೊದಲ ದಶಕದಲ್ಲಿ ಕಾರ್ಮಿಕರ ಹೋರಾಟ ತೀವ್ರಗೊಂಡಿತು. ಅದು ಸ್ವಾತಂತ್ರ್ಯ ಚಳವಳಿಯೂ ತೀವ್ರಗೊಂಡ ಕಾಲ. ಕಾಂಗ್ರೆಸ್ ಪಕ್ಷದ ನಾಯಕತ್ವ ಉದಾರವಾದಿಗಳ ಹಸ್ತದಿಂದ ಬಾಲಗಂಗಾಧರ ತಿಲಕ್, ಲಾಲಾ ಲಜಪತ್ ರಾಯ್, ಬಿಪಿನ್ ಚಂದ್ರಪಾಲ್ ಮುಂತಾದ ತೀವ್ರಗಾಮಿಗಳ ಕೈಸೇರಿದ ಕಾಲ. ರಾಷ್ಟ್ರೀಯ ಚಳವಳಿಗೆ ಕಾರ್ಮಿಕರ ಬೆಂಬಲ ಪಡೆಯುವ ಉದ್ದೇಶದಿಂದ ಈ ನಾಯಕರೂ ಕಾರ್ಮಿಕರ ಹೋರಾಟಗಳಿಗೆ ಪ್ರೋತ್ಸಾಹ ನೀಡಿದರು. ೧೯೦೫ರಲ್ಲಿ ಕಲ್ಕತ್ತಾದ ಸರ್ಕಾರಿ ಮುದ್ರಣಾಲಯದಲ್ಲಿ, ಹೌರಾದ ಬರ್ನ್ ಮತ್ತು ಕಂಪನಿಯಲ್ಲಿ ಹಾಗೂ ಕಲ್ಕತ್ತಾದ ಟ್ರಾಂವೇ ಕಂಪನಿಯಲ್ಲಿ ದೊಡ್ಡ ದೊಡ್ಡ ಮುಷ್ಕರಗಳು ನಡೆದವು. ೧೯೦೩ರಲ್ಲಿ ಮದ್ರಾಸಿನ ಸರ್ಕಾರಿ ಮುದ್ರಣಾಲಯದಲ್ಲೂ ಒಂದು ಮುಷ್ಕರ ನಡೆಯಿತು. ೧೯೦೫ರಿಂದ ೧೯೦೭ರಲ್ಲಿ ಮುಂಬೈ ಮತ್ತು ಅಹಮದಾಬಾದ್‌ಗಳಲ್ಲೂ ಕೆಲವು ಮುಷ್ಕರಗಳು ನಡೆದವು. ೧೯೦೬ರಲ್ಲಿ ಈಸ್ಟ್ ಇಂಡಿಯಾ ರೈಲ್ವೇ ಕೆಲಸಗಾರರು ಮುಷ್ಕರ ಹೂಡಿದರು.

ಈ ಹೋರಾಟದ ಪರಿಣಾಮವಾಗಿ ನಿಜವಾದ ಟ್ರೇಡ್ ಯೂನಿಯನ್ ಸಂಘಗಳು ತಲೆದೋರಿದವು. ಅಕ್ಟೋಬರ್ ೧೯೦೫ರಲ್ಲಿ ಬೆಂಗಾಲ್ ಪ್ರೆಸ್ ವರ್ಕರ್ಸ್ ಯೂನಿಯನ್ ಅಸ್ತಿತ್ವಕ್ಕೆ ಬಂತು. ಇದು ಭಾರತದ ಮೊದಲ ಟ್ರೇಡ್ ಯೂನಿಯನ್‌ಗಳಲ್ಲಿ ಒಂದಾಗಿತ್ತು. ೧೯೧೪ರಲ್ಲಿ ಮೊದಲನೇ ಮಹಾಯುದ್ಧ ಆರಂಭವಾಯಿತು. ಸಾಮಾಗ್ರಿಗಳ ಬೆಲೆಗಳೂ ಏರಿದವು. ಪರಿಣಾಮವಾಗಿ ವೇತನ ಹೆಚ್ಚಳಕ್ಕೆ ಚಳವಳಿ ನಡೆಯಿತು. ೧೯೧೭ರ ಅಕ್ಟೋಬರ್ ಕ್ರಾಂತಿ ಕಾರ್ಮಿಕ ಚಳವಳಿಗೆ ಹೊಸ

ಚೈತನ್ಯ ನೀಡಿತು. ೧೯೧೮ರಲ್ಲಿ ಮುಷ್ಕರಗಳ ಮಹಾ ಅಲೆಯೊಂದು ಪ್ರಾರಂಭವಾಗಿ ೧೯೨೦ರೊಳಗೆ ದೇಶವನ್ನೆಲ್ಲಾ ವ್ಯಾಪಿಸಿತು. ೧೯೧೮ರ ಪ್ರಥಮ ಆರು ತಿಂಗಳುಗಳಲ್ಲಿ ೫೮ ಮುಷ್ಕರಗಳು ನಡೆದವು, ೧೯೧೯ರ ಜನವರಿಯಲ್ಲಿ ಮುಂಬಯಿಯ ೧,೫೦,೦೦೦ ಹತ್ತಿ ಗಿರಣಿ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ಹೂಡಿದರು. ೧೯೧೯ರ ಅಕ್ಟೋಬರ್ ಒಂದು ತಿಂಗಳಿನಲ್ಲೇ ೧೨ ಲಕ್ಷ ಕಾರ್ಮಿಕರನ್ನೊಳಗೊಂಡ ೩೮ ಮುಷ್ಕರಗಳು ನಡೆದವು. ಅದೇ ವರ್ಷ ರೌಲತ್ ಆಕ್ಟಿನ ವಿರುದ್ಧ ದೇಶಾದ್ಯಂತ ಹೂಡಲ್ಪಟ್ಟ ಸತ್ಯಾಗ್ರಹಗಳಲ್ಲಿ ಕಾರ್ಮಿಕ ವರ್ಗವೂ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿತು. ದೊಡ್ಡ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕಾರ್ಮಿಕರ ಸಂಖ್ಯೆಯೂ ಈಗ ಸುಮಾರು ೧೪ ಲಕ್ಷಗಳಿಗೆ ಏರಿತ್ತು.

ಈ ಅವಧಿಯಲ್ಲಿ ಅನೇಕ ಟ್ರೇಡ್ ಯೂನಿಯನ್‌ಗಳು ಜನ್ಮ ತಾಳಿದವು. ೧೯೨೦ರ ಹೊತ್ತಿಗೆ ೨,೫೦,೦೦೦ ಕಾರ್ಮಿಕರನ್ನೊಳಗೊಂಡ ೧೨೫ ಟ್ರೇಡ್ ಯೂನಿಯನ್‌ಗಳು ಇದ್ದವು ಎಂದು ಅಂದಾಜು ಮಾಡಲಾಗಿದೆ. ಆದುದರಿಂದ ಇವುಳನ್ನೆಲ್ಲಾ ಒಂದು ಕೇಂದ್ರೀಯ ವೇದಿಕೆಯಲ್ಲಿ ಒಂದುಗೂಡಿಸುವ ಉದ್ದೇಶದಿಂದ ಅಕ್ಟೋಬರ್ ೧೯೨೦ರಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ) ಸ್ಥಾಪಿಸಲ್ಪಟ್ಟಿತು. ಲಾಲಾ ಲಜಪತ್ ರಾಯ್ ಅವರು ಇದರ ಮೊದಲ ಅಧ್ಯಕ್ಷರಾಗಿದ್ದರು. ಆದರೆ ಈ ಮಧ್ಯೆ ಕಮ್ಯುನಿಸ್ಟ್ ಚವಳವಳಿ ದೇಶದಲ್ಲಿ ಪ್ರಾರಂಭವಾಗಿತ್ತು. ೧೯೨೧–೨೨ರಲ್ಲೇ ಮುಂಬಯಿ, ಕಲ್ಕತ್ತ ಮುಂತಾದ ಕಡೆಗಳಲ್ಲಿ ಕಮ್ಯುನಿಸ್ಟ್ ಕೂಟಗಳು ಉದಯಿಸಿದ್ದವು. ೧೯೨೫ರಲ್ಲಿ ಈ ಗುಂಪುಗಳೆಲ್ಲಾ ಒಂದಾಗಿ ಒಂದು ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಲ್ಪಟ್ಟಿತು. ೧೯೨೯ರಲ್ಲಿ ಎಐಟಿಯುಸಿಯಲ್ಲಿ ಒಡಕು ಉಂಟಾಗಿ ೧೯೩೮ರಲ್ಲಿ 'ನ್ಯಾಷನಲ್ ಟ್ರೇಡ್ ಯೂನಿಯನ್ ಫೆಡರೇಷನ್' ಸಹ ಎಐಟಿಯುಸಿಯೊಂದಿಗೆ ವಿಲೀನಗೊಂಡು ದ್ವಿತೀಯ ಮಹಾಯುದ್ಧ ಪ್ರಾರಂಭವಾಗುವ ವೇಳೆಗೆ ಟ್ರೇಡ್ ಯೂನಿಯನ್ ಸಂಪೂರ್ಣ ಏಕೀಕರಣಗೊಂಡಿತು.

ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಟ್ರೇಡ್ ಯೂನಿಯನ್ ಚಳವಳಿ ಮತ್ತಷ್ಟು ಬೆಳೆಯಿತು. ಅಕ್ಟೋಬರ್ ೨, ೧೯೩೯ರಂದು ಮುಂಬಯಿಯ ೯೦ ಸಾವಿರ ಕಾರ್ಮಿಕರು ಯುದ್ಧವನ್ನು ವಿರೋಧಿಸಿ ಮುಷ್ಕರ ಹೂಡಿದರು..... (ಎಸ್.ಆರ್. ಭಟ್, ಕರ್ನಾಟಕದಲ್ಲಿ ಕಾರ್ಮಿಕ ಚಳವಳಿ ನಡೆದು ಬಂದ ದಾರಿ). ಹೀಗೆ ರಾಷ್ಟ್ರ ಮಟ್ಟದಲ್ಲಿ ಟ್ರೇಡ್ ಯೂನಿಯನ್‌ಗಳು ಒಂದು ಪ್ರಕ್ರಿಯೆಯ ಮೂಲಕ ವಸಾಹತುಶಾಹಿ ಆಳ್ವಿಕೆಯಲ್ಲಿ ತಮ್ಮ ಹೋರಾಟವನ್ನು ನಡೆಸಿದ್ದವು.

## ೬.೧. ಕಾರ್ಮಿಕ ಚಳವಳಿಗಳು ಹಾಗೂ ಮುಷ್ಕರಗಳು

ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕ ಚಳವಳಿ ಹಾಗೂ ಮುಷ್ಕರಗಳ ಕುರಿತು ಚರ್ಚಿಸುವುದಾದರೆ, ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ಮಾಲೀಕರ ವಿರುದ್ಧ ಮುಷ್ಕರಕ್ಕೆ ಧುಮುಕಿದರೆ ಇನ್ನೊಂದು ಕಡೆ ಅವರುಗಳಲ್ಲಿಯೇ ಸಂಘರ್ಷಗಳು ನಡೆಯುತ್ತಿದ್ದವು. ಇಲ್ಲಿ ಈಗ ವಿಶ್ಲೇಷಿಸಲು ಹೊರಟಿರುವ ಮುಖ್ಯ ಸಂಗತಿಯೆಂದರೆ; ಹೇಗೆ ಆರ್ಥಿಕ ವಿಚಾರಗಳು ಸಾಮಾಜಿಕ ವಾಸ್ತವಾಂಶಗಳೊಂದಿಗೆ ತಳುಕುಹಾಕಿಕೊಂಡಿದೆ ಎಂಬುದರ ಕುರಿತು. ಗಿರಣಿಗಳಲ್ಲಿಯೂ ಸಾಮಾಜಿಕ ಪಿಡುಗಾದ ಜಾತಿ ವ್ಯವಸ್ಥೆ, ಅಸ್ಪೃಶ್ಯತೆಯ ಆಚರಣೆ ಸಾಮಾನ್ಯವಾಗಿತ್ತು. ಇದು ಕಾರ್ಖಾನೆಗಳ ಆಡಳಿತದಿಂದ ಹೊರತಾದ ಅಂಶವಾಗಿದ್ದರೂ ಉತ್ಪಾದನೆಯ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನುಂಟುಮಾಡಿತ್ತು. ಉದಾಹರಣೆಯೆಂಬಂತೆ ಬಿನ್ನಿಮಿಲ್‌ನಲ್ಲಿ ೧೯೨೫ರಲ್ಲಿ ನಡೆದ ಒಂದು ಘಟನೆಯನ್ನು ಇದಕ್ಕೆ ಪೂರಕವಾಗಿ ಪ್ರಸ್ತಾಪ ಮಾಡಲಾಗಿದೆ. ಕಣೀರು ಕೂಲಿಗಳಲ್ಲಿ ಒಬ್ಬನಾದ 'ಕಸ್ತೂರಿ' ಎಂಬುವವನು ತಮಿಳಿನ ಕೂಲಿಯವನಾದ 'ಚನ್ನ' ಎನ್ನುವವನಿಗೆ ಕುಡಿಯಲು ಒಂದು ಲೋಟ ನೀರನ್ನು ನೀಡಿದನು. ಆಗ ಮಿಕ್ಕ ತಮಿಳು ಕೂಲಿಗಳು ಚನ್ನನನ್ನು ಯಾಕೆ ಅವನ (ಕಸ್ತೂರಿ) ಕೈಯಿಂದ ನೀರನ್ನು ಪಡೆದು ಕುಡಿದೆ ಎಂದು ಪ್ರಶ್ನಿಸಿದರಷ್ಟೇಯಲ್ಲದೆ; ಕಣೀರುಗಳು ಹೊಲೆಯರು ಹೀಗಾಗಿ ಅವರನ್ನು ಸ್ಪರ್ಶಿಸುವಂತಿಲ್ಲ ಎಂದು ಅವನಿಗೆ ಸ್ಪಷ್ಟಪಡಿಸಿದರು. ಅಲ್ಲಿಂದಾಚೆಗೆ ಬಿನ್ನಿಮಿಲ್‌ನ ಹಿಂದೂ ಕೂಲಿಗಳು ಕಣೀರು ಕೂಲಿಗಳನ್ನು ಹೊಲೆಯರಂತಲೇ ಕರೆಯಲು ಪ್ರಾರಂಭಿಸಿದರು. ಈ ಸಂಬಂಧವಾಗಿ ಕಣೀರು ಕೂಲಿಗಳು 'ಹುಚ್ಚಪ್ಪ'ನ ನಾಯಕತ್ವದಲ್ಲಿ ಹಿಂದೂ ಕೂಲಿಗಳ ವಿರುದ್ಧ ಪ್ರಕರಣವನ್ನು ದಾಖಲು ಮಾಡಿದರು. ಈ ಘಟನೆಯು ಚರ್ಚೆಯ ತಿರುವನ್ನು ಪಡೆದುಕೊಂಡು ಬಿನ್ನಿಮಿಲ್‌ನ ಕಣೀರು ಕೂಲಿಗಳು ಗಾಂಧಿವಾದಿಯಾದ ತಗಡೂರು ರಾಮಚಂದ್ರರಾವ್ ಅವರಿಗೆ ಈ ವಿಷಯವನ್ನು ಮುಟ್ಟಿಸಿದರು. ಈ ವೇಳೆಗಾಗಲೇ ರಾಮಚಂದ್ರರಾವ್ ಅವರು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ತಗಡೂರು ಗ್ರಾಮದಲ್ಲಿ ಒಂದು 'ಪಂಚಾಯತ್ ನ್ಯಾಯಾಲಯ'ವನ್ನು ಸ್ಥಾಪಿಸಿದ್ದರು. ಇವರು ಬಿನ್ನಿಮಿಲ್‌ಗೆ ಬಂದು ಸ್ಥಳೀಯ ಕಾಂಗ್ರೆಸ್‌ನ ನೆರವಿನೊಂದಿಗೆ ಒಂದು ಸೂಚನೆ ಹೊರಡಿಸಿ ಇದರ ಪ್ರಕಾರವಾಗಿ 'ಮಿಂಟೊ ಒಪ್ತಾಲ್ಮಿಕ್ ಆಸ್ಪತ್ರೆ'ಯ ಹತ್ತಿರ ಒಂದು ಸಭೆಯನ್ನು ಏರ್ಪಡಿಸಿದರು.

ಈ ಸಭೆಯಲ್ಲಿ ಒಂದು ಭಾಷಣವನ್ನು ಮಾಡಿ ಗಿರಣಿಯ ಕಣೀರು ಕೂಲಿಗಳು ಮತ್ತು ಹಿಂದೂ ಕೂಲಿಗಳ ನಡುವೆ ಶಾಂತಿಯನ್ನು ಕಾಪಾಡಿಕೊಳ್ಳುವಂತೆ ತಿಳಿ ಹೇಳಲಾಯಿತು. ಕಣೀರು ಕೂಲಿಗಳ ಕೈಯಿಂದ ತಮಿಳು ಕೂಲಿಯಾಳುಗಳು ನೀರು ಕುಡಿದದ್ದು, ಇದರ ವಿಷಯವಾಗಿ ಕೋರ್ಟು ಮೆಟ್ಟಿಲೇರಿರುವುದು ಒಂದು ಕ್ಷುಲ್ಲಕ ವಿಚಾರ. ಹೀಗಾಗಿ ಪ್ರಕರಣವನ್ನು ಹಿಂತೆಗೆದುಕೊಳ್ಳಿ ಎಂಬ ಸಲಹೆಯನ್ನು ರಾಮಚಂದ್ರರಾವ್ ಅವರು ಹುಚ್ಚಪ್ಪನಿಗೆ ನೀಡಿದರು. ಇದೇ ಸಭೆಯಲ್ಲಿ ಆರ್. ಗೋಪಾಲಸ್ವಾಮಿ ಅಯ್ಯರ್, ಭೀಮರಾವ್, ಎಸ್.ಎಂ. ರಿಝ್ವಿ, ಕೆ. ಶಾಮಣ್ಣ (ವಕೀಲ), ಮುರುಗೇಶಮ್ (ಅಧ್ಯಕ್ಷ), ಹನುಮಂತಪ್ಪ (ನಿವೃತ್ತ ಶಾಲಾ ಶಿಕ್ಷಕ), ಇವರೆಲ್ಲರೂ ಹಾಜರಿದ್ದು ವರ್ಣಾಶ್ರಮ ವ್ಯವಸ್ಥೆಯ ಬಗ್ಗೆ ಮಾತನಾಡಿ ಪಂಚಮರನ್ನು ಮೇಲೆತ್ತಬೇಕು ಎಂದು ಅಭಿಪ್ರಾಯಿಸಿದರು[೧]. ಅಲ್ಲದೆ ಈ ಒಂದು ವಿಷಯವು ಗಲಭೆಯ ತಿರುವನ್ನು ಪಡೆದು ಅರಳೇಪೇಟೆಯ ಹಲವು ಸ್ಥಳಗಳನ್ನು ಆಕ್ರಮಿಸಬಹುದು ಎಂಬ ಆತಂಕವು ಆ ಸಂದರ್ಭದಲ್ಲಿ ಸುದ್ಧಿಯಾಗಿತ್ತು.

ಇದೇ ಪ್ರಕರಣ ಕುರಿತು ಪತ್ರಾಗಾರ ಇಲಾಖೆಯಲ್ಲಿ ಕನ್ನಡದಲ್ಲಿ ಬರೆಯಲಾದ ಪತ್ರವು ದೊರಕಿದ್ದು ಅದು ಈ ರೀತಿ ಇದೆ.

ವಂದೇ ಮಾತರಂ

ಜೈ॥ ಜೈ॥ ಮಹಾತ್ಮ ಗಾಂಧಿ ಜೈ॥ ಜೈ॥ ಕೃಷ್ಣರಾಜೇಂದ್ರ ಭೂಪಾಲ

ಬೆಂಗಳೂರು ಬಿನ್ನಿಮಿಲ್‌ನಲ್ಲಿ ಕೆಲಸ ಮಾಡುವ ಕೂಲಿಗಳಲ್ಲಿ ಒಬ್ಬರಿಗೊಬ್ಬರಿಗೆ ಮತ ಸಂಬಂಧವಾದ ಮನಸ್ತಾಪಗಳುಂಟಾಗಿ ಅದರ ಅನರ್ಥವು ಅರಳೇಪೇಟೆಯ ಹಲವು ಸ್ಥಳಗಳಲ್ಲಿ ಆಕ್ರಮಿಸಿ ಅನೇಕ ಗಲಭೆಗೆ ಅವಕಾಶವಿರುವುದೆಂದು ನಂಜನಗೂಡು ತಾಲ್ಲೂಕು ತಗಡೂರು ಗ್ರಾಮ ರಕ್ಷಣ ಸಭೆಗೆ ಫಿರ್ಯಾದು ಬಂದಿರುತ್ತದೆ. ಈ ವಿಚಾರವನ್ನು ಅಮೂಲಾಗ್ರವಾಗಿ ವಿಚಾರಿಸಿ ಅಧಿಕಾರಿಗಳಿಗೆ ಮಹಾಜನರ ಅಭಿಪ್ರಾಯಗಳನ್ನು ತಿಳಿಸುವುದಕ್ಕಾಗಿ ೩೧-೦೫-೧೯೨೫ನೇ ಭಾನುವಾರ ಸಾಯಂಕಾಲ ೫ ಗಂಟೆಗೆ ಸರಿಯಾಗಿ ಗಾಂಧೀ ಮೈದಾನದಲ್ಲಿ ಪುರನಿವಾಸಿಗಳ ಸಭೆಯು ನಡೆಯುವುದು. ಮಹಾಜನರೆಲ್ಲರೂ ದಯಮಾಡಿಸಬೇಕಾಗಿ ಪ್ರಾರ್ಥನೆ.

ತಗಡೂರು ರಾಮಚಂದ್ರರಾವ್
ಕಾರ್ಯದರ್ಶಿ

ಈ ಸಂಬಂಧವಾಗಿ ಕರ್ನಾಟಕದ ದಲಿತ ಚಿಂತಕರಾದ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರನ್ನು ಸಂದರ್ಶಿಸಿದಾಗ, ಅವರು ಕಣೀರುಗಳು ಹೊಲೆಯರಲ್ಲ. ಅದು ಒಂದು ಪ್ರತ್ಯೇಕವಾದ ಶೂದ್ರ ಸಮುದಾಯದಲ್ಲಿ ಬರುವ ಜಾತಿಯಾಗಿದೆ ಎಂಬುದಾಗಿ ಅಭಿಪ್ರಾಯಿಸಿದ್ದಾರೆ. ಹೀಗಾಗಿ ಪತ್ರಾಗಾರ ಇಲಾಖೆಯಲ್ಲಿರುವ ಕೆಲವು ಮೂಲ ಆಕರಗಳ ವಿಷಯವಾಗಿ ಜಿಜ್ಞಾಸೆ ಮೂಡಿದೆ.

೧೯೨೬ರ ವೇಳೆಗೆ ಬಿನ್ನಿಮಿಲ್‌ನಲ್ಲಿ ಸುಮಾರು ೫೦೦೦ ಕಾರ್ಮಿಕರು ದುಡಿಯುತ್ತಿದ್ದು, ತಮ್ಮ ಸ್ಥಿತಿಗತಿಯನ್ನು ಉತ್ತಮಪಡಿಸಿಕೊಳ್ಳಲು ತಮ್ಮದೇ ಆದ ಸಂಘವನ್ನು ಸ್ಥಾಪಿಸಿಕೊಂಡರು. ಆದರೆ ಇದಕ್ಕೆ ಮನ್ನಣೆ ದೊರಕಿರಲಿಲ್ಲ. 'ತಮ್ಮ ಸಂಘಕ್ಕೆ ಮನ್ನಣೆ ದೊರೆಯಬೇಕು–ತಮ್ಮ ವೇತನ ಹೆಚ್ಚಬೇಕು' ಎಂದು ಬಿನ್ನಿಮಿಲ್ಲು ಕಾರ್ಮಿಕರು ಮುಷ್ಕರ ಹೂಡಿದರು (೧೯೨೬)[೨]. ಆಗ ಮುಷ್ಕರವು ಶಾಸನಬದ್ಧ ಕ್ರಮ ಎಂದು ಇನ್ನೂ ಮನ್ನಣೆ ಪಡೆದಿರಲಿಲ್ಲ. ಮುಷ್ಕರ ಯಶಸ್ವಿಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಮುಷ್ಕರ ಹೂಡಿದ್ದ ಕಾರ್ಮಿಕರು ಕಂಗೆಟ್ಟು ಪೊಲೀಸರ ಮೇಲೆ ಕಲ್ಲು ತೂರಲಾರಂಭಿಸಿದರು. ಗೋಲಿಬಾರ್‌ನ ಪರಿಣಾಮ ನಾಲ್ಕು ಜನ ಕಾರ್ಮಿಕರು ಮರಣ ಹೊಂದಿದರು. ಲಾಠಿ ಪ್ರಹಾರದಿಂದ ಗಾಯಗೊಂಡವರಿಗೆ ಅರಳೇ ಪೇಟೆಯ ಕಾಂಗ್ರೆಸ್ ಕಛೇರಿಯಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಪತ್ರಿಕೆಗಳು ಕಾರ್ಮಿಕರ ಪರವಾಗಿ ಬರೆದು ಸರ್ಕಾರದ, ಆಡಳಿತ ವರ್ಗದ ಕ್ರಮವನ್ನು ಖಂಡಿಸಿದವು. ಅಮೆರಿಕನ್ ಪತ್ರಿಕೆಗಳಲ್ಲೂ ಈ ಗೋಲಿಬಾರಿನ ಸುದ್ಧಿ ಪ್ರತಿಧ್ವನಿಸಿತು. ಕಾಂಗ್ರೆಸ್‌ನ ಧುರೀಣರಾದ ವಕೀಲ ಸಿ.ವಿ. ನರಸಿಂಹ ಅಯ್ಯಂಗಾರ್ ನೇತೃತ್ವದಲ್ಲಿ ಖಾಸಗಿ ವಿಚಾರಣಾ ಸಮಿತಿಯೊಂದನ್ನು ನೇಮಿಸಿ ಈ ಘಟನೆಯ ವಿಚಾರಣೆಗೆ ಮುಂದಾದರು[೩]. ಈ ಕ್ರಮ ಬೆಂಗಳೂರಿನಲ್ಲಿ ಕಾರ್ಮಿಕರು ಒಗ್ಗೂಡಲು ನೈತಿಕ ಧೈರ್ಯವನ್ನು ತಂದುಕೊಟ್ಟಿತು.

೧೯೨೮ರಲ್ಲಿ ಬೆಂಗಳೂರಿನ ಹತ್ತಿಗಿರಣಿಗಳಲ್ಲಿ ಏಳು ಮುಷ್ಕರಗಳು ನಡೆದುದರ ಬಗ್ಗೆ ದಾಖಲಾಗಿವೆ[೪]. ಈ ಮುಷ್ಕರಗಳಿಂದ ೭೩ ಕೆಲಸದ ದಿನಗಳು ನಷ್ಟವಾದವು. ೬೦ ರಿಂದ ೭೫೦೦ ಕಾರ್ಮಿಕರು ತೊಂದರೆಗೆ ಒಳಗಾದರು. ಈ ಮುಷ್ಕರದ ಅವಧಿ ಅರ್ಧ ದಿನದಿಂದ ೨೮ ದಿನಗಳವರೆಗೆ ನಿರಂತರವಾಗಿ ನಡೆದಿತ್ತು. ಮುಷ್ಕರಕ್ಕೆ ಪ್ರಮುಖ ಕಾರಣ ಕೂಲಿಯಲ್ಲಿ ಹೆಚ್ಚಳ, ಎಲ್ಲಾ ಭಾನುವಾರಗಳಿಗೆ ರಜೆಯನ್ನು ನೀಡಬೇಕು, ರಜೆ ಪಡೆಯದೆ ಗೈರು ಹಾಜರಾಗಿ ಕೆಲಸದಿಂದ ವಜಾಗೊಂಡ ಕಾರ್ಮಿಕರನ್ನು ಮರಳಿ ಸೇರಿಸಿಕೊಳ್ಳುವುದು ಇತ್ಯಾದಿ ಬೇಡಿಕೆಗಳೊಂದಿಗೆ ಕಾರ್ಮಿಕರು

ಮುಷ್ಕರಕ್ಕೆ ಮುಂದಾದರು[೫]. ಆದರೆ ಈ ಮುಷ್ಕರಗಳಿಂದ ಕಾರ್ಮಿಕ ಸ್ಥಿತಿಗತಿಗಳಲ್ಲಿ ಯಾವುದೇ ರೀತಿಯ ಸುಧಾರಣೆ ಹೊಂದಲು ಸಾಧ್ಯವಾಗಲಿಲ್ಲ. ಅಲ್ಲದೆ ಪ್ರಭುತ್ವ ಈ ಮುಷ್ಕರಗಳನ್ನು ವಿಶ್ಲೇಷಿಸಿದ್ದೇ ಬೇರೆ ರೀತಿಯದ್ದಾಗಿತ್ತು. ಇಂತಹ ಮುಷ್ಕರಗಳು ರಾಜ್ಯಕ್ಕೆ ಎಂದಿಗೂ ಸವಾಲೆನಿಸುವುದಿಲ್ಲ. ಏಕೆಂದರೆ ಇದೇ ರೀತಿಯ ಮುಷ್ಕರಗಳು ಭಾರತದ ಇತರೆ ದೊಡ್ಡ ನಗರಗಳಲ್ಲಿ ದೀರ್ಘ ಕಾಲದಿಂದಲೂ ನಡೆದುಕೊಂಡು ಬರುತ್ತಿದೆ ಎಂಬುದಾಗಿ ವರದಿ ಮಾಡಿತು[೬]. ಹೀಗಾಗಿ ಇವುಗಳಾವೂ ರಾಷ್ಟ್ರದ ಬ್ರಿಟಿಷ್ ಪ್ರಭುತ್ವಕ್ಕೆ ಪೆಟ್ಟು ನೀಡದಿರುವಾಗ; ಇನ್ನು ಸಂಸ್ಥಾನಗಳಲ್ಲಿ ಜರುಗುವ ಸಣ್ಣಪುಟ್ಟ ಮುಷ್ಕರಗಳ ವಿಚಾರವಾಗಿ ಗೊತ್ತಿದ್ದು ಗೊತ್ತಿಲ್ಲದಂತೆ ತಲೆ ಕೆಡಿಸಿಕೊಳ್ಳದ ರೀತಿಯಲ್ಲಿ ಪ್ರಭುತ್ವ ವರ್ತಿಸಿತು.

ಇಲ್ಲಿ ಬಹಳ ಮುಖ್ಯವಾದ ಅಂಶವೆಂದರೆ ಈ ಸಂದರ್ಭದಲ್ಲಿ 'ವೃತ್ತಿ ಅಥವಾ ವರ್ತಕ ಸಂಘಟನೆ'ಗಳ ನೋಂದಣಿಗಾಗಿ ರಾಜ್ಯದಲ್ಲಿ ಯಾವುದೇ ರೀತಿಯ ಕಾನೂನು ಜಾರಿಯಲ್ಲಿರಲಿಲ್ಲ. ಅಲ್ಲದೆ ಈಗಾಗಲೇ ಅಸ್ತಿತ್ವದಲ್ಲಿದ್ದ ಸಂಘಟನೆಗಳೆಲ್ಲವೂ "ಚಾರಿಟೇಬಲ್ ಸೊಸೈಟೀಸ್ ರೆಗ್ಯುಲೇಶನ್'ನ ಅಡಿಯಲ್ಲಿ ನೋಂದಣಿಯಾಗಿದ್ದವು[೭]. ಅಂದರೆ ಈ ಎಲ್ಲಾ ಸಂಘಟನೆಗಳು ರಾಜ್ಯದ ಅಥವಾ ಪ್ರಭುತ್ವದ ದೃಷ್ಟಿಯಲ್ಲಿ ಅನಧಿಕೃತ, ಯಾವುದೇ ಯೋಗ್ಯತಾ ಪತ್ರವನ್ನು ಪಡೆಯದೆ ಪ್ರಾರಂಭವಾಗಿರುವಂತವುಗಳು ಅಲ್ಲದೆ ಕಾನೂನಿನ ಮಾನ್ಯತೆಯಿಂದ ಹೊರಗುಳಿದವುಗಳಾಗಿದ್ದವು. ಈ ಚಾರಿಟೇಬಲ್ ಸೊಸೈಟಿಯ ಅಡಿಯಲ್ಲಿ ನೋಂದಣಿಯಾದ ಸಂಘಗಳ ನಾಯಕರುಗಳಿಗೆ ತಮ್ಮ ಹಕ್ಕುಗಳ ವಿಷಯವಾಗಿ ಬೇಡಿಕೆ ಸಲ್ಲಿಸಲು (ನಾಗರೀಕ ಅಥವಾ ಅಪರಾಧ ನ್ಯಾಯಾಲಯ) ಆತ್ಮಸ್ಥೈರ್ಯವೂ ಇರಲಿಲ್ಲ. ಇದರಿಂದ ಎಚ್ಚೆತ್ತುಕೊಂಡ ಬೆಂಗಳೂರಿನ ಹತ್ತಿಗಿರಣಿಗಳ ಮಾಲೀಕರು ತಮ್ಮ ಗಿರಣಿಗಳ ಕಾರ್ಮಿಕರಿಗೆ ಗೃಹಗಳ ಸೌಲಭ್ಯವನ್ನು ಒದಗಿಸುವ ದೃಷ್ಟಿಯಿಂದ ಒಂದು ವಿಚಾರಣೆ ಮಾಡಲು ಇದೇ ವರ್ಷದಲ್ಲಿ (೧೯೨೮) ಮುಂದಾಗಿದ್ದು ವಿಶೇಷ[೮]. ಮೈಸೂರು ಮಿಲ್ಲು 'ಕಾರ್ಮಿಕ ಕಾಲೋನಿ'ಯನ್ನು ಸ್ಥಾಪನೆ ಮಾಡಲು ನಿರ್ಧಾರ ಕೈಗೊಂಡಿದ್ದೂ ಈ ಹಿನ್ನೆಲೆಯಿಂದಲೆ[೯]. ಈ ಗಿರಣಿಯು ಭೂ ಸ್ವಾಧೀನ ಕಾನೂನಿನ ಅಡಿಯಲ್ಲಿ ಅನುಕೂಲಕರ ಭೂಮಿಯನ್ನು ಹೊಂದುವ ಉದ್ದೇಶದಿಂದ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿತು. ಆಗ ಸರ್ಕಾರವು ಗಿರಣಿಯ ಉತ್ಸಾಹಕ್ಕೆ ಪ್ರೋತ್ಸಾಹವನ್ನು ನೀಡಿತು. ಇಲ್ಲಿ ಕಾರ್ಮಿಕರಿಗೆ ಮೂಲ ಸೌಕರ್ಯವನ್ನು ಒದಗಿಸುವ ನೆಪದಲ್ಲಿ ಯಾವುದೇ ಹೊಸ ಸಂಘಟನೆ ಪ್ರಾರಂಭವಾಗದಂತೆ ತಡೆಯುವ ಮಾಲೀಕರ ಹಾಗೂ ಸರ್ಕಾರದ ಕಾರ್ಯತಂತ್ರದ ಜುಗಲ್‌ಬಂದಿಯನ್ನು ಕಾಣಬಹುದು.

ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂ. ಲಿ. (ಬಿನ್ನಿಮಿಲ್)ನಲ್ಲಿ ಬೀಗಮುದ್ರೆ (ಮಾಲೀಕರಿಂದ) ಹಾಕಿದ ಒಂದು ಘಟನೆಯು ೧೯೨೯ರಲ್ಲಿ ನಡೆಯಿತು. ಇದು ಜುಲೈ ಒಂದರಿಂದ ಜುಲೈ ೨೯ರವರೆಗೆ ಅಂದರೆ ಸತತ ೨೯ ದಿನಗಳವರೆಗೆ ಮುಂದುವರೆದಿತ್ತು. ಇದರಿಂದ ಸುಮಾರು ೪೫೦೦ ಕಾರ್ಮಿಕರು ತೊಂದರೆಗೆ ಒಳಗಾದರು[೧೦]. ಇದಕ್ಕೆ ಕಾರಣ ಫಿಟ್ಟರ್ ಕಾರ್ಮಿಕರ ಕೂಲಿಯನ್ನು ಅದಕ್ಷತೆಯ ನೆಪವೊಡ್ಡಿ ಕಡಿಮೆ ಮಾಡಿದ್ದು. ಕಾರ್ಖಾನೆ ಆಡಳಿತಕ್ಕೆ ತನ್ನ ವೃತ್ತಿ ಸಂಘದ ಅಧಿಕಾರಿಗಳ ಮೂಲಕ ಕಾರ್ಮಿಕರ ಸಂಬಳ ಯಥಾಸ್ಥಿತಿಗೆ ಬರದೆ ಹೋದರೆ ಮುಷ್ಕರ ಕೈಗೊಳ್ಳುವುದಾಗಿ ಘೋಷಣೆ ಮಾಡಲಾಯಿತು. ಆಗ ಆಡಳಿತ ಇದಕ್ಕೆ ಸವಾಲು ಎಂಬಂತೆ ಬೀಗಮುದ್ರೆಯ ಘೋಷಣೆ ಮಾಡಿ ಗಿರಣಿಯನ್ನು ಮುಚ್ಚಿತು. ಈ ಸಂದರ್ಭದಲ್ಲಿ ಗಿರಣಿಯ ಎಲ್ಲಾ ಕಾರ್ಮಿಕರು ಬೀದಿಗಿಳಿದು ಮುಷ್ಕರ ಹೂಡಿ; ಫಿಟ್ಟರ್ ಕಾರ್ಮಿಕರ ಮೊದಲಿನ ಸಂಬಳವನ್ನು ನೀಡಬೇಕು ಹಾಗೂ ಬೀಗಮುದ್ರೆ ಅವಧಿಯ (೨೯ ದಿನಗಳು) ಕೂಲಿಯನ್ನೂ ಸಹ ಕಟ್ಟಿಕೊಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟರು[೧೧]. ಆಡಳಿತ ಇವರ ಬೇಡಿಕೆಯನ್ನು ಪರಿಗಣಿಸಲಿಲ್ಲ. ಆಗ ಕಾರ್ಮಿಕರು ವಿಧಿಯಿಲ್ಲದೆ ತಮ್ಮ ಕೆಲಸಕ್ಕೆ ಹಿಂದಿರುಗಬೇಕಾಯಿತು. ಗಿರಣಿಯೂ ಸಹ ಜುಲೈ ೨೩ರಿಂದಲೇ ಕೆಲಸ ನಿರ್ವಹಿಸುವುದಕ್ಕೆ ಬೀಗಮುದ್ರೆಯನ್ನು ತೆರವುಗೊಳಿಸಿತಾದರೂ ಜುಲೈ ೨೯ರಿಂದ ಎಲ್ಲಾ ಕಾರ್ಮಿಕರು ಕೆಲಸಕ್ಕೆ ಹಾಜರಾದರು. ಇಲ್ಲಿ ಮುಷ್ಕರವು ವಿಫಲತೆಯನ್ನು ಹೊಂದಿತು ಅಂತಲೇ ಹೇಳಬಹುದು. ಮೇಲುನೋಟಕ್ಕೆ ಕಾರ್ಮಿಕರ ಅದಕ್ಷತೆ ಎದ್ದು ಕಾಣುತ್ತಿತ್ತು.

೧೯೩೨–೩೩ರ ಅವಧಿಯಲ್ಲಿ ಎರಡು ಕಾರ್ಮಿಕ ವಿವಾದಗಳನ್ನು ಹೊರತುಪಡಿಸಿ ಕಾರ್ಮಿಕರು ಹಾಗೂ ಮಾಲೀಕರ ನಡುವಿನ ಸಂಬಂಧ ಸೌಹಾರ್ದಯುತವಾಗಿತ್ತು ಎಂಬುದಾಗಿ ಮೈಸೂರು ಅಡ್ಮಿನಿಸ್ಟ್ರೇಟೀವ್ ರಿಪೋರ್ಟ್‌ನಲ್ಲಿ ತಿಳಿಸಲಾಗಿದೆ[೧೨]. ಆದರೆ ಮಿಕ್ಕೆರಡು ವಿವಾದಗಳನ್ನು ಏಕೆ ಬಗೆಹರಿಸಿಕೊಳ್ಳಲಾಗಲಿಲ್ಲ ಎಂಬುದಾಗಿ ತಿಳಿಸಿಲ್ಲ. ಇದಕ್ಕೆ ಉತ್ತರ ಹುಡುಕುವುದು ಸುಲಭ. ಏಕೆಂದರೆ ಇಂತಹ ಬಹುತೇಕ ವರದಿಗಳ ಸೃಷ್ಟಿಕರ್ತ ಸಾಮಾನ್ಯವಾಗಿ ಎಲ್ಲಾ ಕಾಲಕ್ಕೂ ಪ್ರಭುತ್ವವೇ ಆಗಿರುತ್ತದೆ. ಅದು ಪ್ರಾಚೀನ ಮತ್ತು ಮಧ್ಯಕಾಲದ ಶಾಸನ, ನಾಣ್ಯ, ಕೋಟೆ–ಕೊತ್ತಲೆಗಳಾಗಿರಬಹುದು ಅಥವಾ ಇನ್ನಾವುದೇ ಭೌತಿಕ ರೂಪದ ಸಾಕ್ಷ್ಯಗಳಾಗಿರಬಹುದು. ಪ್ರಭುತ್ವವನ್ನು ಪ್ರತಿಪಾದಿಸುವ ವಿಚಾರಗಳಿಗೆ ಮಾತ್ರ ಮಣೆ. ಹೀಗಾಗಿ ಸಂಶೋಧನಾ ವಿದ್ಯಾರ್ಥಿಗಳಾಗಿ ಆಕರಗಳನ್ನೇ ಪ್ರಶ್ನಿಸುವ ಧೋರಣೆ (ಮೋಹನ್‌ಕೃಷ್ಣ ರೈ ಅವರ ಅಭಿಪ್ರಾಯ) ಬೆಳೆಸಿಕೊಳ್ಳಬೇಕಾಗಿದೆ.

ಸೌಹಾರ್ದಯುತವಾಗಿತ್ತು ಅಂದ ಮಾತ್ರಕ್ಕೆ ಅದನ್ನು ಸಂಪೂರ್ಣ ಸತ್ಯ ಎಂಬುದಾಗಿ ಒಪ್ಪಿಕೊಳ್ಳುವ ಅಗತ್ಯವಿಲ್ಲ. ಏಕೆಂದರೆ ಈ ವರ್ಷ (೧೯೩೨-೩೩) ಬೆಂಗಳೂರಿನ ಹತ್ತಿಗಿರಣಿಗಳಲ್ಲಿ ಗೈರು ಹಾಜರಾಗಿದ್ದ ಕಾರ್ಮಿಕರ ಸರಾಸರಿ ಸಂಖ್ಯೆ ಶೇಕಡ ೧೦ ಹಾಗೂ ಮೈಸೂರಿನಲ್ಲಿ ಶೇಕಡ ೧೨ರಷ್ಟಿತ್ತು.

೧೯೩೨ರಲ್ಲಿ ಬೆಂಗಳೂರಿನ ಗಿರಣಿಗಳನ್ನು ಹೊರತುಪಡಿಸಿ 'ಬೆಂಗಳೂರು ಫ್ಯಾಕ್ಟರಿ'ಯಲ್ಲಿ ಜುಲೈ ೧೮ರಂದು ಮತ್ತೊಂದು ಕಾರ್ಮಿಕ ವಿವಾದ ಕಾಣಿಸಿಕೊಂಡಿತು. ಒಬ್ಬ ಕಾರ್ಮಿಕ ತನ್ನ ಕೆಲಸದಲ್ಲಿ ನಿರ್ಲಕ್ಷ್ಯವನ್ನು ತೋರಿದಲ್ಲದೆ, ನುರಿತ ಹಾಗೂ ಅನುಭವಿ ಕಾರ್ಮಿಕರಿಗೆ ಕೊಡುತ್ತಿರುವ ಕೂಲಿಯನ್ನು ತನಗೂ ನೀಡಬೇಕೆಂದು ಬೇಡಿಕೆಯನ್ನು ಮುಂದಿಟ್ಟನು. ಇವನ ಬೇಡಿಕೆಗೆ ಸಮ್ಮತಿ ಸಿಗಲಿಲ್ಲ ಹಾಗೂ ಇವನ ಉದಾಸೀನತೆ ಮತ್ತು ಅಸಭ್ಯ ವರ್ತನೆಯ ಕಾರಣ ನೀಡಿ ಕೆಲಸದಿಂದ ವಜಾ ಮಾಡಲಾಯಿತು[೧೩]. ಆಗ ಇತರೆ ಕಾರ್ಮಿಕರು ಅವನ ಮೇಲಿನ ಅನುಕಂಪದಿಂದ ಕೆಲಸವನ್ನು ನಿಲ್ಲಿಸಿದರು. ಆಗ ಮಧ್ಯ ಪ್ರವೇಶ ಮಾಡಿದ ಕಾರ್ಮಿಕ ಆಯುಕ್ತರು ಮಾಲೀಕರು ಹಾಗೂ ಕಾರ್ಮಿಕರನ್ನು ಪ್ರತ್ಯೇಕವಾಗಿ ಸಂದರ್ಶನ ನಡೆಸಿದರಲ್ಲದೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅನೇಕ ಅಂಶಗಳನ್ನು ಅಧ್ಯಯನ ಮಾಡಿದರು. ನಂತರ ಆ ಕಾರ್ಮಿಕರನ್ನು ವಜಾಗೊಳಿಸಿದ ಕ್ರಮ ಸರಿಯಾಗಿದೆ ಎಂದು ಇತರೆ ಕಾರ್ಮಿಕರಿಗೆ ತಿಳಿ ಹೇಳಿದರು. ಮುಂದುವರೆದು ಆ ಕಾರ್ಮಿಕ ನಿರ್ಲಕ್ಷ್ಯತೆಯನ್ನು ತಾಳಿದ್ದಲ್ಲದೆ, ಅವಿಧೇಯತೆಯನ್ನು ತೋರಿದ್ದನು ಎಂಬುದಾಗಿಯೂ ಒತ್ತಿ ಹೇಳಿದರು[೧೪]. ಕಾರ್ಮಿಕರು ತಮ್ಮ ಕೆಲಸಕ್ಕೆ ಹಿಂದಿರುಗಬೇಕು ಎಂಬುದಾಗಿ ಸಲಹೆ ನೀಡಿದರು ಹಾಗೂ ಇವರ ಸಲಹೆಯನ್ನು ಕಾರ್ಮಿಕರೂ ಒಪ್ಪಿಕೊಂಡರು. ಆಗಸ್ಟ್ ೫, ೧೯೩೨ ರಿಂದ ಕಾರ್ಖಾನೆಯು ಯಥಾಸ್ಥಿತಿಯ ಕೆಲಸವನ್ನು ನಿರ್ವಹಿಸಲು ಆರಂಭಿಸಿತು.

೧೯೩೫ರಲ್ಲಿ ಬೆಂಗಳೂರು ಮತ್ತು ಮೈಸೂರು ಎರಡೂ ಕಡೆಗಳಲ್ಲಿ ಹತ್ತಿಗಿರಣಿಗಳಲ್ಲಿ ಕಾರ್ಮಿಕ ವಿವಾದಗಳು ಕಾಣಿಸಿಕೊಂಡವು. ವರದಿಗಳಲ್ಲಿ ಈ ವಿವಾದಗಳು ಸಣ್ಣಪುಟ್ಟ ವಿಚಾರಗಳಿಗೆ ಸಂಬಂಧಪಟ್ಟಿದ್ದು, ತ್ವರಿತವಾಗಿ ಬಗೆಹರಿಸಲಾಯಿತು ಎಂಬುದಾಗಿ ಪ್ರಕಟವಾಗಿದೆ[೧೫]. ಆದರೆ ಈ ವಿವಾದ ಕಾರ್ಮಿಕರ ಕೂಲಿಗೆ ಸಂಬಂಧಪಟ್ಟಿದ್ದಾಗಿದ್ದು, ಅವರು ಎಷ್ಟೇ ಹೋರಾಟ ಮಾಡಿ ಬೇಡಿಕೆ ಸಲ್ಲಿಸುತ್ತಾ ಬಂದಿದ್ದರೂ ಕೂಲಿಯಲ್ಲಿ ಮಾತ್ರ ಬದಲಾವಣೆಯಾಗಿರಲಿಲ್ಲ. ಪ್ರಭುತ್ವ ಹೊರಡಿಸುವ ವರದಿಗಳ ಪ್ರಕಾರ ಈ ವಿಷಯ ಕ್ಷುಲ್ಲಕವೇ ಆಗಿದ್ದರೂ ಕಾರ್ಮಿಕರಿಗೆ ಬದುಕಿನ ಪ್ರಶ್ನೆಯಾಗಿದ್ದು;

ಅಲ್ಲದೆ ಇವರ ಎಲ್ಲಾ ಹೋರಾಟಗಳಿಗೂ ಮೂಲ ನೆಲೆ ಆ ದಿನದ ಕೂಲಿ. ಇದೊಂದು ಅವರಿಗೆ ಹೊಟ್ಟೆ ವರೆಯುವಷ್ಟು ಲಭ್ಯವಿರುತ್ತಿದ್ದರೆ ಗಿರಣಿಗಳು ಹಾಗೂ ಮಾಲೀಕರು ಇವರ ಪಾಲಿಗೆ ಗುಡಿಗಳು ಹಾಗೂ ದೇವರುಗಳೆಂಬ ಭಾವನೆ ಹೊಂದಲೂ ಹಿಂಜರಿಯುತ್ತಿರಲಿಲ್ಲ. ಇದು ಸಂಶೋಧಕನ ಅತಿಶಯೋಕ್ತಿಯ ಮಾತುಗಳೂ ಅಲ್ಲ. ಆದರೆ ಸಮಯ ಹಾಗೂ ಸಂದರ್ಭ ಆ ರೀತಿ ಇತ್ತಾ? ಎಂಬುದೇ ಪ್ರಶ್ನೆ. ಚರಿತ್ರೆಯ ದಿಕ್ಕು ಹಾಗೂ ಬದಲಾವಣೆಗೆ ಸಮಯ, ಸಂದರ್ಭಗಳೇ ಮುಖ್ಯ ಎಂಬುದನ್ನು ಎಲ್ಲಾ ಸಂದರ್ಭಗಳಲ್ಲೂ ಮರೆಯಬಾರದು.

೧೯೩೮ರ ವೇಳೆಗೆ ಬೆಂಗಳೂರು ನಗರದಲ್ಲಿಯೇ ಐದು ಕಾರ್ಮಿಕ ಗಲಭೆಗಳು ಕಾಣಿಸಿಕೊಂಡವು. ಅವುಗಳಲ್ಲಿ ನಾಲ್ಕು ಗಲಭೆಗಳು ಬಟ್ಟೆ ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸಂಬಂಧಪಟ್ಟಿದ್ದಾಗಿತ್ತು. ಈ ಗಲಭೆಗಳ ಅವಧಿ ಅಲ್ಪ ಕಾಲದ್ದಾಗಿದ್ದು, ಸದ್ಯದಲ್ಲಿಯೇ ಪರಿಸ್ಥಿತಿಯನ್ನು ಸಹಜ ಸ್ಥಿತಿಗೆ ತರಲಾಗಿತ್ತು ಎಂದು ವರದಿಯಾಗಿದೆ[೧೬]. ಆದರೆ ಇಲ್ಲಿ ಪ್ರಮುಖವಾಗಿ ಗಮನಿಸಬೇಕಾಗಿರುವುದು ವರ್ಷದಿಂದ ವರ್ಷಕ್ಕೆ ಕಾರ್ಮಿಕ ಪ್ರಜ್ಞೆ ಹೆಚ್ಚಾಗುತ್ತಿದ್ದು ಅವರು ತಮ್ಮ ದುಡಿಮೆಗನುಗುಣವಾಗಿ ಮಾಲೀಕರಲ್ಲಿ ಬೇಡಿಕೆಗಳನ್ನು (ಕೂಲಿ) ಮುಂದಿಡುತ್ತಿದ್ದರು. ಅದಕ್ಕೆ ಮಾಲೀಕರಿಂದ ಸಕರಾತ್ಮಕ ಸ್ಪಂದನೆ ಸಿಗದೇ ಹೋದಲ್ಲಿ ಅವರು ಗಲಭೆ, ಮುಷ್ಕರಗಳತ್ತ ಮುಖ ಮಾಡುತ್ತಿದ್ದರು.

ದ ಬೆಂಗಳೂರು ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂ. ಲಿ. ಎಂದು ಹೆಸರಾದ ಬಿನ್ನಿಮಿಲ್ಲು ತನ್ನ ಕಾರ್ಮಿಕರಿಗಾಗಿ 'ಭವಿಷ್ಯ ನಿಧಿ ಯೋಜನೆ'ಯನ್ನು (ಪ್ರಾವಿಡೆಂಟ್ ಫಂಡ್ ಸ್ಕೀಂ–ಬಿ) ಪ್ರಥಮ ಬಾರಿಗೆ ಜಾರಿಗೆ ತಂದಿದ್ದೇ ೧೯೪೯ರಲ್ಲಿ[೧೭]. ಇದು ಇಡೀ ಮೈಸೂರು ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಸ್ಥಾಪನೆಯಾದ ಹತ್ತಿಗಿರಣಿ. ಹಾಗಿದ್ದೂ ತನ್ನ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರ ಭವಿಷ್ಯದ ಹಿತದೃಷ್ಟಿಯಿಂದ ಒಂದು 'ನಿಧಿ'ಯ ಯೋಜನೆಯ ಬಗ್ಗೆ ಪ್ರಸ್ತಾವನೆಯನ್ನು ಸಿದ್ಧಪಡಿಸುವುದಕ್ಕೆ ತೆಗೆದುಕೊಂಡ ಅವಧಿ ಸುಮಾರು ೫೭ ವರ್ಷಗಳು. ಅಂದರೆ ಗಿರಣಿಗಳ ಆಡಳಿತ ವರ್ಗಕ್ಕಾಗಲೀ ಅಥವಾ ಬ್ರಿಟಿಷರಿಗಾಗಲಿ ಈ ಕುರಿತು ಯಾವುದೇ ಹಿತಾಸಕ್ತಿ ಇದ್ದಿರಕ್ಕಿಲ್ಲ. ನಮ್ಮಂತ ಸ್ಥಳೀಯ ರಾಜರುಗಳ ಆಳ್ವಿಕೆಯಡಿಯಲ್ಲಿ ಸಿಲುಕಿದ್ದ ರಾಜ್ಯಗಳ ಕಥೆಯು ಇದಕ್ಕಿಂತ ಭಿನ್ನವೇನಲ್ಲ. ಹೀಗಾಗಿ ದೇಶದಲ್ಲಿ ರಾಷ್ಟ್ರೀಯ ಚಳವಳಿಯ ತೀವ್ರ ವೇಗವನ್ನು ಪಡೆದುಕೊಂಡಾಗ ಕಾರ್ಮಿಕ, ರೈತಾಪಿ ವರ್ಗ ಈ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಾಗ

ಇದರಿಂದ ಎಚ್ಚೆತ್ತ ನಮ್ಮ ರಾಜಕೀಯ ಹೋರಾಟಗಾರರು ಇದರ ಬಗ್ಗೆ ಗಮನಹರಿಸಲು ಪ್ರಾರಂಭಿಸಿದರು. ನಂತರ ಕ್ರಮೇಣವಾಗಿ ಗಿರಣಿ, ಕೈಗಾರಿಕೆ, ಕಾರ್ಖಾನೆಗಳಲ್ಲಿ ಪ್ರತಿಭಟನೆ, ಹೋರಾಟ ಪ್ರಾರಂಭವಾಯಿತು.

೧೯೩೯ರಲ್ಲಿ ಬೆಂಗಳೂರಿನ ಜವಳಿ ಕಾರ್ಖಾನೆ ಹಾಗೂ ಗಿರಣಿಗಳಲ್ಲಿ ವಿವಾದಗಳು ಕಾಣಿಸಿಕೊಂಡಿತು. ೧೯೩೯ ಜನವರಿ ೧೩ರಂದು ಚಾಮರಾಜಪೇಟೆಯ ಟಿ.ಆರ್. ಮಿಲ್‌ನಲ್ಲಿ ಮುಷ್ಕರ ಪ್ರಾರಂಭವಾಯಿತು. ಕಾರಣ ಪೊಂಗಲ್ ಅಥವಾ ಸಂಕ್ರಾಂತಿ ಹಬ್ಬದ ನಂತರ ಕಾರ್ಮಿಕರು ಕೂಲಿಯ ಹೆಚ್ಚಳಕ್ಕಾಗಿ ಆಡಳಿತದ ಮುಂದೆ ಬೇಡಿಕೆ ಇಟ್ಟರು. ಆದರೆ ಇದನ್ನು ಆಡಳಿತವು ತಿರಸ್ಕರಿಸಿತು. ಆದರೆ ಕಾರ್ಮಿಕರ ಮನವಿಯನ್ನು ಈಡೇರಿಸುವ ಭರವಸೆ ನೀಡಿದ ಕಾರಣ ಜನವರಿ ೧೬ರಂದು ಕಾರ್ಮಿಕರು ಕೆಲಸಕ್ಕೆ ಹಾಜರಾದರು[೧೮]. ಮತ್ತೆ ನಂತರದ ದಿನವೇ ಅಂದರೆ ಜನವರಿ ೧೭ರಂದು ಕಾರ್ಮಿಕರು ಕೆಲಸವನ್ನು ಸ್ಥಗಿತಗೊಳಿಸಿದರು. ಕಾರಣ ಆಡಳಿತವು ಶಿಸ್ತಿನ ನೆಪವೊಡ್ಡಿ ಒಬ್ಬ ನೇಕಾರ ಕಾರ್ಮಿಕನನ್ನು ಕೆಲಸದಿಂದ ತೆಗೆದುಹಾಕಿತ್ತು. ಜನವರಿ ೨೧ ರಿಂದ ಮತ್ತೆ ಕೆಲಸ ಪ್ರಾರಂಭಿಸಿದರು[೧೯]. ಕಾರ್ಮಿಕರು ಪುನಃ ೧೯೩೮ರ ಡಿಸೆಂಬರ್‌ನಲ್ಲಿ ಇಬ್ಬರು ಕಾರ್ಮಿಕರನ್ನು ಅಶಿಸ್ತಿನ ನೆಪವೊಡ್ಡಿ ವಜಾಗೊಳಿಸಿದ್ದ ವಿಷಯಕ್ಕಾಗಿ ೧೯೩೯ ಫೆಬ್ರವರಿ ೧೬ರಂದು ಮತ್ತೆ ಮುಷ್ಕರಕ್ಕೆ ಇಳಿದರು[೨೦]. ಆದರೆ ಕಾರ್ಮಿಕರ ಕುಂದುಕೊರತೆಗಳನ್ನು ವಿಚಾರಣೆಯ ಮೂಲಕ ಬಗೆಹರಿಸುವ ಭರವಸೆಯನ್ನು ನೀಡಿದ್ದರಿಂದ ಮಾರ್ಚ್ ೬ಕ್ಕೆ ಹೋರಾಟವನ್ನು ಕೈಬಿಡಲಾಯಿತು. ಆದರೆ ಶಂಕರನಾರಾಯಣರಾವ್ ಅವರು ಈ ಘಟನೆಯನ್ನು ಬೇರೆ ರೀತಿಯಲ್ಲಿ ವಿಶ್ಲೇಷಿಸುತ್ತಾರೆ. ೧೯೩೯ರ ಫೆಬ್ರವರಿಯಲ್ಲಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಕಾರ್ಯದರ್ಶಿಯಾಗಿದ್ದ ಎಸ್.ಎಸ್. ಮಿರಜ್‌ಕರ್ ಬೆಂಗಳೂರಿನಲ್ಲಿ ಒಂದು ಭಾಷಣ ಮಾಡಿದರು. ಆ ಸಭೆಗೆ ಎನ್.ಡಿ. ಶಂಕರ್ ಅವರು (ಕಮ್ಯುನಿಸ್ಟ್) ಅಧ್ಯಕ್ಷರಾಗಿದ್ದು, ಕಾಂಗ್ರೆಸ್ಸು ಸಂಸ್ಥಾನದ ಕಾರ್ಮಿಕರ ಸಮಸ್ಯೆಗಳತ್ತ ಆಸಕ್ತಿ ವಹಿಸಿಲ್ಲ ಎಂದು ತಿಳಿಸಿ, ಕಾರ್ಮಿಕರು ತಮ್ಮದೇ ಸಂಘಗಳನ್ನು ಕಟ್ಟಿಕೊಳ್ಳಬೇಕೆಂದು ಕರೆಯಿತ್ತರು[೨೧].

ಅದೇ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಟಿ.ಆರ್. ಮಿಲ್ಲಿನ ಕಾರ್ಮಿಕರ ಒಂದು ಮುಷ್ಕರ ನಡೆಯಿತು. ಎನ್.ಡಿ. ಶಂಕರ್ ಆ ಸಂದರ್ಭದಲ್ಲಿ ಹಲವು ಭಾಷಣಗಳಲ್ಲಿ ಮಿಲ್ಲಿನ ಆಡಳಿತ ವರ್ಗದ ದುರಾಡಳಿತ, ಅದರೊಂದಿಗೆ ಸರ್ಕಾರದ ಷಾಮೀಲು ಇವೇ ಕಾರ್ಮಿಕರ ದುಸ್ಥಿತಿಗೆ ಮುಖ್ಯ ಕಾರಣ

ಎಂಬುದನ್ನು ಅಂಕಿ ಸಂಖ್ಯೆಗಳೊಂದಿಗೆ ಸ್ಪಷ್ಟಪಡಿಸುತ್ತಿದ್ದರು. ಕಾರ್ಮಿಕರ ಮುಷ್ಕರಗಳಲ್ಲಿ ಕಾರ್ಮಿಕರು ಏಕೆ ಸೋಲುತ್ತಾರೆ ಎಂಬುದನ್ನು ಬೆಂಗಳೂರಿನ ಕಾರ್ಮಿಕರಿಗೆ ಮನಗಾಣಿಸಿ, ಟಿ.ಆರ್. ಮಿಲ್ಲಿನ ಕಾರ್ಮಿಕರು ಸ್ಥೈರ್ಯ ಕಳೆದುಕೊಳ್ಳದಂತಿರಲು, ಇತರ ಮಿಲ್ಲುಗಳ ಕಾರ್ಮಿಕರು ತಮ್ಮ ಒಂದೊಂದು ದಿನದ ಸಂಪಾದನೆಯ ದೇಣಿಗೆ ನಿಡುವಂತೆ ಮಾಡಿದರು[೨೨]. ಆಗ ಬೆಂಗಳೂರಿನ ಜವಳಿ ಕಾರ್ಮೀಕರ ನಡುವೆ ಸಾಕಷ್ಟು ಪ್ರಭಾವಶಾಲಿಯಾಗಿ, ಬೆಂಗಳೂರು ಟೆಕ್ಸ್‌ಟೈಲ್ ಲೇಬರ್ ಯೂನಿಯನ್ನಿನ ಕಾರ್ಯದರ್ಶಿಯಾಗಿದ್ದ ಪಿ.ಎಂ. ರಾಮಶರ್ಮರು ಉದಾರವಾದಿಗಳಾಗಿದ್ದು, ಬಂಡವಾಳಗಾರರಿಗೆ ಮನವಿ ಸಲ್ಲಿಸುವ ಮನೋಭಾವದವರಾಗಿದ್ದರು. ಶಂಕರ್ ತಳೆದ ಹೋರಾಟದ ನಿಲುವು, ಕಾರ್ಮಿಕರ ಪರಸ್ಪರ ನೆರವು ಹಾಗೂ ಜನ ಬೆಂಬಲಗಳ ಪರಿಣಾಮ ೧೯೪೧ರಲ್ಲಿ ನಡೆದ ಬಿನ್ನಿ ಮುಷ್ಕರದಲ್ಲಿ ಸ್ಫೋಟಗೊಳ್ಳುವುದಾದರೂ ಅದರ ಆರಂಭ ಈ ಟಿ.ಆರ್. ಮಿಲ್ಲಿನ ಮುಷ್ಕರದಿಂದ ಆಯಿತು ಎಂಬುದಾಗಿ ಎನ್.ಪಿ. ಶಂಕರನಾರಾಯಣರಾವ್ ಅವರ ವಿಶ್ಲೇಷಣೆಯಾಗಿದೆ.

೧೯೩೯, ಫೆಬ್ರವರಿ ೧೩ರಲ್ಲಿ ಬೆಂಗಳೂರಿನ ಮನವರ್ತ ಪೇಟೆಯಲ್ಲಿನ ನೂಲುವ ಕಾರ್ಖಾನೆಯಲ್ಲಿ ಕಾಣಿಸಿಕೊಂಡ ವಿವಾದ. ಈ ಕಾರ್ಖಾನೆಯು ತಿಮ್ಮಪ್ಪ ಬ್ಯಾಟಪ್ಪ ಅವರ ಒಡೆತನದಲ್ಲಿತ್ತು. ಕಾರ್ಖಾನೆಯಲ್ಲಿನ ಒಬ್ಬ ನೇಕಾರನನ್ನು ದುರ್ವರ್ತನೆ ಹಾಗೂ ಕೆಟ್ಟ ಕೆಲಸದ ಆರೋಪದಡಿ ವಜಾ ಮಾಡಲಾಗಿತ್ತು. ಇದರ ವಿರುದ್ಧವಾಗಿ ಕಾರ್ಮಿಕರು ಕೆಲಸವನ್ನು ಸ್ಥಗಿತಗೊಳಿಸಿದರು. ಫೆಬ್ರವರಿ ೧೪ರಂದು ಆತನನ್ನು ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿ ಭರವಸೆ ನೀಡಿದ್ದರಿಂದ ಕೆಲಸ ಪುನರಾರಂಭವಾಯಿತು[೨೩].

ಮೇಲಿನ ಅಂಶವೇ ಕಾರಣವಾಗಿ ೧೫ ಫೆಬ್ರವರಿ ೧೯೩೯ರಲ್ಲಿ ಕಬ್ಬನ್ ಪೇಟೆಯ ಶ್ರೀ ಆಂಜನೇಯ ನೇಯ್ಗೆ ಕಾರ್ಖಾನೆಯಲ್ಲಿ ವಿವಾದ ಹುಟ್ಟಿಕೊಂಡು ಮತ್ತೆ ಮಾರ್ಚ್ ೨೫ರಂದು ಕಾರ್ಮಿಕರು ಕೆಲಸಕ್ಕೆ ಮರಳಿದರು[೨೪]. ೧೯೩೯ರ ಫೆಬ್ರವರಿ ೧೮ರಂದು ಮಿನರ್ವ ಮಿಲ್ಲಿನಲ್ಲಿ ಕಾಣಿಸಿಕೊಂಡ ವಿವಾದ. ಕಾರಣ ೧೯೩೭ ಹಾಗೂ ೧೯೩೮ರಲ್ಲಿ ಘೋಷಿಸಿದಂತೆ ಈ ವರ್ಷವೂ ಶಿವರಾತ್ರಿ ಹಬ್ಬದಂದು ರಜೆಯನ್ನು ಘೋಷಿಸಬೇಕು ಎಂಬ ಬೇಡಿಕೆಗೆ ಆಡಳಿತ ಮಂಡಳಿಯು ತಿರಸ್ಕಾರ ವ್ಯಕ್ತಪಡಿಸಿತು[೨೫]. ಹೀಗಾಗಿ ಬಹುಸಂಖ್ಯಾತ ಕಾರ್ಮಿಕರು ಮಿಲ್ಲಿನಲ್ಲಿ ಕೆಲಸವನ್ನು ಸ್ಥಗಿತಗೊಳಿಸಿದರು. ನಂತರ ವ್ಯವಸ್ಥಾಪಕರು ಇವರ ಒತ್ತಾಯಕ್ಕೆ ಮಣಿದಿದ್ದರಿಂದ ನಂತರದ ದಿನವೇ ಕೆಲಸ ಪುನರಾರಂಭವಾಯಿತು.

ಮೇಲಿನ ಅಷ್ಟೂ ವಿವಾದಗಳು ಬೆಂಗಳೂರಿನ ವಿವಿದೆಡೆ ಕಾಣಿಸಿಕೊಂಡರೂ ಅದು ಸುದೀರ್ಘವಾದ ಮುಷ್ಕರವಾಗಿರಲಿಲ್ಲ. ಅಲ್ಲದೆ ಎರಡೂ ಪ್ರಸಂಗಗಳು ಧಾರ್ಮಿಕ ಹಿನ್ನೆಲೆಯಿಂದ ಉಂಟಾದ ವಿವಾದಗಳಾಗಿದ್ದವು. ಹಾಗಿದ್ದೂ ಕಾರ್ಮಿಕರು ಮಾಲೀಕರ ವಿರುದ್ಧ ಅಥವಾ ಶೋಷಣೆಯ ವಿರುದ್ಧ ಪ್ರತಿಭಟನೆಯ ಮನಃಸ್ಥಿತಿಯನ್ನು ಹೊಂದಿದ್ದಾಗಿ ಮನಗಾಣಬಹುದು. ಬೆಂಗಳೂರಿನ ಹತ್ತಿ ಬಟ್ಟೆ ಗಿರಣಿ ಹಾಗೂ ನೇಯ್ಗೆ ಕಾರ್ಖಾನೆಗಳಲ್ಲಿ ೧೯೩೯ರಲ್ಲಿ ಕಾಣಿಸಿಕೊಂಡ ವಿವಾದ, ಅದರಲ್ಲಿ ಪಾಲ್ಗೊಂಡ ಕಾರ್ಮಿಕರ ಸಂಖ್ಯೆ ಹಾಗೂ ನಷ್ಟವಾದ ಸಮಯವನ್ನು ಒಂದು ಕೋಷ್ಟಕದ ಮೂಲಕ ತೋರಿಸಲಾಗಿದೆ.

| ಕ್ರಮ ಸಂಖ್ಯೆ | ಗಿರಣಿ ಅಥವಾ ಕಾರ್ಖಾನೆ | ಪಾಲ್ಗೊಂಡ ಕಾರ್ಮಿಕರ ಸಂಖ್ಯೆ | ನಷ್ಟವಾದ ಕೆಲಸದ ಸಮಯ (ಗಂಟೆಗಳಲ್ಲಿ) |
|---|---|---|---|
| ೧ | ತಿಮ್ಮಪ್ಪ ಬ್ಯಾಟಪ್ಪ ನೇಯ್ಗೆ ಕಾರ್ಖಾನೆ | ೨೨ | ೧೯೮ |
| ೨ | ಶ್ರೀ ಆಂಜನೇಯ ನೇಯ್ಗೆ ಕಾರ್ಖಾನೆ | ೯೬ | ೪,೦೦೮ |
| ೩ | ಟಿ.ಆರ್. ಮಿಲ್ಲು | ೨೦೦ | ೪೫,೦೦೦ |
| ೪ | ಮಿನರ್ವ ಮಿಲ್ಲು | ೧,೫೬೬ | ೧೪,೯೪ |
| | ಒಟ್ಟು | ೧,೮೮೪ | ೬೩,೩೦೦ |

೧೯೩೦ರ ನಂತರದ ಕಾರ್ಮಿಕ ಮುಷ್ಕರಗಳ ನಾಯಕತ್ವವನ್ನು ಕೆ.ಟಿ. ಭಾಷ್ಯಂ ಅವರು ವಹಿಸಿಕೊಂಡಿದ್ದು, ಇವರ ಜೊತೆಗೆ ತಗಡೂರು ರಾಮಚಂದ್ರರಾವ್ ಅವರದ್ದೂ ಸಿಂಹಪಾಲು. ಆದಾಗ್ಯೂ ೧೯೪೦ರ ದಶಕವನ್ನು ಬೆಂಗಳೂರಿನ ಕಾರ್ಮಿಕ ಚಳವಳಿ ಹಾಗೂ ಮುಷ್ಕರಗಳ ಹಿನ್ನೆಲೆಯಿಂದ "ಕೆ.ಟಿ. ಭಾಷ್ಯಂ ಯುಗ" ಎಂದರೆ ತಪ್ಪಾಗಲಾರದು. ಏಕೆಂದರೆ ಬಹುತೇಕ ಎಲ್ಲಾ ಸಂದರ್ಭಗಳಲ್ಲೂ ಮುಷ್ಕರದ ನೇತೃತ್ವವನ್ನು ಇವರೇ ವಹಿಸಿಕೊಳ್ಳುತ್ತಿದ್ದರು. ಬೋನಸ್ ಅಥವಾ ಸಂಬಳ, ಇನ್ನಿತರೆ ಸಮಸ್ಯೆಗಳ ವಿರುದ್ಧವಾಗಿ ಮುಷ್ಕರ ಹೂಡುವುದರ ಮುನ್ಸೂಚನೆಯು ಮಾಲೀಕರಿಗೆ ತಿಳಿಯುತ್ತಿದ್ದಂತೆ ಪ್ರಭುತ್ವ ಹಾಗೂ ಅಧಿಕಾರಿಗಳ ವಲಯ (ಐ.ಜಿ.ಪಿ., ಲೇಬರ್ ಕಮೀಷನರ್)ಗಳ ಕಡೆಯಿಂದ ಅವರು ಮುಷ್ಕರದ ನೇತೃತ್ವವನ್ನು ವಹಿಸಿಕೊಳ್ಳದಂತೆ ಎಚ್ಚರಿಕೆಯ ಪತ್ರಗಳು ಅಥವಾ ಒತ್ತಡಗಳು ಬರುತ್ತಿದ್ದುದಕ್ಕೆ ಸಾಕಷ್ಟು ಪುರಾವೆಗಳಿವೆ[೨೬]. ಅದರ ಒಂದು ಉದಾಹರಣೆಯನ್ನು ಮಾತ್ರ ಇಲ್ಲಿ ನೀಡಲಾಗಿದೆ.

೧೯೩೯ರಲ್ಲಿ ದ್ವಿತೀಯ ಮಹಾಯುದ್ಧ ಸ್ಫೋಟಗೊಂಡಿತು. ತೀವ್ರ ಬೆಲೆ ಏರಿಕೆ ರೂಪದಲ್ಲಿ ಯುದ್ಧದ ಬಿಸಿ ಭಾರತವನ್ನು ತಲುಪಿತು. ಇದೇ ಸಮಯದಲ್ಲಿ ಎಂ.ಎಸ್. ರಾಮರಾವ್, ಸಿ.ಬಿ. ಮೊನ್ನಯ್ಯ ಮತ್ತು ಎನ್.ಡಿ. ಶಂಕರ್‌ರವರ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಕಮ್ಯುನಿಸ್ಟ್ ಪಕ್ಷ ರೂಪುಗೊಳ್ಳಲಾರಂಭಿಸಿತ್ತು. ಈ ಕಮ್ಯುನಿಸ್ಟ್ ಯುವಕರು ಹತ್ತಿ ಗಿರಣಿ ಕಾರ್ಮಿಕರ ಮಧ್ಯೆ ಕೆಲಸ ಮಾಡತೊಡಗಿದರು. ಆಗ ಬಿನ್ನಿ ಮಿಲ್ಲಿನಲ್ಲಿ ಸುಮಾರು ೮ ಸಾವಿರ ಕಾರ್ಮಿಕರಿದ್ದರು. ಇವರು ಅತಿ ಹೆಚ್ಚಿನ ಶೋಷಣೆಗೆ ಗುರಿಯಾಗಿದ್ದುದಲ್ಲದೇ ಲೇಬರ್ ಅಸೋಸಿಯೇಷನ್ ಸ್ಥಾಪಿಸಲ್ಪಟ್ಟು ನಾಲ್ಕು ವರ್ಷಗಳಾಗಿದ್ದರೂ ಬಿನ್ನಿ ಮಾಲೀಕರು ಅದಕ್ಕಿನ್ನೂ ಮನ್ನಣೆ ನೀಡಿರಲಿಲ್ಲ. ಬೆಲೆ ಏರಿಕೆಯಿಂದಾಗಿ ಕಾರ್ಮಿಕರ ನೈಜ ಆದಾಯ ಕುಸಿದಿತ್ತು. ಈ ಪ್ರಶ್ನೆಗಳ ಕುರಿತು ಕಾರ್ಮಿಕರೊಂದಿಗೆ ಮಾತುಕತೆಗಳಿಗೆ ಕೂಡ ಮಾಲೀಕರು ಸಿದ್ಧರಿರಲಿಲ್ಲ. ಆದುದರಿಂದ ಡಿಸೆಂಬರ್ ೧೯೪೦ರಂದು ಬೋನಸ್ ಮತ್ತು ಯೂನಿಯನ್ ಮನ್ನಣೆಗಾಗಿ ೮೦೦೦ ಕಾರ್ಮಿಕರೂ ಮುಷ್ಕರ ಹೂಡಿದರು. ಮುಷ್ಕರವನ್ನು ನಡೆಸುವುದಕ್ಕೋಸ್ಕರ ಭಾಷ್ಯಂ ಅವರ ಅಧ್ಯಕ್ಷತೆಯಲ್ಲಿ ಎಂ.ಎಸ್. ರಾಮರಾವ್, ಎನ್.ಡಿ. ಶಂಕರ್, ಕೆ.ಎಸ್. ಕುಮಾರನ್ ಮತ್ತು ಇತರೆ ಕೆಲವರನ್ನೊಳಗೊಂಡ ಮುಷ್ಕರ ಸಮಿತಿಯೊಂದು ರಚಿಸಲ್ಪಟ್ಟಿತು. ಮುಷ್ಕರ ನೂರಕ್ಕೆ ನೂರರಷ್ಟು ಸಂಪೂರ್ಣವಾಗಿತ್ತು. ಅದನ್ನು ಮುರಿಯಲು ಸರ್ಕಾರ ಮತ್ತು ಮಾಲೀಕರು ಮಾಡಿದ ಪ್ರಯತ್ನಗಳೆಲ್ಲಾ ವಿಫಲವಾದವು. ಬಿನ್ನಿ ಮಿಲ್ ಬ್ರಿಟಿಷ್ ಮಾಲೀಕತ್ವಕ್ಕೆ ಸೇರಿದ್ದುದರಿಂದ ಯುದ್ಧ ವಿರೋಧಿ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಸ್ವಭಾವಗಳೆರಡೂ ಇದ್ದವು. ಆದಕಾರಣ ಅದಕ್ಕೆ ಎಲ್ಲಾ ಜನ ವಿಭಾಗಗಳಿಂದಲೂ ಪ್ರೋತ್ಸಾಹ ಮತ್ತು ಬೆಂಬಲಗಳು ದೊರೆತಿದ್ದವು. ಕೊನೆಗೆ ಮುಷ್ಕರದ ೨೩ನೇ ದಿನ ರಾಮರಾವ್, ಎನ್.ಡಿ. ಶಂಕರ್, ಕುಮಾರನ್ ಮತ್ತು ಕಾಂಗ್ರೆಸ್ಸಿನ ಪಿ.ಆರ್.ಕೆ. ಶರ್ಮ ಮುಂತಾದ ಕೆಲವು ನಾಯಕರನ್ನು ಸರ್ಕಾರ ಬಂಧಿಸಿತು. ಆದರೆ ಯಾವ ದಬ್ಬಾಳಿಕೆಗೂ ಕಾರ್ಮಿಕರು ಮಣಿಯಲಿಲ್ಲ. ೩೦ ದಿನಗಳ ಕಾಲ ಮುಷ್ಕರ ನಡೆದು ಕೊನೆಗೆ ಕಾರ್ಮಿಕರ ಕೇಳಿಕಗಳಿಗೆ ಆಡಳಿತ ಒಪ್ಪಲೇಬೇಕಾಯಿತು. ಈ ಚರ್ಚೆಯ ಕುರಿತು ಎಸ್.ಆರ್. ಭಟ್‌ರವರು 'ಕರ್ನಾಟಕದಲ್ಲಿ ಕಾರ್ಮಿಕ ಚಳವಳಿ ನಡೆದು ಬಂದ ದಾರಿ' ಎಂಬ ಗ್ರಂಥದಲ್ಲಿ ಸುವಿಸ್ತಾರವಾಗಿ ಚರ್ಚಿಸಿದ್ದಾರೆ.

೧೯೪೦ರಲ್ಲಿ ಬೆಂಗಳೂರು ಒಳಗೊಂಡಂತೆ ರಾಜ್ಯದ ಮೂರು ಕಡೆಗಳಲ್ಲಿ ಕಾರ್ಮಿಕ ಹಾಗೂ ಮಾಲೀಕರ ನಡುವೆ ವಿವಾದ ಏರ್ಪಟ್ಟಿತು. ಒಂದು ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ

ಕಾರ್ಖಾನೆಯಲ್ಲಿ ಕಾಣಿಸಿಕೊಂಡರೆ, ಮತ್ತೊಂದು ಮೈಸೂರಿನ ಸೆಂಟ್ರಲ್ ವರ್ಕ್‌ಶಾಪ್ ಮತ್ತು ಮೈಸೂರು ರೈಲ್ವೇಸ್‌ನಲ್ಲಿ ಹಾಗೂ ಕೊನೆಯದಾಗಿ ಬೆಂಗಳೂರಿನ ಬಿನ್ನಿಮಿಲ್‌ನಲ್ಲಿ ಕಾಣಿಸಿಕೊಂಡಿತು[೨೭]. ಮೂರೂ ಕಡೆಗಳಿಂದಲೂ ಸೇರಿ ಒಟ್ಟು ಸುಮಾರು ೧೫೦೦ ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

೧೯೪೧ರ ಜನವರಿ ೨೦ ರಿಂದ ಫೆಬ್ರವರಿ ೧೪ರವರೆಗೆ ನಡೆದ ಬಿನ್ನಿಮಿಲ್ಲಿನ ಮುಷ್ಕರ ಮೈಸೂರು ಸಂಸ್ಥಾನದ ಕಾರ್ಮಿಕ ಚಳವಳಿಯಲ್ಲಿ ಒಂದು ಪ್ರಮುಖ ಹಂತ. ಯುದ್ಧಕಾಲದಲ್ಲಿ ಈ ೨೫ ದಿನಗಳ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದ ಹೆಗ್ಗಳಿಕೆ ಶಂಕರ್ ಮತ್ತು ಅವರ ಆಪ್ತರಾದ ಎಂ.ಎಸ್. ರಾಮರಾವ್ ಹಾಗೂ ಕೆ.ಎಸ್. ಕುಮಾರನ್ ಅವರಿಗೆ ಸಲ್ಲುತ್ತದೆ. ೧೯೪೧ರ ಮುಷ್ಕರದ ಹಿನ್ನೆಲೆಯನ್ನು ಗಮನಿಸಿದರೆ, ೧೯೩೮ ರಿಂದಲೂ ಆಡಳಿತ ವರ್ಗವು ಷೇರುದಾರರಿಗೆ ನೀಡುವ ಡಿವಿಡೆಂಡಿನ ದರದಷ್ಟು ಮಾತ್ರ ಬೋನಸ್ ನೀಡುತ್ತೇವೆಂದು ಸೂಚಿಸುತ್ತಿತ್ತು. ಕಾರ್ಮಿಕರು ತಮಗೆ ಶೇಕಡಾ ೧೦ರಷ್ಟು ಬೋನಸ್ ನೀಡಬೇಕು ಎಂದು ಒತ್ತಾಯ ಮಾಡುತ್ತಿದ್ದರು. ದೊರೆಯುವ ಬೋನಸ್ಸಿನಲ್ಲಿ ಅನಿಶ್ಚಿತತೆ ಇರಬಾರದು ಎಂಬುದು ಅವರ ಉದ್ದೇಶವಾಗಿತ್ತು. ೧೯೪೦ರ ಜುಲೈನಲ್ಲಿ ಈ ಬೇಡಿಕೆಯ ಮೇಲೆ ಕಾರ್ಮಿಕರು ಮುಷ್ಕರ ಹೂಡಿ ದಿವಾನರಲ್ಲಿಗೆ ಮೆರವಣಿಗೆ ಹೋಗಿದ್ದರು. ಸರ್ಕಾರ ಈ ವಿಚಾರದಲ್ಲಿ ಆಡಳಿತದೊಂದಿಗೆ ಮಾತುಕತೆ ನಡೆಸಲಾಗುವುದು ಎಂಬ ಭರವಸೆ ದೊರೆತ ನಂತರ ಮುಷ್ಕರ ಹಿಂತೆಗೆದುಕೊಳ್ಳಲಾಯಿತು. ಮತ್ತೆ ಜನವರಿ ೧೯೪೧ರಲ್ಲಿ ಅರ್ಧವಾರ್ಷಿಕ ಬೋನಸ್ ನೀಡುವ ಸಮಯ ಬಂದಾಗ ಸರ್ಕಾರ ತನ್ನ ಮಾತಿನಂತೆ ಮಧ್ಯೆ ಪ್ರವೇಶಿಸಲಿಲ್ಲ. ಆಡಳಿತ ಡಿವಿಡೆಂಡ್–ಬೋನಸ್ ಸೂತ್ರವನ್ನು ಕೈ ಬಿಡಲಿಲ್ಲ. ಎಷ್ಟು ಬೋನಸ್ ನೀಡುತ್ತೇವೆಂದು ಸ್ಪಷ್ಟಪಡಿಸಲಿಲ್ಲ. ಜನವರಿ ೨೦ರಂದು ಮಿಲ್ಲಿನೊಳಗೆ ಒಬ್ಬ ಕಾರ್ಮಿಕ ಜೊತೆಗಾರರೊಂದಿಗೆ ಮುಷ್ಕರ ಕುರಿತು ಮಾತನಾಡುತ್ತಿದ್ದ, ಇದನ್ನು ಗಮನಿಸಿದ ಮೇಲ್ವಿಚಾರಕ ಅವನನ್ನು ಮ್ಯಾನೇಜರಲ್ಲಿಗೆ ಎಳೆದೊಯ್ದ, ಕೂಡಲೇ ಆ ವಿಭಾಗದ ಕಾರ್ಮಿಕರು ಮುಷ್ಕರ ಹೂಡಿದರು[೨೮]. ಎನ್.ಡಿ. ಶಂಕರ್ ಅವರು ಈ ಮುಷ್ಕರದ ನಾಯಕತ್ವ ವಹಿಸಿಕೊಂಡರು. ಎಂ.ಎಸ್. ರಾಮರಾವ್ ಹಾಗೂ ಕುಮಾರನ್ನು ಅವರೊಂದಿಗೆ ಚರ್ಚಿಸಿ ಕಾರ್ಯಕ್ರಮವನ್ನು ರೂಪಿಸಿದರು. ಈ ಕಾರ್ಯಕ್ರದಲ್ಲಿ ಮೂರು ಮುಖ್ಯ ಅಂಶಗಳಿದ್ದವು. ಮೊದಲನೆಯದು ಕಾರ್ಮಿಕರಲ್ಲಿ ಶಾಂತಿ, ಶಿಸ್ತು ಹಾಗೂ ಒಗ್ಗಟ್ಟನ್ನು ಕಾಪಾಡುವುದು. ಎರಡನೆಯದಾಗಿ ಸಾರ್ವಜನಿಕ ಸಹಾನುಭೂತಿಯನ್ನು ಸಂಘಟಿಸುವುದು. ಮೂರನೆಯ ಅಂಶ ಊಟಕ್ಕೆ ಗತಿಯಿಲ್ಲದಂತಾಗಿ ಕಾರ್ಮಿಕರು ನಿರುತ್ಸಾಹಗೊಳ್ಳದಂತೆ ತಡೆಯುವುದು[೨೯].

ಆಗಸ್ಟ್ ೨೭, ೧೯೪೭ರಲ್ಲಿ ಎಂ. ಶೇಷಾದ್ರಿಯವರು (ಉಪ ಆಯುಕ್ತರು), ಬಿ.ಟಿ. ಕೇಶವ ಅಯ್ಯಂಗಾರ್ (ಮೈಸೂರು ಸರ್ಕಾರದ ಮುಖ್ಯ ಕಾರ್ಯದರ್ಶಿ) ಅವರಿಗೆ ಭಾಷ್ಯಂ ವಿರುದ್ಧವಾಗಿ ಬರೆದ ಪತ್ರ ಈ ರೀತಿ ಇದೆ. 'ಜುಲೈ ೨೯, ೧೯೪೭ರಲ್ಲಿ ಕಾರ್ಮಿಕರ ಚಟುವಟಿಕೆಗಳಲ್ಲಿ ಅವರ ನಿಕಟ ಸಂಪರ್ಕವಿದ್ದುದರ ವಿಚಾರದಲ್ಲಿ ಭಾಷ್ಯಂ ಅವರ ವಿರುದ್ಧವಾಗಿ ತೆಗೆದುಕೊಂಡ ಕ್ರಮದ ಬಗ್ಗೆ ಹಾಗೂ ಐ.ಜಿ.ಪಿ. ಮತ್ತು ಕಾರ್ಮಿಕ ಆಯೋಗವನ್ನು ನಾನು ವಿಚಾರಿಸಿದ್ದರ ಬಗ್ಗೆ ಈ ಪತ್ರದಲ್ಲಿ ಹೇಳುತ್ತಿದ್ದೇನೆ. ಅದರ ಪ್ರಕಾರವಾಗಿ ಭಾಷ್ಯಂ ಅವರು ಕಾರ್ಮಿಕ ಸಭೆಗಳಲ್ಲಿ ಭಾಷಣ ಮಾಡಿದ್ದರೆ ಹಾಗೂ ಕಾರ್ಮಿಕರ ಮುಷ್ಕರಕ್ಕೆ ಮಾರ್ಗದರ್ಶನ ನೀಡಿದ್ದರೆ ನಾನು ಎಚ್ಚರಿಕೆಯನ್ನು ನೀಡಿದ್ದೇನೆ. ಹೀಗೆ ಮಾಡಿದ್ದೇ ಆದರೆ ಪರಿಣಾಮಕಾರಿಯಾದ ಕ್ರಮವನ್ನು ಇವರ ವಿರುದ್ಧವಾಗಿ ತೆಗೆದುಕೊಳ್ಳಬೇಕು. ಆದರೆ ಮುಷ್ಕರಕ್ಕೆ ಉತ್ತೇಜನವನ್ನು ನೀಡುವ ಉದ್ದೇಶವನ್ನು ಅವರು ಹೊಂದಿಲ್ಲ ಎಂಬುದಾಗಿ ನನಗೆ ಭರವಸೆಯನ್ನು ನೀಡಿದ್ದರು. ಅಂತೆಯೇ ಅವರು ಯಾವಾಗಲೂ ಕಾರ್ಮಿಕರ ಸಮಸ್ಯೆಗಳ ವಿಚಾರವಾಗಿ ಶಾಂತಿಯುತವಾಗಿ ಬಗೆಹರಿಸಲು ಸದಾ ಸಿದ್ದರು. ಭಾಷ್ಯಂ ಬೆಂಗಳೂರು ಅಥವಾ ಬೇರೆ ಕಡೆಗಳಲ್ಲಿ ಕಾರ್ಮಿಕರ ಸಭೆಗಳಲ್ಲಿ ಭಾಗವಹಿಸುವಂತಿಲ್ಲ. ಅವರು ಬೇರೆ ಕಾರಣಗಳನ್ನು ನೀಡಿ ಈ ಸಭೆಗಳಿಂದ ಸ್ವತಃ ಗೈರು ಹಾಜರಾಗಬೇಕು. ಪೋಲೀಸ್ ವರದಿಯ ಪ್ರತಿಗಳನ್ನು ಈಗಾಗಲೇ ನಿಮಗೆ ಕಳುಹಿಸಿದ್ದೇನೆ. ಕಾರ್ಮಿಕ ಸಭೆಗಳಲ್ಲಿನ ಭಾಷಣಗಳಲ್ಲಿ ಸುಧಾರಣೆಯನ್ನು ತರಲು ಇದು ಗಮನಿಸುತ್ತಿರುತ್ತದೆ. ವೈಯಕ್ತಿಕವಾಗಿ ಕಾನೂನು ಮಂತ್ರಿಗಳಿಗೆ ಮತ್ತು ಭಾಷ್ಯಂ ವಿರುದ್ಧವಾಗಿ ಯಾವುದೇ ಸಂದರ್ಭಗಳಲ್ಲಿ ನಿಗದಿತ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ನಾನು ಈಗಾಗಲೇ ಈ ಸಂಗತಿಗಳನ್ನು ವರದಿ ಮಾಡಿದ್ದೇನೆ. ನಾನು ಸರ್ಕಾರದ ಸೂಚನೆಗಳಿಗಾಗಿ ಕಾಯುತ್ತಿದ್ದೇನೆ' ಎಂದು ತಿಳಿಸಿದ್ದರು.

೧೯೪೭ರಲ್ಲಿ ರಾಜ್ಯದಲ್ಲಿ ಹನ್ನೊಂದು ಕಾರ್ಮಿಕ ವಿವಾದಗಳು ಕಾಣಿಸಿಕೊಂಡಿದ್ದು ಅದರಲ್ಲಿ ಒಂಭತ್ತು ಬೆಂಗಳೂರು ನಗರದ ಜವಳಿ ಗಿರಣಿಗಳಲ್ಲಿಯೇ ಕಂಡುಬಂದಿದ್ದು ಕುತೂಹಲಕರವಾದ ಸಂಗತಿ. ಕೋಲಾರ ಚಿನ್ನದ ಗಣಿಯಲ್ಲಿ ಎರಡು ವಿವಾದಗಳು ಉಂಟಾಗಿತ್ತು[೩೦]. ಅಂದರೆ ಈ ವೇಳೆಗೆ ಕೋಲಾರವನ್ನು ಹಿಂದಿಕ್ಕಿ ಕಾರ್ಮಿಕರ ಸೂಕ್ಷ್ಮ ಪ್ರದೇಶ ಎಂಬ ಬೆಳವಣಿಗೆ ಕಂಡುಬಂದಿತ್ತು. ಆ ಒಂಭತ್ತು ವಿವಾದಗಳು ಎಲ್ಲೆಲ್ಲಿ ಕಾಣಿಸಿಕೊಂಡಿದ್ದವೆಂದರೆ ಬಿನ್ನಿಮಿಲ್‌ನಲ್ಲಿ ಎರಡು, ಹೆಬ್ಬಾಳದಲ್ಲಿನ ಶಾಖೆಯಲ್ಲಿ ಒಂದು, ಮಿನರ್ವ ಮಿಲ್ಲಿನಲ್ಲಿ ಮೂರು, ಮೈಸೂರು ಮಿಲ್ಲಿನಲ್ಲಿ ಎರಡು ಹಾಗೂ ಕೃಷ್ಣ

ವೀವಿಂಗ್ ಮಿಲ್ಲಿನಲ್ಲಿ ಒಂದು[೩೧]. ಇವುಗಳಲ್ಲಿ ಕೃಷ್ಣ ವೀವಿಂಗ್ ಮಿಲ್ಲಿನಲ್ಲಿನ ವಿವಾದವನ್ನು ಹೊರತುಪಡಿಸಿ (೧೧/೨ ದಿನಗಳವರೆಗೆ) ಮಿಕ್ಕೆಲ್ಲಾ ಕಡೆಗಳಲ್ಲಿ ದೀರ್ಘಾವಧಿಯವರೆಗೆ ಮುಷ್ಕರ ಮುಂದುವರೆದಿತ್ತು. ಅಂದರೆ ೨೬ ದಿನಗಳಿಂದ ೩೦ ದಿನಗಳವರೆಗೆ. ಒಟ್ಟಾರೆ ಈ ಮುಷ್ಕರ ಅಥವಾ ವಿವಾದಗಳಲ್ಲಿ ೫೫೮೯೩ ಕಾರ್ಮಿಕರು ಪಾಲ್ಗೊಂಡಿದ್ದರು[೩೨].

ಮೈಸೂರು ಮಹಾರಾಜ ಮಿಲ್ಲು ಹಾಗೂ ಮಿನರ್ವ ಮಿಲ್ಲು ಮತ್ತು ಬಿನ್ನಿಮಿಲ್ಲುಗಳಲ್ಲಿ ಕಾಣಿಸಿಕೊಂಡ ಮುಷ್ಕರವು ಬಹಳ ಗಮನಾರ್ಹವಾಗಿದ್ದು ಅದರ ಬಗ್ಗೆ ಸ್ವಲ್ಪ ಚರ್ಚಿಸೋಣ. ಕಾರ್ಮಿಕರು ಕೂಲಿಯನ್ನು ಹೆಚ್ಚಿಸುವ ವಿಚಾರ ಬೇಡಿಕೆ ಸಲ್ಲಿಸಿದಾಗ ಆಡಳಿತವು ಇದಕ್ಕೆ ಯಾವುದೇ ಸೊಪ್ಪು ಹಾಕಲಿಲ್ಲ. ಬದಲಾಗಿ ಬೀಗ ಮುದ್ರೆಯನ್ನು ಘೋಷಿಸಿತು. ಪರಿಣಾಮವಾಗಿ ಈ ಮುಷ್ಕರದಲ್ಲಿ ೯೩೧೮ ಕಾರ್ಮಿಕರು ಭಾಗಿಯಾಗಿದ್ದರು ಹಾಗೂ ೬,೨೫೨,೯೮೨ ಗಂಟೆಗಳ ಕೆಲಸದ ಸಮಯ ನಷ್ಟವಾಗಿತ್ತು[೩೩]. ಇನ್ನೊಂದು ಕಡೆ ಈ ವರ್ಷದಲ್ಲಿ ಬಿನ್ನಿಮಿಲ್ಲಿನಲ್ಲಿ ಅರ್ಧ ವರ್ಷದ ಬೋನಸ್ ವಿಚಾರವಾಗಿ ಕಾರ್ಮಿಕರು ಮುಷ್ಕರ ಹೂಡಿದರು. ಪರಿಣಾಮ ದೊಡ್ಡ ಪ್ರಮಾಣದ ನಷ್ಟವನ್ನು ಕಾಣಬೇಕಾಯಿತು. ಕೂಲಿಯಲ್ಲಿ ಕಾರ್ಮಿಕರಿಗೆ ನಷ್ಟವಾದರೆ ಇನ್ನೊಂದು ಕಡೆ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯನ್ನು ಕಾಣಬೇಕಾಯಿತು. ಅದಲ್ಲದೆ ಈ ಸಮಯದಲ್ಲಿ ೨ನೇ ಮಹಾ ಯುದ್ಧವು ನಡೆಯುತ್ತಿದ್ದರಿಂದ ಇದರ ಬಿಸಿ ವಸಾಹತುಶಾಹಿಗೆ ಸ್ವಲ್ಪ ಹೆಚ್ಚಿಗೆಯೇ ತಟ್ಟಿತು. ಈ ಮುಷ್ಕರದಲ್ಲಿ ಒಟ್ಟು ೧೦೨೧೨ ಕಾರ್ಮಿಕರು ಪಾಲ್ಗೊಂಡಿದ್ದು, ೧,೧೯೦,೮೭೨ ಗಂಟೆಗಳ ಕೆಲಸದ ವೇಳೆಯು ನಷ್ಟವಾಗಿತ್ತು[೩೪]. (ನಷ್ಟವಾದ ಕೆಲಸದ ವೇಳೆ ಅಂದರೆ ಒಬ್ಬರಿಗೆ ದಿನದ ೮ ಗಂಟೆ ನಷ್ಟವಾದರೆ ೧೦ ಸಾವಿರ ಕಾರ್ಮಿಕರು x ೮ ಗಂಟೆ ಎಂದು ಲೆಕ್ಕ ಹಾಕಿಕೊಳ್ಳಬೇಕು).

## ೬.೨. ಅಂಬೇಡ್ಕರ್ ಪ್ರಭಾವ ಹಾಗೂ ಕಾರ್ಮಿಕ ಚಳವಳಿಯ ಅಸ್ಮಿತೆ

೧೯೩೦ರ ದಶಕವು ಕಾರ್ಮಿಕ ಚಳವಳಿಯ ಚರಿತ್ರೆಯಲ್ಲಿ ಗಮನಾರ್ಹವಾದ ಬದಲಾವಣೆಯನ್ನು ತಂದಿತು. ಈ ವೇಳೆಯಲ್ಲಿ ಅಂಬೇಡ್ಕರರು ಕಾರ್ಮಿಕರನ್ನು ಒಗ್ಗೂಡಿಸುವ ಪ್ರಯತ್ನಕ್ಕೆ ಮುಂದಾದರು. ಇವರು ಕಮ್ಯೂನಿಸ್ಟ್ ಪ್ರೇರಣೆಯಿಂದ ಕೂಡಿರುವ ಕಾರ್ಮಿಕರ ಮುಷ್ಕರಗಳನ್ನು ವಿರೋಧಿಸಲಾರಂಭಿಸಿದರು. ಏಕೆಂದರೆ ನಿಮ್ನ ವರ್ಗಗಳ ಕಾರ್ಮಿಕರು ಅಸ್ಪೃಶ್ಯರು ಎಂಬ ಕಾರಣಕ್ಕೆ ಗಿರಣಿಗಳ ಲಾಭದಾಯಕ ವಿಭಾಗಗಳಿಂದ ಅವರನ್ನು ದೂರವಿಟ್ಟಿದ್ದರು[೩೫]. ಹೀಗಾಗಿ ಏಪ್ರಿಲ್ ೨೯ ೧೯೨೯ರಂದು ಬಾಂಬೆಯ ದಾಮೋದರ ಸಭಾಂಗಣದಲ್ಲಿ ನಡೆದ ಟೆಕ್ಸ್‌ಟೈಲ್ ಲೇಬರ್

ಯೂನಿಯನ್‌ನ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿದ ಬಾಬಾ ಸಾಹೇಬರು ಕಮ್ಯೂನಿಸ್ಟರ ಒಡಗೂಡಿ ಕಾರ್ಮಿಕರು ಮುಷ್ಕರ ನಡೆಸುವುದನ್ನು ವಿರೋಧಿಸುವ ದೃಢ ಸಂಕಲ್ಪವನ್ನು ಕೈಗೊಂಡರು[೩೬]. ಅಂಬೇಡ್ಕರ್ 'ಸ್ವತಂತ್ರ ಕಾರ್ಮಿಕ ಪಕ್ಷ'ವನ್ನು ಕಟ್ಟಿ ಅಸ್ಪೃಶ್ಯರನ್ನೂ ಒಳಗೊಂಡಂತೆ ಎಲ್ಲಾ ಶೋಷಿತರನ್ನು ಸಂಘಟಿಸಲು ಮುಂದಾದರು. ದೀನದಲಿತರನ್ನು, ಕಾರ್ಮಿಕ, ಕೃಷಿ, ಕೂಲಿಕಾರರನ್ನೂ ವಿಶೇಷವಾಗಿ ಪ್ರತಿನಿಧಿಸುವ ಯಾವುದೇ ಸಂಘಟನೆಯಿಲ್ಲದ್ದೂ ಆ ವರ್ಗಗಳ ರೂವಾರಿಯಾದ ಅಂಬೇಡ್ಕರರಿಗೆ ಒಂದು ದೊಡ್ಡ ಕೊರತೆಯಾಗಿ ಕಂಡದ್ದು ಸಹಜ. ಹೀಗಾಗಿ ಜಾತ್ಯಾತೀತವಾದ 'ಇಂಡಿಪೆಂಡೆಂಟ್ ಲೇಬರ್ ಪಾರ್ಟಿ'ಯನ್ನು ೧೯೩೬ರ ಅಂತ್ಯದಲ್ಲಿ ಹುಟ್ಟು ಹಾಕಿದರು[೩೭]. ಈ ಪಕ್ಷದ ಸಾಮಾನ್ಯ ಸಭೆಯು ಆಗಸ್ಟ್ ೭ ೧೯೩೭ರಂದು ಬಾಂಬೆಯ ನಾಗಪದ ಎಂಬಲ್ಲಿ ನಡೆಯಿತು. ಇದರ ಅಧ್ಯಕ್ಷರಾಗಿ ಅಂಬೇಡ್ಕರ್ ಚುನಾಯಿತರಾದರು[೩೮]. ಈ ಪಕ್ಷ ರೈತ, ಕಾರ್ಮಿಕರ ಹಿತ ರಕ್ಷಣೆ ಮಾಡುವಂತ ಒಂದು ಪ್ರಣಾಳಿಕೆಯನ್ನು ಹೊರಡಿಸಿತು. ೧೯೩೬ರಿಂದ ೧೯೪೦ರವರೆಗೆ ಅಂಬೇಡ್ಕರ್ ಬಾಂಬೆ ಪ್ರದೇಶದ ರೈತ ಕಾರ್ಮಿಕ ಚಳವಳಿಯ ಮುಂಚೂಣಿಯಲ್ಲಿದ್ದರು. ೧೯೩೭ರ ಅಕ್ಟೋಬರ್‌ನಲ್ಲಿ ಮಸೂರ್‌ನಲ್ಲಿ ನಡೆದ 'ನಿಮ್ನ ವರ್ಗಗಳ ಜಿಲ್ಲಾ ಸಮಾವೇಶ'ದಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ 'ಕೇವಲ ಗಾಂಧಿ ಒಬ್ಬನೇ ಶ್ರಮಿಕ ವರ್ಗ ಹಾಗೂ ಬಡವರ ಹಿತಾಸಕ್ತಿಯನ್ನು ಪ್ರತಿನಿಧಿಸುವ ವ್ಯಕ್ತಿಯಲ್ಲ ಅಲ್ಲದೇ ಕಾಂಗ್ರೆಸ್ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಆದರ್ಶವನ್ನು ಘೋಷಿಸುವಂತಹ ಕೆಚ್ಚೆದೆಯನ್ನು ಹೊಂದಿಲ್ಲ'[೩೯] ಎಂಬುದಾಗಿ ಟೀಕಿಸಿದರು. ಕಾಂಗ್ರೆಸ್ ಶೋಷಕರು–ಶೋಷಿತರು ಒಟ್ಟಿಗೆ ಇರುವ ಒಂದು ಸಂಸ್ಥೆಯೆಂದೂ ಟೀಕಿಸುತ್ತಾ ಉತ್ಪಾದನಾಂಗಗಳ ಮೇಲೆ ಕೆಲವೇ ಜನರ ಹಿಡಿತವಿದೆ. ಆದ್ದರಿಂದ ಸಮಾನತೆ ಸಾಧ್ಯವಾಗುತ್ತಿಲ್ಲ. ಅವು ಸಮಾಜದ ಮತ್ತು ಪ್ರಭುತ್ವದ ನಿಯಂತ್ರಣಕ್ಕೆ ಒಳಪಡಬೇಕು, ಆಗ ಮಾತ್ರ ಸಮಾನತೆಯ ಹಾದಿ ಸುಗಮ[೪೦]. ಅದಕ್ಕಾಗಿ ಹೋರಾಟ ಅವಶ್ಯವೆಂದು ರೈತ ಕಾರ್ಮಿಕ ವರ್ಗವನ್ನು ಹುರಿದುಂಬಿಸಲಾರಂಭಿಸಿದದರು.

ಅಂಬೇಡ್ಕರ್ ಅವರ ಪ್ರಕಾರ ದೇಶದಲ್ಲಿ ಕಾರ್ಮಿಕ ವರ್ಗಗಳಿಗೆ ಇಬ್ಬರು ಶತೃಗಳಿದ್ದಾರೆ. ಅವರು ಬ್ರಾಹ್ಮಣಶಾಹಿ ಹಾಗೂ ಬಂಡವಾಳಶಾಹಿ. ಬ್ರಾಹ್ಮಣಶಾಹಿ ಎಂದರೆ ಬ್ರಾಹ್ಮಣ ಸಮುದಾಯವಲ್ಲ ಬದಲಾಗಿ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಸ್ಪೂರ್ತಿಯನ್ನು ನಿರಕರಿಸುವುದೇ ಬ್ರಾಹ್ಮಣಶಾಹಿ[೪೧]. ಹೀಗಾಗಿ ಈ ಲಕ್ಷಣ ಯಾವುದೇ ವರ್ಗಗಳಲ್ಲಿ ಕಂಡುಬಂದರೂ ಅದು ಬ್ರಾಹ್ಮಣಶಾಹಿಯೇ ಆಗಿರುತ್ತದೆ. ಕಾರ್ಮಿಕರ ಸಮಸ್ಯೆಗಳ ಕುರಿತು ಚರ್ಚಿಸುವಾಗಲೆಲ್ಲಾ

ಅಂಬೇಡ್ಕರರ ಮನದಲ್ಲಿ ಕೇವಲ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರಷ್ಟೇ ಅಲ್ಲದೇ ಕೃಷಿ ಕಾರ್ಮಿಕರೂ ಇರುತ್ತಿದ್ದರು[೪೨]. ಈ ಎರಡೂ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಎಲ್ಲಾ ಬಗೆಯ ಸೌಲಭ್ಯಗಳಾದ ಭವಿಷ್ಯ ನಿಧಿ, ಜೀವ ವಿಮೆ, ನಷ್ಟ ಪರಿಹಾರ, ಪಿಂಚಣಿ ಇತ್ಯಾದಿ ಸೌಲಭ್ಯಗಳು ಸಿಗುವಂತಾಗಬೇಕು ಎಂದು ವಾದಿಸುತ್ತಿದ್ದರು.

ಜಂಟಿ ಕಾರ್ಮಿಕ ಅಧಿವೇಶನವು ಆಗಸ್ಟ್ ೭ ೧೯೪೨ರಂದು ನವದೆಹಲಿಯಲ್ಲಿ ನಡೆದ ಸಂದರ್ಭದಲ್ಲಿ ಅಂಬೇಡ್ಕರರು ಭಾರತ ಸರ್ಕಾರದ ವತಿಯಿಂದ ಕಾರ್ಮಿಕ ಸದಸ್ಯರಾಗಿ ಪಾಲ್ಗೊಂಡಿರುತ್ತಾರೆ. ಅಲ್ಲಿ ಅಧಿವೇಶನವನ್ನು ಉದ್ದೇಶಿಸಿ ಈ ರೀತಿ ಮಾತನಾಡುತ್ತಾರೆ. 'ನವದೆಹಲಿಯಲ್ಲಿ ನಡೆದ ಹಿಂದಿನ ಮೂರು ಕಾರ್ಮಿಕ ಅಧಿವೇಶನಗಳಿಗಿಂತ (ಮೊದಲನೆಯ ಅಧಿವೇಶನ ೧೯೪೦ ಜನವರಿ ೨೨-೨೩, ಎರಡನೆಯದು ೧೯೪೧ ಜನವರಿ ೨೭-೨೮ ಹಾಗೂ ಮೂರನೆಯದು ೧೯೪೨ ಜನವರಿ ೩೦-೩೧) ಇದು ಬಹಳ ವಿಶಿಷ್ಟತೆಯನ್ನು ಹೊಂದಿದೆ. ಏಕೆಂದರೆ ಒಟ್ಟಾರೆ ಕಾರ್ಮಿಕ ಅಧಿವೇಶನದ ಚರಿತ್ರೆಯಲ್ಲಿಯೇ ಮೊದಲ ಬಾರಿಗೆ ಕಾರ್ಮಿಕರು ಹಾಗೂ ಮಾಲೀಕರ ಪ್ರತಿನಿಧಿಗಳು ಮುಖಾಮುಖಿಯಾಗಿ ಈ ಜಂಟಿ ಅಧಿವೇಶನದಲ್ಲಿ ಪಾಲ್ಗೊಂಡಿದ್ದಾರೆ[೪೩]. ಮುಂದುವರೆದು ಅವರು ಏಕರೂಪವಿಲ್ಲದ ಕಾರ್ಮಿಕ ಶಾಸನದಿಂದ ಉಂಟಾಗುವ ಅಪಾಯಗಳ ಬಗ್ಗೆಯೂ ಗಮನ ಹರಿಸಿದರು'[೪೪]. ಹೀಗಾಗಿ ಈ ಸಂದರ್ಭದಲ್ಲಿ ಅಂಬೇಡ್ಕರ್ ಕಾರ್ಮಿಕರ ನೇತಾರನಾಗಿ ಭಾಸವಾಗುತ್ತಾರೆ.

ಭಾರತ ಸರ್ಕಾರವು ಏಕೀಕೃತ ಮಾದರಿಯ ಸರ್ಕಾರ ವ್ಯವಸ್ಥೆಯನ್ನು ಹೊಂದಿರುವುದರಿಂದ ಏಕರೀತಿಯ ಕಾರ್ಮಿಕ ಶಾಸನ ಜಾರಿಗೆ ತರುವುದು ಅಷ್ಟೇನೂ ಕಷ್ಟವಲ್ಲ[೪೫] ಎಂಬ ಸಲಹೆಯನ್ನು ನೀಡಿದರು. ಇದರ ಅರ್ಥ ಅಖಂಡ ಭಾರತಕ್ಕೆ ಒಂದೇ ರೀತಿಯ ಕಾರ್ಮಿಕ ಕಾಯಿದೆ ಜಾರಿಯಾಗಬೇಕು ಎಂಬ ಉದ್ದೇಶವನ್ನು ಅಂಬೇಡ್ಕರ್ ಹೊಂದಿದ್ದರು. ಇದರ ಪ್ರಕಾರವಾಗಿ ಎಲ್ಲಾ ಸ್ಥಳೀಯ ರಾಜರ ಆಳ್ವಿಕೆಗೆ ಒಳಪಟ್ಟ ಸಂಸ್ಥಾನಗಳೂ ಈ ಕಾನೂನಿನ ಅಡಿಯಲ್ಲಿ ಬರುತ್ತಿದ್ದವು. ಈ ದೃಷ್ಟಿಕೋನವು ಅಖಂಡ ಭಾರತವನ್ನು ಒಂದೇ ನಿಯಮದ ಅಡಿಯಲ್ಲಿ ತರಬೇಕು ಎಂದು ಯೋಚಿಸುವ ೨೦ನೇ ಶತಮಾನದ ಬುದ್ಧಿಜೀವಿಗಳಲ್ಲಿ ಅಂಬೇಡ್ಕರ್ ಮೊದಲ ಸಾಲಿನಲ್ಲಿ ನಿಲ್ಲುತ್ತಿದ್ದರು ಎಂಬ ಚರ್ಚೆಗೆ ಎಡೆಮಾಡಿಕೊಡುತ್ತದೆ. ಇಲ್ಲಿ ಈ ಚರ್ಚೆಯನ್ನು ಬೆಳೆಸುತ್ತಿರುವ ಉದ್ದೇಶ ಅಂಬೇಡ್ಕರ್ ಒಂದು ಸಂದರ್ಭದಲ್ಲಿ ಈ ರೀತಿ ಹೇಳಿದ್ದರು. 'ದೇಶದಲ್ಲಿನ ಪ್ರಾಂತೀಯ ಸ್ವಾತಂತ್ರ್ಯವು

ಕಾರ್ಮಿಕ ಶಾಸನಕ್ಕೆ ಬೆದರಿಕೆಯನ್ನು ಒಡ್ಡುತ್ತಿದೆ[೪೬]. ಹೀಗಾಗಿ ಅಂಬೇಡ್ಕರ್ ಭಾರತದ ಬಹುಸಂಖ್ಯಾತರಾದ ಕಾಮಿಕ ಹಾಗೂ ರೈತರ ಕುರಿತು ಯೋಚಿಸಿದ ಬಹುದೊಡ್ಡ ರಾಷ್ಟ್ರೀಯವಾದಿ ಎಂದೇ ಅಧಿಕಾರಯುತವಾಗಿ ಸಮರ್ಥನೆ ಮಾಡಿಕೊಳ್ಳಬಹುದು.

ಎರಡನೇ ಮಹಯುದ್ಧದ ಸಂದರ್ಭದಲ್ಲಿ ಕೈಗಾರಿಕಾ ವಿವಾದಗಳ ಬಗ್ಗೆ ಮಾತನಾಡುತ್ತಾ ಕಾರ್ಮಿಕ ಕಲ್ಯಾಣ ಹಾಗೂ ಕಾರ್ಮಿಕ ನೈತಿಕತೆಯು ಪ್ರಸ್ತುತ ಅಂಶವಾಗಿದ್ದರೂ "ದೇಶ ಮುಖ್ಯ" ಎಂಬುದಾಗಿ ಹೇಳುತ್ತಿದ್ದರು[೪೭]. ಯುದ್ಧದ ಸಂದರ್ಭದಲ್ಲಿ ಕಾರ್ಮಿಕರು ಅನೇಕ ಸೌಲಭ್ಯಗಳನ್ನು ಪಡೆದಿದ್ದಾರೆ ; ಅದರಲ್ಲಿ ಯಾವುದೇ ಸಂದೇಹವಿಲ್ಲ. ಮುಖ್ಯವಾಗಿ ಕಾರ್ಮಿಕರು ಕಾನೂನಿನ ಮೂಲಕ ಭದ್ರತೆಯನ್ನು ಹೊಂದಿದ್ದಾರೆ[೪೮]. ಈ ಮೂಲಕ ಅಂಬೇಡ್ಕರ್ ಯುದ್ಧವನ್ನು ಕಾರ್ಮಿಕರ ಹಿನ್ನೆಲೆಯಿಂದ ಸಮರ್ಥಿಸಿಕೊಳ್ಳುತ್ತಾರೆ.

ಅಂಬೇಡ್ಕರ್ ಅವರ ಪ್ರಕಾರ ಕಾರ್ಮಿಕರ ಸ್ವಾತಂತ್ರ್ಯದ ಪರಿಕಲ್ಪನೆ ಸಕಾರಾತ್ಮಕವಾದುದಾಗಿದೆ. ಸ್ವಾತಂತ್ರ್ಯವು ಜನರಿಂದ ಆಯ್ಕೆಯಾದ ಸರ್ಕಾರದ ಒಡನಾಟವನ್ನು ಹೊಂದಿದೆ. ಕಾರ್ಮಿಕರ ಅಭಿಪ್ರಾಯದಲ್ಲಿ ಜನರಿಂದಾದ ಸರ್ಕಾರವೆಂದರೆ ಸಂಸತ್ತಿನ ಪ್ರಜಾಪ್ರಭುತ್ವವಲ್ಲ, ಬದಲಾಗಿ ಸಮಾನ ಅವಕಾಶಗಳ ಹಕ್ಕುಗಳನ್ನು ಒಳಗೊಂಡಿರುವ ಕಾರ್ಮಿಕರ ಸ್ವಾತಂತ್ರ್ಯವನ್ನು ಕಾಪಾಡುವ ಸರ್ಕಾರ[೪೯] ಎಂಬುದಾಗಿ ವಾದಿಸುತ್ತಾರೆ. ಮುಂದುವರೆದು ಕಾರ್ಮಿಕರ ಒಂದು ಪರ್ಯಾಯವಾದ ವ್ಯವಸ್ಥೆಯನ್ನು ಕಂಡುಕೊಳ್ಳಬೇಕಾಗಿದೆ. ಈ "ಹೊಸ ವ್ಯವಸ್ಥೆ"ಯನ್ನು ಫ್ರಾನ್ಸಿನ ಮಹಾಕ್ರಾಂತಿಯ ಬೇರುಗಳಲ್ಲಿ ಹುಡುಕಾಟ ಮಾಡಬೇಕು[೫೦] ಎಂದು ಕಾರ್ಮಿಕರಿಂದ ಕೂಡಿದ ಸಮಾಜದ ಒಂದು ವ್ಯವಸ್ಥೆಯ ಉಗಮದ ಬಗ್ಗೆ ಚರ್ಚೆಯೆತ್ತುತ್ತಾರೆ.

ರಾಷ್ಟ್ರೀಯತೆ ಹಾಗೂ ಕಾರ್ಮಿಕರು ಎಂಬ ಚರ್ಚೆಯನ್ನು ಎತ್ತುತ್ತಾ ಕಾರ್ಮಿಕರ ಬಹಳ ಗಂಭೀರವಾದ ಎದುರಾಳಿಗಳೆಂದರೆ ರಾಷ್ಟ್ರೀಯವಾದಿಗಳು. ಏಕೆಂದರೆ ಕಾರ್ಮಿಕರ ಮನೋವೃತ್ತಿ ಭಾರತದ ರಾಷ್ಟ್ರೀಯತೆಗೆ ಅಸಮಂಜಸ ಹಾಗೂ ಪೆಟ್ಟನ್ನು ನೀಡುತ್ತದೆ ಎಂಬುದು ಕಾರ್ಮಿಕರ ಕುರಿತು ರಾಷ್ಟ್ರೀಯವಾದಿಗಳ ಆರೋಪ. ರಾಷ್ಟ್ರೀಯವಾದಿಗಳ ಮತ್ತೊಂದು ಅಸಮ್ಮತಿಯೆಂದರೆ ಕಾರ್ಮಿಕರು ಭಾರತದ ಸ್ವಾತಂತ್ರ್ಯ ಕುರಿತು ಯಾವುದೇ ಭರವಸೆ ಹೊಂದದೆ ಬ್ರಿಟಿಷರ ಪರವಾಗಿ ಯುದ್ಧದಲ್ಲಿ ಹೋರಾಡಲು ಒಪ್ಪಿಕೊಂಡಿದ್ದಾರೆ ಎಂಬುದಾಗಿ ಆರೋಪಿಸುತ್ತಾರೆ.[೫೧]. ಆದರೆ ಅಂಬೇಡ್ಕರ್ ಈ ಸಂದರ್ಭದಲ್ಲಿ ಕಾರ್ಮಿಕರ ಪರವಾದ ನಿಲುವನ್ನು ತಾಳುತ್ತಾ ಈ ರೀತಿ ಹೇಳುತ್ತಾರೆ. ರಾಷ್ಟ್ರೀಯತೆಯ

ಕುರಿತಾಗಿ ಕಾರ್ಮಿಕರ ಮನೋವೃತ್ತಿ ಹಾಗೂ ನಿಲುವು ಸ್ಪಷ್ಟವಾಗಿದೆ. ಕಾರ್ಮಿಕರು ರಾಷ್ಟ್ರೀಯತೆಯ ಮಾಂತ್ರಿಕತೆ ಅಥವಾ ಗುಂಗನ್ನು ಸೃಷ್ಟಿಸುವ ಯಾವುದೇ ಸಿದ್ಧತೆ ಅಥವಾ ಪೂರ್ವ ತಯಾರಿಯನ್ನು ಮಾಡಿಕೊಂಡಿಲ್ಲ. ಗತದ ಪ್ರಾಚೀನತೆಯನ್ನು ಆರಾಧಿಸುವುದನ್ನೇ ರಾಷ್ಟ್ರೀಯತೆ ಎನ್ನುವುದಾದರೆ ಅಂತಹ ರಾಷ್ಟ್ರೀಯತೆಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಎಂಬುದಾಗಿ ಪ್ರತಿಪಾದಿಸುತ್ತಾರೆ. ಈ ಒಂದು ಸಾಂದರ್ಭಿಕವಾದ ಹೇಳಿಕೆ ಹಾಗೂ ತಳೆದ ನಿಲುವುಗಳು ಅಂಬೇಡ್ಕರ್ ಅವರನ್ನು ಬಹುದೊಡ್ಡ ರಾಷ್ಟ್ರೀಯವಾದಿ ಎಂಬ ಕೀರ್ತಿಗೆ ಭಾಜನವಾಗಿಸುತ್ತದೆ.

ಅಂಬೇಡ್ಕರ್ ಅವರು ಕಾರ್ಮಿಕರು ಹಾಗೂ ಯುದ್ಧ ಎಂಬ ವಿಷಯ ಕುರಿತು ಚರ್ಚೆ ಮಾಡುತ್ತಾ, ಯುದ್ಧ ಹಳೆಯ ವ್ಯವಸ್ಥೆಯನ್ನು ನಾಶ ಮಾಡುತ್ತಾ ಹೊಸ ವ್ಯವಸ್ಥೆಗೆ ಅಡಿಪಾಯ ಹಾಕುತ್ತದೆ. ಹಳೆಯ ವ್ಯವಸ್ಥೆ ಎಂದರೆ 'ನಾಜಿ ವ್ಯವಸ್ಥೆ' ಹಾಗೂ 'ಹೊಸ ನಾಜಿ ವ್ಯವಸ್ಥೆ' ಎಂಬುದಾಗಿ ಸ್ಪಷ್ಟಪಡಿಸುತ್ತಾರೆ[೫೨]. ಹೊಸ ವ್ಯವಸ್ಥೆಯ ಸ್ಥಾಪನೆಯಲ್ಲಿ ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವವಿದೆ ಎಂಬುದಾಗಿ ಪ್ರಸ್ತಾಪಿಸುತ್ತಾ ಯುದ್ಧದ ಮೂಲಕ ಬ್ರಾಹ್ಮಣಶಾಹಿ ವ್ಯವಸ್ಥೆಯು ನಾಶವಾಗುವುದರ ಕಡೆಗೆ ಬೆರಳು ಮಾಡಿ ತೋರಿಸುತ್ತಾರೆ. ಅಂದರೆ ಇಲ್ಲಿ ಅಂಬೇಡ್ಕರ್ ಯುದ್ಧವನ್ನು ಜನ ಹಾಗೂ ಸಂಪತ್ತಿನ ನಾಶದ ಸಂಕೇತ ಎಂದು ಪರಿಗಣಿಸದೆ ಇದಕ್ಕೆ ವಿಶಾಲವಾದ ತಾತ್ವಿಕ ತಳಹದಿಯನ್ನು ನೀಡಿದ್ದಾರೆ. ಅಂಬೇಡ್ಕರ್ ಏಕೆ ಹೊಸ ವ್ಯವಸ್ಥೆಯನ್ನು ಕುರಿತು ಕಾರ್ಮಿಕರ ಪರವಾದ ದನಿಯನ್ನು ಎತ್ತುತ್ತಾರೆ ಎಂದರೆ ಕಾರ್ಮಿಕರಿಗೆ ಮಾತ್ರ ಹೊಸ ವ್ಯವಸ್ಥೆ ಕುರಿತು ಪ್ರಜ್ಞೆ ಇದೆ ಎನ್ನುವುದರಿಂದ.

ಕಾರ್ಮಿಕರು ಹಾಗೂ ಸಂವಿಧಾನ ಕುರಿತು ಚರ್ಚೆ ಎತ್ತುತ್ತಾ ಆರ್ಥಿಕ ರಚನಾ ವಿಧಾನಗಳಾದ (೧) ಬಂಡವಾಳಶಾಹಿ (೨) ಸಮಾಜವಾದ ಮತ್ತು (೩) ಸಮತಾವಾದದ ಬಗ್ಗೆ ಪ್ರಸ್ತಾಪಿಸುತ್ತಾರೆ. ಈ ಮೂರರಲ್ಲಿ ಕಾರ್ಮಿಕರು ಬಂಡವಾಳಶಾಹಿ ವ್ಯವಸ್ಥೆಯನ್ನು ಆಯ್ಕೆಮಾಡಿಕೊಳ್ಳಬಾರದು. ಏಕೆಂದರೆ ಇದನ್ನು ಆಯ್ಕೆ ಮಾಡಿಕೊಳ್ಳುವುದರಿಂದ ಕಾರ್ಮಿಕರು ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಾರೆ[೫೩] ಎಂಬುದಾಗಿ ವಿಶ್ಲೇಷಿಸುತ್ತಾರೆ. ಮುಂದುವರೆದು ಕಾರ್ಮಿಕರು ಸಮತಾವಾದವನ್ನು ಆಯ್ಕೆಮಾಡಿಕೊಂಡರೆ ಸಮಾನತೆಯನ್ನು ಪಡೆದುಕೊಳ್ಳುವರಾದರೂ ಸ್ವಾತಂತ್ರ್ಯದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಹೀಗಾಗಿ ಸಮಾಜದ ಆರ್ಥಿಕ ರಚನೆಯಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಸಮಾಜವಾದವೇ ಇವರಿಗಿರುವ ಉತ್ತುಮವಾದ ಆಯ್ಕೆ ಎಂಬುದಾಗಿ ಕಂಠೋಕ್ತಿಯಿಂದ ನುಡಿಯುತ್ತಾರೆ. ೧೯೩೦ರಿಂದ ಅಂಬೇಡ್ಕರ್ ಕಾರ್ಮಿಕರನ್ನು ಸಂಘಟಿಸುವಲ್ಲಿ ಹಾಗೂ ಅವರಿಗಾಗಿ

ಸಂವಿಧಾನದಲ್ಲಿ ಹಲವಾರು ಕಾನೂನು ರೀತಿಯ ಹಕ್ಕುಗಳನ್ನು ನೀಡುವುದರ ಮೂಲಕ ಕಾರ್ಮಿಕರು ಭಾರತದಲ್ಲಿ ಕಾರ್ಖಾನೆಗಳಿರುವವರೆಗೂ ಅವರಿಗೆ ಋಣಿಯಾಗಿದ್ದರೂ ಸಾಲದು.

ಅಖಂಡ ಭಾರತವನ್ನು ಪ್ರತಿನಿಧಿಸುವ ಕಾರ್ಮಿಕ ಕಾನೂನು ಹಾಗೂ ಸುಧಾರಣೆಯ ಕುರಿತು ಧ್ವನಿಯೆತ್ತಿದ ಅಂಬೇಡ್ಕರ್ ಅವರು ಹಾಗೂ ಅವರ ಕಾರ್ಮಿಕ ನೀತಿಗಳು ಮೈಸೂರು ಸಂಸ್ಥಾನಕ್ಕೆ ಏಕೆ ಪ್ರವೇಶ ಪಡೆದುಕೊಳ್ಳಲಿಲ್ಲ ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ. ಈ ವಿಷಯವಾಗಿ ದಲಿತ ಚಿಂತಕರು ಹಾಗೂ ಅಂಬೇಡ್ಕರ್ ಕುರಿತು ಗಂಭೀರವಾಗಿ ಅಧ್ಯಯನ ಮಾಡಿರುವ ಡಾ. ಎನ್. ಚಿನ್ನಸ್ವಾಮಿ ಸೋಸಲೆ ಅವರ ಬಳಿ ಚರ್ಚಿಸಿದಾಗ ಈ ರೀತಿ ಅಭಿಪ್ರಾಯಿಸಿದ್ದಾರೆ. ಅಂಬೇಡ್ಕರ್ ಕೆ.ಜಿ.ಎಫ್. ಗೆ ಬಂದಿದ್ದು ಅಲ್ಲಿನ ತಮಿಳು ಕಾರ್ಮಿಕರ ಫಲವಾಗಿ. ಅದನ್ನು ಹೊರತುಪಡಿಸಿ ಮೈಸೂರು ಪ್ರಾಂತ್ಯಕ್ಕೆ ಪ್ರವೇಶವಾಗದೇ ಇದ್ದುದಕ್ಕೆ ಕಾರಣ ಇಲ್ಲಿ ಪ್ರಬಲ ಜಾತಿಗಳಾದ ಬ್ರಾಹ್ಮಣರು, ಲಿಂಗಾಯಿತರು ಹಾಗೂ ಒಕ್ಕಲಿಗರು ಅಂಬೇಡ್ಕರ್ ಅವರನ್ನು ಮೈಸೂರಿಗೆ ಕರೆತರುವಲ್ಲಿ ಅಡ್ಡಿಪಡಿಸಿದರು ಎಂಬ ವಾದವನ್ನು ಮಂಡಿಸುತ್ತಾರೆ. ಆದರೆ ಮತ್ತೊಬ್ಬ ಓದುಗರಾದ ಬೆಂಗಳೂರು ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಶಶಿಧರ್ ಅವರ ಪ್ರಕಾರ ಆ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದಲ್ಲಿ ನಿಮ್ನ ವರ್ಗಗಳಲ್ಲಿ ಚಳವಳಿಯನ್ನು ಮುನ್ನಡೆಸಲು ಸಾಮರ್ಥ್ಯವಿರುವ ಪ್ರಬಲ ನಾಯಕರಾಗಲೀ ಅಥವಾ ನಾಯಕತ್ವದ ಗುಣವಾಗಲೀ ಹುಟ್ಟಿಕೊಂಡಿರಲಿಲ್ಲ. ಹಲವು ನಿಮ್ನ ವರ್ಗಗಳ ಚಳವಳಿಯನ್ನು ನಡೆಸಿದ್ದು ಶೂದ್ರ ಹಾಗೂ ಮೇಲ್ವರ್ಗದವರೇ ಆಗಿದ್ದರು. ಈ ಹಿನ್ನೆಲೆಯಿಂದ ಅಂಬೇಡ್ಕರ್ ಅವರನ್ನು ಕರೆತರುವ ಪ್ರಯತ್ನ ನಿಮ್ನ ವರ್ಗಗಳಿಂದ ಸಾಧ್ಯವಾಗಲಿಲ್ಲ. ಇತರೆ ದಲಿತೇತರ ವರ್ಗದವರಲ್ಲಿ ಹಿತಾಸಕ್ತಿಯ ಕೊರತೆ ಇದ್ದುದರಿಂದ ಅಂಬೇಡ್ಕರ್ ದಲಿತೇತರರಿಗೆ ನಾಯಕ ಅಂತ ಗೋಚರಿಸಲಿಲ್ಲ ಎಂಬ ವಸ್ತುನಿಷ್ಠ ಮಾಹಿತಿಯನ್ನು ಮುಂದಿಡುತ್ತಾರೆ. ನಿಮ್ನ ವರ್ಗದ ಕಾರ್ಮಿಕನಾದ ಮುರುಗೇಶಂ ಪಿಳ್ಳೈ ಅವರು ಬಿನ್ನಿ ಮಿಲ್ಲಿನಲ್ಲಿ ಅಸಿಸ್ಟೆಂಟ್ ವೀವಿಂಗ್ ಮಾಸ್ಟರ್ ಆಗಿ ಸೇವೆ ಸಲ್ಲಿಸಿದ್ದರೂ ಅವರ ಹೋರಾಟ ಹಾಗೂ ಸುಧಾರಣೆಗಳೆಲ್ಲವೂ ಗಿರಣಿಗಳು ಹಾಗೂ ಕಾರ್ಮಿಕರಿಂದ ಹೊರತಾಗಿದ್ದವು ಎಂಬುದು ಈ ಸಂದರ್ಭದಲ್ಲಿ ಗಮನಾರ್ಹವಾದ ಅಂಶವಾಗಿದೆ.

## ೬.೩. ರಾಷ್ಟ್ರೀಯ ಚಳವಳಿಯಲ್ಲಿ ಬೆಂಗಳೂರಿನ ಹತ್ತಿ ಗಿರಣಿಗಳ ಕಾರ್ಮಿಕರ ಪಾತ್ರ

ಜೂನ್ ೧೯೨೭ರಲ್ಲಿ ಗಾಂಧೀಜಿ ಕುಮಾರಕೃಪದಲ್ಲಿ ತಂಗಿದ್ದಾಗ ಪ್ರತಿ ಸಂಜೆಯೂ ಪ್ರಾರ್ಥನಾ ಸಭೆಗಳನ್ನು ನಡೆಸಿದರು. ಈ ಸಭೆಗಳಿಗೆ ಅನೇಕ ಹಿರಿಯರು, ವಿದ್ಯಾರ್ಥಿಗಳು ಬರುತ್ತಿದ್ದರು. ಬಂದವರಿಗೆಲ್ಲಾ ಖಾದೀ ಉಡುಪನ್ನೇ ಧರಿಸಬೇಕೆಂಬುದು ಗಾಂಧೀಜಿಯವರ ಒತ್ತಾಯವಾಗಿತ್ತು[೫೪]. ಒಟ್ಟಿನಲ್ಲಿ ಗಾಂಧೀಜಿಯ ದೀರ್ಘವಾಸದಿಂದ ಬೆಂಗಳೂರಿನಲ್ಲಿ ಖಾದಿಯ ಅಭಿವೃದ್ಧಿಗೆ ಸಾಕಷ್ಟು ಪ್ರೋತ್ಸಾಹ ಸಿಕ್ಕಿತಲ್ಲದೆ, ರಾಷ್ಟ್ರೀಯ ಚಳವಳಿಗೆ ಸೂಕ್ತ ಪರಿಸರ ನಿರ್ಮಿತವಾಯಿತು. ಗಾಂಧೀ ಅಥವಾ ಇನ್ನಿತರೆ ರಾಷ್ಟ್ರೀಯ ನಾಯಕರುಗಳಾದ ಬ್ರಹ್ಮ ಸಮಾಜದ ಪಂಡಿತ್ ಶಿವನಾಥಶಾಸ್ತ್ರಿ ಮತ್ತು ವೀರೇಶ ಲಿಂಗಮ್ ಪಂತಲು-ಬೇಟಿ ೧೮೭೦, ಅನಿಬೆಸೆಂಟ್ (೧೯೧೬), ರಬೀಂದ್ರನಾಥ ಠಾಕೂರ್ (೧೯೧೯), ಸರೋಜಿನಿ ನಾಯ್ಡು (೧೯೨೦), ಮದನ ಮೋಹನ ಮಾಳವೀಯಾ (೧೯೨೭), ಸಿ. ರಾಜಗೋಪಾಲಚಾರಿ (೧೯೨೭), ಮಹಾತ್ಮ ಗಾಂಧಿ, ಜವಹರಲಾಲ್ ನೆಹರು (೧೯೩೧) ಬೆಂಗಳೂರಿಗೆ ಭೇಟಿ ನೀಡಿದ್ದರು. ಇವರುಗಳೆಲ್ಲರೂ ಹತ್ತಿಗಿರಣಿಗಳ ಕಾರ್ಮಿಕರೊಂದಿಗೆ ನೇರ ಸಂಪರ್ಕ ಹೊಂದಿರಲಿಲ್ಲವಾದರೂ ಇಲ್ಲಿನ ಜನರ ಹಾಗೂ ಕಾರ್ಮಿಕರ ಮೇಲೆ ಪ್ರಭಾವ ಬೀರಿರುವುದಂತೂ ಖಂಡಿತ. ಅಲ್ಲದೆ ಗಾಂಧಿಯ ಖಾದಿ ಪ್ರಚಾರದ ಉದ್ದೇಶದ ಹಿಂದೆ ಗಿರಣಿಗಳನ್ನು (ದೇಶೀಯ ಹತ್ತಿಬಟ್ಟೆ) ಪ್ರೋತ್ಸಾಹಿಸುವ ಉದ್ದೇಶವೂ ಇದ್ದಿತು.

ಸ್ವಾತಂತ್ರ್ಯ ಚಳವಳಿಯ ಸಂದರ್ಭ ೧೯೩೧ರಲ್ಲಿ ಬೆಂಗಳೂರಿನ ಸ್ವದೇಶಿ ಅಂಗಡಿಯನ್ನು ಉದ್ಘಾಟಿಸಲು ಜವಹರಲಾಲ್ ನೆಹರೂ, ಪತ್ನಿ ಮತ್ತು ಮಗಳ ಸಮೇತ ಬಂದರು. ಆಗ ಧರ್ಮಾಂಬುಧಿ ಕೆರೆಯ ಮೈದಾನದಲ್ಲಿ ಅವರು ಹಾರಿಸಿದ ತ್ರಿರಂಗ ಧ್ವಜವನ್ನು ಸರ್ಕಾರ ಕೆಳಗಿಳಿಸಿದಾಗ ಗಲಾಟೆಯಾಯಿತು. ಕೆ.ಟಿ. ಭಾಷ್ಯಂ ನಿರಶನವ್ರತ ಪ್ರಾರಂಭಿಸಿದರು. ಬಿನ್ನಿಮಿಲ್‌ನ ಕಾರ್ಮಿಕ ವರ್ಗ ಮುಖ್ಯ ಪಾತ್ರವಹಿಸಿ ರಾತ್ರೋ ರಾತ್ರಿ ಬಾವುಟವನ್ನು ಅಲ್ಲೇ ಹಾರಿಸಿದ ಮೇಲೆ ಕೆ.ಟಿ. ಭಾಷ್ಯಂ ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು[೫೫]. ೧೯೩೧ರ ಕರಾಚಿ ಕಾಂಗ್ರೆಸ್ ಸಭೆಗೆ ಕೆ.ಟಿ. ಭಾಷ್ಯಂ, ಎಸ್.ಆರ್.ಎಸ್. ರಾಘವನ್ ಅಲ್ಲದೆ ಇನ್ನೂ ಅನೇಕರು ನಗರದಿಂದ ಹೋಗಿದ್ದರು. ನೆಹರೂ ಅವರ ಭೇಟಿ ಮತ್ತು ಭಾಷಣದಿಂದ ಸ್ಫೂರ್ತಿ ಹೊಂದಿದ ಕಂಟೋನ್ಮೆಂಟ್ ಪ್ರಜೆಗಳು 'ನೆಹರೂ ಸೇವಾ ಸಂಘಮ್' ಮತ್ತು 'ಗಾಂಧೀ ಚರಕಾ ಸಂಘಮ್'ನ್ನು ಸ್ಥಾಪಿಸಿ ತಾವೂ ರಾಷ್ಟ್ರೀಯ ಚಳವಳಿಯಲ್ಲಿ ಭಾಗಿಗಳಾದರು[೫೬]. ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ನಡೆದಾಗ ಗಿರಣಿಗಳ ಪಾತ್ರ

ಬಹಳ ಮುಖ್ಯವಾದುದು. ಮಹಾರಾಜರು ಆಳುತ್ತಿದ್ದ ಸಂಸ್ಥಾನಿ ಪ್ರದೇಶಗಳಲ್ಲಿ ಯಾವುದೇ ಕಾನೂನು ಭಂಗ ಚಳವಳಿ ಮಾಡಬಾರದು, ಬ್ರಿಟಿಷರ ನೇರ ಆಟಳಿತಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಮಾತ್ರ ಕಾಂಗ್ರೆಸ್ ಸೂಚಿಸಿದಾಗ ಚಳವಳಿ ಮಾಡಬೇಕು ಎಂಬುದು ಗಾಂಧೀಜಿಯ ಆದೇಶವಾಗಿತ್ತು[೫೭]. ಹೀಗಾಗಿ ಕಂಟೋನ್ಮೆಂಟ್ ಪ್ರದೇಶ ಬಿಟ್ಟು ಉಳಿದೆಡೆ ೧೯೨೧-೨೨ರಲ್ಲಾಗಲೀ (ಅಸಹಕಾರ ಚಳವಳಿ), ೧೯೩೦-೩೪ರ ನಡುವಿನ ಕಾನೂನು ಭಂಗ ಚಳವಳಿಯಲ್ಲಾಗಲೀ ಸಂಸ್ಥಾನದಲ್ಲಿ ಯಾವುದೇ ಸತ್ಯಾಗ್ರಹ ನಡೆದಿರಲಿಲ್ಲ. ಕಂಟೋನ್ಮೆಂಟ್ ಪ್ರದೇಶದಲ್ಲಿ ಗಾಂಧಿಯ ಪ್ರಭಾವ ಕಡಿಮೆ ಇದ್ದುದರಿಂದ ಗಿರಣಿಯ ಕಾರ್ಮಿಕರು ಮತ್ತು ಸಂಘಟನೆ ಚಳವಳಿಯಲ್ಲಿ ಭಾಗಿಯಾಗಲು ಸಾಧ್ಯವಾಯಿತು. ಆದರೆ ಇಲ್ಲಿ ನೆಹರೂರವರ ಪ್ರಭಾವ ಹೆಚ್ಚಾಗಿಯೇ ಇದ್ದು, ಅವರ ಚಿಂತನೆಗಳಿಗೆ ಬೆಂಬಲವೂ ಸಿಕ್ಕಿತು. ಹೀಗಾಗಿಯೇ ೧೯೩೧ರಲ್ಲಿ ನೆಹರೂ ಬೆಂಗಳೂರಿಗೆ ಬಂದಾಗ ಸ್ವದೇಶಿ ವಸ್ತು ಮಾರಾಟ ಮಳಿಗೆ ಆರಂಭಿಸಿದ್ದು. ಆದರೆ ಕಾಂಗ್ರೆಸ್, ಪ್ರಜಾಮಿತ್ರ ಮಂಡಳಿಯನ್ನು ಸ್ಥಾಪನೆ ಮಾಡುವುದರ ಮೂಲಕ ಬ್ರಾಹ್ಮಣೇತರರು ಹಾಗೂ ಮುಸಲ್ಮಾನರ ವಿರೋಧವನ್ನು ಕಟ್ಟಿಕೊಂಡಿತು. ಅಲ್ಲದೆ ಇವರುಗಳಿಗೆ ಕಾರ್ಮಿಕರು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವುದು ಸ್ವಲ್ಪವೂ ಇಷ್ಟವಿರಲಿಲ್ಲ[೫೮]. ಹೀಗಾಗಿ ಮೇಲ್ವರ್ಗದ ಬ್ರಾಹ್ಮಣರು ಕಾರ್ಮಿಕರ ಪರ ನಿಂತು ಚಳವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಿದರು. ಕಾರ್ಮಿಕರ ಆಗಮನದಿಂದ ಚಳವಳಿ ಹೊಸ ರೂಪವನ್ನು ಪಡೆದುಕೊಂಡಿತು. ಆದರೆ ಬ್ರಾಹ್ಮಣೇತರರು ಇದರಿಂದ ದೂರವಾಗಿಯೇ ಉಳಿದರು. ಕಮ್ಯುನಿಷ್ಟರ ವಿಚಾರದಲ್ಲಿಯೂ ಇದೇ ಆಗಿದ್ದು[೫೯]. ಕಾರ್ಮಿಕರು ಇರುವವರೆಗೂ ಇವರ ಚಳವಳಿ ಪರಿಣಾಮಕಾರಿಯಾಗಿದ್ದಿತು. ಆದರೆ ಇವರನ್ನು ಕಡೆಗಣಿಸಿದ ನಂತರ ಕಮ್ಯುನಿಸ್ಟ್ ತನ್ನ ಬಲವನ್ನು ಕಳೆದುಕೊಂಡಿತು.

ಕ್ವಿಟ್ ಇಂಡಿಯಾ ಅಥವಾ ಭಾರತ ಬಿಟ್ಟು ತೊಲಗಿ ಎಂಬ ಗಾಂಧೀಜಿಯವರ ಘೋಷಣೆ ಆಗಸ್ಟ್ ೮ರ ರಾತ್ರಿ ಮುಂಬಯಿಯಲ್ಲಿ ಮೊಳಗಿದಾಗ ಗಾಂಧಿ, ನೆಹರೂ, ಆಜಾದ್ ಮುಂತಾದ ಗಣ್ಯ ಕಾಂಗ್ರೆಸ್ ನಾಯಕರು ಬಂಧನವಾಯಿತು. ಆಗಸ್ಟ್ ೯, ಭಾನುವಾರ ದೇಶದ ಎಲ್ಲಾ ನಗರ, ಪಟ್ಟಣಗಳಿಗೆ ಕಾಳ್ಗಿಚ್ಚಿನಂತೆ ಈ ಕರೆ ಮತ್ತು ಬಂಧನದ ಸುದ್ಧಿ ಹರಡಿ ಮುಂದಿನ ಎರಡು ಮೂರು ದಿನಗಳಲ್ಲಿ ಹಳ್ಳಿಹಳ್ಳಿಗಳಲ್ಲೂ ಜನರ ಕ್ರೋಧ ಭುಗಿಲೆದ್ದಿತು. ಮೈಸೂರು ಸಂಸ್ಥಾನದಲ್ಲೂ ಹಿಂದಿಗಿಂತಲೂ ಹೆಚ್ಚು ಉಗ್ರವಾಗಿ (ಜವಾಬ್ದಾರಿ ಸರ್ಕಾರದ ಬೇಡಿಕೆ ಈ ಸಂದರ್ಭಕ್ಕೆ ಮೂಲೆಗುಂಪಾಯಿತು), 'ಕ್ವಿಟ್ ಇಂಡಿಯಾ' ಎಂಬ ಬ್ರಿಟಿಷರ ವಿರುದ್ಧವಾದ ಕೂಗು ಎಲ್ಲೆಡೆ

ಮೊಳಗಿತು. ಬನಪ್ಪ ಪಾರ್ಕಿನಲ್ಲಿ ಆಗಸ್ಟ್ ೯ರ ಮಧ್ಯಾಹ್ನ ನಡೆದ ಸಭೆಯಲ್ಲಿ ೧೨೦೦೦ ವಿದ್ಯಾರ್ಥಿಗಳು ಇದ್ದರೆಂದು ಸರಕಾರಿ ವರದಿ ಹೇಳುತ್ತದೆ. ಆ ದಿನವೇ ಬಿನ್ನಿಮಿಲ್, ಮಿನರ್ವಾ ಮಿಲ್ ಕಾರ್ಮಿಕರೂ ಮುಷ್ಕರ ಹೂಡಿ, ಬನಪ್ಪಾ ಪಾರ್ಕಿನಲ್ಲಿ ಸಭೆ ನಡೆಸಿದರು. ಹೊಸಕೋಟೆ ಮಹಾದೇವ ಶಾಸ್ತ್ರಿಯವರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಕಾಂಗ್ರೆಸ್ ಸೂಚಿಸಿದ ೧೩ ಅಂಶಗಳ ಕಾರ್ಯಕ್ರಮವನ್ನು ಕೆ. ರಾಮಸ್ವಾಮಿ ಓದಿದರು[೬೦]. ಆಗಸ್ಟ್ ೯, ೧೦ ಮತ್ತು ೧೧ (೧೯೪೨) ಈ ಮೂರು ದಿನಗಳು ಬನಪ್ಪ ಪಾರ್ಕು, ಕ್ವಿಟ್ ಇಂಡಿಯಾ ಚಳವಳಿಯ ಕೇಂದ್ರವಾಗಿ ಮಾರ್ಪಟ್ಟಿತು.

ಆಗಸ್ಟ್ ೧೨ರಂದು ಮೈಸೂರು ನೂಲು ಗಿರಣಿ ನೌಕರರು ಗಿರಣಿಯ ಒಳಗೇ ಕೂತು ಮುಷ್ಕರ ಹೂಡಿದರೆ ಬಿನ್ನಿಮಿಲ್ಲು, ಸರಕಾರಿ ಮುದ್ರಣಾಲಯ, ಆಮ್ಕೋ ಬ್ಯಾಟರಿ ಕಾರ್ಖಾನೆಗಳ ಕಾರ್ಮಿಕರು, ಹೊರನಡೆದು ಮುಷ್ಕರ ಹೂಡಿದರು. ಹಿಂದೂಸ್ತಾನ್ ಏರ್‌ಕ್ರಾಫ್ಟ್ ಕಾರ್ಖಾನೆಯ ನೌಕರರು ಮುಷ್ಕರ ಹೂಡಿ, ಕಾರ್ಖಾನೆಯಿಂದ ನಗರದವರೆಗೆ ಮೆರವಣಿಗೆಯಲ್ಲಿ ಬಂದು ೪೦೦೦ ಕಾರ್ಮಿಕರ ಸಭೆ ಸಂಪಂಗಿಕೆರೆ ಅಂಗಳದಲ್ಲಿ ನಡೆದರೆ, ಬಿನ್ನಿಮಿಲ್ಲಿನ ೪೦೦೦ ಕಾರ್ಮಿಕರ ಹಾಗೂ ಮಿನರ್ವಾ ಮಿಲ್ಲಿನ ೬೦೦ ನೌಕರರ ಪ್ರತ್ಯೇಕ ಸಭೆಗಳಾದವು. ಆ ದಿನ ನಡೆದ ಮತ್ತೊಂದು ಪ್ರಮುಖ ವಿಷಯವೆಂದರೆ ನಾವು ಮುಷ್ಕರಕ್ಕೆ ಹೋಗುವ ಮೊದಲು ನಮಗೆ ಬೋನಸ್ ನೀಡಬೇಕೆಂದು ಬಿನ್ನಿಮಿಲ್ ಕಾರ್ಮಿಕರು ಪಟ್ಟುಹಿಡಿದರು[೬೧]. ಬಿನ್ನಿಮಿಲ್ಲು ಕಾರ್ಮಿಕರಿಗೆ ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಳ್ಳುವುದಕ್ಕಿಂತ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು ಹಾಗೂ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು ಮುಖ್ಯವಾಗಿತ್ತು. ಹಾಗಾಗಿ ಇವರಿಗೆ ಕಾಂಗ್ರೆಸ್ ಹಾಗೂ ಸ್ವಾತಂತ್ರ್ಯ ಚಳವಳಿ ದಾಳವಾಗಿ ಗೋಚರಿಸುತ್ತಿದ್ದುದು ಸತ್ಯವಾಗಿ ಕಾಣುತ್ತದೆ. ಇನ್ನೊಂದು ಕಡೆ ಕಾಂಗ್ರೆಸ್ ಸಹ ಹೆಚ್ಚು ಕಾರ್ಮಿಕರು ಚಳವಳಿಯಲ್ಲಿ ಪಾಲ್ಗೊಳ್ಳುವುದರಿಂದ ಹೋರಾಟಕ್ಕೆ ನೈತಿಕ ಬಲ ಬರುತ್ತದೆ ಎಂಬುದಾಗಿ ಭಾವಿಸಿದ್ದರು.

ಆಗಸ್ಟ್ ೧೩ರಂದು ಬಿನ್ನಿಮಿಲ್, ಮೈಸೂರು ಮಿಲ್ ಹಾಗೂ ಮಿನರ್ವಾ ಮಿಲ್ ಕಾರ್ಮಿಕರು ಒಟ್ಟಾಗಿ ಮೆರವಣಿಗೆ ನಡೆಸಿ ಧರ್ಮಾಂಬುಧಿ ಕೆರೆದಂಡೆ ರಸ್ತೆಯ ಒಂದು ಹೆಂಡದಂಗಡಿಯ ಮೇಲೆ ಧಾಳಿ ಮಾಡಿದರು. ಅಂದಿನ ಕಾರ್ಮಿಕರ ಜಂಟಿ ಸಭೆಯಲ್ಲಿ ೮೦೦೦ ಜನರಿದ್ದರು. ಸೆಪ್ಟಂಬರ್ ೬ರ ದಿನವನ್ನು 'ಕ್ವಿಟ್ ಇಂಡಿಯಾ ಡೇ' ಎಂಬುದಾಗಿ ಘೋಷಿಸಲಾಯಿತು. ಸೆಪ್ಟಂಬರ್ ೯ರ ದಿನವನ್ನು 'ನಾಯಕರುಗಳ ಬಂಧನದ ದಿನ' ಎಂಬುದಾಗಿ ಘೋಷಿಸಲಾಯಿತು[೬೨]. ಭಾರತದ ರಕ್ಷಣಾ

ಕಾನೂನಿನ ಚಟ್ಟವನ್ನು ಸಾಗಿಸುವ ಒಂದು ಭಾರೀ ಶೋಕಯಾತ್ರೆ ಸೆಪ್ಟೆಂಬರ್ ೭ರಂದು ನಡೆದು ಕಾರ್ಮಿಕ ನಾಯಕ ಜಿ. ಚಂಗಲಾರಾಧ್ಯ (ಇವರು ಬಿನ್ನಿಮಿಲ್ ನೌಕರ) ಮತ್ತು ಅವರ ಪತ್ನಿ ಭಾಗೀರಥಮ್ಮ ಈ ಚಟ್ಟ ಹೊತ್ತಿದ್ದರು[೬೩]. ಮಸ್ತಾನ್‌ಸಾಬ್ ದರ್ಗಾ, ಅರಳೇಪೇಟೆ ಮೂಲಕ ಈ ಮೆರವಣಿಗೆ ಮೆಜೆಸ್ಟಿಕ್ ವೃತ್ತದ ಬಳಿ ಬಂದಾಗ ಪೊಲೀಸರು ಅದನ್ನು ತಡೆದರು. ಆರು ಗಂಟೆ ಕಾಲ ನಡು ರಸ್ತೆಯಲ್ಲಿ ಸಾವಿರಾರು ಕಾರ್ಮಿಕರು ಧರಣಿ ನಡೆಸಿದರು. ಸಂಜೆ ಚಟ್ಟವನ್ನು ಸುಟ್ಟರು. ಮುಂದೆ ಸೆಪ್ಟೆಂಬರ್ ೯ಕ್ಕೆ ಈ ದಂಪತಿಗಳ ಬಂಧನವಾಯಿತು. ಬಿನ್ನಿಮಿಲ್, ಮೈಸೂರು ಮಿಲ್ಲು ಹಾಗೂ ಮಿನರ್ವಾ ಮಿಲ್ಲುಗಳಲ್ಲಿ ಸೆಪ್ಟೆಂಬರ್ ೨೧ರಿಂದ ಗಾಂಧೀಜಿಯವರ ಬಿಡುಗಡೆಗೆ ಒತ್ತಾಯಿಸಿ ಮುಷ್ಕರ ಆರಂಭವಾಯಿತು. ಸೆಪ್ಟೆಂಬರ್ ೨೫ರಿಂದ ಬೀಗಮುದ್ರೆ ಅಥವಾ ಹೊರಗೀಲಿ (ಲಾಕ್ ಔಟ್) ಘೋಷಿಸಿದರು. ೨೫ರಿಂದ ಹೆಬ್ಬಾಳದ ಮಹಾಲಕ್ಷ್ಮಿ ಮಿಲ್ಲಿನ ನೌಕರರೂ ಮುಷ್ಕರ ಹೂಡಿದರು. ಮುಷ್ಕರ ಮೂರು ವಾರಗಳ ತನಕ ಸಾಗಿತ್ತು. ಬಿನ್ನಿಮಿಲ್ಲಿನ ೭೮, ಮಿನರ್ವಾದ ೮೫ ಹಾಗೂ ಮೈಸೂರು ಮಿಲ್ಲಿನ ೧೧೦ ನೌಕರರನ್ನು ಕೆಲಸದಿಂದ ಕಿತ್ತು ಹಾಕಿ, ಕ್ವಾರ್ಟರ್ಸ್‌ನಲ್ಲಿದ್ದ ನೌಕರರ ಕುಟುಂಬದವರನ್ನು ಹೊರದೂಡಿದರು[೬೪]. ಇಂಥ ಕಾರ್ಮಿಕರಲ್ಲಿ ಬಹುಪಾಲು ಜೈಲಿನಲ್ಲಿದ್ದರು. ಕೆಲಸ ಕಳೆದುಕೊಂಡ ನೌಕರರು ಸ್ವಾತಂತ್ರ್ಯ ಬರುವ ತನಕ ನಿರುದ್ಯೋಗಿಗಳಾಗಿದ್ದರು. ಈ ಚಳವಳಿಯಲ್ಲಿ ಬಹುಪಾಲು ಅನಕ್ಷರಸ್ಥರಾದ ಕಾರ್ಮಿಕರ ತ್ಯಾಗ ಬಲು ದೊಡ್ಡದೆನ್ನಬೇಕು.

ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಮುಷ್ಕರಗಳು ಬೆಂಗಳೂರಿನ ಹತ್ತಿ ಬಟ್ಟೆಯ ಗಿರಣಿಗಳಲ್ಲಿ ಹೊಸತೊಂದು ಬಗೆಯ ಬೆಳವಣಿಗೆಗೆ ಕಾರಣವಾಯಿತು. ಈಗ ಕಾಂಗ್ರೆಸ್ಸಿಗರ ಬಂಧನವನ್ನು ವಿರೋಧಿಸಿ ಚಳವಳಿ ನಡೆಸುವುದು ಬೇಡವೆಂದು ನಾಯಕರು ಎಷ್ಟೇ ಮನವಿ ಮಾಡಿಕೊಂಡರೂ ಲೆಕ್ಕಿಸದೆ ಕಾರ್ಮಿಕರೇ ಮುಷ್ಕರಗಳನ್ನು ವ್ಯವಸ್ಥೆಗೊಳಿಸಿದರು. ಇದರ ಪರಿಣಾಮವಾಗಿ ಅನೇಕರು ಕೆಲಸವನ್ನು ಕಳೆದುಕೊಂಡರು. ಯುದ್ಧಕಾಲದಲ್ಲಿ ಉತ್ಪಾದನೆಯೂ ಕುಂಠಿತವಾಯಿತು. ಆದರೆ ಆರ್ಥಿಕ ವಿಚಾರಗಳಂತೆ ರಾಜಕೀಯ ವಿಚಾರಗಳಲ್ಲಿಯೂ ಸಂಘಟಿತರಾಗಲು ತಮಗೆ ಶಕ್ತಿಯಿದೆ ಎಂಬುದನ್ನು ಕಾರ್ಮಿಕರು ಸ್ಪಷ್ಟವಾಗಿ ಪ್ರದರ್ಶಿಸಿದರು[೬೫]. ಎನ್.ಡಿ. ಶಂಕರ್ ಭೂಗತರಾಗಿ ಬೆಂಗಳೂರಿನ ಎಲ್ಲಾ ಮಿಲ್ಲುಗಳ ಕಾರ್ಮಿಕ ನಾಯಕರುಗಳ ಸಭೆ ಸೇರಿಸಿದರು. ಅಲ್ಲಿ ಅವರು ಕೆಲ ದಿನಗಳಿಂದ ಚಳವಳಿ ವಿರೋಧಿ ನಿಲುವು ತಳೆದಿದ್ದುದನ್ನು ಸಹ ಪ್ರಸ್ತಾಪಿಸಲಾಯಿತು. ಆದರೂ ಶಂಕರ್ ನಾಯಕರಾಗಿ ಈ ಸಂದರ್ಭದಲ್ಲಿ ನಿಂತರು. ಹಿಂದಿನ ಬಿನ್ನಿ ಮಿಲ್ ಮುಷ್ಕರದ ಅನುಭವ ಈಗಿನ ಬೆಂಗಳೂರಿನ ಎಲ್ಲಾ

ಮಿಲ್ಲುಗಳಿಗೂ ಅನ್ವಯವಾಯಿತು. ಕಾರ್ಮಿಕರು ವಸತಿಗಳನ್ನು ಬಿಟ್ಟು ಮಿಲ್ಲುಗಳತ್ತ ಹೋಗದಂತೆ ಬಿಗಿ, ಅವರಿಗೆ ಊಟಕ್ಕೆ ಗತಿ ಇಲ್ಲದಂತೆ ಆಗಬಾರದೆಂದು ಸಾಕಷ್ಟು ನೆರವುಗಳ ಏರ್ಪಾಡಾಯಿತು. ಸೆಪ್ಟೆಂಬರ್ ೧೯ರಿಂದ ಆರಂಭವಾದ ಈ ಮುಷ್ಕರ ಸಂಸ್ಥಾನದ ಇತರ ಕಡೆಗಳಿಗೂ ಹರಡಿತು[೬೬]. ಮೂರು-ನಾಲ್ಕು ವಾರಗಳ ಕಾಲ ನಡೆದು ಕ್ವಿಟ್ ಇಂಡಿಯಾ ಚಳವಳಿಗೆ ಸಂಸ್ಥಾನದಲ್ಲಿ ಚೈತನ್ಯ ನೀಡಿತು.

ಅಕ್ಟೋಬರ್‌ನಲ್ಲಿ ಕಾಂಗ್ರೆಸ್ ಸದಸ್ಯರುಗಳಾದ ಎಲ್.ಎಸ್. ರಾಜು ಮತ್ತು ಹನುಮಂತಪ್ಪ ಕ್ವಿಟ್ ಇಂಡಿಯಾ ಚಳವಳಿಯ ಮುಷ್ಕರವನ್ನು ನಿಲ್ಲಿಸಿದರು. ಅದೇ ವೇಳೆಯಲ್ಲಿ ಸೀತಾರಾಂ ಶಾಸ್ತ್ರಿಯವರು ಒಲ್ಲದ ಮನಸ್ಸಿನಿಂದ ಈ ಮುಷ್ಕರವನ್ನು ಹಿಂತೆಗೆದುಕೊಂಡರು. ಅಕ್ಟೋಬರ್ ೧೬ರಿಂದ ೬೩೩೭ ಮಂದಿ ಬಿನ್ನಿಮಿಲ್ಲು ಕಾರ್ಮಿಕರಲ್ಲಿ ೫೫೫೨ ಜನರು ಕೆಲಸಕ್ಕೆ ಹಿಂದಿರುಗಿದರು. ಅದೇ ರೀತಿ ಅಕ್ಟೋಬರ್ ೨೧ ಮತ್ತು ೨೮ರಲ್ಲಿ ಕ್ರಮವಾಗಿ ಮಿನರ್ವಾ ಮತ್ತು ಮೈಸೂರು ಮಿಲ್ಲಿನ ಕಾರ್ಮಿಕರು ತಮ್ಮ ಕೆಲಸಕ್ಕೆ ಹಿಂದಿರುಗಿದರು[೬೭].

ಕೆ.ಟಿ. ಭಾಷ್ಯಂ, ರಾಮಶರ್ಮ ಇತ್ಯಾದಿ ನಾಯಕರುಗಳು ಬೆಂಗಳೂರಿನ ಕಾರ್ಮಿಕರನ್ನು ಒಗ್ಗೂಡಿಸುವಲ್ಲಿ ಬಹಳ ಪ್ರಯತ್ನಿಸಿದರು. ಅವರ ಕರೆಗೆ ಎಲ್ಲಾ ನೌಕರರು ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡರು. ಭಾಷ್ಯಂ ಅವರು ಕಾರ್ಮಿಕ ಸಂಘದ ವಿಷಯ ಕುರಿತು ೨೭-೦೭-೧೯೪೧ರಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ, ಮುಕ್ತಾಯದ ಸಂದರ್ಭದಲ್ಲಿ ಕಾರ್ಮಿಕರೆಲ್ಲರೂ ಖಾದಿ ಟೋಪಿ ತೊಡುವಂತೆ ನೆರೆದಿದ್ದವರನ್ನು ಹುರಿದುಂಬಿಸುತ್ತಿದ್ದರು[೬೮]. ಮುಂದಿನ ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಹಾಗೂ ಕಾಂಗ್ರೆಸ್ಸಿಗೆ ಸೇರುವಂತೆ ಹಾಗೂ ಕಾರ್ಮಿಕ ಸಂಘಟನೆಗೆ ಬೆಂಬಲ ನೀಡುವಂತೆ ಉತ್ತೇಜಿಸುತ್ತಿದ್ದರು.

## ೬.೪. ಮೈಸೂರು ಚಲೋ ಹಾಗೂ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಹತ್ತಿ ಗಿರಣಿಗಳ ಕಾರ್ಮಿಕರ ಪಾತ್ರ

'ಜವಾಬ್ದಾರಿ ಸರ್ಕಾರ'ಕ್ಕೋಸ್ಕರ ಮೈಸೂರಿನ ಜನ ಹೋರಾಟಕ್ಕಿಳಿದರು. ಈ ಸತ್ಯಾಗ್ರಹದ ಪ್ರಮುಖ ಘೋಷಣೆಗಳೆಂದರೆ 'ಮೈಸೂರು ಚಲೋ', 'ಆರ್ಕಾಟ್ ಬಾಯ್ಕಾಟ್' ಹಾಗೂ 'ತಂಬು ಚಟ್ಟಿ ಚಟ್ಟು ಕಟ್ಟಿ' ಎಂಬುದಾಗಿದ್ದು ಇದಕ್ಕೆ ರಾಜ್ಯಾದ್ಯಂತ ಬೆಂಬಲ ವ್ಯಕ್ತವಾಯಿತು. ೧೯೪೭ರಲ್ಲಿ

ಮೈಸೂರು ಕಾಂಗ್ರೆಸ್, ಮಹಾರಾಜರು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಒಪ್ಪಿಕೊಳ್ಳಬೇಕು ಎಂದು ಅವರ ಮೇಲೆ ಒತ್ತಡ ಹೇರುವುದಕ್ಕಾಗಿ ಮೈಸೂರು ಚಲೋ ಚಳವಳಿಯನ್ನು ಆರಂಭಿಸಿತು. ಕೆ.ಸಿ. ರೆಡ್ಡಿಯವರು ೧೯೪೭ ಸೆಪ್ಟಂಬರ್ ೧೪ರಲ್ಲಿ ಸತ್ಯಾಗ್ರಹವನ್ನು ಆರಂಭಿಸಬೇಕು ಎಂದು ಕರೆಕೊಟ್ಟರು. 'ದಿವಾನರ ಆಡಳಿತ ಹೋಗಲಿ', 'ಜವಾಬ್ದಾರಿ ಸರ್ಕಾರ ಬರಲಿ' ಎಂಬ ಘೋಷಣೆಗಳು ಮೊಳಗಿದವು. ಮೈಸೂರಿನ ಕಾರ್ಮಿಕ ವರ್ಗವೂ ಈ ಹೋರಾಟದಲ್ಲಿ ಹಿಂದೆ ಬೀಳಲಿಲ್ಲ. ಸಂಸ್ಥಾನದ ಕಾರ್ಮಿಕರು ಅದರಲ್ಲೂ ಮುಖ್ಯವಾಗಿ ಹತ್ತಿ ಗಿರಣಿ ಕಾರ್ಮಿಕರು ಕಾರ್ಖಾನೆಗಳಿಂದ ಹೊರಬಂದು ಈ ಚಳವಳಿಯ ಮುಂಚೂಣಿಯಲ್ಲಿ ನಿಂತು, ಮೊದಲು ಕೇವಲ ವಿದ್ಯಾರ್ಥಿಗಳಿಂದಲೇ ಕೂಡಿದ ಆಂದೋಲನವನ್ನು ಜನಸಾಮಾನ್ಯರ ಹೋರಾಟವನ್ನಾಗಿ ಮಾರ್ಪಡಿಸಿದರು. ಬೆಂಗಳೂರು, ಮೈಸೂರು, ಭದ್ರಾವತಿ, ಕೋಲಾರ ಹಾಗೂ ದಾವಣಗೆರೆಯ ಕಾರ್ಮಿಕರು ಈ ಚಳವಳಿಯಲ್ಲಿ ಪಾಲ್ಗೊಂಡಿದ್ದರು[೧೯]. ಬಿನ್ನಿಮಿಲ್‌ನ ಸುಮಾರು ಮೂರು ಸಾವಿರಕ್ಕೂ ಅಧಿಕ ಕಾರ್ಮಿಕರು, ಮೈಸೂರು ಮಿಲ್ಲಿನ ೨೬೦೦ಕ್ಕೂ ಅಧಿಕ ಕಾರ್ಮಿಕರು ಹಾಗೂ ಮಿನರ್ವಾ ಮಿಲ್ಲಿನ ೯೦೦ಕ್ಕೂ ಅಧಿಕ ಕಾರ್ಮಿಕರು ಈ ಚಳವಳಿಯಲ್ಲಿ ಭಾಗವಹಿಸಿದ್ದು ವಿಶೇಷ[೨೦].

ತರುವಾಯ ಮೈಸೂರು ಪ್ರದೇಶ ಕಾಂಗ್ರೆಸ್ ಪಕ್ಷವೂ ಹೋರಾಟಕ್ಕೆ ದುಮುಕಿತು. ಇದೇ ಸಮಯದಲ್ಲಿ ಎಂ.ಎಸ್. ಕೃಷ್ಣನ್ ಮತ್ತು ಡಿ.ಎಸ್. ಶ್ರೀರಾಮುಲುರವರ ನೇತೃತ್ವದಲ್ಲಿ ಸಂಸ್ಥಾನದ ಸುಮಾರು ೧೧೦೦೦ ಮಂದಿ ರೈಲ್ವೇ ಕೆಲಸಗಾರರು ಈ ಚಳವಳಿಗೆ ಬೆಂಬಲ ನೀಡಿ ಮುಷ್ಕರ ಹೂಡಿದರು. ಮರಿದಾಸ್ ಮೊದಲಾದ ಕೆಲವು ಕಾರ್ಮಿಕ ನಾಯಕರನ್ನು ಸರ್ಕಾರ ಬಂಧಿಸಿತು. ಆದರೆ ಚಳವಳಿಯನ್ನು ನಾಶಮಾಡಲು ದಿವಾನರು ನಡೆಸಿದ ದಬ್ಬಾಳಿಕೆ ವಿಫಲವಾಯಿತು. ಕರ್ನಾಟಕದ ಇತರ ಕಡೆಗಳಲ್ಲಿಯೂ ಕಾರ್ಮಿಕ ವರ್ಗ ಬೆಂಬಲ ನೀಡಿತು. ಕೊನೆಗೆ ೨೪ ಅಕ್ಟೋಬರ್ ರಂದು ಒಂದು ವಿಶೇಷ ಆಜ್ಞೆಯ ಮೂಲಕ ಜವಾಬ್ದಾರಿ ಸರ್ಕಾರ ರಚನೆಗೆ ಒಪ್ಪಿಗೆ ನೀಡಲಾಯಿತು. ಈ ಚಳವಳಿ 'ಮೈಸೂರು ಸಮರ' ಎಂದು ಪ್ರಸಿದ್ಧಿ ಪಡೆದಿದೆ. ಸ್ವಾತಂತ್ರ್ಯಾನಂತರ ಸೋಷಿಯಾಲಿಸ್ಟ್ ಕೆಲವು ಹೊಸ ಕಾರ್ಮಿಕ ವಿಭಾಗಗಳನ್ನು ಸಂಘಟಿಸಿ ಅನೇಕ ಯೂನಿಯನ್‌ಗಳನ್ನು ಸ್ಥಾಪಿಸಲಾರಂಭಿಸಿದರು. ಹೀಗೆ ಹೊಸದಾಗಿ ಮೂಡಿಬಂದ ರಾಜ್ಯದ ಸೋಷಿಯಾಲಿಸ್ಟ್ ಟ್ರೇಡ್ ಯೂನಿಯನ್‌ನ ನಾಯಕರಲ್ಲಿ ಮಂಗಳೂರಿನ ಡಾ.ಎ. ಸಂಜೀವನಾಥ್ ಮತ್ತು ಬೆಂಗಳೂರಿನ ಎಸ್. ವೆಂಕಟರಾಮ್ ಮತ್ತು ಟಿ.ಐ. ಮಾಧವನ್ ಮೊದಲಾದವರು ಪ್ರಮುಖರು.

ಕರ್ನಾಟಕ ಏಕೀಕರಣ ಚಳವಳಿಯು ಒಂದು ಸುದೀರ್ಘವಾದ ಪ್ರಕ್ರಿಯೆ. ೧೮೬೦ರ ಸಂದರ್ಭದಿಂದಲೂ ಒಂದಲ್ಲಾ ಒಂದು ರೀತಿಯಲ್ಲಿ ಕನ್ನಡ ಭಾಷೆಯ ಹಿನ್ನೆಲೆಯಲ್ಲಿ ರಾಜ್ಯ ರಚನೆಯಾಗಬೇಕು ಎಂಬ ಕೂಗು ಕೇಳಿಬರುತ್ತಿತ್ತು. ಮೈಸೂರು ಕಾಂಗ್ರೆಸ್ ಹುಟ್ಟಿಕೊಂಡ ನಂತರ ಸ್ಥಳೀಯ ಕಾಂಗ್ರೆಸ್ಸಿಗರು ಕಾರ್ಮಿಕರನ್ನು ಒಂದುಗೂಡಿಸಲು ಪ್ರಯತ್ನಿಸಿದರು. ೧೯೪೬ರ ವೇಳೆಗೆ ದಾವಣಗೆರೆಯ ಹತ್ತಿಗಿರಣಿಗಳ ಕಾರ್ಮಿಕರು ಏಕೀಕರಣ ಚಳವಳಿಗೆ ಬೆಂಬಲ ಸೂಚಿಸಿದ್ದರು. ಇಲ್ಲಿ ಎಂ.ಪಿ. ಪಾಟೀಲ್ (ಬಾಂಬೆ ಕಂದಾಯ ಮಂತ್ರಿ) ಅವರ ಪಾತ್ರ ಪ್ರಮುಖವಾಗಿತ್ತು. ಬೆಂಗಳೂರಿನ ಕಾರ್ಮಿಕರು ಸಹ ಈ ಚಳವಳಿಗೆ ತಮ್ಮನ್ನು ತೊಡಗಿಸಿಕೊಂಡಿದ್ದರು. ಮೈಸೂರು ಪ್ರದೇಶ ಕಾಂಗ್ರೆಸ್ ನಾಯಕರೇ ಆಗ ಏಕೀಕರಣದ ಬಗ್ಗೆ ಹಿಂದೆ ಮುಂದೆ ನೋಡುತ್ತಿದ್ದರು. ಆದಕಾರಣ ೧೯೫೩ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಪ್ರದೇಶ ಕಾಂಗ್ರೆಸ್ ಸಮ್ಮೇಳನದ ಮುಂದೆ ಏಕೀಕರಣವನ್ನು ಒತ್ತಾಯಿಸಿ ಹುಬ್ಬಳ್ಳಿಯ ಕಾರ್ಮಿಕರು ಬಹಳ ದೊಡ್ಡ ಪ್ರದರ್ಶನ ಏರ್ಪಡಿಸಿದ್ದರು. ಇದನ್ನು ಸಂಘಟಿಸಿದ ಶ್ರೇಯಸ್ಸು ಮುದೋಳರಿಗೆ ಸಲ್ಲಬೇಕು. ಪ್ರದರ್ಶನಕಾರರ ವಿರುದ್ಧ ಪೊಲೀಸರು ಲಾಠಿಚಾರ್ಜು ಮತ್ತು ಗೋಲಿಬಾರ್ ಮಾಡಿದುದರ ಪರಿಣಾಮವಾಗಿ ನೂರಾರು ಮಂದಿ ಗಾಯಗೊಂಡರು. ಕರ್ನಾಟಕ ಏಕೀಕರಣದ ಇತಿಹಾಸದಲ್ಲಿ ನಡೆದ ಚರಿತ್ರಾರ್ಹ ಘಟನೆಗಳಲ್ಲಿ ಇದು ಒಂದು. ಏಕೀಕರಣದ ಪರವಾಗಿ ಇಂತಹ ಕಾರ್ಮಿಕ ಪ್ರದರ್ಶನಗಳು ರಾಜ್ಯದ ಇತರ ಅನೇಕ ಕಡೆಗಳಲ್ಲೂ ನಡೆದವು. ಏಕೀಕರಣಕ್ಕೆ ಪೂರ್ವಭಾವಿಯಾಗಿ ಅಕ್ಟೋಬರ್ ೧೯೫೬ರಲ್ಲಿ ಎಐಟಿಯುಸಿಗೆ ಸೇರಿದ ಕರ್ನಾಟಕದ ಎಲ್ಲಾ ಟ್ರೇಡ್ ಯೂನಿಯನ್ ಪ್ರತಿನಿಧಿಗಳ ಸಮ್ಮೇಳನವೊಂದು ಕೆ.ಜಿ.ಎಫ್.ನಲ್ಲಿ ನಡೆದು ಕರ್ನಾಟಕ ಪ್ರದೇಶ ಟ್ರೇಡ್ ಯೂನಿಯನ್ ಸ್ಥಾಪಿಸಲ್ಪಟ್ಟಿತು. ಎಂ.ಸಿ. ನರಸಿಂಹನ್‌ರವರು ಇದರ ಮೊದಲ ಅಧ್ಯಕ್ಷರಾಗಿಯೂ, ಕೃಷ್ಣನ್‌ರವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.... (ಎಸ್.ಆರ್.ಭಟ್, ಕರ್ನಾಟಕದಲ್ಲಿ ಕಾರ್ಮಿಕ ಚಳವಳಿ ನಡೆದುಬಂದ ದಾರಿ).

ಬಹುತೇಕ ನೌಕರರು ಅನಕ್ಷರಸ್ಥರಾದ ಕಾರಣ ಅದು ರಾಷ್ಟ್ರೀಯ ಚಳವಳಿ ಅಥವಾ ಏಕೀಕರಣ ಚಳವಳಿಯೋ ಎಂಬುದರ ಸ್ಪಷ್ಟ ತಿಳುವಳಿಕೆ ಇಲ್ಲದೆ ಚಳವಳಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ೧೯೫೬, ನವೆಂಬರ್ ೧ರಂದು ಏಕೀಕರಣಗೊಂಡಾಗ ಪ್ರಧಾನ ನಾಯಕರುಗಳು ಹಾಗೂ ಸಾಹಿತಿಗಳು, ಲೇಖಕರು, ಪತ್ರಿಕಾ ಮಾಧ್ಯಮಗಳ ಪಾತ್ರ ಮಾತ್ರ ಪರಿಗಣಿಸಲಾಗುತ್ತಿದ್ದು ರಾಜ್ಯಾದ್ಯಂತ ಹಲವು ಕೈಗಾರಿಕೆಗಳ, ಗಿರಣಿಗಳ ನೌಕರರ ಪಾತ್ರ ಕಡೆಗಣಿಸಲಾಗಿದೆ. ಅದಕ್ಕೆ ಸೂಕ್ತ ಆಕರಗಳ ಕೊರತೆಯೂ ಕಾರಣವಿದ್ದಿರಬಹುದು. ಈ ಸಂದರ್ಭದಲ್ಲಿಯೂ ಸಂಶೋಧಕನಿಗೆ ಇದೇ ಸಮಸ್ಯೆ ಎದುರಾಗಿದೆ.

## ಕೊನೆ ಟಿಪ್ಪಣಿ

೧. ಈ ಮಾಹಿತಿಯನ್ನು *೧೯೨೫ರ ಕಾನ್ಫಿಡೆನ್ಷಿಯಲ್ ಫೈಲ್*‌ನಿಂದ ಪಡೆದುಕೊಳ್ಳಲಾಗಿದೆ. ಈ ಸಭೆಯು ೩೧-೦೫-೧೯೨೫ರಂದು ನಡೆಯಿತು. ಸಾಯಂಕಾಲ ೫.೩೦ಕ್ಕೆ ಪ್ರಾರಂಭವಾದ ಸಭೆ ೭.೩೦ಕ್ಕೆ ಮುಕ್ತಾಯಗೊಂಡಿತು. ಸುಮಾರು ೫೦೦ ಜನರು ಇದರಲ್ಲಿ ಪಾಲ್ಗೊಂಡಿದ್ದರು.

೨. ಸುಂದರ್‌ರಾವ್ ಬ.ನ., *ಬೆಂಗಳೂರಿನ ಇತಿಹಾಸ*, ಪು. ೫೩೩.

೩. ಸೂರ್ಯನಾಥ ಕಾಮತ್, ಕೃಷ್ಣಯ್ಯ ಎಂ.ಎಚ್. (ಸಂ.), *ಬೆಂಗಳೂರು ದರ್ಶನ*, ಪು. ೨೯೧.

೪. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್*, ೧೯೨೯, ಪು. ೧೭ ಮತ್ತು ೧೮.

೫. ಅದೇ, ಪು. ೧೮.

೬. ಅದೇ.

೭. ಅದೇ.

೮. ಅದೇ.

೯. ಅದೇ.

೧೦. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್*, ೧೯೩೦, ಪು. ೨೧.

೧೧. ಅದೇ.

೧೨. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೩೨-೩೩, ಪು. ೭೨.

೧೩. *ರಿಪೋರ್ಟ್ ಆಫ್ ದ ಇಂಡಸ್ಟ್ರೀಸ್ ಅಂಡ್ ಕಾಮರ್ಸ್*, ೧೯೩೩, ಪು. ೧೪.

೧೪. ಅದೇ.

೧೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೩೪-೩೫, ಪು. ೮೯.

೧೬. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೩೮-೩೯, ಪು. ೧೦೮.

೧೭. *ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಫೈಲ್, ನಂ. ೪೨೮ ಆಫ್ ೧೯೩೯*, ೧-೨.

೧೮. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್*, ೧೯೩೮-೩೯, ಪು. ೫೮.

೧೯. ಅದೇ.

೨೦. ಅದೇ.

೨೧. ಶಂಕರನಾರಾಯಣರಾವ್, ಎನ್.ಪಿ., ಮೈಸೂರು ಸಂಸ್ಥಾನದ ಮೊದಲ ಕಮ್ಯುನಿಸ್ಟರು, ಪು. ೧೮

೨೨. ಅದೇ, ಪು. ೧೯.

೨೩. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್*, ೧೯೩೮-೩೯, ಪು. ೫೮.

೨೪. ಅದೇ, ಪು. ೫೯.

೨೫. ಅದೇ.

೨೬. *ಕಾನ್ಫಿಡೆನ್ಷಿಯಲ್ ಫೈಲ್, ಬೆಂಗಳೂರು*, ದಿನಾಂಕ ೨೭ ಆಗಸ್ಟ್, ೧೯೪೧.

೨೭. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೩೯-೪೦, ಪು. ೧೩೨.

೨೮. ಶಂಕರನಾರಾಯಣರಾವ್, ಎನ್.ಪಿ., *ಮೈಸೂರು ಸಂಸ್ಥಾನದ ಮೊದಲ* ಕಮ್ಯುನಿಸ್ಟರು, ಪು. ೨೮.

೨೯. ಅದೇ.

೩೦. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೪೦-೪೧, ಪು. ೧೧೫.

೩೧. ಅದೇ.

೩೨. ಅದೇ.

೩೩. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್*, ೧೯೪೦-೪೧, ಪು. ೪೬.

೩೪. ಅದೇ.

೩೫. ಧನಂಜಯ ಕೀರ್, *ಡಾ. ಬಾಬಾಸಾಹೇಬ್ ಅಂಬೇಡ್ಕರ್*, ಪು. ೧೨೯.

೩೬. ಅದೇ, ಪು. ೧೩೦.

೩೭. ಚಂದ್ರಶೇಖರ್ ಎಸ್., *ಅಂಬೇಡ್ಕರ್ ಮತ್ತು ಗಾಂಧಿ*, ಪು. ೩೩.

೩೮. ಧನಂಜಯ ಕೀರ್, *ಡಾ. ಬಾಬಾಸಾಹೇಬ್ ಅಂಬೇಡ್ಕರ್*, ಪು. ೨೯೪.

೩೯. ಅದೇ, ಪು. ೨೯೫.

೪೦. ಚಂದ್ರಶೇಖರ್ ಎಸ್., *ಅಂಬೇಡ್ಕರ್ ಮತ್ತು ಗಾಂಧಿ*, ಪು. ೩೩.

೪೧. ಧನಂಜಯ ಕೀರ್, *ಡಾ. ಬಾಬಾಸಾಹೇಬ್ ಅಂಬೇಡ್ಕರ್*, ಪು. ೩೦೩.

೪೨. ಕುಬೇರ್ ಡಬ್ಲ್ಯೂ.ಎನ್, *ಅಂಬೇಡ್ಕರ್ ಎ ಕ್ರಿಟಿಕಲ್ ಸ್ಟಡಿ*, ಪು. ೨೦೮.

೪೩. ನರೇಂದ್ರ ಜಾದವ್ (ಸಂ.), *ಅಂಬೇಡ್ಕರ್ ಸ್ಪೀಕ್ಸ್*, ಸಂಪುಟ ೨, ಪು. ೧೦೯.

೪೪. ಅದೇ.

೪೫. ಅದೇ.

೪೬. ಅದೇ.

೪೭. ಅದೇ, ಪು. ೧೧೧.

೪೮. ಅದೇ, ಪು. ೧೧೪.

೪೯. ಅದೇ, ಪು. ೧೧೫.

೫೦. ಅದೇ, ಪು. ೧೧೭.

೫೧. ಅದೇ.

೫೨. ಅದೇ, ಪು. ೧೧೮.

೫೩. ಅದೇ, ಪು. ೧೨೯.

೫೪. ಚಂದ್ರಮೌಳಿ ಕೆ., *ಬೆಂಗಳೂರಿನ ನೋಟಗಳು*, ಪು. ೬೦.

೫೫. ಅದೇ, ಪು. ೬೫.

೫೬. ಅದೇ.

೫೭. ಸೂರ್ಯನಾಥ ಕಾಮತ್, ಕೃಷ್ಣಯ್ಯ ಎಂ.ಎಚ್. (ಸಂ.), *ಬೆಂಗಳೂರು ದರ್ಶನ*, ಪು. ೫೫.

೫೮. ಅದೇ.

೫೯. ಚಂದ್ರ ಬಿಪನ್, *ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್*, ಪು. ೨೨೨.

೬೦. ಅದೇ.

೬೧. ಜಾನಕಿ ನಾಯರ್, *ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್*, ಪು. ೨೭೮.

೬೨. ಅದೇ, ಪು. ೨೮೦.

೬೩. ಸೂರ್ಯನಾಥ ಕಾಮತ್, ಕೃಷ್ಣಯ್ಯ ಎಂ.ಎಚ್. (ಸಂ.), *ಬೆಂಗಳೂರು ದರ್ಶನ*, ಪು. ೬೧.

೬೪. ಅದೇ.

೬೫. ತಂಬಂಡ ವಿಜಯ್ ಪೂಣಚ್ಚ (ಸಂ.), *ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ಚರಿತ್ರೆ*, ಪು. ೮೩೯.

೬೬. ಶಂಕರನಾರಾಯಣರಾವ್, ಎನ್.ಪಿ., ಮೈಸೂರು ಸಂಸ್ಥಾನದ ಮೊದಲ ಕಮ್ಯುನಿಸ್ಟರು, ಪು. ೩೩.

೬೭. ಜಾನಕಿ ನಾಯರ್, ಮೈನರ್ಸ್ ಅಂಡ್ ಮಿಲ್‌ಹ್ಯಾಂಡ್ಸ್, ಪು. ೨೮೧.

೬೮. ಕಾನ್ಫಿಡೆನ್ಸಿಯಲ್ ಫೈಲ್, ಸಿ.ಸಿ. ನಂ. ೩/೪೧-೪೨, ದಿನಾಂಕ ಜುಲೈ ೨೮, ೧೯೪೧.

೬೯. ಸೂರ್ಯನಾಥ ಕಾಮತ್, ಎಕಾನ್ಸೈಸ್ ಹಿಸ್ಟರಿ ಆಫ್ ಕರ್ನಾಟಕ, ಪು. ೩೦೩.

೭೦. ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೮, ಪು. ೧೨೮.

# ಅಧ್ಯಾಯ – ೭

# ಗಿರಣಿಗಳ ಅವಸಾನದ ಹಂತ

---



---

# ಅಧ್ಯಾಯ – ೭

## ಗಿರಣಿಗಳ ಅವಸಾನದ ಹಂತ

ಕೆಲವು ಕೈಗಾರಿಕೆಗಳ ಸ್ಥಾನೀಕರಣವು ವಿಶೇಷವಾಗಿ ಕಡಿಮೆ ಕೂಲಿಗೆ ದುಡಿಯುವ ಕಾರ್ಮಿಕರು ಮತ್ತು ಕಚ್ಚಾ ಪದಾರ್ಥಗಳ ಪೂರೈಕೆ ಅಥವಾ ಕಾರ್ಖಾನೆಗಳ ಬಂಡವಾಳವನ್ನಾಧರಿಸಿ ಕೇಂದ್ರೀಕೃತವಾಗಿರುತ್ತವೆ. ಮಾರುಕಟ್ಟೆಗೆ ಸಮೀಪದಲ್ಲಿ ಕೈಗಾರಿಕೆಯೊಂದನ್ನು ಸ್ಥಾಪಿಸಿದರೆ ಸಾಗಾಣಿಕಾ ವೆಚ್ಚ ಮಿತಿಮೀರಿ ವಸ್ತುಗಳ ಉತ್ಪಾದನಾ ವೆಚ್ಚವೂ ಏರುವುದು. ಪರಿಣಾಮವಾಗಿ ಸಂಬಂಧಪಟ್ಟ ಕೈಗಾರಿಕಾ ಸಿದ್ಧವಸ್ತುಗಳ ಬೆಲೆಯೂ ತುಟ್ಟಿಯಾಗುವುದು. ಇದರಿಂದ ಕೆಲವೊಮ್ಮೆ ಅಂತಹ ಕಾರ್ಖಾನೆಗಳ ಸ್ಥಾನೀಕರಣವು ಬದಲಾಗುವ ಸಾಧ್ಯತೆ ಇರುತ್ತದೆ, ಬೆಂಗಳೂರಿನ ಹತ್ತಿ ಗಿರಣಿಗಳೂ ಸಹ ಇಂತಹ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿತು. ಮಾರುಕಟ್ಟೆ ಹಾಗೂ ಗಿರಣಿಗಳು ಎರಡೂ ನಗರದಲ್ಲಿಯೇ ಸ್ಥಾಪಿತವಾಗಿದ್ದು ಇದಕ್ಕೆ ಪೂರೈಸಬೇಕಾದ ಕಚ್ಚಾ ಪದಾರ್ಥಗಳನ್ನು ದೂರದಿಂದ ಸಾಗಿಸಬೇಕಾಗಿತ್ತು. ಏಕೆಂದರೆ ಗಿರಣಿಗಳು ಅವಸಾನ ಹೊಂದುವ ವೇಳೆಗೆ ಬೆಂಗಳೂರಿನ ಸುತ್ತಮುತ್ತಲ ಪ್ರದೇಶಗಳು ನಗರಗಳಾಗಿ ಪರಿವರ್ತನೆಯಾಗಿದ್ದವು. ಹೀಗಾಗಿ ಇವುಗಳಿಂದ ಉತ್ಪಾದನೆಯಾಗುತ್ತಿದ್ದ ಸಿದ್ಧ ಉಡುಪುಗಳ ಬೆಲೆಯೂ ತುಟ್ಟಿಯಾಯಿತು. ಈ ಮೇಲಿನ ಹೇಳಿಕೆಯು ಗಿರಣಿಗಳು ಅವಸಾನ ಹೊಂದಲು ಸಾಮೀಪ್ಯದ ಕಾರಣವಷ್ಟೇ ಹೊರತು ಅಂತಿಮವಲ್ಲ ಏಕೆಂದರೆ ಅವನತಿಯೂ ಕೂಡ ಒಂದು ಸದೀರ್ಘವಾದ ಪ್ರಕ್ರಿಯೆ.

೧೯೫೮–೫೯ರ ವೇಳೆಗೆ ರಾಜ್ಯದಲ್ಲಿ ೬೯ ಮುಷ್ಕರಗಳು ಹಾಗೂ ೬೨ ಬೀಗ ಮುದ್ರೆ ಪ್ರಕರಣಗಳು ವರದಿಯಾಗಿವೆ[೧]. ಇದರಿಂದ ಒಂದು ಕಡೆ ಸಾವಿರಾರು ಕಾರ್ಮಿಕರು ತೊಂದರೆಗೀಡಾದರೆ ಇನ್ನೊಂದು ಕಡೆ ಉತ್ಪಾದನೆಯಲ್ಲಿ ಗಣನೀಯ ಇಳಿಮುಖವನ್ನು ಕಾಣಲಾಯಿತು. ಇಂತಹ ಮುಷ್ಕರ ಹಾಗೂ ಬೀಗಮುದ್ರೆಗಳಿಂದ ಕೆಲಸದ ದಿನಗಳು ಹಾಳಾಗುವ ಪರಿಸ್ಥಿತಿಗಳು ದಿನೇದಿನೇ ಹೆಚ್ಚುತ್ತಾ ಹೋಯಿತು. ಪರಿಣಾಮವಾಗಿ ಮಾಲೀಕರೂ ಸಹ ತಮ್ಮ ಗಿರಣಿಗಳ ಮೇಲೆ ಆಸಕ್ತಿಯನ್ನು ಕಳೆದುಕೊಳ್ಳುತ್ತಾ ಬಂದರು.

## ೭.೧. ಕೃಷಿಯಿಂದಾದ ಬದಲಾವಣೆ

೧೯೨೫ರ ವೇಳೆಗೆ ಮೈಸೂರು ಸುತ್ತಮುತ್ತಲಿನಲ್ಲಿ ಎರಡು ರೀತಿಯ ಹತ್ತಿಯನ್ನು ಬೆಳೆಯುತ್ತಿದ್ದರು. ಅವುಗಳು ಉದ್ದನೆಯ ಸ್ಪಂಜಿನಂತಹ ಎಳೆಯ ಹತ್ತಿಯಾಗಿದ್ದವು. ಇದೇ ರೀತಿಯ ಹತ್ತಿಯನ್ನು ದಾವಣಗೆರೆಯ ಉತ್ತರದ ಕಡೆಗೆ ೩೦೦ ಮೈಲಿಗಳ ಆಸುಪಾಸಿನಲ್ಲಿ ಬೆಳೆಯುತ್ತಿದ್ದರು[೨]. ಆದರೆ ೧೯೮೦ರ ವೇಳೆಗೆ ಮೈಸೂರಿನಲ್ಲಿ ಹತ್ತಿ ಬೆಳೆಯುವ ಭೂ ಪ್ರದೇಶಗಳೇ ಮರೀಚಿಕೆಯಾದವು. ೧೯೩೮ರ ವೇಳೆಗಾಗಲೇ ಉತ್ತಮ ಹತ್ತಿ ಬಿತ್ತನೆ ಬೀಜದ ಹಂಚಿಕೆಯ ವಿಷಯದಲ್ಲಿ ಸರಿಯಾದ ಸಂಘಟನೆಯ ಕೊರತೆ ಎದುರಾಯಿತು. ಕೇವಲ ಒಂದು ದಶಕದಲ್ಲಿಯೇ ಈ ರೀತಿಯ ಸ್ಥಿತ್ಯಂತರಕ್ಕೆ ಮೈಸೂರಿನ ಹತ್ತಿ ಬೆಳೆಯು ಸಾಕ್ಷಿಯಾಯಿತು. ಸಾಗುವಳಿಯ ಮೇಲಿನ ನಿಯಂತ್ರಣದ ಗೈರುಹಾಜರಿ ಎದ್ದು ಕಾಣುತ್ತಿತ್ತು ಹಾಗೂ ಸಣ್ಣ ನೂಲಿನ ಎಳೆಯ ಹತ್ತಿಗೆ ಜೋತು ಬಿದ್ದು ಹತ್ತಿ ಬೆಳೆಯಲ್ಲಿ ಮೈಸೂರು ರಾಜ್ಯದ ಪ್ರತಿಷ್ಠೆ ಕುಸಿಯತೊಡಗಿತು[೩]. ಅವಸಾನದ ಪ್ರಕ್ರಿಯೆಯು ವಸಾಹತುಶಾಹಿ ಆಳ್ವಿಕೆಯ ಕಾಲದಲ್ಲಿಯೇ ಆರಂಭವಾಗಿತ್ತು. ಇದಕ್ಕೆ ಇಂಬು ನೀಡುವಂತೆ ೧೯೩೯ರಲ್ಲಿ ಕಚ್ಚಾ ಹತ್ತಿಯ ಬೆಲೆಯಲ್ಲಿ ಗಂಭೀರವಾದ ಕುಸಿತವನ್ನು ಕಾಣಲಾಯಿತು[೪].

೧೯೪೦ರ ಸಂದರ್ಭದಲ್ಲಿ ಮೈಸೂರು ರಾಜ್ಯದಲ್ಲಿ ಹತ್ತಿ ಬೆಳೆಗೆ 'ರೆಡ್ ಲೀಫ್' ಎನ್ನುವ ರೋಗ ತಗುಲಿ ಇಳುವರಿಯಲ್ಲಿ ಕುಸಿತವನ್ನು ಕಂಡಿತು. ಆ ಸಂದರ್ಭದಲ್ಲಿ ಇಂಡಿಯನ್ ಸೆಂಟ್ರಲ್ ಕಾಟನ್ ಕಮಿಟಿಯು ಕಾರ್ಯಪ್ರವೃತ್ತವಾಗಿ ದೊಡ್ಡಹಟ್ಟಿಯಲ್ಲಿ (ಮೈಸೂರು) 'ಎಂ.ಎ.-II' ಎನ್ನುವ ಹೊಸ ತಳಿಯನ್ನು ಪರಿಚಯಿಸಿತು. ಎಂ.ಎ. ಎಂದರೆ ಮೈಸೂರು–ಅಮೆರಿಕನ್ ಎಂದು. ಇದು ಇನ್ನಿತರೆ ಬಿತ್ತನೆ ಬೀಜಗಳಿಗಿಂತ ಮೇಲ್ಮಟ್ಟದ ರೋಗನಿರೋಧಕ ಶಕ್ತಿಯನ್ನು ಹೊಂದಿದ್ದ ತಳಿಯಾಗಿತ್ತು. ಸಿ.ಓ.–IV ಬಿತ್ತನೆ ಬೀಜವನ್ನು ಮದ್ದೂರು, ಮಳವಳ್ಳಿ, ಮಂಡ್ಯ ತಾಲ್ಲೂಕುಗಳಲ್ಲಿ ಪರಿಚಯಿಸಲಾಯಿತು. ಅಲ್ಲದೇ ಈಜಿಪ್ಟಿನ ಹತ್ತಿಯನ್ನು ಪ್ರಾಥಮಿಕ ಹಂತದಲ್ಲಿ ಪರೀಕ್ಷೆಗೆ ಒಳಪಡಿಸಲಾಗಿತ್ತು[೫]. ಈ ತೆರನಾದ ಆವಿಷ್ಕಾರಗಳೆಲ್ಲವೂ ಹತ್ತಿಯ ಇಳುವರಿಗೆ ಪೂರಕವೇ ಆಗಿದ್ದರೂ ಕರ್ನಾಟಕ ಅಥವಾ ಮೈಸೂರು ರಾಜ್ಯದಲ್ಲಿ ಹತ್ತಿ ಬೆಳೆಗೆ ಅನುಕೂಲಕರವಾದ ಭೂ ಪ್ರದೇಶ ಸ್ವಲ್ಪವೇ. ಹೀಗಾಗಿ ವಿಶಾಲ ಯೋಗ್ಯ ಭೂಮಿಯ ಕೊರತೆ ಇದ್ದುದರಿಂದ, ಮತ್ತೊಂದು ಕಡೆ ಸತತವಾಗಿ ಬೆಳೆಯುತ್ತಿದ್ದುದರಿಂದ ಫಲವತ್ತತೆಯ ಕೊರತೆ ಹಾಗೂ ಭೂ ಹವಾಗುಣ ಸಂಬಂಧಿತ ರೋಗಗಳಿಂದ ಹತ್ತಿ ಬೆಳೆಯು ಆಗಿಂದಾಗ್ಗೆ ಚೇತರಿಕೆಯನ್ನೂ ಕಾಣಬೇಕಿತ್ತು. ಬೆಳೆಯು ಅತೀವ ನಷ್ಟವನ್ನುಂಟು ಮಾಡಿದ್ದಲ್ಲಿ ರೈತರೂ ಸಹ ಇದರ ಬಗ್ಗೆ ನಿರಾಸಕ್ತಿಯನ್ನು ತಾಳುತ್ತಿದ್ದರು. ಹೀಗೆ ಹತ್ತಿ ಬಟ್ಟೆ ಗಿರಣಿಗಳು

ಅವಸಾನದ ಹಾದಿ ಹಿಡಿಯಲು ಅದರ ಪ್ರಾಥಮಿಕ ಹಂತವಾದ ಕೃಷಿ ವ್ಯವಸ್ಥೆಯು ಹಾಗೂ ಕಡಿಮೆ ಇಳುವರಿ ಅಥವಾ ಕಳಪೆ ಹತ್ತಿಯು ಕಾರಣವಾಗಿರುತ್ತದೆ. ಅಷ್ಟೇಕೆ ಕೃಷಿಯಾಧಾರಿತ ಕೈಗಾರಿಕೆಗಳ ಪಾಡೇ ಇಷ್ಟು. ಅದು ಸಕ್ಕರೆ ಕಾರ್ಖಾನೆಯೇ ಇರಬಹುದು ಅಥವಾ ಸೆಣಬು, ಕಾಫಿ, ಟೀ, ರಬ್ಬರ್ ಅದ್ಯಾವುದೇ ಕೈಗಾರಿಕೆಗಳ ಪರಿಸ್ಥಿತಿ ಇದೇ ರೀತಿಯದ್ದಾಗಿರುತ್ತದೆ.

೧೯೬೧ರ ವೇಳೆಗೆ ರಾಜ್ಯದಲ್ಲಿ ನಾಲ್ಕು ಕೃಷಿ ವಿಭಾಗಗಳು ಕಾರ್ಯ ನಿರ್ವಹಿಸುತ್ತಿದ್ದವು. ಅವುಗಳು ಕ್ರಮವಾಗಿ ಬೆಂಗಳೂರು, ಮೈಸೂರು, ಧಾರವಾಡ ಮತ್ತು ರಾಯಚೂರು. ಪ್ರತಿಯೊಂದು ವಿಭಾಗವು ಉಪನಿರ್ದೇಶಕರನ್ನು ಒಳಗೊಂಡಿದ್ದು ಇದರ ಅಡಿಯಲ್ಲಿ ೧೯ ಜಿಲ್ಲೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಜಿಲ್ಲೆಗೂ ತಲಾ ಒಬ್ಬೊಬ್ಬರಂತೆ ಜಿಲ್ಲಾ ಕೃಷಿ ಅಧಿಕಾರಿಗಳು ನೇಮಕವಾಗಿದ್ದರು[೬]. ರಾಜ್ಯದಲ್ಲಿ ಕೇವಲ ನಾಲ್ಕು ಬೆಳೆಗಳಾದ ಭತ್ತ, ಕಬ್ಬು, ಹತ್ತಿ ಹಾಗೂ ತಂಬಾಕುಗಳಿಗೆ ಮಾತ್ರ ತಜ್ಞರನ್ನು ನೇಮಿಸಿ ಇವುಗಳನ್ನು ನಾಲ್ಕು ಸಂಶೋಧನಾ ವಿಭಾಗಗಳಾದ ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಕೀಟಶಾಸ್ತ್ರ (ಎಂಟೋಮಾಲಜಿ) ಹಾಗೂ ಸಸ್ಯರೋಗ ಲಕ್ಷಣಶಾಸ್ತ್ರ (ಪ್ಲಾಂಟ್ ಪ್ಯಾಥಾಲಜಿ)ಗಳ ಮೂಲಕ ಸಂಶೋಧನೆಗೆ ಒಳಪಡಿಸಲಾಗುತ್ತಿತ್ತು. ಇವುಗಳ ಪಟ್ಟಿಯಲ್ಲಿ ಹತ್ತಿ ಬೆಳೆಯು ಪ್ರಮುಖ ಸ್ಥಾನವನ್ನು ಪಡೆದುಕೊಂಡಿತ್ತು. ಕೊನೆಯದಾಗಿ ಈ ಸಂಶೋಧನೆಯ ಫಲಿತಾಂಶವನ್ನು ಮೇಲಿನ ನಾಲ್ಕು ವಿಭಾಗಗಳು ಹಾಗೂ ಜಿಲ್ಲೆಗಳ ಮೂಲಕ ರೈತರಿಗೆ ಬಿತ್ತರಿಸುವ ಕಾರ್ಯವನ್ನು ಮಾಡಲಾಗುತ್ತಿತ್ತು. ಇದರ ಫಲಿತಾಂಶವಾಗಿ ರಾಜ್ಯದಲ್ಲಿ ಹತ್ತಿ ಬೇಸಾಯವು ೧೯೬೧ರ ವೇಳೆಗೆ ೨೩,೨೪,೦೦೦ ಎಕರೆ ಭೂ ಪ್ರದೇಶಗಳಿಗೆ ವಿಸ್ತರಣೆಯನ್ನು ಹೊಂದಿತು[೭]. ಇಷ್ಟೆಲ್ಲಾ ಸಂಶೋಧನೆ, ಪ್ರಯೋಗ ಹಾಗೂ ಪ್ರಯತ್ನಗಳಿದ್ದರೂ ಸಹ ೧೯೬೧ರ ಡಿಸೆಂಬರ್‌ನಲ್ಲಿ ಹತ್ತಿ ಬೆಳೆಯು ಹಲವು ರೀತಿಯ ರೋಗಗಳಿಗೆ ತುತ್ತಾಯಿತು. ಕುಸುಮ ರೋಗ ಮತ್ತು ಫಿಗಿ ಪೆಸ್ಟ್ ಎಂಬ ರೋಗವು ಮುದ್ದೆಬಿಹಾಳ ಹಾಗೂ ಬಾಗಲಕೋಟೆ ತಾಲ್ಲೂಕುಗಳಲ್ಲಿ ಕಾಣಿಸಿಕೊಂಡಿತು. ಬ್ಲಾಕ್ ವರ್ಮ್ಸ್ ಎಂಬ ರೋಗವು ಪರಸಗಡ ತಾಲ್ಲೂಕಿನಲ್ಲಿ ಕಾಣಿಸಿಕೊಂಡು[೮] ರೈತರಿಗೆ ಅಪಾರ ನಷ್ಟವನ್ನು ತಂದೊಡ್ಡಿತು. ಇದು ರೈತರ ಗಮನವನ್ನು ಬೇರೆ ಬೆಳೆಗಳ ಕಡೆಗೆ ಹರಿಸುವಂತೆ ಮಾಡಿತು.

೧೯೮೦-೮೧ರಲ್ಲಿ ಕೃಷಿ ಇಲಾಖೆಯು ಕೆಳಕಂಡ ಕಾಯ್ದೆಗಳ ಅಡಿಯಲ್ಲಿ ಅಧಿಕಾರವನ್ನು ಆಯಾ ವಲಯಕ್ಕೆ ನೀಡಿತು. ಆ ಕಾಯ್ದೆಗಳೆಂದರೆ

೧. ಕರ್ನಾಟಕ ಭೂ ಸುಧಾರಣಾ ಕಾಯಿದೆ ೧೯೬೧

೨. ಕರ್ನಾಟಕ ಬಿತ್ತನೆ ಬೀಜ ಕಾಯಿದೆ

೩. ಕರ್ನಾಟಕ ಕೀಟನಾಶಕ ಕಾಯಿದೆ

೪. ಕರ್ನಾಟಕ ಕೃಷಿ ಕೀಟಗಳು ಮತ್ತು ರೋಗಗಳ ಕಾಯಿದೆ (೧೯೬೮)

೫. ಹತ್ತಿ ಸಾರಿಗೆ ಕಾಯಿದೆ

೬. ಹತ್ತಿ ನಿಯಂತ್ರಣ ಕಾಯಿದೆ ಹಾಗೂ ಕೊನೆಯದಾಗಿ

೭. ಹತ್ತಿ ಹಿಂಜುವ ಮತ್ತು ಒತ್ತುವ ಕಾರ್ಖಾನೆಗಳ ಕಾಯಿದೆ.

ಈ ಎಲ್ಲಾ ಕಾಯಿದೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಆರಂಭಿಸಿದವು. ಆದರೆ ಇವುಗಳೆಲ್ಲವೂ ಒಂದಕ್ಕೊಂದು ಪೂರಕವಾಗಿದ್ದವೇ? ಎಂಬುದೇ ಪ್ರಶ್ನೆ. ಏಕೆಂದರೆ ಮೊದಲು ಈ ಎಲ್ಲಾ ಕಾಯ್ದೆಗಳು ಒಂದೇ ಇಲಾಖೆಯ ಅಡಿಯಲ್ಲಿ ಬರುತ್ತಿದ್ದುದರಿಂದ ಅವುಗಳು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತಿದ್ದುದು ಸಹಜ. ಈ ಅವಧಿಯಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಹತ್ತಿ, ಕಬ್ಬು ಹಗೂ ತಂಬಾಕು ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಗಳು ಎಂದು ಗುರುತಿಸಲಾಗುತ್ತಿತ್ತು. ಈ ಬೆಳೆಗಳ ಅಭಿವೃದ್ಧಿಗಾಗಿ, ಉತ್ಪಾದನೆಯ ಏರಿಕೆಗಾಗಿ ರಾಜ್ಯದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ೧೯೮೦-೮೧ರ ಅವಧಿಯಲ್ಲಿ ಹತ್ತಿ ಅಭಿವೃದ್ಧಿಗಾಗಿ ಕೆಲವು ಯೋಜನೆಗಳನ್ನು ಜಾರಿ ಮಾಡಲಾಯಿತು. ಅವುಗಳು :

೧. ರಾಜ್ಯ ಯೋಜನೆ ಹಾಗೂ ಯೋಜನೇತರ ಅಡಿಯಲ್ಲಿ ಹತ್ತಿಯ ಬೆಳವಣಿಗೆಗಾಗಿ ಸಮಗ್ರ ಯೋಜನೆ.

೨. ತೀವ್ರ ಹತ್ತಿ ಜಿಲ್ಲಾ ಕಾರ್ಯಕ್ರಮದ (ಇಂಟೆನ್ಸಿವ್ ಕಾಟನ್ ಡಿಸ್ಟ್ರಿಕ್ಟ್ ಪ್ರೋಗ್ರಾಂ{ಐಸಿಡಿಪಿ}) ಕೇಂದ್ರೀಯ ಪ್ರಾಯೋಜಿತ ಯೋಜನೆ.

೩. ಹತ್ತಿ ಶುದ್ಧತೆಯ ನಿರ್ವಹಣೆಗಾಗಿ ಹಾಗೂ ಹತ್ತಿ ಶಾಸನ ಜಾರಿಗಾಗಿ ಯೋಜನೆಗಳು.

೪. ಮಿಶ್ರ ತಳಿ ಹತ್ತಿಯ ವರ್ಗೀಕರಣಕ್ಕಾಗಿ ಯೋಜನೆ[೧೦]. ಹೀಗೆ ಬದಲಾದ ಕೃಷಿ ವ್ಯವಸ್ಥೆಯಿಂದ ಹತ್ತಿ ಬೆಳೆಯು ಅಭಿವೃದ್ಧಿ ಕಾಣುವ ಹಿನ್ನೆಲೆಯಿಂದ ಬದಲಾವಣೆಗೆ ಒಗ್ಗಿಕೊಳ್ಳಬೇಕಾಯಿತು.

ಮೇಲ್ಕಂಡ ಯೋಜನೆಗಳಡಿಯಲ್ಲಿ ಈ ಅವಧಿಯಲ್ಲಿ ಹತ್ತಿ ಬೆಳೆಯಲ್ಲಿ ಭೌತಿಕ ಗುರಿ ಹಾಗೂ ಬೆಳವಣಿಗೆಯನ್ನು ಸಹ ಹಾಕಿಕೊಳ್ಳಲಾಯಿತು. ಅದನ್ನು ಒಂದು ಕೋಷ್ಟಕದ ಮೂಲಕ ನೀಡಲಾಗಿದೆ[೧೧].

# ಐಸಿಡಿಪಿ ೧೯೮೦-೮೧ ಮತ್ತು ೧೯೮೧-೮೨

| ವಿಷಯ | ಯೂನಿಟ್ | ಸಮಗ್ರ ಹತ್ತಿ ಬೆಳವಣಿಗೆ ಯೋಜನೆ | ಐಸಿಡಿಪಿ ಧಾರವಾಡ | ಐಸಿಡಿಪಿ ಬಿಜಾಪುರ | ಐಸಿಡಿಪಿ ಟಿ.ಬಿ. ಪ್ರಾಜೆಕ್ಟ್ | ಐಸಿಡಿಪಿ ಮಲಪ್ರಭ |
|---|---|---|---|---|---|---|
| ೧ | ೨ | ೩ | ೪ | ೫ | ೬ | ೭ |
| ಪ್ರದೇಶವಾರು ಗುರಿ | | | | | | |
| ಗುರಿ | ಹೆಕ್ಟೇರುಗಳಲ್ಲಿ | ೧,೧೭೮<br>(೮೦-೮೧) ೧,೧೭೮ | ೬೦<br>(೮೦-೮೧) ೬೦ | ೪೦<br>(೮೦-೮೧) ೪೦ | ೬೦<br>(೮೦-೮೧) ೬೦ | ೩೦<br>(೮೦-೮೧) ೩೦ |
| ಸಾಧನೆ | ಮಾಡಿದ್ದು | ೯೬೧<br>(೮೧-೮೨) ೯೧೦ | ೬೦<br>(೮೧-೮೨) ೫೯ | ೩೫<br>(೮೧-೮೨) ೪೦ | ೨೪<br>(೮೧-೮೨) ೪೪ | ೨೫<br>(೮೧-೮೨) ೨೫ |
| ಬಿತ್ತನೆ ಬೀಜಗಳ ಹಂಚಿಕೆ | | | | | | |
| ಗುರಿ | ಟನ್‌ಗಳಲ್ಲಿ | ------<br>(೮೦-೮೧) ೬,೨೪೮ | ೬೦೦<br>(೮೦-೮೧) ೬೦೦ | ೪೦೦<br>(೮೦-೮೧) ೪೦೦ | ೩೦೦<br>(೮೦-೮೧) ೧೫ | ೩೦೦<br>(೮೦-೮೧) ೨೦೦ |
| ಸಾಧನೆ | ಸಾಧಿಸಿದ್ದು | (೮೧-೮೨) ------ | ೬೦೦<br>(೮೧-೮೨) ೬೦೮ | ೨೩೧<br>(೮೧-೮೨) ೪೦೦ | ೫೮<br>(೮೧-೮೨) ೧೪ | ೧೩೦<br>(೮೧-೮೨) ೧೨೦ |
| ಪ್ರದೇಶವಾರು ರಸಗೊಬ್ಬರ ಹಚಿಚಿಕೆ | | | | | | |
| ಗುರಿ | ಹೆಕ್ಟೇರ್‌ಗಳಲ್ಲಿ | ೬೫೭<br>(೮೦-೮೧) | ೬೦<br>(೮೦-೮೧) ೬೦ | ೪೦<br>(೮೦-೮೧) ೪೦ | ೬೦<br>(೮೦-೮೧) ೬೦ | ೩೦<br>(೮೦-೮೧) ೩೦ |
| ಸಾಧನೆ | ಸಾಧಿಸಿದ್ದು | ೩೯೭<br>(೮೧-೮೨) | ೬೦<br>(೮೧-೮೨) ೫೯ | ೩೫<br>(೮೧-೮೨) ೪೦ | ೨೪<br>(೮೧-೮೨) ೪೪ | ೧೫<br>(೮೧-೮೨) ೨೪ |
| ಪ್ರದೇಶವಾರು ಸಸ್ಯಗಳ ರಕ್ಷಣೆ | | | | | | |
| ಗುರಿ | ಹೆಕ್ಟೇರ್‌ಗಳಲ್ಲಿ | ೬೪೭<br>(೮೦-೮೧) | ೬೦<br>(೮೦-೮೧) ೬೦ | ೪೦<br>(೮೦-೮೧) ೪೦ | ೬೦<br>(೮೦-೮೧) ೬೦ | ೩೦<br>(೮೦-೮೧) ೩೦ |
| ಸಾಧನೆ | ಸಾಧಿಸಿದ್ದು | ೩೭೬<br>(೮೧-೮೨) | ೬೦<br>(೮೧-೮೨) ೫೯ | ೩೫<br>(೮೧-೮೨) ೪೦ | ೨೪<br>(೮೧-೮೨) ೪೪ | ೧೮<br>(೮೧-೮೨) ೨೪ |
| ಪ್ರದೇಶವಾರು ಪ್ರದರ್ಶನ | | | | | | |
| ಗುರಿ | ಹೆಕ್ಟೇರ್‌ಗಳಲ್ಲಿ | ೪೦೦<br>(೮೦-೮೧) ೪೦೦ | ೧೧೨೫<br>(೮೦-೮೧) ೬೦೦ | ೭೫೧<br>(೮೦-೮೧) ೪೦೦ | ೩೦೦<br>(೮೦-೮೧) ೬೦೦ | ೧೫೦<br>(೮೦-೮೧) ೩೦೦ |
| ಸಾಧನೆ | ಸಾಧಿಸಿದ್ದು | ೩೫೭<br>(೮೧-೮೨) ೪೦೦ | ೧೧೨೫<br>(೮೧-೮೨) ೬೦೦ | ೬೬೩<br>(೮೧-೮೨) ೪೦೦ | ೩೦೦<br>(೮೧-೮೨) ೬೦೦ | ೧೫೦<br>(೮೧-೮೨) ೩೦೦ |

ಮೇಲಿನ ಕೋಷ್ಟಕವನ್ನು ಸೂಕ್ಷ್ಮವಾಗಿ ಗಮನಿಸಿದಾಗ ರಾಜ್ಯದ ವಿವಿಧೆಡೆಯಲ್ಲಿ ಹತ್ತಿ ಬೆಳೆ ಹಾಗೂ ಅದಕ್ಕೆ ಪೂರಕವಾದ ಪರಿಕರಗಳಲ್ಲಿನ ಗುರಿ ಹಾಗೂ ಸಾಧನೆಯಲ್ಲಿ ಏರಿಳಿತವನ್ನು ಕಾಣಬಹುದು. ಹಲವು ಸಂದರ್ಭದಲ್ಲಿ ಹಾಕಿಕೊಂಡ ಗುರಿಯನ್ನು ಸಾಧಿಸಿದ್ದು ಎದ್ದು ಕಾಣುತ್ತದೆ. ಅಲ್ಲದೇ ೧೯೬೧ರಲ್ಲಿ ಪ್ರಮುಖ ಕೃಷಿ ವಿಭಾಗಗಳಲ್ಲಿ ಬೆಂಗಳೂರು ಮತ್ತು ಮೈಸೂರು ಮುಂಚೂಣಿಯಲ್ಲಿದ್ದು; ಹತ್ತಿ, ತಂಬಾಕು, ಕಬ್ಬುಗಳಲ್ಲಿ ಹಲವು ಪ್ರಯೋಗ, ಸಂಶೋಧನೆಗಳು ಈ ಎರಡು ಪ್ರದೇಶಗಳಿಂದಲೇ ಹೆಚ್ಚಾಗಿ ನಡೆಯುತ್ತಿದ್ದುದು ಗಮನಾರ್ಹ. ಆದರೆ ಕೇವಲ ಎರಡು ದಶಕಗಳಲ್ಲಿ ಅಂದರೆ ೧೯೮೧ರ ವೇಳೆಗಾಗಲೇ ಪರಿಸ್ಥಿತಿ ಬದಲಾಗಿ ಹೋಗಿದ್ದು ಹತ್ತಿಗಾಗಿ ಐಸಿಡಿಪಿ ಯೋಜನೆಯಡಿ ಧಾರವಾಡ, ಬಿಜಾಪುರ, ತುಂಗಭದ್ರಾ ಜಲಾನಯನ ಪ್ರದೇಶ, ಮಲಪ್ರಭಾ ಪ್ರದೇಶಗಳು ಆಕ್ರಮಿಸಿಕೊಂಡವು. ಅದು ಪ್ರದೇಶವಾರು, ಬಿತ್ತನೆ ಬೀಜ, ರಸಗೊಬ್ಬರ, ಇನ್ನಾವುದೇ ಗುರಿ ಸಾಧನೆಯ ಪ್ರಯೋಗಗಳಿಗೆ ಉತ್ತರ ಕರ್ನಾಟಕದ ಭೂ ಭಾಗಗಳು ವೇದಿಕೆಯಾದವು. ದಕ್ಷಿಣ ಕರ್ನಾಟಕದ ಭೂ ಪ್ರದೇಶಗಳಿಂದ ಹತ್ತಿ ಬೆಳೆಯು ಕಾಲ್ಕಿತ್ತಿರುವುದು ಈ ಕೋಷ್ಟಕದಿಂದ ಸ್ಪಷ್ಟವಾಗಿ ತಿಳಿಯುವ ಅಂಶವಾಗಿದೆ.

೧೯೮೬-೮೭ರ ವೇಳೆಗೆ ಬಿಜಾಪುರ ಹಾಗೂ ಚಿತ್ರದುರ್ಗವು ಹತ್ತಿಯ ಕೇಂದ್ರ ಸ್ಥಳಗಳಾದವು. 'ಹತ್ತಿ ಅಭಿವೃದ್ಧಿ ಯೋಜನೆ'ಯನ್ನು ಜಾರಿಗೆ ತರುವುದಕ್ಕೆ ರಾಜ್ಯವು ನಾಲ್ಕು ವಿಶಾಲ ಪ್ರದೇಶಗಳಾಗಿ ವಿಭಾಗಿಸಿತ್ತು. ಅವುಗಳು ಕ್ರಮವಾಗಿ ಬಿಜಾಪುರ, ಚಿತ್ರದುರ್ಗ, ಧಾರವಾಡ ಮತ್ತು ರಾಯಚೂರು. ಇಲ್ಲಿ ಬೆಂಗಳೂರಿನ ಪಾತ್ರವೇನಿದ್ದರೂ ಯೋಜನೆಯ ತಾಂತ್ರಿಕ ವಿಷಯದ ಮೇಲ್ವಿಚಾರಣೆಗೆ ಸೀಮಿತ[೧]. ಈ ವೇಳೆಗೆ ಮೈಸೂರಿನ ಸುತ್ತಮುತ್ತಲ ಪ್ರದೇಶಗಳು ಹತ್ತಿ ಬೆಳೆಯಿಂದ ನಾಮಾವಶೇಷಗೊಂಡಿದ್ದವು.

ದಿನ ಪತ್ರಿಕೆಯಲ್ಲಿ ಪ್ರಕಟವಾದ ಕೆಲವು ವರದಿಗಳನ್ನು ಆಧರಿಸಿ 'ಬಿಟಿ' ಹತ್ತಿ ಬೆಳೆಯಿಂದ ಹೇಗೆ ರೈತರು ಬೀದಿಗೆ ಬಂದರು ಎಂಬುದನ್ನು ಚರ್ಚಿಸಲಾಗಿದೆ. ೬೦ನೇ ದಶಕದಲ್ಲಿ 'ಅಧಿಕ ಉತ್ಪಾದನೆ' ಮಂತ್ರದ ಹಸಿರು ಕ್ರಾಂತಿಯ ಅಗತ್ಯತೆಗಳನ್ನು ಪೂರೈಸಲು ಅಧಿಕ ಇಳುವರಿಯ ಬೀಜಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಿ ರೈತರಿಗೆ ಹಂಚಬೇಕು ಎಂದು ಸರ್ಕಾರ ಹೇಳಿತು. ರೈತರದಲ್ಲದ ಬೀಜಗಳನ್ನು ಬಿಡುಗಡೆ ಮಾಡಿ ದೇಶದ ಮೂಲೆ ಮೂಲೆಗೂ ಹಂಚಿಕೆ ಮಾಡುವ ವ್ಯವಸ್ಥೆಯನ್ನು ಸರ್ಕಾರ ಹುಟ್ಟುಹಾಕಿತು. ವಿಶ್ವಬ್ಯಾಂಕಿನ ಹಣ ಸಹಾಯ ಪಡೆದು ಸರ್ಕಾರ

‘ರಾಷ್ಟ್ರೀಯ ಬೀಜ ನಿಗಮ’ವನ್ನು ಸ್ಥಾಪಿಸಿತು[೧೩]. ಕ್ರಮೇಣವಾಗಿ ರಾಷ್ಟ್ರೀಯ ಬೀಜ ಪ್ರಾಜೆಕ್ಟ್ ಒಂದು ಮತ್ತು ಎರಡು, ನಂತರ ರಾಜ್ಯ ಬೀಜ ನಿಗಮಗಳು ಸ್ಥಾಪನೆಯಾದವು. ಬೀಜ ಉತ್ಪಾದನೆ ಮತ್ತು ಪೂರೈಕೆಗೆ ಅಗತ್ಯವಾದ ಕಾನೂನುಗಳನ್ನು ಸರ್ಕಾರ ತಂದಿತು.

ಹಸಿರು ಕ್ರಾಂತಿಯ ಪ್ರಾರಂಭದ ವರ್ಷಗಳಲ್ಲಿ ಕ್ರಿಯಾಶೀಲವಾಗಿದ್ದ ಸರ್ಕಾರಿ ಸಂಸ್ಥೆಗಳು ಕ್ರಮೇಣ ನಿಷ್ಕ್ರಿಯವಾಗುತ್ತಾ ಖಾಸಗಿಯವರ ಪ್ರಾಬಲ್ಯ ಪ್ರಾರಂಭವಾಯಿತು. ೧೯೮೭ರಲ್ಲಿ ಎಂಆರ್‌ಟಿಪಿ ಮತ್ತು ಎಫ್‌ಇಆರ್‌ಎ ನಿಯಮಗಳನ್ನು ಸಡಿಲಗೊಳಿಸಿದ್ದು, ೧೯೮೮ರಲ್ಲಿ ತಂದ ಹತ್ತಿ ಬೀಜ ನೀತಿಗಳೆಲ್ಲಾ ಖಾಸಗಿ ಕ್ಷೇತ್ರದ ಬೆಳವಣಿಗೆಗೆ ಅನುಕೂಲಮಾಡಿಕೊಟ್ಟವು[೧೪]. ಆಮದು ನಿಯಂತ್ರಣವನ್ನು ಸಡಿಲಗೊಳಿಸಿ ತೆರಿಗೆಯನ್ನು ಶೇ. ೧೫ಕ್ಕೆ ಇಳಿಸಿದ್ದು ಖಾಸಗಿ ಕಂಪನಿಗಳ ಪ್ರವೇಶಕ್ಕೆ ಆಹ್ವಾನವಾಯಿತು. ರಾಷ್ಟ್ರೀಯ ಮತ್ತು ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಬೀಜ ಮಾರುಕಟ್ಟೆಗೆ ಲಗ್ಗೆ ಇಟ್ಟವು.

ಇನ್ನು ‘ಬಿಟಿ’ ಹತ್ತಿಯ ಬಗ್ಗೆ ಚರ್ಚಿಸುವುದಾದರೆ ಇದು ಮಾರುಕಟ್ಟೆಗೆ ಪ್ರವೇಶವಾದಾಗಿನಿಂದ ಸ್ಥಳೀಯ ತಳಿಗಳ ಹೆಸರೇ ಮರೆತು ಹೋಗುತ್ತಿವೆ. ರೈತರಿಗಷ್ಟೇ ಅಲ್ಲ, ಕೃಷಿ ವಿಜ್ಞಾನಿಗಳಿಗೂ ಸರ್ಕಾರಿ ಕೃಷಿ ಅಧಿಕಾರಿಗಳಿಗೂ ಮರೆತು ಹೋಗುತ್ತಿವೆ. ಇಡೀ ದೇಶದಲ್ಲೆಲ್ಲಾ (ಶೇ. ೯೩ ಪಾಲು) ಒಂದೇ ಕಂಪನಿಯ ಬಿಟಿ ಹತ್ತಿ ಬೆಳೆ ವ್ಯಾಪಿಸಿದೆ. ಕೆಲವು ವರ್ಷಗಳ ಹಿಂದೆ ದೇಶದ ಉದ್ದಗಲಕ್ಕೆ ನೂರಕ್ಕೂ ಹೆಚ್ಚು ಹತ್ತಿಯ ತಳಿಗಳು ಬಳಕೆಯಲ್ಲಿದ್ದವು. ಆಯಾ ಪ್ರಾಂತ್ಯದ ಹವಾಗುಣಕ್ಕೆ ತಕ್ಕಂತೆ ಅವು ಎಕರೆಗೆ ನಾಲ್ಕಾರು ಕ್ವಿಂಟಾಲ್, ನೀರಾವರಿ ಇದ್ದಲ್ಲಿ ಹತ್ತು-ಹದಿನೈದು ಕ್ವಿಂಟಾಲ್ ಫಸಲನ್ನು ಕೊಡುತ್ತಿದ್ದವು. ಮಾನ್ಸಾಂಟೋ ಕಂಪನಿಯ ಬಿಟಿ ಹತ್ತಿ ಮಾರುಕಟ್ಟೆಗೆ ಲಗ್ಗೆ ಇಡುತ್ತಿದ್ದಂತೆ ಎಕರೆಗೆ ಇಪ್ಪತ್ತು ಕ್ವಿಂಟಾಲ್ ಇಳುವರಿ ಪಡೆಯುವ ಭ್ರಮೆಯಿಂದ ರೈತರು ಮುಗಿಬಿದ್ದು ಕೊಂಡು ಬಿತ್ತನೆ ಮಾಡಿದರು. ನಂತರ ಬಿಟಿ ತಳಿ ಹತ್ತಿಯನ್ನು ಮಾರುವ ಅನೇಕ ಕಂಪನಿಗಳು ಪೈಪೋಟಿಯಲ್ಲಿ ರೈತರನ್ನು ಹಿಂಡತೊಡಗಿದವು. ಸರ್ಕಾರದ ಯಾವ ನಿಯಂತ್ರಣವೂ ಈ ಕಂಪನಿಗಳ ಮೇಲೆ ಇಲ್ಲ. ಬೀಜದ ಪೂರೈಕೆಯ ಮೇಲೆ ನಿಯಂತ್ರಣ ಇಲ್ಲ, ಗುಣಮಟ್ಟದ ಮೇಲೆ ನಿಯಂತ್ರಣ ಇಲ್ಲ, ಬೆಲೆಯ ಮೇಲೆಯೂ ನಿಯಂತ್ರಣ ಇಲ್ಲ, ಒಟ್ಟಿನಲ್ಲಿ ರೈತರು ಖಾಸಗಿ ಕಂಪನಿಗಳ ಪಿತೂರಿಗೆ ಒಳಗಾಗಿದ್ದಾರೆ. ಇತರ ಹತ್ತಿ ತಳಿಗಳನ್ನು ಮೂಲೆಗೊತ್ತಿದ ‘ಕಂಪನಿ ಹತ್ತಿ’ ಇಡೀ ರಾಷ್ಟ್ರವನ್ನೇ ವ್ಯಾಪಿಸಿ ರೈತ

ಸಮುದಾಯವನ್ನು ತನ್ನ ಮುಷ್ಠಿಯಲ್ಲಿ ಹಿಡಿದಿಟ್ಟುಕೊಂಡಿದೆ[೧೫]. ಇದೆಲ್ಲದಕ್ಕಿಂತ ದೊಡ್ಡ ಆಘಾತಕಾರಿ ಅಂಶವೆಂದರೆ ನಮ್ಮ ವಿಜ್ಞಾನಿಗಳು, ಎತ್ತರದ ಹುದ್ದೆಯಲ್ಲಿದ್ದವರು ಇದರಲ್ಲಿ ಶಾಮೀಲಾಗಿದ್ದಾರೆ.

ಈ ಪಿತೂರಿಯ ವ್ಯಾಪ್ತಿ ಅರ್ಥವಾಗುವ ಮುನ್ನ 'ಬಿಟಿ ಹತ್ತಿ' ಎಂದರೆ ಏನೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಮಣ್ಣಿನಲ್ಲಿರುವ ಒಂದು ಜಾತಿಯ ಏಕಾಣುಜೀವಿಯ ಶರೀರದ ತುಂಬೆಲ್ಲಾ ವಿಷವಿದೆ ಎಂಬುದನ್ನು ಜರ್ಮನಿಯ ವಿಜ್ಞಾನಿಗಳು ೧೯೨೦ರಲ್ಲೇ ಪತ್ತೆ ಹಚ್ಚಿದ್ದರು. ಥುರಿಂಜೆನ್ ಪಟ್ಟಣದ ವಿಶ್ವವಿದ್ಯಾಲಯದ ಆವರಣದ ಮಣ್ಣಿನಿಂದ ಆ ಜೀವಿಯನ್ನು ಎತ್ತಿದ್ದರಿಂದ ಅದಕ್ಕೆ 'ಬ್ಯಾಕ್ಟೀರಿಯಂ ಥುರಿಂಜೆನ್ಸಿಸ್' (ಬಿ.ಟಿ) ಎಂದು ಹೆಸರಿಟ್ಟರು[೧೬]. ಅದನ್ನು ಪೀಪಾಯಿಗಳಲ್ಲಿ ಬೆಳೆಸಿ, ಒಣಗಿಸಿ ಪುಡಿಮಾಡಿ ಕಾಯಿಕೊರಕ ಹುಳುಗಳ ಹಾವಳಿ ಇರುವ ಸಸ್ಯಗಳಿಗೆ ಎರಚಿದರೆ ಹುಳು ಸಾಯುತ್ತದೆ. ಏಕಸ್ವಾಮ್ಯವನ್ನು ಪಡೆದ ಮೊನ್ಸಾಂಟೊ ಕಂಪನಿ 'ಬಿಟಿ'ಯಲ್ಲಿ ಹಲವಾರು ಅವಾಂತರಗಳನ್ನು ಸೃಷ್ಟಿಸಿದೆ ಎಂಬುದು ಹಲವು ವಿದ್ವಾಂಸರ ವಾದವಾಗಿದೆ.

ಗುಜರಾತಿನಲ್ಲಿ ಹತ್ತಿ ಬೆಳೆದ ರೈತರು ಉರುಳಿಗೆ ಕೊರಳು ಕೊಡುತ್ತಿದ್ದಾರೆ. ಮುಂಗಾರು ಕೈಕೊಟ್ಟ ಕಾರಣ ರೈತರ ಇಂತಹ ಆತ್ಮಹತ್ಯೆ ಪ್ರಕರಣಗಳು ಸರ್ವೆ ಸಾಮಾನ್ಯವಾಗಿಬಿಟ್ಟಿವೆ. ಹತ್ತಿ ಉತ್ಪಾದನೆಯಲ್ಲಿ ಗುಜರಾತಿನದು ಬಹುದೊಡ್ಡ ಕೊಡುಗೆ. ನೆರೆಯ ಮಹಾರಾಷ್ಟ್ರಕ್ಕಿಂತ ಮೂರು ಪಟ್ಟು ಹೆಚ್ಚು ಇಳುವರಿ ಬರುತ್ತದೆ[೧೭]. ಆ ರಾಜ್ಯದ ಪರಿಸ್ಥಿತಿಯೇ ಹೀಗಿರುವಾಗ ಇನ್ನೂ ಕರ್ನಾಟಕದ್ದು ಹೇಳಲಸಾಧ್ಯ. ಸರ್ಕಾರವೇ ಹೇಳುವ ಪ್ರಕಾರ, ಒಂದು ಗಿರಣಿಯ ಕಾರ್ಯನಿರ್ವಹಣೆಗೆ ಬೇಕಾದ ಕಚ್ಚಾವಸ್ತುಗಳ ಆಧಾರದಲ್ಲಿ ನೋಡಬೇಕಾದರೆ ಹತ್ತಿ ಗಿರಣಿಗಳು ಕನಿಷ್ಠ ೫೨ ಲಕ್ಷ ಹೊರೆ ಹತ್ತಿಯನ್ನು ಹೊಂದಿರಬೇಕು ಅಥವಾ ಎರಡೂವರೆ ತಿಂಗಳಿಗಾಗುವಷ್ಟು ಹತ್ತಿ ಅವರಲ್ಲಿರಬೇಕು[೧೮]. ಒಂದು ವೇಳೆ ಗಿರಣಿಗಳು ಇಷ್ಟು ಪ್ರಮಾಣದಲ್ಲಿ ಹೊಂದಿರದಿದ್ದರೆ ಅದಕ್ಕ ಹಲವು ಕಾರಣಗಳನ್ನು ನೀಡಬಹುದು. ಮಿಲ್ಲುಗಳು ಹಣಕಾಸಿನ ಮುಗ್ಗಟ್ಟು ಎದುರಿಸುತ್ತಿರಬಹುದು. ಮಿಲ್ಲುಗಳ ಸೌಲಭ್ಯ ಇಷ್ಟು ವರ್ಷಗಳಾದರೂ ಹೆಚ್ಚದೇ ಇದ್ದಿರಬಹುದು ಎಂಬಿತ್ಯಾದಿ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಭಾರತೀಯ ಹತ್ತಿ ನಿಗಮ (ಸಿಸಿಐ) ಅಗತ್ಯವಿರುವಷ್ಟು ಹತ್ತಿ ಕೊಳ್ಳುವ ಕೇಂದ್ರಗಳನ್ನು ಸ್ಥಾಪಿಸದೇ ಇರುವುದು. ಈ ಎಲ್ಲಾ ಕೃಷಿಯಿಂದಾದ ಬದಲಾವಣೆಗಳು ಬೆಂಗಳೂರಿನಲ್ಲಿ ಹತ್ತಿ ಗಿರಣಿಗಳು ಅವಸಾನ ಹೊಂದಿರುವುದಕ್ಕೆ ಕಾರಣಾಂಶಗಳಾಗಿ ಪ್ರತಿಪಾದಿಸಬಹುದಾಗಿದೆ.

## ೭.೨. ಆಧುನಿಕ ಯಂತ್ರೋಪಕರಣಗಳು

ಸ್ವಾತಂತ್ರ್ಯ ಪೂರ್ವದಲ್ಲಿಯೇ (೧೯೪೪) ರಾಜ್ಯದ ಗಿರಣಿಗಳು ಹಲವು ಸಮಸ್ಯೆಗಳಲ್ಲಿ ಮುಳುಗಿದ್ದವು. ಇವುಗಳನ್ನು ಸುಧಾರಿಸುವ ಹಿನ್ನೆಲೆಯಿಂದ ಹೆಚ್ಚಿನ ಸಾಲದ ನೆರವನ್ನು ನೀಡಲು ಮುಂದಾಗಿದ್ದನ್ನು ಕಾಣಬಹುದು. ಈ ಬೆಳವಣಿಗೆಯನ್ನು ಒಂದು ಕಡೆ ಸುಧಾರಣೆ ಅನ್ನೋಣವೆಂದರೆ, ಇನ್ನೊಂದು ಕಡೆ ಸಾಲದಲ್ಲಿ ಮುಳುಗುತ್ತಿರುವುದು ಅವಸಾನದ ಸಂಕೇತವೆಂದು ಮುಕ್ತವಾಗಿ ಹೇಳಬಹುದು. ೧೯೪೪ರ ವೇಳೆಗೆ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿಗೆ ನೀಡಿದ ಸಾಲದ ಪ್ರಮಾಣ ೧೭.೨೫ ಲಕ್ಷ ರೂ.ಗಳು[೧೯]. ಅದಲ್ಲದೇ ದೀರ್ಘಕಾಲದವರೆಗೆ ನಡೆಯುತ್ತಿದ್ದ ಮುಷ್ಕರಗಳು, ವಿದ್ಯುಚ್ಛಕ್ತಿಯ ಪೂರೈಕೆಯಲ್ಲಾಗುತ್ತಿದ್ದ ಏರುಪೇರು ಗಿರಣಿಗಳ ಉತ್ಪಾದನೆಯ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತಿತ್ತು. ವಿದ್ಯುಚ್ಛಕ್ತಿ ಸೌಲಭ್ಯವನ್ನು ಪಡೆದುಕೊಂಡ ನಂತರ ಗಿರಣಿಗಳು ಅದಕ್ಕೆ ಹೊಂದಿಕೊಂಡು ಪೂರೈಕೆಯಲ್ಲಿ ಹೆಚ್ಚು ಕಡಿಮೆಯಾದಾಗ ಅದು ಯಾಂತ್ರಿಕ ಸಮಸ್ಯೆಯಾಗಿ ಪರಿವರ್ತನೆಗೊಳ್ಳಲು ಆರಂಭಿಸಿತು. ಈ ವೇಳೆಗೆ ಬೆಂಗಳೂರಿನ ಬಹುತೇಕ ಹತ್ತಿ ಗಿರಣಿಗಳು ವಿದ್ಯುಚ್ಛಕ್ತಿ ಸೌಲಭ್ಯವನ್ನು ಹೊಂದಿದ್ದವು.

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆರ್ಥಿಕ ವಲಯದಲ್ಲಿ ಬಹು ಮುಖ್ಯವಾದ ಬೆಳವಣಿಗೆಯೆಂದರೆ ಜಂಟಿ ಷೇರು ಕಂಪನಿಗಳ ಉಗಮ ಹಿಂದೆ ಕಂಡರಿಯದಂತೆ ತಲೆಯೆತ್ತಿದವು. ಇವುಗಳ ಪ್ರಭಾವ ಮೈಸೂರು ರಾಜ್ಯದ ಮೇಲೂ ತುಸು ಹೆಚ್ಚಾಗಿಯೇ ಇತ್ತು. ಇವುಗಳ ಸಹಯೋಗದೊಂದಿಗೆ ೧೯೪೮ರ ಜೂನ್‌ನಲ್ಲಿ ಶ್ರೀ ಚಲ್ಮೇಶ ಟೆಕ್ಸ್‌ಟೈಲ್ಸ್ ಮಿಲ್ಸ್ ಲಿ., ಎಂಬ ಗಿರಣಿಯು ಚಿತ್ರದುರ್ಗದಲ್ಲಿ ೨೦ ಲಕ್ಷ ರೂಪಾಯಿ ಬಂಡವಾಳದೊಂದಿಗೆ ಸ್ಥಾಪನೆಗೊಳ್ಳುವುದಾಗಿ ನೋಂದಣಿ ಮಾಡಿಕೊಂಡಿತು. ಈ ಗಿರಣಿಯು ಆಧುನಿಕ ಸಲಕರಣೆ, ಯಂತ್ರೋಪಕರಣಗಳೊಂದಿಗೆ ಜಿನ್ನಿಂಗ್, ಪ್ರೆಸ್ಸಿಂಗ್, ಸ್ಪಿನ್ನಿಂಗ್ ಮತ್ತು ಡೈಯಿಂಗ್ ಸೌಲಭ್ಯಗಳನ್ನು ಹೊಂದಿದ್ದು, ಹತ್ತಿ, ರೇಷ್ಮೆ, ಸೆಣಬು ಹಾಗೂ ನಾರಿನ ಬಟ್ಟೆಗಳಿಗೆ ಸಂಬಂಧಿಸಿದ್ದಾಗಿತ್ತು[೨೦]. ಈ ರೀತಿಯ ದೊಡ್ಡ ಪೈಪೋಟಿಯನ್ನು ಸಾಂಪ್ರದಾಯಿಕ ಗಿರಣಿಗಳು ಎದುರಿಸಬೇಕಾಗಿತ್ತು. ಅಲ್ಲದೇ ಬೆಂಗಳೂರು ಒಂದರಲ್ಲಿಯೇ ಕೈಗಾರಿಕೆ ಮತ್ತು ಕೃಷಿ ಯಂತ್ರೋಪಕರಣಗಳಿಗೆ ಸಂಬಂಧಪಟ್ಟಂತೆ ೫೦ ಲಕ್ಷ ರೂಪಾಯಿ ಬಂಡವಾಳದೊಂದಿಗೆ ರಫ್ತು, ಆಮದು ವ್ಯಾಪಾರ ಮಾಡುವುದಾಗಿ ೧೯೪೮ರ ಮಾರ್ಚ್ ತಿಂಗಳಿನಲ್ಲಿಯೇ ಜಂಟಿ ಷೇರು

ಕಂಪನಿಯೊಂದು ನೋಂದಾಯಿಸಿಕೊಂಡಿತ್ತು[೨೧]. ಇದರ ವೇಗ, ತಾಪ ಎರಡನ್ನೂ ಸಾಂಪ್ರದಾಯಿಕ ಗಿರಣಿಗಳು ಸಹಿಸಿಕೊಂಡಿರಲು ಸಾಧ್ಯವಿರಲಿಲ್ಲ ಎಂದೆನಿಸುತ್ತದೆ.

೧೯೪೮ರ ನಂತರ ತೆಲಂಗಾಣ ಪ್ರಾಂತ್ಯದಿಂದ ಸೊಲ್ಲಾಪುರಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೇಕಾರರು ವಲಸೆ ಬರಲು ಪ್ರಾರಂಭಿಸಿದರು. ಅಲ್ಲದೇ ನೂಲುವ ಯಂತ್ರಗಳ ಪ್ರಮಾಣದಲ್ಲಿ ದೊಡ್ಡ ಏರಿಕೆಯನ್ನು ಕಾಣಲಾಯಿತು[೨೨] ಎಂಬುದಾಗಿ ತೀರ್ಥಂಕರ ರಾಯ್ ಅವರು ವಿಶ್ಲೇಷಿಸಿದ್ದಾರೆ.

ಬೆಂಗಳೂರಿನಲ್ಲಿಯೇ ೧೯೫೦ರಲ್ಲಿ ಶ್ರೀ ವಿನಾಯಕ ಮಿಲ್ಸ್ ಲಿ., ಮತ್ತು ಶ್ರೀ ಕೃಷ್ಣ ಸ್ಪಿನ್ನಿಂಗ್ ಅಂಡ್ ವೀವಿಂಗ್ ಮಿಲ್ಸ್ ಲಿ., ಎಂಬ ಎರಡು ಗಿರಣಿಗಳು ಬೃಹತ್ ಬಂಡವಾಳದೊಂದಿಗೆ ಇದೇ ಜಂಟಿ ಷೇರು ಕಂಪನಿಯ ನೆರವಿನಿಂದ ಪ್ರಾರಂಭಗೊಂಡಿದ್ದವು[೨೩]. ಈ ಗಿರಣಿಗಳ ವಿನ್ಯಾಸ, ಮಾದರಿ, ಅಳವಡಿಕೆಯಾಗಿದ್ದ ಯಂತ್ರೋಪಕರಣಗಳು ವಸಾಹತು ಕಾಲದ ಗಿರಣಿಗಳಾದ ಬಿನ್ನಿ, ಮಹಾರಾಜ, ಮಿನರ್ವ, ಜಯಚಾಮರಾಜೇಂದ್ರ ಮಿಲ್ಲುಗಳಿಗಿಂತ ಮೇಲ್ಮಟ್ಟದ್ದಾಗಿದ್ದವು. ಈ ಸಾಂಪ್ರದಾಯಿಕ ಗಿರಣಿಗಳು ಇವುಗಳಿಗೆ ಪೈಪೋಟಿ ಒಡ್ಡಬಲ್ಲ ಶಕ್ತಿಯನ್ನು ಹೊಂದಿದ್ದವೆ ಎಂಬುದೇ ಚರ್ಚಾರ್ಹ.

೧೯೫೧, ಜೂನ್‌ನಲ್ಲಿ ದಾವಣಗೆರೆಯಲ್ಲಿ ಒಂದು ಕೋಟಿ ಬಂಡವಾಳದೊಂದಿಗೆ ಶ್ರೀ ಯಲ್ಲಮ್ಮ ಕಾಟನ್, ಉಲನ್ ಅಂಡ್ ಸಿಲ್ಕ್ ಮಿಲ್ಸ್ ಕಂ. ಲಿ., ಎಂಬ ಗಿರಣಿಯು ಸ್ಥಾಪನೆಯಾಯಿತು[೨೪]. ಇದು ಆ ವೇಳೆಗೆ ಇಡೀ ಮೈಸೂರು ರಾಜ್ಯದಲ್ಲಿಯೇ ಅಧಿಕ ಬಂಡವಾಳದೊಂದಿಗೆ ಪ್ರಾರಂಭವಾದ ಹತ್ತಿ ಗಿರಣಿಯಾಗಿತ್ತು. ಈ ಗಿರಣಿಯು ಬೆಂಗಳೂರು, ಮೈಸೂರು ನಗರಗಳಲ್ಲಿದ್ದ ಗಿರಣಿಗಳಿಗೆ ದೊಡ್ಡ ಮಟ್ಟದ ಪೈಪೋಟಿಯನ್ನು ಒಡ್ಡಬಲ್ಲ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡಿತ್ತು. ಇದೂ ಸಹ ಬೆಂಗಳೂರಿನ ಸಾಂಪ್ರದಾಯಿಕ ಸರಣಿಯ ಗಿರಣಿಗಳು ಪೈಪೋಟಿಯಲ್ಲಿ ಹಿಂದುಳಿಯಲು ಕಾರಣವಾದ ಅಂಶವೇ ಆಗಿದೆ. ಇನ್ನೊಂದು ಪ್ರಮುಖಾಂಶವೇನೆಂದರೆ ಈ ವೇಳೆಗಾಗಲೇ ರಾಜ್ಯಾದ್ಯಂತ ನೇಕಾರರ ಸಹಕಾರ ಸಂಘಗಳು ಪ್ರಾರಂಭವಾಗಿ ಇದರ ಎಲ್ಲಾ ಚಟುವಟಿಕೆಗಳು ಮೈಸೂರು ಪ್ರಾಂತೀಯ ಹತ್ತಿ ಕೈ ಮಗ್ಗಗಳ ನೇಕಾರರ ಸಹಕಾರ ಸಂಘ (ಮೈಸೂರು ಪ್ರಾವಿನ್ಷಿಯಲ್ ಕಾಟನ್ ಹ್ಯಾಂಡ್‌ಲೂಮ್ ವೀವರ್ಸ್ ಕೋ-ಆಪರೇಟಿವ್ ಸೊಸೈಟಿ)ದ ಅಡಿಯಲ್ಲಿ ಕಾರ್ಯನಿರ್ವಹಿಸಲು ಆರಂಭಿಸಿದವು[೨೫]. ಇವುಗಳೂ ಸಹ ಆಧುನಿಕವಾಗಿದ್ದು ಬಂಡವಾಳದಲ್ಲಿ ಕಡಿಮೆಯಿದ್ದರೂ ಸಾಂಪ್ರದಾಯಿಕ ಹತ್ತಿ ಗಿರಣಿಗಳಿಂದ ಹೊರ ಬಂದ ಕಾರ್ಮಿಕರು ಇವುಗಳಲ್ಲಿ ತಮ್ಮನ್ನು ತೊಡಗಿಡಿಕೊಂಡಿದ್ದರಲ್ಲಿ ಏನೂ

ಆಶ್ಚರ್ಯವಿರಲಿಲ್ಲ. ವಸಾಹತು ಕಾಲದ ಗಿರಣಿಗಳಲ್ಲಿ ಕೆಲಸ ಮಾಡಿದ್ದ ಕಾರ್ಮಿಕರನ್ನು ಸಂದರ್ಶಿಸಿದಾಗ, ಅವರಿಗೂ ಸಹ ಈ ಗಿರಣಿಗಳು ಕಾರ್ಮಿಕರನ್ನು ನಡೆಸಿಕೊಳ್ಳುತ್ತಿದ್ದ ರೀತಿಯ ಬಗ್ಗೆ ಹಾಗೂ ಕೆಲಸ ಕಳೆದುಕೊಂಡಾಗ ಅಥವಾ ಕಂಪನಿ ಮುಚ್ಚಿದಾಗ ಕಾರ್ಮಿಕರಿಗೆ ನೀಡಬೇಕಾಗಿದ್ದ ನಷ್ಟ ಪರಿಹಾರದ ವಿಷಯವಾಗಿ ಅಷ್ಟಾಗಿ ಒಳ್ಳೆಯ ಅಭಿಪ್ರಾಯ ಇದ್ದಿರಲಿಲ್ಲ ಎಂದೆನಿಸಿತು.

೧೯೫೩–೫೪ರ ವೇಳೆಗೆ ೩೫ ಹತ್ತಿಗಿರಣಿಗಳು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಆರು ಮಿಲ್ಲುಗಳು ಬಟ್ಟೆ ಮತ್ತು ನೂಲನ್ನು ಉತ್ಪಾದಿಸುತ್ತಿದ್ದರೆ, ೨೬ ಮಿಲ್ಲುಗಳು ಕೇವಲ ಬಟ್ಟೆಯನ್ನು ಮಾತ್ರ ಉತ್ಪಾದಿಸುತ್ತಿದ್ದವು. ಎರಡು ಮಿಲ್ಲುಗಳು ಕೇವಲ ನೂಲನ್ನು ಮಾತ್ರ ಉತ್ಪಾದಿಸುತ್ತಿತ್ತು ಹಾಗೂ ಇನ್ನುಳಿದ ಒಂದು ಮಿಲ್ಲು ಸಿದ್ಧ ಉಡುಪುಗಳನ್ನು ಉತ್ಪಾದಿಸುತ್ತಿತ್ತು[೨೬]. ಈ ವೇಳೆಗಾಗಲೇ ಬೆಂಗಳೂರಿನ ಸಾಂಪ್ರದಾಯಿಕ ಗಿರಣಿಗಳು ಮೇಲಿನವುಗಳ ಭರಾಟೆಯಲ್ಲಿ ಈಜಬೇಕಾಗಿತ್ತು.

೧೯೪೮ರ 'ಕಾಟನ್ ಟೆಕ್ಸ್‌ಟೈಲ್ಸ್ ಕಂಟ್ರೋಲ್ ಆರ್ಡರ್' ಜಾರಿಯಾಗುತ್ತಿದ್ದಂತೆ ಭಾರತದಾದ್ಯಂತ ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿದ್ದ ವಿದ್ಯುತ್ ಚಾಲಿತ ಹತ್ತಿ ನೂಲಿನ ಮಗ್ಗಗಳನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲು ಪ್ರಯತ್ನಿಸಲಾಯಿತು. ಇದರರ್ಥ ೧೯೩೦ರ ವೇಳೆಗಾಗಲೇ ಭಾರತದ ಸಾಂಪ್ರದಾಯಿಕ ಹತ್ತಿ ಗಿರಣಿಗಳು ದೊಡ್ಡ ಮಟ್ಟದ ಪೈಪೋಟಿಯನ್ನು ಆಗ ತಾನೆ ಹುಟ್ಟಿಕೊಂಡ ಯಾಂತ್ರಿಕ ಮಗ್ಗಗಳ ಜೊತೆ ನಡೆಸಬೇಕಾಗಿತ್ತು. ಅದಲ್ಲದೇ ಕೇಂದ್ರ ಸರ್ಕಾರವೇ ೧೯೫೬ರಲ್ಲಿ ಯಾಂತ್ರಿಕ ಮಗ್ಗಗಳ ನಿಯಂತ್ರಣ ಕಾಯ್ದೆಯನ್ನು (ಪವರ್ ಲೂಮ್ ಕಂಟ್ರೋಲ್ ಆರ್ಡರ್) ಜಾರಿಗೆ ತಂದು ಈ ಮಗ್ಗಗಳಿಗೆ ಪರವಾನಗಿ ನೀಡಲು ಮುಂದಾಯಿತು"[೨೭]. ಇದರ ಸ್ಪಷ್ಟ ನಿರ್ದೇಶನವನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೂ ರವಾನಿಸಿತು. ಅದರಂತೆ ಮೈಸೂರು ರಾಜ್ಯವು ಇವುಗಳಿಗೆ 'ಬಿ' ಮತ್ತು 'ಸಿ' ವರ್ಗದ ಪರವಾನಗಿ ನೀಡಲು ಮುಂದಾಯಿತು[೨೮]. ಇದರ ಫಲವಾಗಿ ೧೦೦೦ ಪರವಾನಗಿಯು ಯಾಂತ್ರಿಕ ಮಗ್ಗಗಳಿಗೆ ಸಿಕ್ಕಿತು. ಮಗ್ಗಗಳನ್ನು ಪ್ರಾರಂಭಿಸಲು ದೊಡ್ಡ ಹತ್ತಿ ಗಿರಣಿಗಳಿಗೆ ಅಗತ್ಯವಿದ್ದಷ್ಟು ಬಂಡವಾಳದ ಅವಶ್ಯಕತೆ ಇವುಗಳಿಗೆ ಇರಲಿಲ್ಲ. ರಾಜ್ಯದಲ್ಲಿ ತಲೆ ಎತ್ತಿದ ಈ ಮಗ್ಗಗಳು ಹೆಚ್ಚಾಗಿ ಹತ್ತಿ ನೂಲಿನ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ಇವುಗಳಿಂದ ಉತ್ಪಾದನೆಯಾದ ವಿವಿಧ ಬಗೆಯ ಜವಳಿಗಳು ಚಿಲ್ಲರೆ ಹಾಗೂ ಸಗಟು ವ್ಯಾಪಾರದಲ್ಲಿ ರಾಜ್ಯದಲ್ಲಿನ ಅನೇಕ ಕೇಂದ್ರಗಳಿಗೆ ಬಂದು ತಲುಪುತ್ತಿದ್ದವು. ಈ ತ್ವರಿತತೆಯು ರಾಜ್ಯದ ಇತರ ವಸಾಹತುಶಾಹಿ ಕಾಲದ ಹತ್ತಿ ಗಿರಣಿಗಳು ತಮ್ಮ ಆಕರ್ಷಣೆಯನ್ನು ಕಳೆದುಕೊಳ್ಳಲು ಕಾರಣವಾಯಿತು.

೧೯೮೮ರ ಕೊನೆಯ ವೇಳೆಗೆ ರಾಜ್ಯದಲ್ಲಿ ೨೬೨ ಪ್ರಾಥಮಿಕ ಹತ್ತಿ, ರೇಷ್ಮೆ ಮತ್ತು ಉಣ್ಣೆ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಸ್ಥಾಪನೆಯಾದವು. ಇವುಗಳ ಪಕ್ಕದಲ್ಲಿಯೇ ಮೂರು ಅಪೆಕ್ಸ್ ಸಂಘಗಳಿದ್ದು ಪ್ರತಿಯೊಂದು ಸಹ ರಾಜ್ಯದಲ್ಲಿನ ಹತ್ತಿ, ಉಣ್ಣೆ ಮತ್ತು ರೇಷ್ಮೆಗಾಗಿ ತೊಡಗಿಸಿಕೊಂಡಿದ್ದವು[೨೯]. ಬಿಜಾಪುರ ಜಿಲ್ಲೆಯ ರಬಕವಿ, ಬನಹಟ್ಟಿ ಮತ್ತು ಇಳಕಲ್ಲುಗಳಲ್ಲಿ ತೀವ್ರ ಅಥವಾ ತ್ವರಿತ ಕೈಮಗ್ಗಗಳ ಅಭಿವೃದ್ಧಿ ಯೋಜನೆಗಳು (ಇಂಟೆನ್ಸಿವ್ ಹ್ಯಾಂಡ್ ಲೂಮ್ ಡೆವೆಲಪ್‌ಮೆಂಟ್ ಪ್ರಾಜೆಕ್ಟ್ಸ್) ಪ್ರಾರಂಭವಾದವು. ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 'ರಫ್ತು ಆಧಾರಿತ ಹತ್ತಿ ಯೋಜನೆಗಳು' (ಎಕ್ಸ್ಪೋರ್ಟ್ ಓರಿಯೆಂಟೆಡ್ ಕಾಟನ್ ಪ್ರಾಜೆಕ್ಟ್ಸ್) ಜಾರಿಯಾದವು[೩೦]. ಇದೇ ಅವದಿಯಲ್ಲಿ ವಿವಿಧ ಯೋಜನೆಗಳಾದ ಸಾಮಾಜಿಕ ನೇಯ್ಗೆ ಕೇಂದ್ರ, ಬಣ್ಣ ಹಾಕುವ ಗೃಹಗಳ ನಿರ್ಮಾಣ, ಕಾರ್ಮಿಕರಿಗೆ ಗೃಹ ಕಾಲೋನಿಗಳು, ಮಿತವ್ಯಯ ನಿಧಿ ಯೋಜನೆಗಳು, ಸುಧಾರಿತ ಮಗ್ಗಗಳು ಮತ್ತು ಇತರ ಉಪಕರಣಗಳ ಪೂರೈಕೆ, ಇತ್ಯಾದಿ ಯೋಜನೆಗಳು ಜಾರಿಯಾದವು[೩೧]. ಇವೆಲ್ಲವುಗಳನ್ನೂ ಸೂಕ್ಷ್ಮವಾಗಿ ಅವಲೋಕಿಸಿದಾಗ ಬೆಂಗಳೂರಿನ ಬಿನ್ನಿಮಿಲ್ಲು, ಮೈಸೂರು ಮಿಲ್ಲು, ಮಿನರ್ವ ಮಿಲ್ಲು ಹಾಗೂ ಮೈಸೂರಿನ ಕೃಷ್ಣರಾಜೇಂದ್ರ ಮಿಲ್ಲುಗಳಲ್ಲಿ ನಡೆಯುತ್ತಿದ್ದ ಕಾರ್ಯ, ಉತ್ಪಾದನೆ ಈ ಮೇಲಿನ ಎಲ್ಲಾ ಯೋಜನೆಗಳಲ್ಲೂ ಸರಾಗವಾಗಿ ನಡೆಯಲಾರಂಭಿಸಿದ್ದವು. ಈ ಪ್ರಕ್ರಿಯೆಯು ಸಾಂಪ್ರದಾಯಿಕ ಗಿರಣಿಗಳಿಗೆ ಸಹಿಸಿಕೊಳ್ಳದ ಅಥವಾ ಚೇತರಿಸಿಕೊಳ್ಳದ ಪೆಟ್ಟು ಹಾಗೂ ಪೈಪೋಟಿಯನ್ನು ನೀಡಿದ್ದವು. ೧೯೮೦ರ ವೇಳೆಗಾಗಲೇ ಬೆಂಗಳೂರು ಮತ್ತು ಮೈಸೂರಿನ ಸಾಂಪ್ರದಾಯಿಕ ಹತ್ತಿ ಗಿರಣಿಗಳು ಅಂದರೆ ವಸಾಹತು ಕಾಲದ ಇತಿಹಾಸವಿರುವ ಹತ್ತಿ ಗಿರಣಿಗಳು ಅವಸಾನದ ದಾರಿಯ ಕೊನೆಯ ಹಂತವನ್ನು ತುಳಿದಾಗಿತ್ತು.

## ೭.೩. ವಿದೇಶಿ ವಿನಿಮಯ ಹಾಗೂ ಭಾರತದ ಆರ್ಥಿಕತೆ

ವಿದೇಶಿ ವಿನಿಮಯ ಎಂಬ ಪರಿಕಲ್ಪನೆಯನ್ನು ವಿವಿಧ ರೀತಿಯಲ್ಲಿ ಅರ್ಥೈಸಬಹುದು. ಒಂದು ಪರಿಮಿತ ವ್ಯಾಪ್ತಿಯಲ್ಲಿ, ವಿದೇಶಿ ವಿನಿಮಯ ಎಂಬ ಪರಿಕಲ್ಪನೆಯನ್ನು ಎಲ್ಲಾ ವಿದೇಶಿ ನಾಣ್ಯಗಳನ್ನು ಪ್ರತಿನಿಧಿಸಲು ಬಳಸಿಕೊಳ್ಳಲಾಗಿದೆ. ಆದಾಗ್ಯೂ ಇದರ ವ್ಯಾಪಕ ಅರ್ಥದಲ್ಲಿ ವಿದೇಶಿ ವಿನಿಮಯ ಎಂದರೆ ಬಾಹ್ಯ ಅಥವಾ ಅಂತರರಾಷ್ಟ್ರೀಯ ಪಾವತಿಗಳ ಒಂದು ವ್ಯವಸ್ಥೆ. ಇದು ನೇರವಾಗಿ ವಿದೇಶಿ ವ್ಯಾಪಾರದಿಂದ ಹೊರಹೊಮ್ಮಿರುವಂತಹದ್ದು. ೧೯೩೪ರ ವೇಳೆಗೆ ಭಾರತವು ಹತ್ತಿ ಹಾಗೂ ರೇಷ್ಮೆ ಬಟ್ಟೆ ವ್ಯಾಪಾರದಲ್ಲಿ ಜಪಾನ್ ಹಾಗೂ ಚೈನಾ ರಾಷ್ಟ್ರಗಳ ಪ್ರಬಲ ಪೈಪೋಟಿಯನ್ನು

ಎದುರಿಸಬೇಕಾಗಿತ್ತು. ಈ ಎರಡು ರಾಷ್ಟ್ರಗಳಿಂದ ಆಮದಾಗುತ್ತಿದ್ದ ಹತ್ತಿಯ ನೂಲನ್ನು ನಿಯಂತ್ರಿಸುವಲ್ಲಿ ನಮ್ಮಲ್ಲಿ ಸೂಕ್ತವಾದ ಸುಂಕದ ವ್ಯವಸ್ಥೆ ಇರಲಿಲ್ಲ. ಈ ಅವಧಿಯಲ್ಲಿ 'ಸುಂಕ ತಿದ್ದುಪಡಿ ಮಸೂದೆ' (ಟಾರಿಫ್ ಅಮೆಂಡ್‌ಮೆಂಟ್ ಬಿಲ್)ಯನ್ನು ಜಾರಿ ಮಾಡಿದ್ದರೂ ರೇಷ್ಮೆ ಅಥವಾ ಹತ್ತಿಯ ಪದಾರ್ಥಗಳಿಗೆ ಇದರಿಂದ ಸರಿಯಾದ ರಕ್ಷಣೆ ಸಿಗಲಿಲ್ಲ[೩೨]. ಹಾಗಿದ್ದೂ ಬೆಂಗಳೂರಿನ ಕಾರ್ಖಾನೆಗಳು ಜಪಾನಿ ವಸ್ತುಗಳಿಗೆ ಪೈಪೋಟಿ ನೀಡುವ ದೆಸೆಯಲ್ಲಿ 'ಜಾಹಿರಾತು ಸುಂಕ'ದ (ಆ್ಯಡ್ ವ್ಯಾಲರೆಮ್ ಡ್ಯೂಟೀಸ್) ಪ್ರಯೋಜನವನ್ನು ಎರಡುಪಟ್ಟು ಪಡೆದುಕೊಳ್ಳುವಲ್ಲಿ ಸಫಲವಾಯಿತು[೩೩]. ಈ ಉಪಯೋಗವನ್ನು ಗಿರಣಿಗಳು ಅಥವಾ ಕಾರ್ಖಾನೆಗಳು ಪಡೆದುಕೊಳ್ಳುವಲ್ಲಿ ಸರ್ಕಾರದ ಪಾತ್ರವೂ ಹಿರಿದಾಗಿತ್ತು. ಮೈಸೂರು ರಾಜ್ಯವು ಸ್ಥಳೀಯ ರಾಜರ ನಿಯಂತ್ರಣದಲ್ಲಿದ್ದರೂ ಬೆಳವಣಿಗೆಯ ವಿಷಯದಲ್ಲಿ ಬ್ರಿಟಿಷ್ ಪ್ರಾಂತ್ಯಗಳಿಗಿಂತ ಒಂದು ಹೆಜ್ಜೆ ಮುಂದಿದ್ದಿತು. ಇದರಲ್ಲಿ ಮಿರ್ಜಾ ಇಸ್ಮಾಯಿಲ್‌ರ (ದಿವಾನರು) ದಕ್ಷ ಹಾಗೂ ಜಾಣತನದ ಆಡಳಿತವೂ ಪರೋಕ್ಷವಾಗಿ ಸಹಕಾರಿಯಾಗಿದ್ದಿತು. ವಸಾಹತು ಕಾಲಘಟ್ಟದಲ್ಲಿಯೇ ಈ ರೀತಿಯ ಅಬೇಧ್ಯ ಸವಾಲುಗಳನ್ನು ನಮ್ಮ ಹತ್ತಿ ಗಿರಣಿಗಳು ಎದುರಸಿದ್ದವು ಎಂದರೆ ತಪ್ಪಾಗಲಾರದು. ಆದರೆ ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಈ ರೀತಿಯ ಪೈಪೋಟಿ ಕಾಣೆಯಾಗಿದ್ದಿತು. ಇದಕ್ಕೆ ನಮ್ಮ ಸರ್ಕಾರದ ಕಡೆಗೆ ಬೆರಳು ಮಾಡಿ ತೋರಿಸಬೇಕೇ? ಅಥವಾ ಗಿರಣಿಗಳ ಆಂತರಿಕ ಸಮಸ್ಯೆಯೇ? ಎಂಬುದು ಚರ್ಚಾರ್ಹ ಸಂಗತಿಯಾಗಿದೆ.

ಮೂರನೇ ಪಂಚವಾರ್ಷಿಕ ಯೋಜನೆಯ ಮೊದಲ ವರ್ಷ (೧೯೬೧)ದಲ್ಲಿ ಕೃಷಿ ಉತ್ಪಾದನೆಯ ಹೆಚ್ಚಳಕ್ಕಾಗಿ ಹಲವು ಯೋಜನೆಗಳು, ಸಂಶೋಧನೆಗಳು, ಮಣ್ಣು ಸಂರಕ್ಷಣೆ ಹಾಗೂ ಸಣ್ಣ ನೀರಾವರಿ ಹೀಗೆ ವಿವಿಧ ಇಲಾಖೆಗಳನ್ನು ತೆರೆಯಲಾಯಿತು. ಒಟ್ಟಾರೆ ಪ್ರಾರಂಭದ ಪಂಚವಾರ್ಷಿಕ ಯೋಜನೆಗಳು ಕೃಷಿಗೆ ಹೆಚ್ಚಿನ ಒತ್ತು ನೀಡಿದ್ದವು. ಆದರೆ ೧೯೬೪–೬೫ರ ವೇಳೆಗೆ ಬಟ್ಟೆಗಳ ಉತ್ಪಾದನೆಯ ಮೇಲೆ ಹಾಗೂ ಬೆಲೆಗಳ ಮೇಲೆ ನಿಯಂತ್ರಣ ತರುವ ಉದ್ದೇಶದಿಂದ 'ಕಂಟ್ರೋಲ್ಡ್ ಕ್ಲಾತ್' (ನಿಯಂತ್ರಣ ಬಟ್ಟೆ) ಎಂಬ ಕಾಯಿದೆಯನ್ನು ಪರಿಚಯಿಸಿ ಮಾರಾಟದ ಮೇಲೆ ಹೇರಲಾಯಿತು[೩೪]. ಇದು ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿದ್ದಿತು. ಆದರೆ ದೇಶದಲ್ಲಿನ ಗಿರಣಿಗಳನ್ನು ಇಕಟ್ಟಿಗೆ ಸಿಲುಕಿಸಿದ್ದರಲ್ಲಿ ಯಾವುದೇ ಅನುಮಾನವಿಲ್ಲ.

೧೯೬೬ರಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಪ್ರಾರಂಭ ಎಂದು ಘೋಷಿಸಲಾಯಿತು. ಆದರೆ ಕಾರಣಾಂತರಗಳಿಂದ ಜಾರಿಯಾಗದೇ ೧೯೬೬-೬೭ರಲ್ಲಿ ವಾರ್ಷಿಕ ಯೋಜನೆಯು ಇದರ ಸ್ಥಾನ ಆಕ್ರಮಿಸಿಕೊಂಡಿತು. ಆದರೆ ಈ ಅವಧಿಯಲ್ಲಿ ಹತ್ತಿ, ಶೇಂಗ ಹಾಗೂ ತಂಬಾಕು ಬೆಳೆಗಳ ಅಭಿವೃದ್ಧಿಗಾಗಿ ಯಾವುದೇ ಹೊಸ ಯೋಜನೆಯನ್ನು ಹಾಕಿಕೊಳ್ಳಲಿಲ್ಲ[೩೫]. ಅಲ್ಲದೇ ಈ ಅವಧಿಯಲ್ಲಿ ಮೈಸೂರು ರಾಜ್ಯವು ಸಹಕಾರಿ ಸಂಘಗಳನ್ನು ಹಾಗೂ ಯಾಂತ್ರಿಕ ಮಗ್ಗಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ನಿಯಂತ್ರಿತ ಮಾರುಕಟ್ಟೆಯಲ್ಲಿ ಹತ್ತಿಯ ವರ್ಗೀಕರಣವನ್ನು (ಗ್ರೇಡಿಂಗ್ ಆಫ್ ಕಾಟನ್) ಜಾರಿಗೆ ತಂದಿತು[೩೬]. ಇದು ಹತ್ತಿ ಹಿಂಜುವ ಕಾರ್ಖಾನೆಗಳ ದೃಷ್ಟಿಯಿಂದ ಶ್ಲಾಘನೀಯ ಕಾರ್ಯವೇ ಆಗಿದ್ದರೂ, ಇದರಿಂದ ರೈತರು ಹತ್ತಿಯನ್ನು ಸಗಟು ಬೆಲೆಯಲ್ಲಿ ಮಾರಾಟ ಮಾಡುವ ಅವಕಾಶ ಕಳೆದುಕೊಂಡರು. ಇದು ಭಾರತದ ಆರ್ಥಿಕ ವ್ಯವಸ್ಥೆಯ ಹೊಸ ದಿಕ್ಕನ್ನು ಸೂಚಿಸುವ ಸಂಕೇತವಾಗಿತ್ತು.

ಕೇಂದ್ರ ಸರ್ಕಾರದ ರಫ್ತು ಆಮದು ನೀತಿಯು ಗಿರಣಿಗಳ ಅಧೋಗತಿಗೆ ಕಾರಣ ಅಂತಲೇ ವಾದಿಸಬಹುದು. ಇತ್ತೀಚೆಗೆ (೨೦೧೨) ಕರ್ನಾಟಕ ಕಾಟನ್ ಅಸೋಸಿಯೇಷನ್ ಅಧ್ಯಕ್ಷ ಪೂನಮ್ ಚಂದ್ರ ಓಸ್ವಾಲ್ ಹಾಗೂ ಹುಬ್ಬಳ್ಳಿ ವಾಣಿಜ್ಯೋದ್ಯಮ ಸಂಸ್ಥೆ ಅಧಕ್ಷ ಎನ್.ಪಿ. ಜವಳಿ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ರಫ್ತು ನಿಷೇಧ ಆದೇಶವನ್ನು ಕೇಂದ್ರ ಸರ್ಕಾರ ಹಿಂದಕ್ಕೆ ಪಡೆಯುವವರೆಗೆ ರೈತರಿಂದ ಹತ್ತಿ ಖರೀದಿ ಮಾಡದಿರಲು ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು[೩೭]. ಹತ್ತಿಯನ್ನು ಮಾರುಕಟ್ಟೆಯಲ್ಲಿ ಅಥವಾ ಜಿನ್ನಿಂಗ್ ಮಿಲ್ಲುಗಳಲ್ಲಿ ನೇರ ಖರೀದಿ ಸೇರಿದಂತೆ ಯಾವುದೇ ವಹಿವಾಟು ನಡೆಸದಂತೆ ಸಭೆ ತೀರ್ಮಾನಿಸಿತು.

ಹತ್ತಿ ಬೆಳೆ ನಷ್ಟದ ಜೊತೆಗೆ ದರವೂ ಕುಸಿದಿರುವುದು ಬೆಳೆಗಾರರನ್ನು ಚಿಂತೆಗೀಡು ಮಾಡಿದೆ. ಮಳೆ ಅಭಾವದಿಂದ ಗುಣಮಟ್ಟ ಕಡಿಮೆಯಾಗಿದ್ದುದು ಎಲ್ಲಾ ಕಾಲದ ಸಮಸ್ಯೆಯಾಗಿತ್ತು. ಇದರಿಂದ ಹತ್ತಿಯನ್ನು ರಫ್ತು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅಮೆರಿಕಾ, ಚೀನಾ, ಬಾಂಗ್ಲಾ ಮತ್ತು ಪಾಕಿಸ್ತಾನಕ್ಕೆ ಹತ್ತಿ ರಫ್ತಾಗುತ್ತಾ ಬಂದಿದೆ. ಆ ದೇಶಗಳಲ್ಲಿ ಹತ್ತಿ ಅಧಿಕ ಉತ್ಪಾದನೆ ಆಗುತ್ತಿದ್ದು ನಮ್ಮ ಉತ್ಪನ್ನಗಳನ್ನು ಕೊಳ್ಳಲು ಹಿಂಜರಿಯುತ್ತಿದ್ದರು. ಅಲ್ಲದೇ ನಮ್ಮ ಉತ್ಪನ್ನದ ಗುಣಮಟ್ಟವೂ ಕಡಿಮೆ ಇರುತ್ತಿದ್ದರಿಂದ ಖರೀದಿ ಮಾಡುತ್ತಿರಲಿಲ್ಲ[೩೮]. ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರದ ಹತ್ತಿ ರಫ್ತು ವ್ಯಾಪಾರಕ್ಕೆ ಮುಕ್ತ ಅವಕಾಶ ನೀಡಿದೆ. ಆದರೆ ಈ ಸಮಸ್ಯೆ ಎರಡು ಮೂರು ದಶಕದ್ದಾದರೆ ; ಇನ್ನು ರಾಜಕೀಯ

ಪಕ್ಷಗಳು ಚುನಾವಣೆಯ ಸಂದರ್ಭದಲ್ಲಿ ಹತ್ತಿ ಬೆಳೆಗಾರರ ಹಾಗೂ ಗಿರಣಿಗಳ ಸಮಸ್ಯೆಗಳನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುವ ಕಸರತ್ತು ಏಕಕಾಲದಲ್ಲಿ ನಡೆಯುತ್ತಿರುತ್ತದೆ.

## ೭.೪. ಜಾಗತೀಕರಣದ ಪ್ರಭಾವ

ದೇಶದ ಸ್ಟಾಕ್ ಎಕ್ಸ್‌ಚೇಂಜ್‌ಗಳು, ಷೇರು ಮಾರುಕಟ್ಟೆಗಳು, ಸುಖಿಸಬೇಕಾದರೆ ಅಲ್ಲಿನ ಬಡವರು ದುಃಖಿಸಿದಾಗ ಮಾತ್ರ ಸಾಧ್ಯ[೩೯]. ಇದನ್ನು ಎರಡು ಪ್ರಮುಖ ದೃಷ್ಟಾಂತಗಳ ಮೂಲಕ ಹೇಳಬಹುದು. ಮೊದಲನೆಯದು ೨೬ನೇ ಡಿಸೆಂಬರ್ ೨೦೦೪ರಂದು ನಡೆದ ಪ್ರಕೃತಿಯ ಮಹಾನ್ ವಿಕೋಪವಾದ ಸುನಾಮಿ ಮತ್ತು ಎರಡನೆಯದು ಮೇ ೨೦೦೪ರಲ್ಲಿ ನಡೆದ ಕೇಂದ್ರ ಚುನಾವಣೆ. ಭಾರತದ ಪ್ರತಿಷ್ಠಿತರು, ಮೇಲ್ಮಧ್ಯಮ ವರ್ಗಗಳು, ಬುದ್ಧಿಜೀವಿಗಳು, ಚುನಾವಣೆ ಪೂರ್ವ ಮತ್ತು ಚುನಾವಣೋತ್ತರ ಅಭಿಪ್ರಾಯ ಸಂಗ್ರಹಗಳು, ಟಿ.ವಿ. ಚಾನಲ್‌ಗಳ ಪಂಡಿತರು ಎಲ್ಲರೂ ಎನ್.ಡಿ.ಎ. ಸರ್ಕಾರವೇ ಪುನಃ ಅಧಿಕಾರದ ಚುಕ್ಕಾಣಿಯನ್ನು ಹಿಡಿಯುತ್ತದೆ ಎಂದು ಭವಿಷ್ಯ ನುಡಿದಿದ್ದರು. ಆದರೆ ಇವರ ಲೆಕ್ಕಾಚಾರವನ್ನೂ ದೇಶದ ೬೦ ಕೋಟಿ ಜನರ ತೀರ್ಪು ತಲೆಕೆಳಗು ಮಾಡಿತು. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಸುನಾಮಿಯ ಸಂದರ್ಭದಲ್ಲಿ ಷೇರು ಪೇಟೆ ಏರಿಕೆಯನ್ನು ಕಂಡರೆ, ಚುನಾವಣೆಯಲ್ಲಿ ಯು.ಪಿ.ಎ. ಪಕ್ಷ ಜಯಭೇರಿ ಕಾಣುತ್ತಿದ್ದಂತೆ ಷೇರು ಪೇಟೆ ಆ ತಕ್ಷಣವೇ ಕುಸಿಯಿತು ಎಂಬುದು. ಮನುಷ್ಯರಿಗೆ ಬರುವ ಕಾಯಿಲೆಗಳು, ಅದನ್ನು ಹರಡಿಸುವ ತಂತ್ರಗಾರಿಕೆ, ಅದರ ನಿವಾರಣೆಗೆ ಬೇಕಾಗುವ ಪರಿಹಾರ ರೂಪದಲ್ಲಿ ಬರುವ ಕಾರ್ಯಕ್ರಮಗಳು, ಯೋಜನೆಗಳು ಹಾಗೂ ಇದಕ್ಕಾಗಿ ಧನ ಸಹಾಯ ಒದಗಿಸುವ ನೆಪದಲ್ಲಿ ಡಬ್ಲ್ಯೂ.ಎಚ್.ಓ., ವಿಶ್ವಬ್ಯಾಂಕ್ ಹೇಗೆ ದೇಶದೊಳಕ್ಕೆ ಲಗ್ಗೆ ಇಟ್ಟು ಜಾಗತೀಕರಣವನ್ನು ಬಿತ್ತುತ್ತದೆ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಶ್ರೀಮಂತರಿಗೆ ವರವಾಗಿರುವ, ಬಡವರಿಗೆ, ರೈತರಿಗೆ ಹಾಗೂ ಕಾರ್ಮಿಕರಿಗೆ ಶಾಪವಾಗಿರುವ ಜಾಗತೀಕರಣವನ್ನು ನಮ್ಮ ಪ್ರಭುತ್ವಗಳು ಹಾಗೂ ಸರ್ಕಾರಗಳು ಸ್ವಾಗತಿಸುತ್ತಿರುವುದು ವಿಷಾದಕರ.

ಚೀನಾದಲ್ಲಿ ೧೯೮೦-೯೦ರ ದಶಕದಲ್ಲಿ ಹತ್ತಾರು ಸಾವಿರ ಕಾರ್ಖಾನೆಗಳನ್ನು ಮುಚ್ಚಿದಾಗ ಇದರ ಪರಿಣಾಮವಾಗಿ ಲಕ್ಷೋಪಲಕ್ಷ ಕಾರ್ಮಿಕರು ತಮ್ಮ ವೈದ್ಯಕೀಯ ಸವಲತ್ತಿನಿಂದ ವಚಿಚಿತರಾದರು[೪೦]. ಇಂತಹ ಸಂದರ್ಭದಲ್ಲಿ ಚೀನಾದಲ್ಲಿ ಸಾರ್ಸ್ ಕಾಯಿಲೆ ಹಬ್ಬಿದಾಗ ಅಲ್ಲಿನ ಸರ್ಕಾರಕ್ಕೂ ಕೂಡ ಬಹಳ ಕಾಲದವರೆಗೆ ಇದರ ಬಗ್ಗೆ ಗೊತ್ತಾಗಲೇ ಇಲ್ಲ. ಇಲ್ಲಿ ಹೇಳಲು

ಹೊರಟಿರುವ ವಿಚಾರವೇನೆಂದರೆ ಜಾಗತೀಕರಣಕ್ಕೂ ದೇಶೀಯ ಕಾರ್ಖಾನೆಗಳ ಮುಚ್ಚುವಿಕೆಗೂ ಅವಿನಾಭಾವ ಸಂಬಂಧವಿದೆ ಎಂಬುದು. ಇದರ ಪರಿಣಾಮವಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಹೀನ ಸ್ಥಿತಿಗೆ ತಲುಪಿದರು. ಅಂದರೆ ಬೆಂಗಳೂರಿನ ಹತ್ತಿ ಗಿರಣಿಗಳಲ್ಲಿ ಕೆಲಸ ಮಾಡುತ್ತಿದ್ದ ಸ್ಥಿತಿಯೂ ಇದೇ ರೀತಿ ಇತ್ತು. ಏಕೆಂದರೆ ಇಲ್ಲಿ ನಡೆಯುತ್ತಿರುವ ವಿದ್ಯಮಾನಗಳೆಲ್ಲಾ ಜಾಗತಿಕದೊಂದಿಗೆ ಬೆಸೆದುಕೊಂಡಿತ್ತು. ಅಷ್ಟೇಕೆ ಜಾಗತೀಕರಣದ ಪರಿಕಲ್ಪನೆಯೂ ಸಹ ನಮ್ಮದಲ್ಲ. ಜಾಗತೀಕರಣದ ಕರಾಳ ಮುಖವನ್ನು ಬೃಹತ್ ಬಹುರಾಷ್ಟ್ರೀಯ ಕಂಪನಿಗಳು ಮತ್ತು ಕಾರ್ಪೊರೇಟ್ ಕಂಪನಿಗಳ ಮೂಲಕ ನೋಡಬಹುದಾಗಿದೆ.

೧೯೮೦ರ ದಶಕದಲ್ಲಿ ಜಾಗತೀಕರಣವು ನಿಧಾನವಾಗಿ ಬೇರುಬಿಡುತ್ತಾ ಚಿಗುರೊಡೆಯುತ್ತಾ ೧೯೯೦ರ ದಶಕದಲ್ಲಿ ಅಧಿಕೃತ ರೂಪ ಪಡೆಯಿತು. ೧೯೯೦ರ ದಶಕದುದ್ದಕ್ಕೂ ಮಾರುಕಟ್ಟೆಯು ಪ್ರಜಾತಂತ್ರಕ್ಕೆ ಒಳ್ಳೆಯದಲ್ಲ ಎನ್ನುವುದಿರಲಿ, ಮಾರುಕಟ್ಟೆಯೇ ಪ್ರಜಾತಂತ್ರ ಅವೆರಡನ್ನೂ ಬೇರ್ಪಡಿಸಲು ಸಾಧ್ಯವೇ ಇಲ್ಲ ಎಂಬಂತಾಗಿತ್ತು[೪೧]. ಜಾಗತೀಕರಣದಿಂದ ತುಸು ಏನಾದರೂ ಅನುಕೂಲವಾಗಿದ್ದರೆ ಅದು ಉಳ್ಳವರಿಗೆ ಮಾತ್ರ. ಜಾಗತೀಕರಣವು ತನ್ನ ಉತ್ತುಂಗವನ್ನು ತಲುಪಿದ್ದಾಗಲೇ ಬೆಂಗಳೂರಿನ ಪ್ರಮುಖ ಹತ್ತಿ ಗಿರಣಿಯಾದ ಬಿನ್ನಿ ಮಿಲ್ಲು ಮುಚ್ಚಲ್ಪಟ್ಟಿದ್ದು (೧೯೯೮). ಹಾಗೆಯೇ ಮಿನರ್ವ ಮಿಲ್ಲು, ಮೈಸೂರು ಮಿಲ್ಲುಗಳೂ ಸಹ ಈ ಸಂದರ್ಭದಲ್ಲಿಯೇ ಅವನತಿ ಹೊಂದಿದವು. ಅಂದರೆ ೧೯೯೦ರಿಂದೀಚೆಗೆ ದೇಶದ ಯಾವುದೇ ಕೈಗಾರಿಕೆಗಳು ನಾಶಹೊಂದಿದ್ದರೂ ಅದಕ್ಕೆ ಜಾಗತೀಕರಣದ ಬಿಸಿ ತಟಿಯೇ ಇರುತ್ತದೆ ಎಂಬ ಸಂಗತಿ ಇದರಿಂದ ಗ್ರಹಿಸಲು ಸಾಧ್ಯ. ಇದನ್ನು ಬೆಂಗಳೂರಿನ ಇನ್ನಿತರೆ ಯಾವುದೇ ಗಿರಣಿಗಳು ಹಾಗೂ ಕೈಗಾರಿಕೆಗಳಿಗೂ ಅನ್ವಯಿಸಿ ನೋಡಬಹುದು.

ಭಾರತದಲ್ಲಷ್ಟೇ ಅಲ್ಲದೆ ಅಮೆರಿಕಾ ಮತ್ತು ಯೂರೋಪಿಯನ್ ಯೂನಿಯನ್ ಹತ್ತಿ ಬೆಳೆಗೆ ನೀಡಲಾಗುತ್ತಿರುವ ಸಬ್ಸಿಡಿಯಿಂದಾಗಿ ಮಾಲಿ ದ್ವೀಪ ಸಮೂಹದ ಬರ್ಕಿನಾ, ಪಾಸಾದ ಹತ್ತಿ ಬೆಳೆಗಾರ ರೈತರು ನಿರ್ನಾಮವಾಗುತ್ತಿದ್ದಾರೆ[೪೨]. ಹೀಗೆ ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳ ಲಾಭಕ್ಕಾಗಿ ಜಗತ್ತಿನಾದ್ಯಂತ ಸಣ್ಣ ರೈತರು, ಗಿರಣಿಗಳು, ಕಾರ್ಖಾನೆಗಳು ನಾಶ ಹೊಂದುತ್ತಿವೆ. ೧೯೯೦ರ ದಶಕದಿಂದೀಚೆಗೆ ಹೆಬ್ಬಾವಿನಂತೆ ಆವರಿಸಿರುವ ಜಾಗತೀಕರಣವೂ ಸಹ ಅಸಮಾನತೆಯಿಂದ ಕೂಡಿದೆ. ಜಾಗತೀಕರಣ ಅಂದಾಕ್ಷಣ ನಮಗೆ ತಟ್ಟನೆ ಎದುರಾಗುವುದು ಕೃಷಿ

ಮತ್ತು ಕೈಗಾರಿಕೆ. ಇದು ದೇಶದೊಳಗಡೆ ಪ್ರವೇಶವಾಗುತ್ತಿದ್ದಂತೆ ದೇಶೀಯ ಕೈಗಾರಿಕೆಯು ಪೈಪೋಟಿ ಎದುರಿಸಲಾಗದೇ ಅವಸಾನದ ಹಾದಿ ಹಿಡಿದವು. ಅಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ನಿರುದ್ಯೋಗದಿಂದ ಬೀದಿ ಪಾಲಾದರು. ಆದರೆ ಇಲ್ಲೊಂದು ಗಮನಿಸಬೇಕಾದ ಪ್ರಮುಖ ವಿಷಯವೆಂದರೆ ೧೯೯೧ರ ನಂತರ ಬೆಂಗಳೂರಿನ ಹತ್ತಿ ಗಿರಣಿಗಳು ಹಲವು ಕಾರಣಗಳಿಂದ ಅವನತಿ ಹೊಂದಿದವು. ಆದರೆ ಇದೇ ಕಾರಣಗಳನ್ನು ಸೊಲ್ಲಾಪುರದ ಹತ್ತಿ ಗಿರಣಿಗಳಿಗೆ ಆರೋಪಿಸಿದರೂ ಅದು ಇವುಗಳೆಲ್ಲವನ್ನು ಮೆಟ್ಟ ನಿಂತಿತು. ಏಕೆಂದರೆ ೧೯೯೧ರಲ್ಲಿ ಸೊಲ್ಲಾಪುರದ ಹತ್ತಿ ಗಿರಣಿಗಳಲ್ಲಿನ ಕಾರ್ಮಿಕರ ಸಂಖ್ಯೆ ೪೫,೦೦೦ಕ್ಕೂ ಹೆಚ್ಚು ಎಂಬ ಮಾಹಿತಿಯನ್ನು ತೀರ್ಥಂಕರ ರಾಯ್[೪೩] ಅವರು ನೀಡುತ್ತಾರೆ.

ಒಟ್ಟಿನಲ್ಲಿ ಜಾಗತೀಕರಣವು ಬಡವರು, ಕೃಷಿ, ಕೈಗಾರಿಕಾ ಕಾರ್ಮಿಕರು, ರೈತರನ್ನು ಹೀನ ಸ್ಥಿತಿಯಲ್ಲಿರಿಸಿ, ಶ್ರೀಮಂತರ ಹಿತವನ್ನು ರಕ್ಷಿಸುವಲ್ಲಿ ತನ್ನ ಅಜಾನುಬಾಹುವನ್ನು ಚಾಚಿದೆ ಎಂದು ಹೇಳಬಹುದು.

## ಕೊನೆ ಟಿಪ್ಪಣಿ

೧. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೫೮-೫೯*, ಪು. ೧೯೩.

೨. *ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೧೯೨೫.*

೩. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ೧೯೩೭-೩೮*, ಪು. ೯೮.

೪. *ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ೧೯೩೮-೩೯*, ಪು. ೪.

೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೦-೪೧*, ಪು. ೮೭.

೬. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೬೧-೬೨*, ಪು. ೯೨.

೭. ಅದೇ, ಪು. ೯೫.

೮. ಅದೇ, ಪು. ೧೦೧.

೯. *ರಿಪೋರ್ಟ್ ಆನ್ ದ ಅಡ್ಮಿನಿಸ್ಟ್ರೇಷನ್ ಆಫ್ ದ ಸ್ಟೇಟ್ ಆಫ್ ಕರ್ನಾಟಕ, ೧೯೮೦-೮೧*, ಪು. ೧೧೧.

೧೦. ಅದೇ, ಪು. ೧೨೨.

೧೧. ಕೋಷ್ಟಕವನ್ನು *ಕರ್ನಾಟಕ ರಾಜ್ಯ ಆಡಳಿತ ವರದಿಯಿಂದ* (ಕ್ರಮವಾಗಿ ೧೯೮೦-೮೧ ಮತ್ತು ೧೯೮೧-೮೨ರ ಅವಧಿ) ತೆಗೆದುಕೊಳ್ಳಲಾಗಿದೆ.

೧೨. *ಕರ್ನಾಟಕ ಸ್ಟೇಟ್ ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೮೬-೮೭*, ಪು. ೧೨೪.

೧೩. *ಪ್ರಜಾವಾಣಿ ಪತ್ರಿಕೆ*, ಅಂತರಾಳ, ೩೧ನೇ ಮಾರ್ಚ್ ೨೦೧೨.

೧೪. ಅದೇ.

೧೫. *ಪ್ರಜಾವಾಣಿ ಪತ್ರಿಕೆ*, ಅಭಿಮತ, ೮ನೇ ಮಾರ್ಚ್ ೨೦೧೨.

೧೬. ಅದೇ.

೧೭. *ಪ್ರಜಾವಾಣಿ ಪತ್ರಿಕೆ*, ೧೧ನೇ ಡಿಸೆಂಬರ್, ೨೦೧೨.

೧೮. *ಪ್ರಜಾವಾಣಿ ಪತ್ರಿಕೆ*, ೧೬ನೇ ಮಾರ್ಚ್, ೨೦೧೨.

೧೯. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೪-೪೫*, ಪು. ೧೨೧.

೨೦. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್, ೧೯೪೮-೪೯*, ಪು. ೧೧೫.

೨೧. ಅದೇ.

೨೨. ತೀರ್ಥಂಕರ ರಾಯ್, *ಡೆವೆಲಪ್‌ಮೆಂಟ್ ಆರ್ ಡಿಸ್ಪಾರ್ಷನ್? ಪವರ್‌ಲೂಮ್ಸ್ ಇನ್ ಇಂಡಿಯಾ*, ೧೯೫೦–೧೯೯೭, ಪು. ೩

೨೩. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೫೦–೫೧, ಪು. ೧೦೬.

೨೪. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೫೧–೫೨, ಪು. ೧೫೪.

೨೫. ಅದೇ, ಪು. ೧೫೮.

೨೬. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೫೩–೫೪, ಪು. ೧೧೬.

೨೭. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೬೧–೬೨, ಪು. ೮೯.

೨೮. ಅದೇ.

೨೯. *ಕರ್ನಾಟಕ ಸ್ಟೇಟ್ ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೮೧–೮೨, ಪು. ೧೯೫.

೩೦. ಅದೇ.

೩೧. ಅದೇ.

೩೨. *ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಫೈಲ್, ೧೫೮ ಆಫ್ ೧೯೩೩ ಟು ೪೨೮ ಆಫ್ ೧೯೩೯.*

೩೩. ಅದೇ.

೩೪. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೬೪–೬೫, ಪು. ೯೬.

೩೫. *ಮೈಸೂರು ಅಡ್ಮಿನಿಸ್ಟ್ರೇಷನ್ ರಿಪೋರ್ಟ್*, ೧೯೬೬–೬೭, ಪು. ೮೪.

೩೬. ಅದೇ, ಪು. ೯೫.

೩೭. *ಪ್ರಜಾವಾಣಿ ಪತ್ರಿಕೆ*, ೮ನೇ ಮಾರ್ಚ್, ೨೦೧೨.

೩೮. *ಪ್ರಜಾವಾಣಿ ಪತ್ರಿಕೆ*, ೧೧ನೇ ಡಿಸೆಂಬರ್, ೨೦೧೨.

೩೯. ಸಾಯಿನಾಥ್ ಪಿ., *ಅಸಮಾನತೆಯ ಜಾಗತೀಕರಣ*, ಪು. ೧೩.

೪೦. ಅದೇ, ಪು. ೧೭.

೪೧. ಅದೇ, ಪು. ೨೦.

೪೨. ಅದೇ, ಪು. ೩೦.

೪೩. ತೀರ್ಥಂಕರ ರಾಯ್, *ಇಂಡಿಯನ್ ಹ್ಯಾಂಡ್‌ಲೂಮ್ಸ್ ಇನ್ ದಿ ಟ್ವೆಂಟಿಯತ್ ಸೆಂಚುರಿ*, ಪು. ೧೪೨.

# ಅಧ್ಯಾಯ – ೦೮

# ಸಮಾರೋಪ

---

೮.೧. ಗಿರಣಿಗಳ ಇಂದಿನ ಸ್ಥಿತಿಗತಿ

೮.೨. ಅಧ್ಯಯನದ ಫಲಿತಗಳು

೮.೩. ಸಂಶೋಧನೆಯ ಅನಿಸಿಕೆಗಳು

---

## ೮.೧. ಗಿರಣಿಗಳ ಇಂದಿನ ಸ್ಥಿತಿಗತಿ

'ಯಾವುದೇ ಒಂದು ವ್ಯವಸ್ಥೆ ಏರಿಕೆಯ ರೂಪದಲ್ಲಿ ಬಂದಾಗ ಅದನ್ನು ಪ್ರತಿಭಟಿಸುವ ಸಾಮರ್ಥ್ಯವಾಗಲೀ ಅಥವಾ ಒಪ್ಪಿಕೊಳ್ಳುವ ಮನಸ್ಸಾಗಲೀ ಇಲ್ಲದೇ ಇದ್ದಾಗ ಅನಿವಾರ್ಯವಾಗಿ ತಮ್ಮದೇ ನೆಲದಲ್ಲಿ ಪರಕೀಯರಾಗುವ ಸ್ಥಿತಿ ಉಂಟಾಗುವುದು ಸಹಜ'. ಡಾ. ಕೆ. ಮೋಹನ್‌ಕೃಷ್ಣ ರೈ ಅವರ ಈ ಹೇಳಿಕೆಯನ್ನು ಗಿರಣಿಗಗಳ ಇಂದಿನ ಸ್ಥಿತಿಗತಿಯ ಕುರಿತು ಹೇಳುವಾಗ ಪ್ರಸ್ತಾಪಿಸುವುದು ಸೂಕ್ತವೆನಿಸಿದೆ. ಏಕೆಂದರೆ ಜಾಗತೀಕರಣವು ಭಾರತಕ್ಕೆ ಪ್ರವೇಶವಾದ ಸಂದರ್ಭದಲ್ಲಿ ಬೆಂಗಳೂರಿನ ಗಿರಣಿಗಳೂ ಈ 'ಪರಕೀಯ' ಸ್ಥಿತಿಯನ್ನು ಎದುರಿಸಿವೆ ಎಂದು ಹೇಳಿದರೆ ತಪ್ಪಾಗಲಾರದೇನೋ. ಇಂದು ನಾವು ಬಿನ್ನಿ ಮಿಲ್ಲಿಗಾಗಲಿ ಅಥವಾ ಮಿನರ್ವ ಮಿಲ್ಲಿಗಾಗಲಿ ಅಥವಾ ಮೈಸೂರು ಮಿಲ್ಲಿಗಾಗಲಿ ಭೇಟಿ ನೀಡಿದರೆ ಅಲ್ಲಿ ಸಿಗುವುದು ಕಟ್ಟಡಗಳ ಅವಶೇಷ, ಅದರ ಸುತ್ತಲೂ ದೊಡ್ಡದಾದ ಕಾಂಪೌಂಡು ಹಾಗೂ ಅವುಗಳನ್ನು ನೋಡಿಕೊಳ್ಳಲೆಂದು ನೇಮಿಸಿರುವ ಕಾವಲುಗಾರರು. ಕೇವಲ ಕಟ್ಟಡಗಳ ಅವಶೇಷಗಳಿಗೆ ಕಾವಲುಗಾರರಾದರೂ ಏಕೆ ಅವಶ್ಯಕವೆಂದು ಕೇಳಬಹುದು. ಕಾರಣವಿಷ್ಟೆ, ಬೆಂಗಳೂರು ನಗರದ ಮಧ್ಯ ಭಾಗದಲ್ಲಿರುವ ಈ ನಿವೇಶನಗಳಿಗೆ ಕೋಟ್ಯಂತರ ರೂಪಾಯಿಗಳ ಮೌಲ್ಯವಿದೆ. ಹೀಗಾಗಿ ಗಿರಣಿಗಳ ಇಂದಿನ ಸ್ಥಿತಿಗತಿ ಕುರಿತು ಹೆಚ್ಚಿನದಾಗಿ ಏನೂ ಹೇಳದಿರುವುದೇ ಲೇಸು.

ಆದರೆ ಚರಿತ್ರೆಯಲ್ಲಿ ಸಾಬೀತಾಗಿರುವ ಒಂದಂಶವೆಂದರೆ ಅದು 'ಯಾವುದೂ ಶಾಶ್ವತವಲ್ಲ' ಎಂಬ ಮಾತು. ಒಂದು ಕಾಲಮಾನವಾಗಲಿ, ವ್ಯವಸ್ಥೆಯಾಗಲಿ, ಉತ್ಪಾದನಾ ಘಟಕವಾಗಲಿ ಕೊನೆಯವರೆಗೂ ಅದೇ ಸ್ಥಿತಿಯಲ್ಲಿ ಉಳಿದುಕೊಂಡೇ ಬರಬೇಕು ಎಂಬ ಹಠಮಾರಿತನವನ್ನು ನಾವು ಮೊದಲು ಬಿಡಬೇಕು. ಏಕೆಂದರೆ ಚರಿತ್ರೆ ಯಾವುದೇ ಕಾಲಮಾನಕ್ಕೂ ಇದನ್ನು ಒಪ್ಪಿಕೊಳ್ಳುವುದಕ್ಕಾಗಲಿ ಅಥವಾ ಸ್ವೀಕರಿಸುವುದಕ್ಕಾಗಲಿ ಸಿದ್ಧವಿಲ್ಲ. ಈ ಮಾತು ದೇಶಾತೀತ. ಈ ವಿಷಯವನ್ನು ಇಲ್ಲಿ ಪ್ರಸ್ತಾಪಿಸುತ್ತಿರುವ ಉದ್ದೇಶ ಬೆಂಗಳೂರು ನಗರವು ವಸಾಹತುಶಾಹಿ ಆಳ್ವಿಕೆಯ ಸಂದರ್ಭದಲ್ಲಿ ಗಿರಣಿಗಳ ಮೂಲಕ ಅಭಿವೃದ್ಧಿಯತ್ತ ಹೆಜ್ಜೆ ಇಟ್ಟಿದ್ದು ಸುಳ್ಳಲ್ಲ. ಹಾಗೆಯೇ ಇಂದು ಆ ಕಾಲದ ಗಿರಣಿಗಳೆಲ್ಲವೂ ಅವಸಾನ ಹೊಂದಿವೆ ಎಂದ ಮಾತ್ರಕ್ಕೆ ಪ್ರಕ್ರಿಯೆ ನಿಂತಿದೆ ಎಂದಲ್ಲ. ನಗರಾಭಿವೃದ್ಧಿ ಅಥವಾ ಭವಿಷ್ಯದ ಕಾರ್ಮಿಕರಿಗೆ ಅವಕಾಶವೇ ಇಲ್ಲವೆಂದು ಹೇಳುವ ಹಾಗಿಲ್ಲ. ಅಭಿವೃದ್ಧಿ ಎಂಬುದು ಒಂದು ಪ್ರಕ್ರಿಯೆ. ಅದು ವಿವಿಧ ಬಗೆಯಲ್ಲಿ ತನ್ನ ನಿರಂತರತೆಯನ್ನು

ಕಾಯ್ದುಕೊಂಡೇ ಬರುವುದು ಅದರ ಸಹಜ ಲಕ್ಷಣ. ನಮಗೆ ಒಂದಂತೂ ಮನವರಿಕೆಯಾಗಬೇಕು, ಅದು ಇಡೀ ಜಗತ್ತನ್ನು ಇಂದು ನಿಯಂತ್ರಿಸುತ್ತಿರುವುದು ಯೂರೋಪ್. ವಸಾಹತು ಕಾಲದಲ್ಲಿ ಕೃಷಿ, ಕೈಗಾರಿಕೆಯ ಮೂಲಕ ನಿಯಂತ್ರಿಸಿದರೆ ಇಂದು ಸಾಫ್ಟ್‌ವೇರ್, ಹಾರ್ಡ್‌ವೇರ್ ಮೂಲಕ ನಿಯಂತ್ರಿಸುತ್ತಿದೆ. ಇವುಗಳ ಮೂಲಕವೂ ನಗರಾಭಿವೃದ್ಧಿ ಆಗುತ್ತಿದೆ. ಇಂದೂ ಸಹ ಸಾವಿರಾರು ಕಾರ್ಮಿಕರು ನಗರಾಭಿವೃದ್ಧಿಗೆ ದುಡಿಯುತ್ತಿದ್ದಾರೆ. ಹೀಗಾಗಿ ನಮಗೆ ಇದನ್ನು ಒಪ್ಪಿಕೊಳ್ಳುವ ಹಾಗೂ ವಸ್ತುನಿಷ್ಠ ಮಾದರಿಯಲ್ಲಿ ವಿಶ್ಲೇಷಿಸುವ ಗುಣವಿರಬೇಕಷ್ಟೆ. ಇದೆಲ್ಲದಕ್ಕಿಂತ ಹೆಚ್ಚಾಗಿ ಈ ಪ್ರಕ್ರಿಯೆಯೂ ಒಂದು ಬಗೆಯ ವಸಾಹತು ಪ್ರಕ್ರಿಯೆ ಎಂದರೆ ತಪ್ಪಾಗಲಾರದು.

### ೮.೨. ಅಧ್ಯಯನದ ಫಲಿತಗಳು

ಸಂಶೋಧನೆ ಕೈಗೊಂಡು ಕಂಡುಕೊಂಡ ಫಲಿತಗಳಲ್ಲಿ ಕೆಲವು ಹೇಳಲೇಬೇಕಾಗಿರುವುದನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

- ಬೆಂಗಳೂರು ಮತ್ತು ನೆರೆಯ ಕೋಲಾರ ಜಿಲ್ಲೆಗಳಲ್ಲಿ ಹತ್ತಿ ಬೆಳೆಯ ಉತ್ಪಾದನೆ ಶೂನ್ಯ. ಹೀಗಾಗಿ ಬೆಂಗಳೂರು ಕೇವಲ ಕಾರ್ಖಾನೆಗಳ ಸ್ಥಾಪನೆಗೆ ಹಾಗೂ ಜನವಸತಿಗೆ ಉತ್ತಮ ಹವಾಗುಣ ಹೊಂದಿತ್ತೇ ವಿನಃ ಹತ್ತಿ ಬೆಳೆಗಲ್ಲ. ಉತ್ತಮ ಹವಾಗುಣ ಹಾಗೂ ಸ್ಥಳೀಯ ಪ್ರಭುತ್ವ ತೋರಿದ ಆಸಕ್ತಿಯಿಂದ ಹೇಗೆ ಇಲ್ಲಿ ಗಿರಣಿಗಳು ಸ್ಥಾಪನೆಯಾದವು ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

- ೧೯೦೫ರ ವೇಳೆಗೆ ಬೆಂಗಳೂರು ವಿದ್ಯುಚ್ಛಕ್ತಿ ಸೌಲಭ್ಯ ಪಡೆದುಕೊಂಡ ಭಾರತದ ಮೊಟ್ಟಮೊದಲ ನಗರ. ಹೀಗಾಗಿ ಗಿರಣಿಗಳು ಈ ಸೌಲಭ್ಯ ಪಡೆದುಕೊಂಡ ಪರಿಣಾಮ ಕಾರ್ಮಿಕರ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಕೆಯನ್ನು ಕಂಡಿತು. ನಿರುದ್ಯೋಗಿಗಳಾಗಿ ಹಲವಾರು ಸಮಸ್ಯೆಗಳನ್ನು ಎದುರಿಸಿದರು. ಆದರೆ ಉತ್ಪಾದನೆಯಲ್ಲಿ ಗರಿಷ್ಠ ಮಟ್ಟದ ಏರಿಕೆಯನ್ನು ಕಾಣಲಾಯಿತು. ಇದು ಆ ಸಂದರ್ಭಕ್ಕೆ ಇಡೀ ಭಾರತದಲ್ಲಿಯೇ ಬೆಂಗಳೂರಿನ ಕಾರ್ಖಾನೆಗಳು, ಕೈಗಾರಿಕೆಗಳು ಹಾಗೂ ಗಿರಣಿಗಳು ಹೊಸದಾದ ಸವಾಲುಗಳನ್ನು ಕಾರ್ಮಿಕರಿಗೆ ಒಡ್ಡಿತು. ಅದನ್ನು ಹೇಗೆ ಮೆಟ್ಟಿ ನಿಂತರು ಎಂಬುದನ್ನು ಕುರಿತು ಚರ್ಚಿಸಿದೆ. ೧೯೨೭-೨೮ರ ವೇಳೆಗೆ ಬಹುತೇಕ ಎಲ್ಲಾ ಗಿರಣಿಗಳು ಜಲವಿದ್ಯುಚ್ಛಕ್ತಿ ಸೌಲಭ್ಯವನ್ನು

ಪಡೆಯುವುದರ ಮೂಲಕ ಉತ್ಪಾದನೆಯಲ್ಲಿ ಗಣನೀಯ ಪ್ರಮಾಣದ ಏರಿಕೆಯನ್ನು ಕಂಡವು. ಹೀಗೆ ಅಂತರರಾಷ್ಟ್ರೀಯ ಪೈಪೋಟಿ ಹಾಗೂ ಸ್ಥಳೀಯ ಸವಾಲುಗಳನ್ನು ಮೆಟ್ಟಿ ಬೆಂಗಳೂರಿನ ಹತ್ತಿ ಗಿರಣಿಗಳು ತಮ್ಮ ಅಸ್ತಿತ್ವವನ್ನು ಭದ್ರವಾಗಿ ಉಳಿಸಿಕೊಂಡಿದ್ದವು. ಈ ಎಲ್ಲಾ ಆಯಾಮಗಳಲ್ಲಿ ಚರ್ಚಿಸಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

- ಬ್ರಿಟಿಷರು ಮೈಸೂರು ಪ್ರಾಂತ್ಯವನ್ನು ನೇರವಾಗಿ ತನ್ನ ಹಿಡಿತಕ್ಕೆ ಪಡೆದುಕೊಂಡಿದ್ದರ ಪರಿಣಾಮವಾಗಿ ೧೮ನೇ ಶತಮಾನದ ಕೊನೆಯ ವೇಳೆಗೆ ಜವಳಿ ಉತ್ಪಾದನೆಯಲ್ಲಿ ಉನ್ನತಿಯನ್ನು ತಲುಪಿದ್ದ ಬೆಂಗಳೂರು, ೧೯ನೇ ಶತಮಾನಕ್ಕೆ ಕಾಲಿಟ್ಟಾಗ ಕೈಗಾರಿಕೆಗಳು ವಿನಾಶದ ಹಾದಿಯನ್ನು ತುಳಿದವು. ಈ ವಿನಾಶದ ಪ್ರಕ್ರಿಯೆ ಸರಿಸುಮಾರು ಒಂದು ಶತಮಾನದವರೆಗೂ ಮುಂದುವರೆದುಕೊಂಡು ಬಂದಿತ್ತು. ೧೮೦೦ರಲ್ಲಿ ನಗರದ ಜನಸಂಖ್ಯೆ ೬೦ ಸಾವಿರ ಇದ್ದದ್ದು ೧೮೫೧-೫೨ರ ವೇಳೆಗೆ ೪೧,೭೪೫ಕ್ಕೆ ಕುಸಿಯಿತು. ಬ್ರಿಟಿಷರ ಆಳ್ವಿಕೆಯ ನೀತಿಯಿಂದ ಅನೇಕ ಸ್ಥಳೀಯ ಕೈಗಾರಿಕೆಗಳು ನಾಶಹೊಂದಿದ್ದವು. ಅಲ್ಲದೇ ೧೯ನೇ ಶತಮಾನದುದ್ದಕ್ಕೂ ಬೆಂಗಳೂರು ಸೈನಿಕ ಶಸ್ತ್ರಾಸ್ತ್ರಗಳನ್ನು ಪೂರೈಸುವ ಘಟಕಕ್ಕೆ ಮಾತ್ರ ಸೀಮಿತವಾಗಿತ್ತು. ಹೀಗಿದ್ದೂ ೧೯ನೇ ಶತಮಾನದ ಕೊನೆಯ ವೇಳೆಗೆ ಮೈಸೂರು ಮಹಾರಾಜ ಮಿಲ್ಲು ಹಾಗೂ ಬಿನ್ನಿ ಮಿಲ್ಲು ಪ್ರತಿರೋಧದ ಮೂಲಕ ತಮ್ಮ ಅಸ್ತಿತ್ವವನ್ನು ಹೇಗೆ ಕಂಡುಕೊಂಡವು ಎಂಬುದನ್ನು ಫಲಿತದ ಮೂಲಕ ತಿಳಿದುಕೊಳ್ಳಲಾಗಿದೆ.

- ಮೈಸೂರು ಮಿಲ್ಲು, ಬಿನ್ನಿ ಮಿಲ್ಲು, ಮಿನರ್ವ ಮಿಲ್ಲು ಹಾಗೂ ಸ್ವಾತಂತ್ರ್ಯ ನಂತರ ರಾಜ್ಯದಲ್ಲಿ ಸ್ಥಾಪನೆಯಾದ ಇನ್ನಿತರೆ ಗಿರಣಿಗಳು ಸ್ಥಾಪನೆಯಾದ ರೀತಿ, ಅವುಗಳ ಮಾಲೀಕತ್ವ, ಬಂಡವಾಳ ಪ್ರಾರಂಭದ ಸವಾಲುಗಳ ಕುರಿತು ಸ್ಥೂಲವಾದ ಮಾಹಿತಿಯನ್ನು ನೀಡಲಾಗಿದೆ. ಅಲ್ಲದೇ ಸ್ಥಳೀಯ ಪ್ರಭುತ್ವ ನೀಡಿದ್ದ ನೆರವಿನ ಬಗ್ಗೆ ಕೆಲವು ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

- ೧೯೧೨ರಲ್ಲಿ ಮೈಸೂರು ರಾಜ್ಯದಲ್ಲಿ ಒಂದು ಹೊಸ ಬೆಳವಣಿಗೆ ಕಂಡುಬಂದಿತು. ಕೈಗಾರಿಕೆ ಹಾಗೂ ವಾಣಿಜ್ಯಕ್ಕಾಗಿ ಪ್ರತ್ಯೇಕ ಇಲಾಖೆಯನ್ನು ಸರ್ಕಾರದಿಂದ ರಚಿಸಿ ಆಲ್ಫ್ರೆಡ್ ಚಾಟರ್‌ಟನ್ ಅವರನ್ನು ಕೈಗಾರಿಕೆಗಳ ವಿಶೇಷ ಸಲಹೆಗಾರರನ್ನಾಗಿ ನೇಮಕ ಮಾಡಲಾಯಿತು. ಅಲ್ಲದೇ ಈ ಇಲಾಖೆಯ ನಿರ್ದೇಶಕನನ್ನಾಗಿಯೂ ಆಯ್ಕೆ ಮಾಡಲಾಯಿತು.

ಮೈಸೂರು ಸಂಸ್ಥಾನದ ಕೈಗಾರಿಕೆಗಳೆಲ್ಲವೂ (ಹತ್ತಿ ಗಿರಣಿಗಳನ್ನು ಒಳಗೊಂಡಂತೆ) ಈ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿದವು. ಈ ಬೆಳವಣಿಗೆಯಲ್ಲಿ ಸಂಸ್ಥಾನದ ಸ್ಥಳೀಯ ಪ್ರಭುತ್ವಕ್ಕಿಂತ ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವದ ಪಾತ್ರ ಎದ್ದು ಕಾಣುವಂತಿದ್ದರೂ ಇದು ಮುಂದೆ ಯಶಸ್ವಿಯಾಗದೇ ವಿಫಲವಾಯಿತು ಎಂಬುದು ಈ ಸಂಶೋಧನೆಯ ಫಲಿತವಾಗಿದೆ.

- ಮೈಸೂರಿನ ಹತ್ತಿ ಗಿರಣಿಗಳಿಗೆ ಏಕೆ ಆರ್ಥಿಕ ಮುಗ್ಗಟ್ಟಿನ ಸಮಸ್ಯೆ ಕಾಡಲಿಲ್ಲ ಎಂಬುದಕ್ಕೆ ಸಾಮಾನ್ಯವಾಗಿ ಜನಪ್ರಿಯವಾಗಿರುವ ಅಂಶವೆಂದರೆ ನಾಲ್ವಡಿ ಕೃಷ್ಣರ ಆಳ್ವಿಕೆ ಹಾಗೂ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರ ದಕ್ಷ ಆಡಳಿತ ಎಂಬುದು. ಆದರೆ ಇದರಿಂದಾಚೆಗೆ ಕೆಲವು ಕಾರಣವಾದ ಅಂಶಗಳೂ ಇವೆ ಎಂಬುದನ್ನು ಈ ಸಂಶೋಧನೆಯಿಂದ ಕಂಡುಕೊಳ್ಳಲಾಗಿದೆ. ಅದು ಗಿರಣಿಗಳ ಮ್ಯಾನೇಜಿಂಗ್ ಏಜೆಂಟ್‌ಗಳು ಹೇಗೆ ಜವಾಬ್ದಾರಿಯನ್ನು ನಿರ್ವಹಿಸಿದರು ಎಂಬ ಸೂಕ್ಷ್ಮ ವಿಷಯವನ್ನು ವಸ್ತುನಿಷ್ಠವಾಗಿ ಪ್ರಸ್ತಾಪಿಸಲಾಗಿದೆ.

- ೧೯೧೭ರಲ್ಲಿ ಬ್ರಿಟನ್‌ನ ಲಂಕಾಶೈರ್, ಯಾರ್ಕ್‌ಶೈರ್ ಹಾಗೂ ಮ್ಯಾಂಚೆಸ್ಟರ್ ಎದುರಿಸಿದ ಹತ್ತಿ ಸಮಸ್ಯೆಯನ್ನು ಈ ಸಂಶೋಧನೆಯಲ್ಲಿ "ಹತ್ತಿ ಕ್ಷಾಮ" ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಚರ್ಚಿಸಿದ್ದು, ಬ್ರಿಟಿಷರು ಲಂಕಾಶೈರ್‌ನ ಹತ್ತಿ ಗಿರಣಿಗಳನ್ನು 'ಭಾರತೀಯ ಹತ್ತಿ ಸಮಿತಿ'ಗೆ ಸೇರಿಸುವುದಕ್ಕೆ ನಡೆಸಿದ ಕಸರತ್ತಿನ ಬಗ್ಗೆ ಚರ್ಚಿಸಿರುವುದು ವಿಶೇಷವೆನಿಸಿದೆ.

- ಗಿರಣಿಗಳು ಉಚ್ಛ್ರಾಯ ಸ್ಥಿತಿಯನ್ನು ತಲುಪಲು ಮಹಿಳಾ ಕಾರ್ಮಿಕರ ಶೋಚನೀಯ ಸ್ಥಿತಿಯು ಬೆನ್ನೆಲುಬಾಗಿ ಸಹಕಾರಿಯಾಗಿತ್ತು. ಏಕೆಂದರೆ ದಿನದಲ್ಲಿ ಮೂರು ಪಾಳಿಯಿದ್ದು, ಪ್ರತಿ ಪಾಳಿಯ ಕಾಲಾವಧಿ ಎಂಟು ಗಂಟೆಗಳು (ಬೆಳಿಗ್ಗೆ ೦೭ ರಿಂದ ೦೩, ಮಧ್ಯಾಹ್ನ ೦೩ ರಿಂದ ರಾತ್ರಿ ೧೧ ರವರೆಗೆ ಹಾಗೂ ರಾತ್ರಿ ೧೧ ರಿಂದ ಬೆಳಿಗ್ಗೆ ೦೭ರವರೆಗೆ). ಆದರೆ ರಾತ್ರಿ ಪಾಳೆಯು ಮಹಿಳೆಯರಿಗೆ ನಿಷಿದ್ಧದ ಕಾರಣದಿಂದ ಅವರು ದಿನದಲ್ಲಿ ೧೧ ಗಂಟೆಗಳ ಕಾಲ ದುಡಿಯಲೇ ಬೇಕಾಗಿತ್ತು (ಬೆಳಿಗ್ಗೆ ೦೬ ರಿಂದ ಸಂಜೆ ೦೫ ರವರೆಗೆ). ಇಂತಹ ಹೇಳಿಕೆಗಳು ವಿಡಂಬನೆಯಿಂದ ಕೂಡಿದ್ದರೂ ಸಂಶೋಧನೆಯ ಕಟ್ಟುವಿಕೆಗೆ ನೆರವಾಗಿದೆ. ಈ ಎಲ್ಲಾ ಅಂಶಗಳ ಕುರಿತು ಪ್ರಬಂಧದಲ್ಲಿ ವಸ್ತುನಿಷ್ಠವಾಗಿ ಚರ್ಚಿಸಲಾಗಿದೆ.

- ಭಾರತ ಅಮೆರಿಕಾ, ಬ್ರಿಟನ್, ಯೂರೋಪ್, ಚೈನಾ ಹಾಗೂ ಜಪಾನ್ ದೇಶಗಳಲ್ಲಿ ಬೆಳೆಯುತ್ತಿದ್ದ ಹತ್ತಿ ಉತ್ಪಾನೆಯನ್ನು (೧೯೧೨-೧೪) ತುಲನಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಮೈಸೂರಿನ ರಾಜಕೀಯ ಪಲ್ಲಟಕ್ಕೆ ಬ್ರಾಹ್ಮಣೇತರ ಚಳವಳಿಯಲ್ಲಿ ಕಾರ್ಮಿಕ ಸಂಘಟನೆಯ ಪಾತ್ರದ ಸಾಧಕ-ಬಾಧಕಗಳನ್ನು ಚರ್ಚಿಸಲಾಗಿದೆ.

- ಬೆಂಗಳೂರಿನ ಹತ್ತಿ ಗಿರಣಿಗಳ ಉತ್ಪಾದನೆ, ವ್ಯಾಪಾರ, ವ್ಯವಹಾರವನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಸಾಹತು ರಆಷ್ಟ್ರದಲ್ಲಿ ವಿವಿಧ ಗುಣಮಟ್ಟದ ಹತ್ತಿಯನ್ನು ಚದರ ಮೈಲಿ ಪ್ರದೇಶದಲ್ಲಿ ಆ ರಾಷ್ಟ್ರದ ಒಟ್ಟಾರೆ ಜನಸಂಖ್ಯೆಗೆ ಎಷ್ಟು ಪ್ರಮಾಣದಲ್ಲಿ ಬೆಳೆಯಲಾಗುತ್ತಿತ್ತು ಎಂಬುದನ್ನು ಕೋಷ್ಟಕದ ಮೂಲಕ ತಿಳಿದುಕೊಳ್ಳಲಾಗಿದೆ. ಉದಾಹರಣೆಗೆ : ವೆಸ್ಟ್ ಇಂಡೀಸ್, ಈಜಿಪ್ಟ್, ಸೂಡಾನ್, ಉಗಾಂಡ, ರೊಡೋಶಿಯಾ, ನೈಜೀರಿಯಾ ಇತ್ಯಾದಿ. ಹಾಗೆಯೇ ಬೆಂಗಳೂರಿನ ಹತ್ತಿ ಗಿರಣಿಗಳಲ್ಲಿ ಎಷ್ಟು ಪ್ರಮಾಣದಲ್ಲಿ ಹತ್ತಿ ಬಟ್ಟೆಗಳನ್ನು ಉತ್ಪಾದಿಸಲಾಗುತ್ತಿತ್ತು ಎಂಬುದನ್ನು ಅಂಕಿ ಅಂಶಗಳ ಮೂಲಕ ತಿಳಿದುಕೊಳ್ಳಲಾಗಿದೆ. ಅಲ್ಲದೇ ನೆರೆಯ ಮೈಸೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಆಗುತ್ತಿದ್ದ ಉತ್ಪಾನೆಯೊಂದಿಗೆ ತೌಲನಿಕ ಅಧ್ಯಯನ ಮಾಡಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

- ಗಿರಣಿಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ಬಂಡವಾಳವನ್ನು ಷೇರುಗಳ ಮೂಲಕ ಹೇಗೆ ಕ್ರೂಡೀಕರಿಸಲಾಯಿತು ಎಂಬುದರ ಕುರಿತು ಬೆಳಕು ಚೆಲ್ಲಲಾಗಿದೆ.

- ಬೆಂಗಳೂರು, ಮೈಸೂರು ಹಾಗೂ ದಾವಣಗೆರೆಯಲ್ಲಿ ಎಷ್ಟು ಬಂಡವಾಳದೊಂದಿಗೆ ಹತ್ತಿ ಗಿರಣಿಗಳು ಸ್ಥಾಪನೆಯಾಗಿದ್ದವು ಎಂಬುದು ಪತ್ರಾಗಾರ ಇಲಾಖೆಯ ದಾಖಲೆ ಪತ್ರಗಳ ಮೂಲಕ ನಿಖರವಾಗಿ ತಿಳಿದುಕೊಳ್ಳಲು ಸಾಧ್ಯವಾಯಿತು. ಗಿರಣಿಗಳಲ್ಲಿ ಆಗುತ್ತಿದ್ದ ವಾರ್ಷಿಕವಾರು ಉತ್ಪಾದನೆಯನ್ನು ಅಂಕಿ ಅಂಶಗಳ ಕೋಷ್ಟಕದ ಮೂಲಕ ನೀಡಲಾಗಿದೆ. ೧೮೯೦, ೧೯೦೦, ೧೯೨೦, ೧೯೩೦, ೧೯೪೦, ೧೯೫೦ ಹಾಗೂ ೧೯೬೦ ಹೀಗೆ ಈ ದಶಕಗಳಲ್ಲಿ ಎಷ್ಟು ಹತ್ತಿ ಗಿರಣಿಗಳು ಕಾರ್ಯ ನಿರ್ವಹಿಸುತ್ತಿದ್ದವು ಅವುಗಳು ಕಾಲಕಾಲಕ್ಕೆ ಎಷ್ಟೆಷ್ಟು ಸ್ಪಿಂಡಲ್‌ಗಳು ಹಾಗೂ ಮಗ್ಗಗಳನ್ನು ಹೊಂದಿದ್ದವು ಎಂಬುದನ್ನು ದಾಖಲೆಗಳ ಮೂಲಕ ತಿಳಿದುಕೊಳ್ಳಲಾಯಿತು. ಮಿನರ್ವ ಮಿಲ್ಲು ಹಾಗೂ ಮೈಸೂರು ಮಿಲ್ಲು

ಪ್ರಾರಂಭವಾದುದರಿಂದ (೧೯೩೫) ಬೆಂಗಳೂರಿನ ಹತ್ತಿ ಗಿರಣಿಗಳಿಂದ ಸಂಗ್ರಹವಾಗುತ್ತಿದ್ದ ತೆರಿಗೆ ೨೩೦೦ ರೂಪಾಯಿಗಳಿಂದ ೫೪೩೪ ರೂಪಾಯಿಗಳಿಗೆ ಏರಿಕೆಯಾಯಿತು. ಹೀಗೆ ಚರ್ಚೆ ಮಾಡುವುದರ ಮೂಲಕ ಫಲಿತಗಳನ್ನು ಕಂಡುಕೊಳ್ಳಲಾಗಿದೆ.

- ದೇಶೀಯ ವಾಣಿಜ್ಯ ಮತ್ತು ವ್ಯಾಪಾರದಲ್ಲಿ ಕಂಡ ಪ್ರಗತಿ, ಅನುಭವಿಸಿದ ನಷ್ಟ ಅಂಕಿ ಅಂಶದ ಮೂಲಕ ನೆರೆಯ ಜಿಲ್ಲೆಗಳನ್ನಿಟ್ಟುಕೊಂಡು ತುಲನಾತ್ಮಕ ಅಧ್ಯಯನ ಮಾಡಲಾಗಿದೆ. ಬೆಂಗಳೂರಿನ ಹತ್ತಿ ಗಿರಣಿಗಳು (ಬಿನ್ನಿ ಮತ್ತು ಮೈಸೂರು) ಗಳಿಸುತ್ತಿದ್ದ ಲಾಭದ ಬಗ್ಗೆ ನಿಗಾ ವಹಿಸಿದ ಮೈಸೂರು ಸರ್ಕಾರ ೧ನೇ ಡಿಸೆಂಬರ್ ೧೮೯೬ರಂದು ಇದಕ್ಕಾಗಿಯೇ ಒಂದು ಪ್ರತ್ಯೇಕ ಕಾಯಿದೆ (೧೮೯೬ರ ಕಾಯಿದೆ ನಂ:II) ಯನ್ನು ಜಾರಿಗೆ ತಂದು ಬಟ್ಟೆಗಳ ಉತ್ಪಾದನೆಯ ಮೇಲೆ ಶೇಕಡಾ ೩.೫ರಷ್ಟು ತೆರಿಗೆಯನ್ನು ವಿಧಿಸಿತ್ತು ಎಂಬ ಮಾಹಿತಿಯನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಯಿತು. ಬಿನ್ನಿ ಮಿಲ್ಲು ಭಾರತದ ನಾನಾ ಕಡೆಗಳಲ್ಲಿ ತನ್ನ ಘಟಕಗಳನ್ನು ಹೊಂದಿ ದೇಶೀಯ ವ್ಯಾಪಾರವನ್ನು ಹೇಗೆ ವಿಸ್ತರಿಸಿಕೊಂಡಿತ್ತು ಎಂಬುದನ್ನು ತಿಳಿದುಕೊಳ್ಳಲಾಗಿದೆ.

- ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೆಂಗಳೂರಿನ ಗಿರಣಿಗಳಿಗೆ ಪರ್ಯಾಯವಾಗಿ 'ಸಹಕಾರಿ ನೂಲುವ ಗಿರಣಿಗಳು' ಸ್ಥಾಪನೆಯಾಗಿ ಯಾವ ರೀತಿ ಪೈಪೋಟಿ ಒಡ್ಡಿದವು ಹಾಗೂ ಸರ್ಕಾರ ಇವುಗಳನ್ನು ಹೇಗೆ ಬೆಂಬಲಿಸಿತು ಎಂಬುದರ ಕುರಿತು ಚರ್ಚೆಯನ್ನು ಬೆಳೆಸಿ ಕೆಲವು ಫಲಿತಗಳನ್ನು ಕಂಡುಕೊಳ್ಳಲಾಯಿತು.

- ಒಟ್ಟು ವಿದೇಶಿ ರಫ್ತು ಆಮದು ವ್ಯಾಪಾರದಲ್ಲಿ ಮೈಸೂರು ರಾಜ್ಯದ ಅಂಕಿ ಅಂಶವನ್ನು ಗಮನಿಸಿದರೆ ೧೮೯೦ರ ದಶಕದಲ್ಲಿ ರಫ್ತು ಮೌಲ್ಯ ಆಮದು ಮೌಲ್ಯಕ್ಕಿಂತ ನಾಲ್ಕು ನೂರು ಪಟ್ಟು ಹೆಚ್ಚಾಗಿರುವುದರ ಬಗ್ಗೆ ಅಂಕಿ ಅಂಶಗಳು ದೃಢಪಡಿಸುತ್ತವೆ. ೨೦ನೇ ಶತಮಾನದ ಪ್ರಥಮಾರ್ಧದಲ್ಲಿ ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹತ್ತಿ ಬೆಳೆಯುವ ಪ್ರದೇಶಗಳು ಹಾಗೂ ಹತ್ತಿಯ ತಳಿಗಳ ಬಗ್ಗೆ ಅಧ್ಯಯನದಿಂದ ತಿಳಿದುಬಂದಿದೆ. ಉದಾಹರಣೆಗೆ : ಬೆಸ್ಟ್ ಸೀ ಐಲ್ಯಾಂಡ್ ಎಂಬ ಹತ್ತಿಯನ್ನು ಐಲ್ಯಾಂಡ್, ದಕ್ಷಿಣ ಕರೋಲಿನಾ, ವೆಸ್ಟ್ ಇಂಡೀಸ್‌ನಲ್ಲಿ ಬೆಳೆಯುತ್ತಿದ್ದರೆ ಇಂಡಿಯನ್ಸ್ ಮತ್ತು ಕಂ. ಎಂಬ ಹತ್ತಿಯನ್ನು ಭಾರತ, ರಷ್ಯಾ, ಚೈನಾದಲ್ಲಿಯೂ ಹಾಗೂ

ಅಮೆರಿಕನ್ ಹತ್ತಿಯನ್ನು ಅಮೆರಿಕಾ ಸಂ.ಸಂ., ಮೆಕ್ಸಿಕೋ, ಬ್ರೆಜಿಲ್, ರಷ್ಯಾ, ಪಶ್ಚಿಮ ಆಫ್ರಿಕಾ, ಲೆವ್ಯಾಂಟ್, ಭಾರತ, ಚೈನಾ ಹಾಗೂ ಕೊರಿಯಾ ಹೀಗೆ ಆಯಾ ಹವಾಗುಣಕ್ಕೆ ತಕ್ಕಂತೆ ಹತ್ತಿಯನ್ನು ಬೆಳೆಯುತ್ತಿದ್ದರು.

- ಭಾರತಕ್ಕೆ ಯಥೇಚ್ಛವಾಗಿ ಆಮದಾಗುತ್ತಿದ್ದ ಅಗ್ಗದ ಹತ್ತಿಯ ನೂಲನ್ನು ತಗ್ಗಿಸುವ ಸಲುವಾಗಿ ಬ್ರಿಟಿಷರು ಕಠಿಣ ಕ್ರಮಕ್ಕೆ ಮುಂದಾದರು. ಇಲ್ಲಿ ವಿದೇಶ ಎಂದರೆ ಜಪಾನ್ ಎಂಬುದಾಗಿದ್ದು, ಜಪಾನಿನ ಆರ್ಥಿಕ ಪ್ರಾಬಲ್ಯವನ್ನು ಕುಗ್ಗಿಸುವಲ್ಲಿ ಬ್ರಿಟಿಷರು ಯಾವ ರೀತಿ ಕಾರ್ಯ ತಂತ್ರವನ್ನು ರೂಪಿಸಿದರು ಎಂಬುದು ಈ ಅಧ್ಯಯನದ ಫಲಿತವಾಗಿದೆ.

- ೧೯೩೦ರ ದಶಕದ ಹತ್ತಿ ಬಟ್ಟೆ ವ್ಯಾಪಾರದಲ್ಲಿ ಬಹುದೊಡ್ಡ ಸ್ಥಿತ್ಯಂತರವೆಂದರೆ ಅದು ಬ್ರಿಟನ್ ಮತ್ತು ಜಪಾನ್ ದೇಶಗಳಿಗೆ ದೊಡ್ಡ ಸ್ಪರ್ಧೆ ಒಡ್ಡುವ ಮತ್ತೊಂದು ಬಲಿಷ್ಟ ರಾಷ್ಟ್ರವಾಗಿ ಹೇಗೆ ಚೀನಾ ಹುಟ್ಟಿಕೊಂಡಿತು ಎಂಬುದು ಈ ಅಧ್ಯಯನದಿಂದ ತಿಳಿದುಬಂದಿದೆ.

- ೧೯೨೯ರಲ್ಲಿ ಪ್ರಾರಂಭವಾದ 'ಬೆಂಗಳೂರು ಉಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಎಂಪ್ಲಾಯೀಸ್ ಯೂನಿಯನ್' ಎಂಬ ಕಾರ್ಮಿಕ ಸಂಘಟನೆಯು ರಾಜ್ಯದ ಹತ್ತಿ ಗಿರಣಿ ಸಂಘಟನೆಯಲ್ಲಿಯೇ ಅತಿ ದೊಡ್ಡ ಕಾರ್ಮಿಕ ಸಂಘಟನೆಯಾಗಿದ್ದು ಇದರ ಸ್ಥಾಪನೆಗೆ ಸರ್ಕಾರ ಹೇಗೆ ನೆರವು ನೀಡಿತು, ಇದರ ರಚನೆ, ಬೆಳವಣಿಗೆಯಲ್ಲಿ 'ಕೈಗಾರಿಕೆಗಳ ಇಲಾಖೆ'ಯ ಆಸಕ್ತಿ ಹಾಗೂ ೨೫ಳಳ ಸಂಖ್ಯೆಯ ಕಾರ್ಮಿಕರು ಇದರ ಸದಸ್ಯತ್ವ ಪಡೆದುಕೊಂಡಿದ್ದು ಇತ್ಯಾದಿ ಅಂಶಗಳು ಸಂಶೋಧನೆಯಿಂದ ಬಯಲಾಗಿದೆ.

- ಮೈಸೂರು ರಾಜ್ಯದಲ್ಲಿದ್ದ ಕಾರ್ಮಿಕ ಸಂಘಟನೆಗಳ ನಡುವಿನ ಸಂಬಂಧ ಉತ್ತಮವಾಗಿರಲಿಲ್ಲ. ಆ ಕಾರಣ ಮೈಸೂರು ನ್ಯಾಯವಿಧಾಯಕ ಸಭೆಯಲ್ಲಿ ಕಾರ್ಮಿಕರ ಹಿತಾಸಕ್ತಿಯನ್ನು ಪ್ರತಿನಿಧಿಸುವ ಅವಕಾಶ ಹೇಗೆ ಕೈತಪ್ಪಿ ಹೋಯಿತು. ಕೆ.ಟಿ. ಭಾಷ್ಯಂ ಅವರಿಗೆ ಪ್ರತಿ ಗಿರಣಿಯಲ್ಲಿ ತಲಾ ಒಂದೊಂದು ಕಾರ್ಮಿಕ ಸಂಘಟನೆಗಳು ಸ್ಥಾಪನೆಯಾಗುವುದು ಇಷ್ಟವಿರಲಿಲ್ಲ. ಅಂದರೆ ಸಂಘಟನೆಯಲ್ಲಿ ವಿಕೇಂದ್ರೀಕರಣವನ್ನು ಬಯಸುತ್ತಿರಲಿಲ್ಲ ಎಂಬುದನ್ನು ಸಂಶೋಧನೆಯಿಂದ ಮನಗಾಣಲಾಗಿದೆ.

- ಎರಡನೇ ಮಹಾಯುದ್ಧದ ಅವಧಿಯಲ್ಲಿ ಕಾರ್ಮಿಕರು ಹಾಗೂ ಮಾಲೀಕರ ನಡುವಿನ ಸಂಬಂಧ ಉತ್ತಮಗೊಳ್ಳುವ ಅನಿವಾರ್ಯತೆ ಕಾರ್ಮಿಕರಿಗಿಂತಲೂ ಹೆಚ್ಚಾಗಿ ಮಾಲೀಕರಿಗೆ ಇತ್ತು ಎಂಬ ಫಲಿತವನ್ನು ಕಂಡುಕೊಳ್ಳಲಾಗಿದೆ.

- ೧೯೪೧ರಲ್ಲಿ ಮೈಸೂರು ಕಾಯಿದೆ ಜಾರಿಯಾದ ಪರಿಣಾಮ ೪೩ ಕಾರ್ಮಿಕ ಸಂಘಟನೆಗಳು ಸ್ಥಾಪನೆಯಾದವು. ಒಟ್ಟಾರೆ ಈ ವೇಳೆಗೆ ೩೫,೫೨೨ ಕಾರ್ಮಿಕರು ರಾಜ್ಯದಲ್ಲಿ ಸದಸ್ಯತ್ವವನ್ನು ಪಡೆದುಕೊಂಡಿದ್ದರು ಎಂಬ ಹೊಸ ವಿಚಾರವನ್ನು ತಿಳಿದುಕೊಳ್ಳಲಾಗಿದೆ.

- ಹೇಗೆ ಆರ್ಥಿಕ ವಿಚಾರಗಳು, ಸಾಮಾಜಿಕ ವಾಸ್ತವಾಂಶಗಳೊಂದಿಗೆ ತಳುಕು ಹಾಕಿಕೊಂಡಿದೆ ಎಂಬುದನ್ನು ಬಿನ್ನಿ ಮಿಲ್ಲಿನಲ್ಲಿ ೧೯೨೫ರಲ್ಲಿ ಅಸ್ಪೃಶ್ಯತೆಯ ವಿರುದ್ಧವಾಗಿ ಹೋರಾಟ ಮಾಡಿದ ಪ್ರಸಂಗದ ಮೂಲಕ ತಿಳಿದುಕೊಳ್ಳಲಾಯಿತು.

- ಇಂಗ್ಲೆಂಡಿನ ಪ್ರಸಿದ್ಧ ಚರಿತ್ರೆಕಾರ ಬಾರ್ನ್ ಹೆಟ್ನೆ ಅವರು ತಮ್ಮ ಗ್ರಂಥವಾದ 'ದ ಪೊಲಿಟಿಕಲ್ ಎಕಾನಮಿ ಆಫ್ ಇಂಡೈರೆಕ್ಟ್ ರೂಲ್ : ಮೈಸೂರು ೧೮೮೧-೧೯೪೭' ಎಂಬ ಗ್ರಂಥದಲ್ಲಿ ಈ ರೀತಿ ವಿಶ್ಲೇಷಿಸಿದ್ದಾರೆ. ಮೈಸೂರು ರಾಜ್ಯ ಸಂಘಗಳನ್ನು ಕಾನೂನು ಸಮ್ಮತಗೊಳಿಸುವುದಕ್ಕೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ೧೯೨೬ರಲ್ಲಿ ಬ್ರಿಟಿಷ್ ಭಾರತದಲ್ಲಿ ವ್ಯಾಪಾರಿ ಸಂಘಟನಾ ಕಾಯಿದೆ ಜಾರಿಗೆ ಬಂದಿದ್ದಾಗ್ಯೂ ಮೈಸೂರು ಸರ್ಕಾರ ಇದನ್ನು ರಾಜ್ಯಕ್ಕೆ ವಿಸ್ತರಿಸುವ ಯಾವುದೇ ಉದ್ದೇಶವನ್ನು ಹೊಂದಿರಲಿಲ್ಲ. ಫಲಿತಾಂಶವಾಗಿ ೧೯೪೨ರವರೆಗೆ ವ್ಯಾಪಾರಿ ಸಂಘಟನೆಗಳು ದತ್ತಿ ಸಂಸ್ಥೆಗಳಂತೆ ತಮ್ಮನ್ನು ನೋಂದಣಿ ಮಾಡಿಕೊಳ್ಳುತ್ತಿದ್ದವು. ಈ ಹೇಳಿಕೆಯನ್ನು ಒಪ್ಪಿಕೊಳ್ಳಬಹುದು. ಆದರೆ ಮತ್ತೊಂದು ಕಡೆ ಬರೆಯುತ್ತಾ 'ಮೈಸೂರಿನಲ್ಲಿ ಮೊದಲ ಬಾರಿಗೆ ಕಾರ್ಮಿಕರಲ್ಲಿ ಸಂಘರ್ಷ, ಅಸಮ್ಮತಿ ಎಂಬುದು ಕಾಣಿಸಿಕೊಂಡಿದ್ದರೂ ಅದು ಯಾವುದೇ ಸಂಘಟಿತ ವಿಧಾನದಲ್ಲಿ ಇರಲಿಲ್ಲ' ಎಂಬುದಾಗಿ ತಿಳಿಸಿದ್ದಾರೆ. ಹಾಗಾದರೆ ೧೯೨೫ರಲ್ಲಿ ಬಿನ್ನಿ ಮಿಲ್ಲಿನಲ್ಲಿ ನಡೆದ ಕಾರ್ಮಿಕರುಗಳ ನಡುವಿನ ಸಂಘರ್ಷ ಹಾಗೂ ಕಣ್ಣೀರು ಕೂಲಿಯಾಳುಗಳು ಸಂಘಟಿತರಾಗಿ ನಡೆಸಿದ ಹೋರಾಟ, ತಗಡೂರು ರಾಮಚಂದ್ರರಾವ್ ಅವರು ವಹಿಸಿದ ನೇತೃತ್ವ ಇದೆಲ್ಲವನ್ನು ಏನೆಂದು ಗುರುತಿಸುವುದು ? ಸಂಶೋಧಕನ ಪ್ರಕಾರ ಇದೂ ಸಹ ಸಂಘಟನಾತ್ಮಕ ಹೋರಾಟವೆ. ಇದಕ್ಕೆ ಸಮರ್ಥನೆಯನ್ನು ವಿಸ್ತಾರವಾಗಿ ನೀಡಲಾಗಿದೆ. ಸಾಮ್ರಾಜ್ಯಶಾಹಿ

ಚರಿತ್ರೆಕಾರರ ಪ್ರಕಾರ ಹೊಸ ಆಧುನಿಕ ಬದಲಾವಣೆ, ಪ್ರಯೋಗಳೆಲ್ಲವೂ ಬ್ರಿಟಿಷರಿಂದಲೇ ಆಗಿರಬೇಕು ಎಂಬ ಧೋರಣೆಯನ್ನು ತಳೆಯುವುದು ಸಹಜ. ಹೆಟ್ನೆ ಅವರೂ ಸಹ ಇದರಿಂದ ಹೊರತಾಗಿಲ್ಲ. ಇದಲ್ಲದೇ ಬೆಂಗಳೂರಿನ ಹತ್ತಿ ಗಿರಣಿಗಳಲ್ಲಿ ಅನೇಕ ಸಣ್ಣ ಸಣ್ಣ ಮುಷ್ಕರಗಳು ನಡೆದಿದ್ದುದರ ಬಗ್ಗೆ, ಅದರಿಂದ ನಷ್ಟವಾದ ಕೆಲಸದ ದಿನಗಳ ಕುರಿತು ಸತ್ಯಾಂಶಗಳನ್ನು ಕಂಡುಕೊಳ್ಳಲಾಯಿತು.

- ೧೯೪೦ರ ದಶಕವನ್ನು ಬೆಂಗಳೂರಿನ ಕಾರ್ಮಿಕ ಚಳವಳಿ ಹಾಗೂ ಮುಷ್ಕರಗಳ ಹಿನ್ನೆಲೆಯಿಂದ "ಕೆ.ಟಿ. ಭಾಷ್ಯಂ ಯುಗ" ಎಂದು ಕರೆದು ಸಮರ್ಥನೆಯನ್ನು ನೀಡಿ, ಅದಕ್ಕೆ ಪೂರಕವಾಗಿ ಎಲ್ಲಾ ಆಯಾಮಗಳಿಂದಲೂ ಚರ್ಚೆಗೊಳಪಡಿಸಲಾಗಿದೆ.
- ಪ್ರತಿ ಗಿರಣಿಗಳಲ್ಲಿ ಪ್ರತ್ಯೇಕ ಕಾರ್ಮಿಕ ಸಂಘಗಳು ಸ್ಥಾಪನೆಯಾಗುವುದರ ಬಗ್ಗೆ ಕೆ.ಟಿ. ಭಾಷ್ಯಂ ಅವರಿಗೆ ವಿರೋಧವಿತ್ತು ಎಂಬ ಅಂಶವು ಈ ಸಂಶೋಧನೆಯಿಂದ ತಿಳಿದುಬಂದಿದೆ.
- ರಾಷ್ಟ್ರೀಯ ಚಳವಳಿ, ಏಕೀಕರಣ ಚಳವಳಿಯಲ್ಲಿ ಕಾರ್ಮಿಕರು ಭಾಗವಹಿಸಿದ್ದರ ಬಗ್ಗೆ ವಿಶ್ಲೇಷಣಾತ್ಮಕ ಮಾಹಿತಿ ಕಲೆಹಾಕಲಾಗಿದೆ.
- ಗಿರಣಿಗಳ ಅವಸಾನದ ಬಗ್ಗೆ ಚರ್ಚಿಸುತ್ತಾ ಕೃಷಿಯಿಂದಾದ ಬದಲಾವಣೆ, ಆಧುನಿಕ ಯಂತ್ರೋಪಕರಣಗಳು, ವಿದೇಶಿ ವಿನಿಮಯ, ಭಾರತದ ಆರ್ಥಿಕತೆ ಹಾಗೂ ಜಾಗತೀಕರಣದ ಪ್ರಭಾವದಿಂದ ಹೇಗೆ ಗಿರಣಿಗಳು ಅವಸಾನದ ಹಾದಿಯನ್ನು ತುಳಿದವು ಎಂಬುದನ್ನು ವಿಶ್ಲೇಷಿಸಿ ಕೆಲವು ವಾಸ್ತವಾಂಶಗಳನ್ನು ಕಂಡುಕೊಳ್ಳಲಾಗಿದೆ.

## ೮.೩. ಸಂಶೋಧನೆಯ ಅನಿಸಿಕೆಗಳು

'ವಸಾಹತು ಕಾಲದ ಬೆಂಗಳೂರಿನ ಹತ್ತಿ ಗಿರಣಿಗಳ ಸ್ಥಿತ್ಯಂತರ ಹಾಗೂ ಸ್ಥಿತಿಗತಿಗಳ ಅಧ್ಯಯನ' ಎಂಬ ಸಂಶೋಧನೆಯ ಶೀರ್ಷಿಕೆ, ಆ ಶೀರ್ಷಿಕೆಯಡಿಯಲ್ಲಿ ಹಾಕಿಕೊಂಡಿರುವ ಏಳು ಅಧ್ಯಾಯಗಳು ಹಾಗೂ ಇದಕ್ಕಾಗಿ ನಡೆಸಿದ ಐದು ವರ್ಷಗಳ ಅಧ್ಯಯನ ಇವುಗಳೆಲ್ಲವೂ ಸಂಶೋಧಕನ ಇತಿ–ಮಿತಿಗೆ ಒಳಪಟ್ಟಿದೆ.

೨೦೦೯–೧೦ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗದಲ್ಲಿ ಎಂ.ಫಿಲ್. ಪದವಿಯಲ್ಲಿ ಅಧ್ಯಯನ ಮಾಡುತ್ತಿದ್ದಾಗ ಸಂಪ್ರಬಂಧದ ರಚನೆಗಾಗಿ 'ಬೆಂಗಳೂರಿನ ಬಿನ್ನಿ ಮಿಲ್ :

ಒಂದು ಅಧ್ಯಯನ' ಎಂಬ ವಸ್ತು ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಸಂಪ್ರಬಂಧ ರಚನೆಗಾಗಿ ಇದ್ದಂತಹ ಅವಧಿ ಕೇವಲ ಐದು ತಿಂಗಳು. ಹೀಗಾಗಿ ಅಲ್ಪಾವಧಿಯ ಕ್ಷೇತ್ರ ಕಾರ್ಯ ಕೈಗೊಂಡು ರಾಜ್ಯ ಪತ್ರಾಗಾರ ಇಲಾಖೆ (ವಿಧಾನಸೌಧ)ಗೆ ಭೇಟಿ ನೀಡಿದ್ದು, ಅಲ್ಲಿ ೨೦ ದಿನಗಳವರೆಗೆ ಅಧ್ಯಯನ ನಡೆಸಿ ಕೆಲವೊಂದು ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಮಾರ್ಗದರ್ಶಕರಾದ ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರ ಮುಂದೆ ಇಟ್ಟಾಗ, ಅವರು ಸಂಗ್ರಹಿಸಿದ ಮಾಹಿತಿ ಕುರಿತು ಸಂತೋಷ ವ್ಯಕ್ತಪಡಿಸಿದರು. ಅಧ್ಯಯನವನ್ನು ವಿಶಾಲ ತಳಹದಿಯ ಮೂಲಕ ಮರುರೂಪಿಸಿ ಇದನ್ನು ವಸಾಹತು ಕಾಲದ ಬೆಂಗಳೂರಿನಲ್ಲಿ ಅಸ್ತಿತ್ವದಲ್ಲಿದ್ದ ಎಲ್ಲಾ ಹತ್ತಿ ಗಿರಣಿಗಳನ್ನು ಚಾರಿತ್ರಿಕ ನೆಲೆಗಟ್ಟಿನಲ್ಲಿ ಅಭ್ಯಸಿಸುವಂತೆ ಸಲಹೆಯನ್ನು ಅಂದೇ ಕೊಟ್ಟಿದ್ದರು. ೨೦೧೧ರಲ್ಲಿ ಪಿಎಚ್.ಡಿ. ಅಧ್ಯಯನ ಕೈಗೊಂಡಾಗ ಅವರು ಕೊಟ್ಟ ಸಲಹೆಯಿಂದಲೇ ಈ ಅಧ್ಯಯನ ರೂಪ ತಳೆದದ್ದು.

ಎರಡು ವರ್ಷಗಳವರೆಗೆ ಮಾಹಿತಿ ಸಂಗ್ರಹಣೆ ಮಾಡಿ ಬೆಂಗಳೂರು, ಚೆನ್ನೈ ಹಾಗೂ ಮುಂಬೈ ಪತ್ರಾಗಾರ ಇಲಾಖೆಯಲ್ಲಿ ಹಲವು ಮಾಹಿತಿಗಳನ್ನು ಕಲೆಹಾಕಿ ಈ ಅಧ್ಯಯನವನ್ನು ಕಟ್ಟಲಾಗಿದೆ. ವಸಾಹತು ಕಾಲದಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದ ಹತ್ತಿ ಗಿರಣಿಗಳ ಕುರಿತು ಮಾತ್ರವೇ ಅಭ್ಯಸಿಸದೆ ತುಲನಾತ್ಮಕ ಅಧ್ಯಯನ ಕೈಗೊಂಡು ಮೈಸೂರು, ದಾವಣಗೆರೆಯ ಹತ್ತಿ ಗಿರಣಿಗಳನ್ನು ಮುಖಾಮುಖಿಗೊಳಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಗಿರಣಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕೆಲವು ಕಾರ್ಮಿಕರನ್ನು ಸಂದರ್ಶನಕ್ಕೆ ಒಳಪಡಿಸಲಾಗಿದೆ. ಈ ಎಲ್ಲಾ ಅನುಕೂಲತೆಗಳ ಮೂಲಕ ಸಂಶೋಧನಾ ಚೌಕಟ್ಟಿನೊಳಗೆ ಅಧ್ಯಯನ ಮಾಡಿ, ಹಾಕಿಕೊಂಡ ಅಧ್ಯಾಯಗಳನ್ನು ಸಂಗ್ರಹಸಿದ ಆಕರಗಳ ಮೂಲಕ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಮೊದಲನೆಯದಾಗಿ ಕಲೆಹಾಕಿದ ಪತ್ರಾಗಾರ ಇಲಾಖೆಯ ದಾಖಲೆಗಳನ್ನು ಪೂರ್ಣ ಪ್ರಮಾಣದಲ್ಲಿ ಅಭ್ಯಸಿಸಿದ್ದರೂ, ಅದನ್ನು ವಿಶ್ಲೇಷಿಸುವ ಸಂದರ್ಭಗಳಲ್ಲಿ ಸಂಶೋಧಕನ ದೃಷ್ಟಿಕೋನಕ್ಕೆ ತಕ್ಕಂತೆ ಆಕರಗಳನ್ನು ಮಾರ್ಪಡಿಸಿಕೊಳ್ಳಲಾಗಿದೆ. ಅದೇ ಆಕರಗಳನ್ನು ಮತ್ತೊಬ್ಬ ಸಂಶೋಧಕ ವಿಶ್ಲೇಷಿಸಿದ್ದಲ್ಲಿ ಫಲಿತವೇ ಬೇರೆಯಾಗಬಹುದು. ಇದನ್ನು ಸಂಶೋಧಕನಾಗಿ ಯಾವುದೇ ಮುಚ್ಚು ಮರೆಯಿಲ್ಲದೇ ಹೇಳಿಕೊಳ್ಳುತ್ತಿದ್ದೇನೆ. ಆದಾಗ್ಯೂ ಆಕರಗಳ ಮೂಲಕ ಅಧ್ಯಾಯಗಳನ್ನು ಕಟ್ಟುವ ಸಂದರ್ಭದಲ್ಲಿ ಸಮರ್ಥನೆಗೇನೂ ಕೊರತೆಯಿಲ್ಲ. ಎರಡನೆಯದಾಗಿ, ಕೆಲವು ಉಪ ಅಧ್ಯಾಯಗಳನ್ನು ವಿಶ್ಲೇಷಿಸುವ ಸಂದರ್ಭದಲ್ಲಿ ತಕ್ಕನಾದ ಆಕರಗಳ ಕೊರತೆಯಿಂದ ಆನುಷಂಗಿಕ ಆಕರಗಳ ಮೊರೆ ಹೋಗಲಾಗಿದೆ ಹಾಗೂ ವಿವರಗಳನ್ನು ಸಂಕ್ಷಿಪ್ತಗೊಳಿಸಲಾಗಿದೆ.

# ಅನುಬಂಧಗಳು

ಸಂದರ್ಶನ

ಗ್ರಂಥಋಣ

ಮೂಲ ದಾಖಲೆಗಳು

ಭೂಪಟಗಳು

# ಕಾರ್ಮಿಕರ ಸಂದರ್ಶನ

## ೧. ರಾಮಕೃಷ್ಣರಾವ್

| | | |
|---|---|---|
| ಸಂದರ್ಶನ ದಿನಾಂಕ | : | ೦೮-೦೬-೨೦೧೫ |
| ವಯಸ್ಸು | : | ೮೬ ವರ್ಷ, ಜಾತಿ– ಮರಾಠಿ ಪವಾರ್ ಸಮುದಾಯ |
| ವಿಳಾಸ | : | ಡೋರ್ ನಂ. ೬೨೫, ಬಿನ್ನಿಪೇಟೆ, ಬೆಂಗಳೂರು – ೨೩ |
| ಮೂಲ ವಿಳಾಸ | : | ಮಾಗಡಿ ನಗರ |
| ಕೆಲಸ ನಿರ್ವಹಿಸಿದ ಗಿರಣ | : | ಬಿನ್ನಿ ಮಿಲ್ |
| ವರ್ಷ | : | ೧೯೪೫ನೇ ಮೇ ಯಿಂದ ೧೯೭೦ನೇ ಮೇ ವರೆಗೆ (ಇವರು ಕೆಲಸಕ್ಕೆ ಸೇರಿದಾಗ ೧೫ ವರ್ಷದವರಾಗಿದ್ದು, ೪೦ ವರ್ಷಕ್ಕೆ ಕಡಿಮೆ ಸಂಬಳದಿಂದಾಗಿ ಕೆಲಸದಿಂದ ದೂರ ಸರಿದರು) |
| ಪಾಳಿ | : | ಪ್ರತಿವಾರ ಬದಲಾವಣೆಗೆ ಒಳಪಡುತ್ತಿತ್ತು. (ಎ.ಬಿ.ಸಿ. ಪಾಳಿ ಎಂದು ವಿಂಗಡಿಸಲಾಗಿದ್ದು, ಎ ಪಾಳಿಯು ಬೆಳಿಗ್ಗೆ ೬.೦೦ರಿಂದ ೨.೦೦ ರವರೆಗೆ, ಬಿ ಪಾಳಿಯು ಮಧ್ಯಾಹ್ನ ೨.೦೦ ರಿಂದ ರಾತ್ರಿ ೧೦.೦೦ ರವರೆಗೆ ಹಾಗೂ ಹಾಗೂ ಸಿ ಪಾಳಿಯು ರಾತ್ರಿ ೧೦.೦೦ರಿಂದ ಬೆಳಿಗ್ಗೆ ೬.೦೦ ರವರೆಗೆ). |
| ಖಾಯಂ ನೌಕರರಾಗಿದ್ದಿರಾ | : | ಹೌದು. |
| ಸಂಬಳ | : | ೧೯೪೫ರಲ್ಲಿ ರೂ. ೨೫, ೧೯೭೦ರ ವೇಳೆಗೆ ೨೦೮ ರೂಪಾಯಿಗಳು, ಪಿ.ಎಫ್. ಅನ್ನು ಮೋಸ ಮಾಡಲಾಗಿತ್ತು. ಕಮ್ಯುನಿಸ್ಟ್ ಪಾರ್ಟಿಯಿಂದ ಮೋಸಹೋಗಿದ್ದಾಗಿ ಆರೋಪಿಸುತ್ತಾರೆ. ಆ ಸಂದರ್ಭ ಸಿ.ಪಿ.ಎಂ. ನಾಯಕ ಸೂರ್ಯನಾರಾಯಣ್ ರೇ. |
| ಸೌಲಭ್ಯತೆಗಳು | : | ಪಿ.ಎಫ್., ಇ.ಎಸ್.ಐ., ಬಿನ್ನಿ ಪೇಟೆಯಲ್ಲಿ ಗೃಹ ಸೌಲಭ್ಯ (೭ ರೂ. ಮೌಲ್ಯವುಳ್ಳದ್ದು – ಮನೆ ಸಂಖ್ಯೆ ೬೨೫). |
| ಕಾರ್ಮಿಕ ಸಂಘದ ಕಾರ್ಯದರ್ಶಿ | : | ಡಿ. ವೆಂಕಟೇಶ್ (ತಮಿಳುನಾಡು) ಕೆ.ಟಿ. ಭಾಷ್ಯಂ (ವಕೀಲರು) ಕಾರ್ಮಿಕ ನಾಯಕರಾಗಿದ್ದರು. ಸ್ವತಂತ್ರ ನಂತರ ಕಾರ್ಮಿಕ ಮಂತ್ರಿಯಾದರು. ಡಿ. ವೆಂಕಟೇಶ್ ಅವರು ಭಾಷ್ಯಂ ಅವರ ಕಟ್ಟಾಳು ಆಗಿದ್ದರು ಎಂಬುದಾಗಿ ಮಾಹಿತಿ ನೀಡುತ್ತಾರೆ. |

| | | |
|---|---|---|
| ಮಾಲೀಕರು | : | ಬ್ರಿಟಿಷರು (೧೯೬೨), ನಂತರ ಕೊಯಮತ್ತೂರಿನವರಾದ ರಾಮಸ್ವಾಮಿ ಒಡೆಯರ್ ಬಿನ್ನಿಮಿಲ್‌ನ ಮಾಲೀಕರಾದರು. ಇದೇ ಸಂದರ್ಭದಲ್ಲಿ ಈ ಮಿಲ್‌ನ ಪಾಲುಗಾರಿಕೆಯನ್ನು ಉಲ್-ಶರೀಫ್ (ಜಾಫರ್ ಶರೀಫ್ ಅಳಿಯ) ಹೊಂದಿದ್ದರು. |
| ಸಂಬಂಧ | : | ಮಾಲೀಕರು ಹಾಗೂ ಕಾರ್ಮಿಕರ ನಡುವಿನ ಸಂಬಂಧ ಅಷ್ಟಾಗಿ ಸರಿಯಾಗಿರಲಿಲ್ಲ. |
| ಮುಷ್ಕರ | : | ಇವರು ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ೧೯೬೨ರಲ್ಲಿ ಆರು (೬) ದಿನಗಳ ಕಾಲ ಮುಷ್ಕರ ನಡೆದಿತ್ತು (ಸಂಬಳ ಹಾಗೂ ಮೂಲ ಸೌಕರ್ಯಗಳ ಸಲುವಾಗಿ). |
| ಸ್ವಾತಂತ್ರ್ಯ ಚಳುವಳಿಯಲ್ಲಿ ಅಥವಾ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದ್ದಿರಾ | : | ಇಲ್ಲ. |
| ವಿವಿಧ ಕೋಮುಗಳ ನಡುವಿನ ಸಂಬಂಧ | : | ಆರೋಗ್ಯಯುತವಾಗಿತ್ತು. |
| ಜಾತೀಯತೆ ಅಥವಾ ಅಸ್ಪೃಶ್ಯತೆ ಇತ್ತಾ | : | ಇಲ್ಲ |

ಎಂದು ಇವರು ಪ್ರಸ್ತಾಪ ಮಾಡುತ್ತಾ ಆಂಧ್ರಪ್ರದೇಶದ ಪೆನುಗೊಂಡದಿಂದ ದಲಿತ ವರ್ಗಕ್ಕೆ ಸೇರಿದ ೧೦೦ ಜನ ದಿನಗೂಲಿ ಕೆಲಸಗಾರರನ್ನು ಕಸಗುಡಿಸುವ (Sweeper) ಕೆಲಸಕ್ಕೆ ನಿಯೋಜಿಸಿಕೊಳ್ಳಲಾಗಿತ್ತು ಎಂಬುದಾಗಿ ತಿಳಿಸುತ್ತಾರೆ. ಹಾಗೆಯೇ ಬಿನ್ನಿ ಮಿಲ್ಲಿನಲ್ಲಿ ಮಂಡ್ಯದ ಒಕ್ಕಲಿಗ ಸಮುದಾಯದವರು ಮಾದಿಗ ಸಮುದಾಯದವರನ್ನು ಶೋಷಣೆ ಮಾಡುತ್ತಿದ್ದರು ಎಂಬುದಾಗಿಯೂ ಪ್ರಸ್ತಾಪಿಸುತ್ತಾರೆ.

ಮಹಿಳಾ ಕಾರ್ಮಿಕರು : ವೆಲ್ಡಿಂಗ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ರಾಮಕೃಷ್ಣರಾವ್ ಅವರ ಪ್ರಕಾರ ಬಿನ್ನಿ ಪೇಟೆಯಲ್ಲಿ ೯೯ ಮನೆಗಳಿದ್ದವು. ಕಾಟನ್ ಪೇಟೆಯಲ್ಲಿ ಕೆ.ಟಿ. ಭಾಷ್ಯಂ ಅವರ ಮನೆಯ ಎದುರಿಗೆ ಕಾರ್ಮಿಕ ಸಂಘದ ಕಛೇರಿ ಇತ್ತು ಎಂಬುದಾಗಿ ತಿಳಿಸುತ್ತಾರೆ. ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗ್ಗಡೆ ಅವರ ಆಡಳಿತಾವಧಿಯಲ್ಲಿ ೧೯೮೦ರಲ್ಲಿ ಚಂದ್ರಾ ಲೇ ಔಟ್‌ನಲ್ಲಿ ೮೦ ಬಿ.ಡಿ.ಎ. ನಿವೇಶನಗಳನ್ನು ಕಾರ್ಮಿಕರಿಗೆಂದು ಹಂಚಿಕೆ ಮಾಡಲಾಗಿತ್ತು. ಆದರೆ ಅದು ನನಗೆ ಸಿಗಲೇ ಇಲ್ಲ ಎಂಬುದಾಗಿ ಹೇಳುತ್ತಾ ಪ್ರಭಾವಿ ರಾಜಕಾರಣಿಯೊಬ್ಬರು ೮ ನಿವೇಶನಗಳನ್ನು ಕಸಿದುಕೊಂಡರು ಎಂಬುದಾಗಿಯೂ ಆಪಾದನೆ ಮಾಡುತ್ತಾ ತಮ್ಮ ಅಸಮಾಧಾನವನ್ನು ಹೊರಹಾಕುತ್ತಾರೆ.

೨. ಪೈಲ್ವಾನ್ ಮುನಿಯಪ್ಪ

ಇವರು ತಮ್ಮ ೯೦ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದಾರೆ. ಮಾಹಿತಿ ಸಂಗ್ರಹಣೆ ಅವರ ಮಗನಾದ ರಾಮಯ್ಯ ಅವರಿಂದ ಮಾಹಿತಿ.

| | | |
|---|---|---|
| ಸಂದರ್ಶನ ದಿನಾಂಕ | : | ೧೦-೦೬-೨೦೧೫ |
| ಜಾತಿ | : | ಒಕ್ಕಲಿಗೆ (ಗೌಡ) |
| ವಿಳಾಸ | : | ತುರುವೇಕೆರೆ |
| ಕೆಲಸ ನಿರ್ವಹಿಸಿದ್ದ ವರ್ಷ | : | ೧೯೩೮, ನಿವೃತ್ತಿ ೧೯೮೧ |
| ನಿರ್ವಹಿಸಿದ ಮಿಲ್ | : | ಬಿನ್ನಿ ಮಿಲ್ |

೩. ಬಾಬುರಾವ್

ಇವರು ತಮ್ಮ ೮೦ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದು ಪತ್ನಿ ನೀಲಾಬಾಯಿ ಅವರಿಂದ ಮಾಹಿತಿ ಸಂಗ್ರಹಣೆ.

| | | |
|---|---|---|
| ಸಂದರ್ಶನ ದಿನಾಂಕ | : | ೧೧-೦೬-೨೦೧೫ |
| ಜಾತಿ | : | ಮರಾಠಿ |
| ವಿಳಾಸ | : | ಮಾಗಡಿ |
| ಕೆಲಸಕ್ಕೆ ಸೇರಿದ್ದು | : | ೧೯೩೫, ನಿವೃತ್ತಿ ೧೯೭೩. |
| ನಿಮಗೆ ಪಿಂಚಣಿ ಸೌಲಭ್ಯ ಇದೆಯೇ | : | ಇಲ್ಲ |
| ಯಾವ ಮಿಲ್ | : | ಮಿನರ್ವ ಮಿಲ್ |
| ನಿಮ್ಮ ಪತಿಗೆ ನಿವೇಶನ ಸೌಲಭ್ಯ ಸಿಕ್ಕಿತ್ತೇ | : | ಇಲ್ಲ, ಮಾಹಿತಿ ಅಸ್ಪಷ್ಟ |

೪. ಸುಂದರಮ್

| | | |
|---|---|---|
| ಸಂದರ್ಶನ ದಿನಾಂಕ | : | ೧೨-೦೬-೨೦೧೫ |
| ಜಾತಿ | : | ರೆಡ್ಡಿ |
| ವಿಳಾಸ | : | ತಮಿಳುನಾಡಿನ ಚಿಟ್ಟೇರಿ |
| ಕೆಲಸಕ್ಕೆ ಸೇರಿದ್ದು | : | ೧೯೪೫ |
| ಮಿಲ್ | : | ಬಿನ್ನಿಮಿಲ್ |

ಇವರ ವಿಚಾರವಾಗಿ ರಾಮಕೃಷ್ಣರಾವ್ ಅವರಿಂದ ಮಾಹಿತಿ ಪಡೆದು ಕೊಳ್ಳಲಾಯಿತು. ಇವರಿಬ್ಬರೂ ಸಮಕಾಲೀನರಾಗಿದ್ದರು.

೫. ವಾಸು

ಇವರು ತಮ್ಮ ೮೬ನೇ ವಯಸ್ಸಿನಲ್ಲಿ ನಿಧನ ಹೊಂದಿರುತ್ತಾರೆ. ಇವರ ಬಗ್ಗೆ ರಾಮಕೃಷ್ಣರಾವ್‌ರವರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಇವರಿಬ್ಬರೂ ಸಹ ಸಮಕಾಲೀನರಾಗಿದ್ದರು.

| | | |
|---|---|---|
| ಸಂದರ್ಶನ ದಿನಾಂಕ | : | ೧೨-೦೬-೨೦೧೫ |
| ಜಾತಿ | : | ಮೊದಲಿಯಾರ್ |
| ಸ್ಥಳ | : | ಆಂಧ್ರದ ಚಿತ್ತೂರು |
| ಮಿಲ್ | : | ಬಿನ್ನಿ ಮಿಲ್ |

೬. ಬಾಬುರಾವ್

ಇವರು ತಮ್ಮ ೭೯ನೇ ವಯಸಿನಲ್ಲಿ ನಿಧನರಾಗಿದ್ದು, ಬೆಂಗಳೂರಿನಲ್ಲಿ ನೆಲೆಸಿರುವ ಇವರ ಮಗ ಸಂತೋಜಿರಾವ್ ಅವರಿಂದ ಮಾಹಿತಿ ಸಂಗ್ರಹಣೆ.

| | | |
|---|---|---|
| ಸಂದರ್ಶನ ದಿನಾಂಕ | : | ೦೪-೦೭-೨೦೧೫ |
| ಜಾತಿ | : | ಮರಾಠಿ – ಕ್ಷತ್ರಿಯ |
| ಸ್ಥಳ | : | ಕನಕಪುರ |
| ಕೆಲಸಕ್ಕೆ ಸೇರಿದ್ದು | : | ೧೯೩೦, ತೊರೆದದ್ದು ೧೯೬೬ರಲ್ಲಿ |
| ನಿರ್ವಹಿಸಿದ ಕೆಲಸ | : | ಮೇಸ್ತ್ರಿ |
| ನಿಮ್ಮ ತಂದೆಗೆ ಯಾವುದಾದರೂ ಸೌಲಭ್ಯ ಸಿಕ್ಕಿತ್ತೆ (ನಿವೇಶನ, ಪಿಂಚಣಿ, ಇತ್ಯಾದಿ) | : | ಇಲ್ಲ |
| ಯಾವ ಮಿಲ್ಲು | : | ಮೈಸೂರು ಮಹಾರಾಜ ಮಿಲ್ಲು |

ಇವರು ಪೂರ್ಣ ಮಾಹಿತಿ ನೀಡಲು ತಾತ್ಸಾರ ಮನೋಭಾವನೆಯನ್ನು ವ್ಯಕ್ತಪಡಿಸಿದರು.

# ಗ್ರಂಥಋಣ

## ಪ್ರಾಥಮಿಕ ಆಕರಗಳು

### Archival Sources


- **Commerce and Industry Report**

  Commerce and Industry Report 1914-1915

  Commerce and Industry Report 1915-1916

  Commerce and Industry Report 1916-1917

  Commerce and Industry Report 1917-1918

  Commerce and Industry Report 1918-1919

  Commerce and Industry Report 1919-1950

- **Report on the Administration of Mysore**

  Report on the Administration of Mysore, 1881

  Report on the Administration of Mysore, 1882

  Report on the Administration of Mysore, 1883

  Report on the Administration of Mysore, 1884

  Report on the Administration of Mysore, 1885

  Report on the Administration of Mysore, 1890

  Report on the Administration of Mysore, 1895

  Report on the Administration of Mysore, 1900

  Report on the Administration of Mysore, 1910

  Report on the Administration of Mysore, 1920

  Report on the Administration of Mysore, 1930

Report on the Administration of Mysore, 1935

Report on the Administration of Mysore, 1945

Report on the Administration of Mysore, 1950

Report on the Administration of Mysore, 1960

Report on the Administration of Mysore, 1965

Report on the Administration of Mysore, 1975

Report on the Administration of Mysore, 1980

Report on the Administration of Mysore, 1985

Report on the Administration of Mysore, 1986

Report on the Administration of Mysore, 1987

Report on the Administration of Mysore, 1988

Report on the Administration of Mysore, 1989

Report on the Administration of Mysore, 1990

- **Industry *and Commerce Files***

1. Supply of Water to the Mysore Spinning and Manufacturing Co., Ltd., Bangalore.

   176 of 1916

   1 – 8.

2. Cotton Mill at Davanagere.

   33 of 1917

   1 – 2.

3. Establishment of a Cotton Mill in Mysore.

   171 of 1919

   5,6,9(a),11,12,13,14,16,22,23.

4. Minerva Mills.

333 of 1920

1 – 20.

5. Appointment of a Government Director for the Bangalore Woolen, Cotton and Silk Mills Co.

406 of 1920

1.

6. Acquisition of Land on behalf of the Minerva Mills Ltd.

53 of 1921

17,18,21,24,28,30,33,44,46,48,51,52,55,57.

7. By the Minerva Mills.

53 of 1921

49,50,56,58,81,83,91-94,96.

8. The Acquisition of the Lands by the Minerva Mills Ltd.

53 of 1921

35,36,39,42.

9. Cotton Transport Bill.

226 of 1921

1 – 12.

10. The Restriction and Control of Cotton Traffic.

226 of 1921

13.

11. Acquisition of Lands of Kethumaranahalli Village, Bangalore Taluk for a Labour Colony of Mysore Spinning and Manufacturing Co., Ltd., Bangalore.

74 of 1927

8 – 43.

12. Housing Accommodation to the labours by the Bangalore Cotton Woolen and Silk Mills Ltd.

51 of 1928

1 – 11.

13. Additional Establishment for the Badanaval Spinning Center.

162 of 1928

1 – 2.

14. Acquisition of No. 264 of Gudibanda Kasaba for the Construction of a Weaving School.

32 of 1929

10 – 12.

15. Acquisition of Lands for the Badanval Spinning Center.

137 of 1929

6 – 8.

16. Capital Expenditure of Badanaval Spinning Center .

52 of 1934

1,3,5.

17. Handling of Private Business by the Trade Commissioner in London.

357 of 1934

6 - 7.

18. Extension of the Provision of Act IX of 1916 to the Bangalore Woolen, Cotton and Silk Mills Provident Fund Scheme.

428 of 1939

1 – 2.

19. Silk in the Binny Mills.

157 of 1941

1 – 4.

20. Increasing the Working Hours from 54 to 60 hours per week in the Care of the Cotton Mills in the State.

278 of 1941

1 – 7.

21. Industrial Dispute in the Mysore Spinning and Manufacturing Co., Ltd., Bangalore.

278 of 1942

1 – 4.

22. Additional Grants for the Cotton, Ginning and pressing Factory, Maddur.

226 of 1942

1 – 2.

23. Labour Welfare during War Time Govt. of India Scheme Opening of Cost Price grain shop

448 of 1942

1.

24. Govt. of India Notification No. 29 War Risk Insurance (F).

537 of 1942

1 – 11.

25. Amendment to Cotton Grading and Marketing Rules 1939.

595 of 1942

1 – 5.

26. Supply of Cotton Textile for War Purposes from G.K. Mills

675 of 1942

1 – 2.

27. The Mysore War Risks (Goods) Insurance Emergency Act, 1942.

60 of 1942

1 – 6.

28. Govt. of India War Risk (Goods) Insurance Notification.

60 of 1942

48.

29. War Risk (Factory) Insurance.

68 of 1942

30. Approval to the Allocation of the Grants of Rs. 1000 Sanctioned for Standing and Running Two Labour Welfare Centres in Bangalore City.

122 of 1942

5 – 9.

31. Strike in SK Mills, Mysore.

420 of 1942

1 – 2.

32. Govt. of India Bill to Amend the Indian Trade Union Act.

432 of 1942

1.

- **Confidential Branch Files**

1. Visit of Mrs. Gandhi and party to Bangalore.

100 of 1920

13 - 17.

2. Hartal Day observed in Bangalore on 27-02-1921.

235 of 1920

1 - 2.

3. Public meeting organized by Mr. Thagadur Ramachandra Rao to settle disputes among the employees of the Binny Mills, Bangalore. .

31 of 1924

127 - 128.

4. Holding "Mysore Political Conference" at Bangalore under the presidency of Mr. Gandhi.

31 of 1924

130,132,133.

5. Information required Re-Indian Round Table Conference, Imports of Excisable Goods.

34 of 1930

2,14,17,18,19,22.

6. Passages etc., to the Dewan in Connection with the R.T.C.

26 of 1931

17,27,32,36,37,53,54,55

7. Bifurcation of the Industrial Department.

62 of 1941

1 - 2

8. Warning to Mr. K.T. Bhasyam not to incite the labourers of the Binny Mills on strike.

12 of 1941

89 - 91.

- **Mysore Government Records : Prisons and Jails**

1. Clothing for the jail establishment at Bangalore.

3 of 1871

1 – 4.

2. Progress in the work of construction of the building for Khaki viewing industry.

17 of 1813

1 – 20.

3. Permission to registration GEB Scott of the Bishop cotton school to impact religious instructions to the European protestant convicts of the B.C. Jail.

46 of 1915

1 – 2.

4. Proposal for the improvement of industries in the jail at Mysore.

58 of 1915

27 – 36.

5. Manufacture of army clothing in the Central jail, Bangalore purchase of sewing machines for use in the central jail.

14 of 1940

1 – 11.

- **Police**

1. Strike of the coolies of the Bngalore woolen, cotton and silk mills.

63 of 1920

1 – 17.

2. Conduct of Mr. Searle in connection with the Binny mills disturbances on the 20th July 1926.

57 of 1926

1.

- **Dewan's Office Files**

1. The Swadeshi movement in Mysore.

68 of 1906

- **Legislature Files**

1. Objections taken by the manager of the Binny mills, Bangalore to certain passages in the Daily Post of the 29th September 1909 regarding the working of the factories in Mysore state during 1908.

14 of 1909

1 - 3.

2. Rules under the weighs and measures regulation.

16 of 1909

2,2a,2b,3-46.

3. Rules under the Mysore weighs and measures regulation III of 1908.

16 of 1909

46 – 49.

4. Supply of standard weights and measures.

3 of 1910

1-2, 5-10, 3-4, 17-28.

5. Protection of industrial property.

26 of 1910

1 - 2.

6. Cotton duties repeat and cotton industries (statistics) regulation.

9 of 1926

pgs. 46 1.

7. The Mysore cotton control act.

43 of 1941

pgs. 105 1.

- **Economic Conference**

1. Grant of loans of Rs. 30,000/- to the Bangalore weavers cooperation society.

56 of 1917

1 - 2.

2. Spinning demonstration.

23 of 1921

2 - 3.

- **Medical**

1. An indent for sanction for the supply of instruments at an estimated cost Rs. 3236-14-0 to be supplied from medical stores at government cost and another for the supply for bedding, clothing and C.

27 of 1927

6,9,11,13,14,15,19,21.

- **Government of India committee Reports**

1. Final reports of the committee on commercial and industries policy after the war.

The Right 1918 1.

- **Census**

1. Special industrial census proposed to be taken during 1941.

41 of 1939

1 - 2.

2. Draft report on industry in Mysore.

18 of 1941

15 - 16.

- **Economic Conference**

1. The board of industries and commerce of the economic conference.

   13 of 1943

   1 - 2.

- **General Finance**

1. Loan of two lakhs to the Maharaja of Mysore spinning and manufacturing Co., Ltd., on mortgage of its mills.

   1 of 1887

   1 - 12.

2. Permission to the Maharaja of Mysore Spinning and manufacturing Co., Ltd., to draw Rs. 20,000, the balance of their loan on promotes from time to time.

   1 of 1889

   1 - 2.

3. Issue of debenture loans to the amount of four lakhs from the Bangalore woolen, cotton and silk mills Co., Ltd.

   9 of 1889

   1 - 11.

4. Authorizes the comptroller to take new debentures at 5 ½ P.C. in the Bangalore woolen, cotton and silk mills Co., Ltd.

   7 of 1895

   1 - 2.

5. Grant of loan of rupees one lakh to Mysore Spinning and manufacturing Co., Ltd., Bangalore as working capital.

   27 of 1901

   a1 – a61.

6. Premium of Rs. 7-8-0 an account of the insurance of the cotton godown of the Mysore Spinning and manufacturing Co.'s mills.

   109 of 1902

   1 – 3.

7. Renewal of debentures of the Bangalore woolen, cotton and silk mills Co., Ltd.

   470 of 1902

   1 – 6.

8. Management of the woolen, cotton and silk mills Co., Ltd., Bangalore

1 of 1903

1 – 7.

9. Dividend warrant of the Bangalore woolen, cotton and silk mills Co., Ltd.

391 of 1903

1 – 2.

10. Mr. Wagh's claim against the Mysore spinning and manufacturing Co.

181 of 1904

35 & 41.

11. Re-share certificate held by Govt. in the Bangalore woolen, cotton and silk mills Co., Ltd.

143 of 1911

1 – 2.

12. Shares and debentures held by Govt. in the Bangalore woolen, cotton and silk mills Co., Ltd.

172 of 1914

1 – 2.

13. Provident fund rules for the staff of the Mysore Spinning and manufacturing Co. Ltd.

63 of 1922

1 – 2.

- **Military**

1. Temporary entertainment of two Mochis and one Smith to assist in the manufacture of the clothing etc., for the I.S. Department.

1 of 1891

15 – 16.

2. Bills for the purchase of clothing etc., to the military department.

212 of 1897

1 – 24.

3. Increase of pay of Mr. Tate superintendent, Mysore army clothing and stores .

3 of 1900

1 – 5.

4. Certain clothing require for men in the I.S. Regiment on the field in connection with the European wave.

21 of 1914-15

104-05,108-109,135-136,153,168-169,
202,217, 299,423,453,572,573 – 7,
583, 593, 595, 597, 605, 616, 617,
619, 620, 625& 626.

5. Formation of a central stores for supplying clothing etc., to the military police, forest, excise or prisons department.

43 of 1914-15

1 – 11.

6. Proposal to purchase clothing from the army clothing department for the I.S. Troops.

59a of 1917

1 – 8.

7. Regarding permission to woolen and cotton mills to comply with the recruitments of the army.

198 of 1917

1 – 16.

- **Bangalore Municipal**

1. Levy of Mohatarfa tax on the mills of H.H. the Maharaja of Mysore Spinning and Manufacturing Co., Ltd.

3 of 1893

1 – 5.

2. Permission to acquire a piece of land south of the woolen, cotton and silk mills, Bangalore by the agents thereof.

66 of 1899

1 – 6.

3. Permission granted to Mrs. Binny and company to use the water of the Agrahar tank for their mill.

147 of 1900

1 – 4.

4. Refund the fee paid by Mrs. Binny and company as tax on the storage of cotton.

52 of 1902

1 – 9.

5. Application of the Bangalore woolen, cotton and silk mills Co., Ltd., for a piece of land to the west of the mills premises to extend their compound.

54 of 1910

1 – 2.

6. Petition from the authorities of the Bangalore woolen, cotton and silk manufacture clinic Co., to lease out a portion of the land at the link bed for the construction of sedimental tank for the levy.

12 of 1923

49,60,76,82,86,88,93.

7. Submits for information of government the resolution of the Bangalore permitting the authority and cotton and wool mills of Bangalore to deed Re. the Agrahar tank of renew the silt theft on at their own cost.

12 of 1923

66 - 67.

8. Use of water of the Agrahar tank by the Bangalore woolen, cotton and silk mills Co., Ltd.

12 of 1923

89,95,100,102.

9. Aralpet sewage and Binny mill sewage.

7 of 1926

35 - 235.

10. Sale of portion of the Agrahar back to the Bangalore woolen, cotton and silk mills Co., Ltd.

12 of 1928

80 - 102.

11. Construction of an under bridge below the railway line behind Maharja Mills.

23 of 1928

62 -103.

12. Exemption of water tax to the Minerva mills.

266 of 1928

1 - 9.

13. Exemption of water rate to the Mysore spinning and manufacturing Co., Ltd.

265 of 1928

2 - 19.

14. Exemption as a special case to the Bangalore woolen, cotton and silk, suits Co., from liability to the entertainment tax.

5 of 1933

1 - 4.

15. Acquisition of certain properties in front of Binny mills.

64 of 1937

1 - 9.

16. Agreement reacquisition of property of Bangalore woolen, cotton and silk mills Ltd.

64 of 1937

10 - 11.

17. Agreement between the Bangalore city municipal council and the Binny mills for the use of the Hosakere Agrahar tank, Bangalore city.

153 of 1939

1 - 6.

18. Grant of land to the Bangalore woolen, cotton and silk mills. B. city.

91 of 1941

50 - 56.

19. Draft agreement alteration of some words in between B. city Ml.cl. and the Binny mills for the use of the Hosakere Agrahar tank water.

67 of 1944

1 - 2.

- **Palace papers**

1. Papers relating to the control of Indian cotton.

81 of 1918

4 - 13.

2. Re-telegram of 6-9-1918 from the government of India, department of control of supply of piece of cotton cloth in India.

99 of 1918

1.

3. Control of cotton cloth.

99 of 1918

2 - 5.

- **General and Miscellaneous**

1. Acceptance of fee by government officers of attending the meeting of the Bangalore cotton, woolen and silk mills.

342 of 1904

1 - 3.

2. Articles of Art and Industry of Mysore sent to London Exhibition of 1862.

1 of 1860

1 - 22.

3. Introduction of Standard Weight and Measures.

1 of 1861

1 - 6.

4. Mr. Stardish Lee's Application for certain Concessions to be shown to his Woolen manufactory and his recommendation for the encouragement of silk manufacture.

2 of 1881

1 - 10.

5. Advance to Mr. Lee.

17 of 1891

1.

6. Advances to Laboures Act.

32 of 1891

1 - 12.

7. Acceptance of fee by government officers for attending the meeting of the bngalore, cotton, woolen and silk mills.

343 of 1904

1 - 4.

8. Nuisance caused by Binny's coffee works.

33 of 1905

1.

9. Emigration of Indians and reexcitement of coolies in Mysore for employment in Cylon.

94 of 1913

4,5,14,17.

10. Expenditure for exhibiting weaving machinery during Dasara.

114 of 1914

3 - 6.

11. Govt. of India Notification relating to trading with the evening in China, Siamu, Persia , Morocco.

76 of 1915

66,70,73,78.

12. Prohibiting the beginning of all goods and wars of Mr. Chandise with British India from the U.K. which had previously as impressed into that country from Norway, Sweden etc.

76 of 1915

77-79.

13. Trade restriction in connection with the European war .

76 of 1915

81-83.

14. Position of companies trading with the enemy.

76 of 1915

123-131.

15. Deletion of word 'Spain'.

76 of 1915

133-135.

16. Revised lists of articles the export of which in prohibited and restricted from the United Kingdom.

76 of 1915

240-241.

17. Amendments to the list of prohibited and restricted from the United Kingdom.

76 of 1915

238, 239, 242, 244, 246.

18. Amendments to the list of exports prohibited from the United Kingdom.

76 of 1915

223 - 227.

19. Trading license (Persian), 1915.

76 of 1915

134,137,193,199.

20. Trade restrictions in connection with the war.

102 of 1916

157, 165, 226-245.

- **Empire Cotton Growing committee Report, 1920.**

# ಪರಾಮರ್ಶನ ಗ್ರಂಥಗಳು


ಅಲೆನ್ ಜಿ.ಸಿ. (ಅನು : ಶ್ರೀನಿವಾಸಮೂರ್ತಿ ಎ.ಪಿ.), *ಜಪಾನಿನ ಆರ್ಥಿಕ ಪುನರುದಯ*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೪.

ಅಂತೋನವ ಕೆ. ಮತ್ತು ಕತೋವ್‌ಸ್ಕಿ ಜಿ., *ಭಾರತದ ಇತಿಹಾಸ*, ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ, ಮಾಸ್ಕೋ, ೧೯೯೮.

ಅಂಬೇಡ್ಕರ್ ಬಿ.ಆರ್., *ಬರಹಗಳು ಮತ್ತು ಭಾಷಣಗಳು (೧ ರಿಂದ ೧೪ ಸಂಪುಟಗಳು)*, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಆನಂದ್ ತೇಲ್‌ತುಂಬ್ಡೆ (ಕ.ಅ.) ಬಿ. ಗಂಗಾಧರಮೂರ್ತಿ, *ಅಂಬೇಡ್ಕರ್ ಮತ್ತು ಮುಸ್ಲಿಮರು*, ಸಮತಾ ಪ್ರಕಾಶನ, ಬೆಂಗಳೂರು, ೨೦೦೪.

ಆಲೂರು ವೆಂಕಟರಾಯರು, *ಕರ್ನಾಟಕ ಗತ ವೈಭವ*, ಧಾರವಾಡ, ೧೯೧೭.

ಕಾರ್ಲ್ ಮಾರ್ಕ್ಸ್, ಫ್ರೆಡರಿಕ್ ಏಂಗೆಲ್ಸ್, *ಪ್ರಥಮ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ೧೮೫೭–೧೮೫೯*, ಪ್ರಗತಿ ಪ್ರಕಾಶನ, ಮಾಸ್ಕೊ, ೧೯೮೦.

ಕೃಷ್ಣಪ್ಪ ಎಸ್., *ಸಾಮಾಜಿಕ ಅಧ್ಯಯನಗಳು*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೨.

ಕೇಶವಶರ್ಮ ಕೆ., *ವಸಾಹತುಶಾಹಿ ಅನುಭವ : ಬಹುರೀತಿಯ ಸಂವಾದಗಳು, ಒಪ್ಪಂದ–ನಿರಾಕರಣೆ–ಮೌನ–ಸಂಕರ*, ಪೂರ್ಣ ಪ್ರಕಾಶನ, ಶಿವಮೊಗ್ಗ, ೨೦೧೧.

ಗಿಲ್ಮರ್ ವಾನ್ ಹಲ್ಮರ್ ಬಿ. (ಅನು: ರಾಘವೇಂದ್ರರಾವ್ ಡಿ.), *ಔದ್ಯೋಗಿಕ ಮನೋವಿಜ್ಞಾನ, ಕನ್ನಡ ಅಧ್ಯಯನ ಸಂಸ್ಥೆ*, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೮.

ಗುಂಡಪ್ಪ ಡಿ.ವಿ. *ಮೈಸೂರಿನ ದಿವಾನರುಗಳು*, ಬೆಂಗಳೂರು, ೧೯೭೨.

ಗೋಪಾಲ ಬಾ.ರಾ., *ಇತಿಹಾಸ ಶಾಸ್ತ್ರ ಮತ್ತು ಸಿದ್ಧಾಂತ*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೯೬.

ಚಂದ್ರಪೂಜಾರಿ ಎಂ., *ಸಮಾಜ ಸಂಶೋಧನೆ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೧.

ಚಂದ್ರಶೇಖರ್ ಟಿ.ಆರ್ (ಸಂ), *ದಲಿತ ಅಧ್ಯಯನ*,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಚಂದ್ರಶೇಖರ್ ಎಸ್., *ಆಧುನಿಕ ಕರ್ನಾಟಕದ ಆಂದೋಲನಗಳು*, ನಮ್ಮ ಪ್ರಕಾಶನ, ಬಿಳಿಗೆರೆ, ೨೦೦೨.

ಚಂದ್ರಶೇಖರ್ ಎಸ್., *ಅಂಬೇಡ್ಕರ್ ಮತ್ತು ಗಾಂಧಿ*, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೨.

ಚಂದ್ರಶೇಖರ್ ಎಸ್. (ಅನು: ನಾಗಣ್ಣ ಸಿ.), *ದಕ್ಷಿಣ ಭಾರತ : ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦.

ಚಂದ್ರಶೇಖರಯ್ಯ ಎನ್.ಜಿ., *ಭಾರತೀಯ ಕರೆನ್ಸಿ ಮತ್ತು ಬ್ಯಾಂಕಿಂಗ್ ಸಮಸ್ಯೆಗಳು*, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೩.

ಚಂದ್ರಮೌಳಿ ಕೆ., *ಬೆಂಗಳೂರಿನ ನೋಟಗಳು*, ಪ್ರಿಸಮ್ ಬುಕ್ಸ್ ಪ್ರೈ., ಲಿ., ಬೆಂಗಳೂರು, ೨೦೦೨.

ಚಾಂದ್ ಕವಟೆ ಎಂ.ಎಸ್., *ಕಾರ್ಮಿಕ ಚಳವಳಿ ಮತ್ತು ಸಾಮಾಜಿಕ ಹೊಣೆಗಾರಿಕೆ*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩.

ಚಿನ್ನಸ್ವಾಮಿ ಸೋಸಲೆ ಎನ್., *ಪ್ರಭುತ್ವ ಮತ್ತು ದಲಿತರು*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

